KA / BG-GPO /2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ || ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೭, ೨೦೦೯ (ಭಾದ್ರಪದ ೨೬, ಶಕವರ್ಷ ೧೯೩೧) || ಸಂಚಿಕೆ ೩೮

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
806	7.9.2009	ಸಂ. ಸಿಐ 335 ಎಸ್‌ಪಿಕ್ಯೂ 2009, ದಿ. 5.9.2009 – ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
807	7.9.2009	No. DCA 56 GAM 2008, Dt. 7.9.2009 – Accept the resignation of Shri V.Somanna, Minister for Housing and Muzrai.
808	7.9.2009	ಸಂ. ವಿಸಸ/ಶಾರಶಾ/07/ಸರೆ/2008, ದಿ. 31.8.2009 – ಕರ್ನಾಟಕ ವಿಧಾನ ಸಭೆಯ ಅಧಿವೇಶನ ದಿನಾಂಕ ಮತ್ತು ಸಮಯದ ಬಗ್ಗೆ.
809	7.9.2009	ಸಂ. ಆಇ 990 ವೆಚ್ಚ–12/09, ದಿ. 17.8.2009 – ಭೂಸೇನಾ ನಿಗಮದ ಮೂಲಕ ಕೈಗೊಳ್ಳುವ ಕಾಮಗಾರಿಗಳ ಮಿತಿಯನ್ನು ಹೆಚ್ಚಿಸುವ ಬಗ್ಗೆ.
810	7.9.2009	ಸಂ. ಆಇ 926 ವೆಚ್ಚ–12/09, ದಿ. 18.8.2009 – ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ.
811	7.9.2009	ಸಂ. ಆಇ 935 ವೆಚ್ಚ–12/09, ದಿ. 18.8.2009 – ಸಿ.ಆ.ಸು. ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ.
812	7.9.2009	ಸಂ. ಆಇ 954 ವೆಚ್ಚ–12/09, ದಿ. 18.8.2009 – ನಗರಾಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ.
813	7.9.2009	ಸಂ. ಆಇ 1020 ವೆಚ್ಚ–12/09, ದಿ. 28.8.2009 – ಕಂದಾಯ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ.
814	7.9.2009	ಸಂ. ಸಿಆಸುಇ 20 ವಿಮಾಆ 2009, ದಿ. 13.8.2009 – ಬೃ.ಬೆಂ.ಮ.ಪಾಲಿಕೆ ಇದರ 10.00 ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವುದು.
815	7.9.2009	ಸಂ. ಸಾರಿಇ 51 ಸಾಸಂಸೇ 2009, ದಿ. 19.8.2009 – ಬೆ.ಮ.ಪಾ. ಸಂಸ್ಥೆಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.
816	7.9.2009	ಸಂ. ಸಾರಿಇ 51 ಸಾಸಂಸೇ 2009, ದಿ. 19.8.2009 – ಕ.ರಾ.ರ.ಸಾ. ಸಂಸ್ಥೆಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.
817	7.9.2009	ಸಂ. ಕಂಇ 135 ಎಲ್‌ಆರ್‌ಎಂ 2009, ದಿ. 20.9.2009 – ತಿದ್ದುಪಡಿ ಅಧಿಸೂಚನೆ.
818	7.9.2009	ಸಂ. ಆರ್‌ಡಿ 718 ಎಲ್‌ಜಿಬಿ 2008, ದಿ. 27.7.2009 – ಬೆಂಗಳೂರು ಟರ್ಫ್ ಕ್ಲಬ್‌ಗೆ ಸರ್ಕಾರಿ ಜಮೀನು ಮಂಜೂರಾತಿ ಬಗ್ಗೆ.
819	7.9.2009	ಸಂ. ಇಡಿ 99 ಡಿಜಿಟಿ 2008, ದಿ. 28.7.2009 – ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ನೇರ ನೇಮಕಾತಿಗೆ ಸಂಬಂಧಿಸಿದಂತೆ.
820	7.9.2009	ಸಂ. ಆಕುಕ 179 ಎಂಎಸ್‌ಎ 2008, ದಿ. 18.8.2009 – ಡಾ. ಆರ್.ಮಂಜುನಾಥ್ ಇವರನ್ನು ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ ಆದೇಶ.
821	7.9.2009	ಸಂ. ಆಕುಕ 42 ಎಂಎಸ್‌ಎ 2009, ದಿ. 18.8.2009 – ಡಾ. ಸಿ.ಕೆ.ಬಾಲಕೃಷ್ಣ ಇವರನ್ನು ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ ಆದೇಶ.
822	7.9.2009	ಸಂ. ಆಕುಕ 135 ಎಂಎಸ್‌ಎ 2009, ದಿ. 24.8.2009 – ಡಾ. ಎಸ್.ವೆಂಕಟಲಕ್ಷ್ಮಿ ಇವರನ್ನು ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ ಆದೇಶ.
823	7.9.2009	ಸಂ. ಹೆಚ್‌ಡಿ 93 ಪಿಆರ್‌ಇ 2008, ದಿ. 12.8.2009 – ಜೈಲರ್ ಹುದ್ದೆಗೆ ನೇಮಕಾತಿ ಮಾಡಲು ಇಲಾಖಾ ನೇಮಕಾತಿ ಸಮಿತಿ ರಚಿಸುವ ಬಗ್ಗೆ.
824	7.9.2009	ಸಂ. ಹೆಚ್‌ಡಿ 61 ಪಿಆಇ 2009, ದಿ. 19.8.2009 – ಕಾರಾಗೃಹಗಳ ಮಹಾ ನಿರೀಕ್ಷಕರ ಹುದ್ದೆಯನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರ ಹುದ್ದೆ ಎಂದು ಮುಂದುವರೆಸುವ ಬಗ್ಗೆ.
825	7.9.2009	ಸಂ. ಹೆಚ್‌ಡಿ 162 ಪಿಆರ್‌ಎ 2009, ದಿ. 18.8.2009 – ಜಿಲ್ಲಾ ಕಾರಾಗೃಹ, ಕೊಪ್ಪಳ ಎಂದು ಘೋಷಿಸುವ ಬಗ್ಗೆ.
826	7.9.2009	ಸಂ. ಹೆಚ್‌ಡಿ 163 ಪಿಆರ್‌ಎ 2009, ದಿ. 18.8.2009 – ತಾಲ್ಲೂಕು ಉಪ ಕಾರಾಗೃಹ, ಸಕಲೇಶಪುರ ಎಂದು ಘೋಷಿಸುವ ಬಗ್ಗೆ.
827	7.9.2009	No. HD 608 SST 2009, Dt. 21.8.2009 – Under Section 21 of the Code of Criminal Procedure.

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
828	7.9.2009	ಸಂ. ಹೆಚ್‌ಡಿ 614 ಎಸ್‌ಎಸ್‌ಟಿ 2009, ದಿ. 22.8.2009 – ಮಂಗಳೂರು ನಗರದ ದಕ್ಷಿಣ ಠಾಣೆ ಸರಹದ್ದಿಗೆ ಸಂಬಂಧಿಸಿದಂತೆ 'ಕಾರ್ಯನಿರ್ವಾಹಕ ದಂಡಾಧಿಕಾರಿ' ನೇಮಿಸುವ ಬಗ್ಗೆ.
829	7.9.2009	ಸಂ. ಹೆಚ್‌ಡಿ 615 ಎಸ್‌ಎಸ್‌ಟಿ 2009, ದಿ. 22.8.2009 – ಗುಲಬರ್ಗಾ ನಗರಕ್ಕೆ ಸಂಬಂಧಿಸಿದಂತೆ 'ಕಾರ್ಯನಿರ್ವಾಹಕ ದಂಡಾಧಿಕಾರಿ' ನೇಮಿಸುವ ಬಗ್ಗೆ.
830	7.9.2009	ಸಂ. ಹೆಚ್‌ಡಿ 620 ಎಸ್‌ಎಸ್‌ಟಿ 2009, ದಿ. 27.8.2009 – ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ 'ಕಾರ್ಯನಿರ್ವಾಹಕ ದಂಡಾಧಿಕಾರಿ' ನೇಮಿಸುವ ಬಗ್ಗೆ.
831	8.9.2009	ಸಂ. ಹೆಚ್‌ಡಿ 618 ಎಸ್‌ಎಸ್‌ಟಿ 2009, ದಿ. 27.8.2009 – ಬಾಗಲಕೋಟೆ ಜಿಲ್ಲೆಗೆ ಸಂಬಂಧಿಸಿದಂತೆ 'ಕಾರ್ಯನಿರ್ವಾಹಕ ದಂಡಾಧಿಕಾರಿ' ನೇಮಿಸುವ ಬಗ್ಗೆ.
832	8.9.2009	No. HD 616 SST 2009, Dt. 22.8.2009 – Under Section 21 of the Code of Criminal Procedure.
833	8.9.2009	ಸಂ. ಕವಿಪ:ಶಾರಶಾ:ವಿಪಸಮುಸ:295:2009, ದಿ. 8.9.2009 – ಶ್ರೀ ಆರ್.ವಿ.ವೆಂಕಟೇಶ್‌ರವರನ್ನು ವಿಧಾನ ಪರಿಷತ್ತಿನ ವಿರೋಧಪಕ್ಷದ ಮುಖ್ಯ ಸಚೇತಕರನ್ನಾಗಿ ಹೆಸರಿಸಿರುವ ಬಗ್ಗೆ.
834	9.9.2009	ಸಂ. ನಅಇ 2 ಬಿಎಂಆರ್ 2007, ದಿ. 5.9.2009 – ರಾಮನಗರ–ಚನ್ನಪಟ್ಟಣ ಸ್ಥಳೀಯ ಯೋಜನಾ ಪ್ರದೇಶ ಪ್ರಾಧಿಕಾರಕ್ಕೆ ಕೆಟಿಸಿಪಿ ಕಾಯ್ದೆ 1961 ಕಲಂ.13(ಎ)ರನ್ವಯ ಕರಡು ಮಧ್ಯಂತರ ಮಹಾಯೋಜನೆಯನ್ನು ಅನುಮೋದಿಸುವ ಬಗ್ಗೆ.
835	9.9.2009	ಸಂ. ನಅಇ 2 ಬಿಎಂಆರ್ 2007, ದಿ. 5.9.2009 – ವಿಶೇಷ ಪ್ರದೇಶ ಯೋಜನೆ–2021 (Special Area Plan) – ಬಿಡದಿ ನಗರೀಕರಣ APZ-1 (Area Planning Zone) ಕ್ಕೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ 1985ರ ಸೆಕ್ಷನ್. 9(iv)ರನ್ವಯ ಕರಡು ಮಧ್ಯಂತರ ಮಹಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ.
836	10.9.2009	No. HCE 881/2009, Dt. 14.9.2009 – Recruitment to the Post of Software Engineer in the High Court of Karnataka.
837	10.9.2009	No. Samvyashae 7 Shasana 2008, Dt. 1.7.2009 – Karnataka Act No. 10 of 2009 – The Kaginele Development Authority Act, 2009.
838	10.9.2009	No. LD 24 LWA 2008, Dt. 27.8.2009 – Under Employees Provident Fund & MP Act, 1952.
839	10.9.2009	No. LD 101 LWA 2008, Dt. 24.8.2009 – Under 27A of the Employees Provident Funds Scheme, 1952.
840	10.9.2009	No. LD 114 LWA 2008, Dt. 27.8.2009 – Under 17(1)(a) of the EPF & MP Act, 1952.
841	10.9.2009	No. LD 115 LWA 2008, Dt. 25.8.2009 – Under 17(1)(a) of the EPF & MP Act, 1952.
842	10.9.2009	No. LD 177 LWA 2008, Dt. 24.8.2009 – Under 17(1)(a) of the EPF & MP Act, 1952.
843	10.9.2009	No. LD 178 LWA 2008, Dt. 29.7.2009 – Under 17(1)(a) of the EPF & MP Act, 1952.
844	10.9.2009	No. LD 199 LWA 2007, Dt. 25.8.2009 – Under 17(1)(a) of the EPF & MP Act, 1952.
845	10.9.2009	No. LD 221 LWA 2005, Dt. 29.7.2009 – Under 17(4) of the EPF & MP Act, 1952.
846	10.9.2009	No. LD 37 LWA 2005, Dt. 29.7.2009 – Under 17(1)(a) of the EPF & MP Act, 1952.
847	10.9.2009	No. LD 38 KABASE 2009, Dt. 26.8.2009 – Under Sub-section (1), (2) (3) and (4) of Section 5 of the Boilers Act, 1923.
848	10.9.2009	ಸಂ. ಕಾಇ 153 ಎಲ್‌ಇಟಿ 2008(1), ದಿ. 4.8.2009 – 1999ನೇ ಸಾಲಿನ ಪ್ರೋಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರುಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.
849	10.9.2009	ಸಂ. ಕಾಇ 153 ಎಲ್‌ಇಟಿ 2008(2), ದಿ. 4.8.2009 – 1999ನೇ ಸಾಲಿನ ಪ್ರೋಬೇಷನರಿ ಕಾರ್ಮಿಕ ಅಧಿಕಾರಿಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.
850	11.9.2009	No. DPAR 7 SDE 2008, Dt. 10.9.2009 – Karnataka Civil Services (Classification, Control and Appeal) (31st Amendment) Rules, 2009.
851	11.9.2009	ಸಂ. ಸಿಆಸುಇ 17 ಸೇನೌವ 2009, ದಿ. 11.9.2009 – 2009–10ನೆಯ ಸಾಲಿನ ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಬಗ್ಗೆ.
852	11.9.2009	No. SWD 118 SDC 2009, Dt. 11.9.2009 – SWD hereby appoints the State Tender Bulletin Officers.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು

http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)..................................	7-00	325-00
8.	ಭಾಗ - 6ಎ (ಮೈಸೂರು)..................................	50-00	1111-00
9.	ಭಾಗ - 6ಬಿ (ಧಾರವಾಡ)..................................	25-00	1637-00
10.	ಭಾಗ - 6ಸಿ (ಗುಲ್ಬರ್ಗ)..................................	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-

1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು "0058 ಲೇಖನ ಸಾಮಗ್ರಿ ಮತ್ತು ಮುದ್ರಣ (I) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು" ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA/BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೭, ೨೦೦೯ (ಭಾದ್ರಪದ ೨೬, ಶಕ ವರ್ಷ ೧೯೩೧)	ಸಂಚಿಕೆ ೩೮

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಕಲ್ಪಿಸುವ ಹೊಸ ಯೋಜನೆಯನ್ನು ಜಾರಿಗೆ ತರುವ ಕುರಿತು.

ಓದಲಾಗಿದೆ: 1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ದಿನಾಂಕ: 08.04.2009 ರ ಪತ್ರ ಸಂಖ್ಯೆ:ಮಅನಿ:ದೇಪುಯೋ: 60:2008–09/22 ರೊಡನೆ ಕೊನೆಗೊಂಡ ಪ್ರಸ್ತಾವನೆ.

2. ದಿನಾಂಕ: 20.05.2009 ರ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ:185:ವೆಚ್ಚ–12/2009.

ಪ್ರಸ್ತಾವನೆ:

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರ ಮೇಲೆ ಓದಲಾದ (1) ರ ಪ್ರಸ್ತಾವನೆಯಲ್ಲಿ, ದೇವದಾಸಿ ಪದ್ಧತಿಯು ಒಂದು ಸಾಮಾಜಿಕ ಅನಿಷ್ಠ ಪದ್ದತಿಯಾಗಿದ್ದು, ಇದನ್ನು ರದ್ದುಪಡಿಸಲು ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982ನ್ನು ಜಾರಿಗೆ ತಂದಿದ್ದು, ಸುಮಾರು 22,873 ಮಾಜಿ ದೇವದಾಸಿ ಮಹಿಳೆಯರನ್ನು ಗುರುತಿಸಲಾಗಿರುತ್ತದೆ. ಮಾಜಿ ದೇವದಾಸಿಯರ ಜೀವನೋಪಾಯಕ್ಕಾಗಿ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕೆಲವೊಂದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುತ್ತದೆ. ದೇವದಾಸಿ ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ವಿಮುಕ್ತ ದೇವದಾಸಿ ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಶೇಕಡ 50 ರಷ್ಟು ಸಹಾಯಧನವನ್ನು ಹಾಗೂ ಬ್ಯಾಂಕುಗಳಿಂದ ಶೇಕಡ 50 ರಷ್ಟು ಸಾಲವನ್ನು ನೀಡಲಾಗುತ್ತಿರುತ್ತದೆ. ಈ ಅನಿಷ್ಠ ಪದ್ದತಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಆಗಿಂದಾಗ್ಗೆ ಜಾಗೃತಿ ಶಿಬಿರ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದಲ್ಲದೆ ಸ್ವಸಹಾಯ ಗುಂಪುಗಳ ರಚನೆ ಮತ್ತು ತರಬೇತಿ ನೀಡುವ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗಿರುತ್ತದೆ. 2007–08ನೇ ಸಾಲಿನಿಂದ 45 ವರ್ಷ ತುಂಬಿದ 11,993 ಹಾಗೂ 2008–09ನೇ ಸಾಲಿನಲ್ಲಿ 3,737 ಹೆಚ್ಚುವರಿ ದೇವದಾಸಿ ಮಹಿಳೆಯರಿಗೆ ಮಾಸಿಕ ರೂ.400/– ಮಾಶಾಸನವನ್ನು ನೀಡಲಾಗುತ್ತಿದೆ.

ದೇವದಾಸಿಯರಿಂದ ಆಗಿಂದಾಗ್ಗೆ ವಿವಿಧ ರೀತಿಯ ಬೇಡಿಕೆಗಳು ಬರುತ್ತಿದ್ದು, ಸುಮಾರು 11,892 ಮಾಜಿ ದೇವದಾಸಿಯರು ನಿವೇಶನ ಹೊಂದಿದ್ದು, ಜೀವನೋಪಾಯಕ್ಕಾಗಿ ಗೃಹ ನಿರ್ಮಾಣ ಮಾಡಿಸಿಕೊಡುವುದು ಸಹ ಒಳಗೊಂಡಿರುತ್ತದೆ. ಈಗಾಗಲೇ ವಸತಿ ಇಲಾಖೆಯ ವಿಶೇಷ ಯೋಜನೆಯಡಿ ಮಾಜಿ ದೇವದಾಸಿಯರನ್ನು ಒಳಗೊಂಡಂತೆ ವಿವಿಧ ವರ್ಗಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮದ ಮೂಲಕ ವಸತಿಯನ್ನು ನಿರ್ಮಿಸಿಕೊಡಲಾಗುತ್ತಿದ್ದು, 4121 ಮಾಜಿ ದೇವದಾಸಿಯರು ಈ ಸೌಲಭ್ಯವನ್ನು ಈಗಾಗಲೇ ಪಡೆದಿದ್ದು, ಉಳಿದ 11,892

ಮಾಜಿ ದೇವದಾಸಿಯರಿಗೆ ವಸತಿಯನ್ನು ಕಲ್ಪಿಸಲು ಒತ್ತಾಯ ಮಾಡುತ್ತಿದ್ದಾರೆ ಮತ್ತು ಮಾಜಿ ದೇವದಾಸಿ ಮಹಿಳೆಯರಿಗೆ ಸೀಮಿತಗೊಂಡಂತೆ ಪ್ರತ್ಯೇಕ ಯೋಜನೆ ಇರುವುದಿಲ್ಲ.

ಡಾ:ನಂಜುಂಡಪ್ಪ ವರದಿಯಲ್ಲಿ ಈ ಕೆಳಗೆ ಸೂಚಿಸಿದ 10 ಜಿಲ್ಲೆಗಳನ್ನು ಹಿಂದುಳಿದ ಜಿಲ್ಲೆಗಳಾಗಿ ನಮೂದಿಸಿದ್ದು, ಸದರಿ ಜಿಲ್ಲೆಗಳಲ್ಲಿ ವಸತಿ ರಹಿತ ನಿವೇಶನ ಹೊಂದಿರುವ ಮಾಜಿ ದೇವದಾಸಿಯರಿರುತ್ತಾರೆ.

ಕ್ರ. ಸಂ.	ಜಿಲ್ಲೆಯ ಹೆಸರು	ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮಾಜಿ ದೇವದಾಸಿಯರ ಸಂಖ್ಯೆ	ವಸತಿ ರಹಿತ ನಿವೇಶನ ಹೊಂದಿರುವವರ ಸಂಖ್ಯೆ	ಈಗಾಗಲೇ ವಸತಿ ಇಲಾಖೆಯ ವಿಶೇಷ ಯೋಜನೆಯಡಿ ಸೌಲಭ್ಯ ಪಡೆದಿರುವ ಸಂಖ್ಯೆ
1	ಬೆಳಗಾವಿ	3,600	2,539	701
2	ಬಿಜಾಪುರ	1,964	750	750
3	ಬಾಗಲಕೋಟೆ	4,804	2,154	716
4	ಬಳ್ಳಾರಿ	1,635	312	707
5	ಕೊಪ್ಪಳ	4,880	1,515	00
6	ರಾಯಚೂರು	2,494	2,271	425
7	ಗುಲ್ಬರ್ಗಾ	991	724	108
8	ಧಾರವಾಡ	481	625	91
9	ಹಾವೇರಿ	617	116	626
10	ಗದಗ್	1,407	886	00
		22,873	**11,892**	**4,124**

ಮಾಜಿ ದೇವದಾಸಿಯರನ್ನು ಒಳಗೊಂಡಂತೆ ವಿವಿಧ ವರ್ಗಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮದ ಮೂಲಕ ವಸತಿ ಕಲ್ಪಿಸುತ್ತಿದ್ದು, ಎಲ್ಲಾ ಮಾಜಿ ದೇವದಾಸಿಯರಿಗೆ ಈ ಸೌಲಭ್ಯವನ್ನು ಒದಗಿಸಲು ಅವಕಾಶವಿರುವುದಿಲ್ಲ. ಪರಿಶಿಷ್ಟ ಜಾತಿ /ವರ್ಗದವರಿಗೆ ವಿಶೇಷ ಯೋಜನೆಯಡಿ ರಾಜ್ಯ ಸರ್ಕಾರವು ವಿವಿಧ ರೀತಿಯ ಪುನರ್ವಸತಿ ಯೋಜನೆಯನ್ನು ಕಲ್ಪಿಸಿರುತ್ತದೆ. ಆದುದರಿಂದ ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರಿದ ಮಾಜಿ ದೇವದಾಸಿ ಮಹಿಳೆಯರಿಗೆ ಸೀಮಿತಗೊಂಡಂತೆ ವಿಶೇಷ ಸೌಲಭ್ಯವನ್ನು ಒದಗಿಸಲು ಅವಕಾಶವಿರುತ್ತದೆ. ಪ್ರತಿ ವಸತಿಗೆ ಸುಮಾರು ರೂ.40,000/– ವೆಚ್ಚವಾಗಲಿದ್ದು, ಪ್ರಾರಂಭಿಕವಾಗಿ ಪ್ರತಿ ಜಿಲ್ಲೆಯಲ್ಲಿ 250 ವಸತಿಗಳಂತೆ 10 ಜಿಲ್ಲೆಗಳಲ್ಲಿ 2,500 ಮನೆಗಳನ್ನು ಒಟ್ಟು ರೂ.10.00 ಕೋಟಿ ವೆಚ್ಚದ ಅಂದಾಜಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮದ ಮೂಲಕವೇ ನಿರ್ಮಿಸಿಕೊಡಲು ಉದ್ದೇಶಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ರನ್ವಯ ರೂ.5.00 ಲಕ್ಷ ಮೌಲ್ಯಕ್ಕಿಂತ ಹೆಚ್ಚಿನ ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಮೂಲಕವಲ್ಲದೆ ಸಂಗ್ರಹಣೆ ಮಾಡಲು ಅವಕಾಶವಿರುವುದಿಲ್ಲ, ಆದರೆ ಪ್ರಕರಣ 4(ಜಿ) ರನ್ವಯ ಸರ್ಕಾರವು ಯಾವುದೇ ವಿಶಿಷ್ಟ ಸಂಸ್ಥೆಗೆ ಅಧಿನಿಯಮದ ಉಪಬಂಧಗಳಿಂದ ವಿನಾಯಿತಿ ನೀಡಿದ್ದಲ್ಲಿ ಅಂತಹ ಸಂಸ್ಥೆಗೆ ನೇರವಾಗಿ ವಹಿಸಲು ಅವಕಾಶವಿರುತ್ತದೆ. ವಸತಿ ನಿರ್ಮಾಣಕ್ಕೆಂದು ರಚಿತವಾಗಿರುವ ರಾಜ್ಯ ಸರ್ಕಾರ ಸ್ವಾಮ್ಯದ ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮಕ್ಕೆ ಫಲಾನುಭವಿಗಳ ಮಾಲೀಕತ್ವ ಹೊಂದಿರುವ ಎಲ್ಲಾ ನಿವೇಶನಗಳಲ್ಲಿ ಏಕರೂಪ ವಿನ್ಯಾಸ ಆಶ್ರಯ ಯೋಜನೆಯ ಮಾದರಿ ಅಡಿಯಲ್ಲಿ ನಿರ್ಮಾಣ ಕಾರ್ಯವನ್ನು ವಹಿಸಲು ಸರ್ಕಾರವು ಉದ್ದೇಶಿಸಿರುತ್ತದೆ.

ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 185 ವೆಚ್ಚ–12/09, ದಿನಾಂಕ: 20.05.2009ರಲ್ಲಿ ಡಾ: ನಂಜುಂಡಪ್ಪ ವರದಿಯಲ್ಲಿ ನಮೂದಿಸಿರುವ 10 ಜಿಲ್ಲೆಗಳಲ್ಲಿನ ಪ್ರತಿ ಜಿಲ್ಲೆಗೆ 250 ರಂತೆ 2500 ಮನೆಗಳನ್ನು ಪ್ರತಿ ಮನೆಗೆ ರೂ.40,000/– ದರದಲ್ಲಿ ಒಟ್ಟು ರೂ.10.00 ಕೋಟಿ ಅಂದಾಜಿನಲ್ಲಿ ಮಾಜಿ ದೇವದಾಸಿಯರಿಗೆ ನೇರವಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮದ ಮೂಲಕ ನಿರ್ಮಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸರ್ಕಾರವು 2009–10ನೇ ಸಾಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿ ಅಧಿಸೂಚನೆ ಹೊರಡಿಸಿದೆ.

ವಸತಿ ನಿರ್ಮಾಣದ ನಂತರ ಮಾಜಿ ದೇವದಾಸಿ ಮಹಿಳೆಯರು ಸದರಿ ಕಟ್ಟಡವನ್ನು ಬಾಡಿಗೆಗೆ ನೀಡದೆ ಅಥವಾ ಯಾವುದೇ ರೀತಿಯ ಪರಭಾರೆ ಮಾಡದೆ ಕಡ್ಡಾಯವಾಗಿ ವಸತಿಯಲ್ಲಿ ನೆಲಸಬೇಕೆಂಬ ಷರತ್ತಿನ ಮೇರೆಗೆ ಈ ಸೌಲಭ್ಯವನ್ನು ಒದಗಿಸಬಹುದಾಗಿರುತ್ತದೆ.

ಈ ಮೇಲೆ ಹೇಳಿದ ಹಿನ್ನೆಲೆಯಲ್ಲಿ ಡಾ:ನಂಜುಂಡಪ್ಪ ವರದಿಯಲ್ಲಿ ನಮೂದಿಸಿರುವ 10 ಜಿಲ್ಲೆಗಳಲ್ಲಿನ ಪ್ರತಿ ಜಿಲ್ಲೆಗೆ 250 ರಂತೆ 2,500 ಮನೆಗಳನ್ನು ಪ್ರತಿ ಮನೆಗೆ ರೂ.40,000/- ದರದಲ್ಲಿ ಒಟ್ಟು ರೂ.10.00 ಕೋಟಿ ವೆಚ್ಚ ಅಂದಾಜಿನಲ್ಲಿ ಮಾಜಿ ದೇವದಾಸಿ ಮಹಿಳೆಯರಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮದ ಮೂಲಕ ಪ್ರಕರಣ 4(ಜಿ) ರನ್ವಯ ವಿನಾಯಿತಿ ನೀಡಿ ವಸತಿ ಕಲ್ಪಿಸುವ ಹೊಸ ವಿಶೇಷ ಯೋಜನೆಯನ್ನು 2009-10ನೇ ಸಾಲಿನಿಂದ ಅನುಷ್ಠಾನಗೊಳಿಸಲು ಸರ್ಕಾರವು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 05 ಮಅನಿ 2009, ಬೆಂಗಳೂರು ದಿನಾಂಕ: 23ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಡಾ:ನಂಜುಂಡಪ್ಪ ವರದಿಯಲ್ಲಿ ನಮೂದಿಸಿರುವ 10 ಜಿಲ್ಲೆಗಳಲ್ಲಿನ ಪ್ರತಿ ಜಿಲ್ಲೆಗೆ 250 ರಂತೆ 2,500 ಮನೆಗಳನ್ನು ಪ್ರತಿ ಮನೆಗೆ ರೂ.40,000/- ಘಟಕ ವೆಚ್ಚದಲ್ಲಿ, ಒಟ್ಟು ರೂ.10.00 (ರೂಪಾಯಿ ಹತ್ತು ಕೋಟಿ ಮಾತ್ರ) ಕೋಟಿ ವೆಚ್ಚ ಅಂದಾಜಿನಲ್ಲಿ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಮಾಜಿ ದೇವದಾಸಿ ಮಹಿಳೆಯರಿಗೆ, ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮದ ಮೂಲಕ ವಸತಿ ಕಲ್ಪಿಸುವ ಹೊಸ ವಿಶೇಷ ಯೋಜನೆಯನ್ನು 2009-10ನೇ ಸಾಲಿನಿಂದ ಅನುಷ್ಠಾನಗೊಳಿಸಲು ಆದೇಶಿಸಿದೆ.

ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣಕ್ಕೆಂದು ರಚಿತವಾಗಿರುವ ರಾಜ್ಯ ಸರ್ಕಾರಿ ಸ್ವಾಮ್ಯದ ರಾಜೀವ್ ಗಾಂಧಿ ಗ್ರಾಮೀಣ ವಸತಿ ಅಭಿವೃದ್ಧಿ ನಿಗಮಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ರ ಪ್ರಕರಣ 4(ಜಿ) ರನ್ವಯ ಎಲ್ಲಾ ನಿವೇಶನಗಳಲ್ಲಿ ಏಕರೂಪ ವಿನ್ಯಾಸದ ಆಶ್ರಯ ಯೋಜನೆಯ ಮಾದರಿಯಡಿಯಲ್ಲಿ ನಿರ್ಮಾಣ ಕಾರ್ಯವನ್ನು ವಹಿಸಲು ಸದರಿ ಸಂಸ್ಥೆಗೆ ಕೆ.ಟಿ.ಪಿ.ಪಿ. ಅಧಿನಿಯಮದಡಿ ಪ್ರಕರಣ 4(ಜಿ)ಯ ಅನ್ವಯ ವಿನಾಯಿತಿ ನೀಡಿದೆ ಹಾಗೂ ಅನುಬಂಧದಲ್ಲಿ ಲಗತ್ತಿಸಿರುವ ಷರತ್ತು ಮತ್ತು ನಿಬಂಧನೆಗಳು ನಿಗಧಿಪಡಿಸಿದ್ದು, ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಈ ಯೋಜನೆಯ ಬಗ್ಗೆ ಸೂಕ್ತ ಮಾಹಿತಿ ಕೇಂದ್ರ (Data base)ವನ್ನು ರಚಿಸುವುದು.

ಈ ಆದೇಶವನ್ನು ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ: ಪಿಡಿ 7 ಐಎಂಎಂ 2009, ದಿನಾಂಕ:13.02.2009 ಹಾಗೂ ಆರ್ಥಿಕ ಇಲಾಖೆ ಅಧಿಸೂಚನೆ ಸಂಖ್ಯೆ: ಆಇ 185 ವೆಚ್ಚ-12/2009 ದಿನಾಂಕ: 20.05.2009 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ..

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.
ಆರ್. ನರಸಿಂಹಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ: ಮಮಇ 05 ಮಅನಿ 2009, ಬೆಂಗಳೂರು, ದಿನಾಂಕ: 23ನೇ ಜೂನ್ 2009,ಕ್ಕೆ

ಅನುಬಂಧ.

ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಕಲ್ಪಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಯೋಜನೆಯ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತೆ ನಿಗಧಿಪಡಿಸಿದ್ದು ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

I. ವಸತಿ ಸೌಲಭ್ಯ ಪಡೆಯಲು ಅರ್ಹತೆ ಮತ್ತು ಸಲ್ಲಿಸಬೇಕಾದ ದಾಖಲಾತಿಗಳು:

ಮಾಜಿ ದೇವದಾಸಿಯರಾಗಿರಬೇಕು. ಹಾಗೂ ಅವರ ಹೆಸರು ಸಮೀಕ್ಷೆಯ ಪಟ್ಟಿಯಲ್ಲಿರಬೇಕು.

1. ಮಾಜಿ ದೇವದಾಸಿಯು ಕರ್ನಾಟಕ ರಾಜ್ಯದ ಖಾಯಂ ವಾಸಿಯಾಗಿರಬೇಕು.
2. ಅರ್ಜಿದಾರರು 18 ವರ್ಷ ಮೇಲ್ಪಟ್ಟವರಾಗಿರಬೇಕು.
3. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ.40,000/-ಗಳನ್ನು ಮೀರಿರಬಾರದು.
4. ಅರ್ಹ ಫಲಾನುಭವಿಯು ಸರ್ಕಾರದ ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.
5. ಅರ್ಜಿದಾರರು ನಿವೇಶನ ಹೊಂದಿರುವ ಗ್ರಾಮದಲ್ಲಿ ಕನಿಷ್ಠ 5 ವರ್ಷಗಳು ನೆಲೆಸಿರಬೇಕು.

II. ಅರ್ಜಿಗಳನ್ನು ಪಡೆಯುವ ಮತ್ತು ಸ್ವೀಕರಿಸುವ ವಿಧಾನ:

1. ನಿಗಮದಿಂದ ಜಿಲ್ಲಾವಾರು ವಾರ್ಷಿಕ ಗುರಿ ನಿಗಧಿಪಡಿಸಿದ ನಂತರ ಜಿಲ್ಲಾ ಯೋಜನಾಧಿಕಾರಿಗಳು ಗುರಿಗನುಗುಣವಾಗಿ ಜಿಲ್ಲಾ ಮಟ್ಟದ ಸ್ಥಳೀಯ ಎರಡು ದಿನ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಪ್ರಕಟಣೆ ನೀಡುವ ಮೂಲಕ ನಿವೇಶನ ಹೊಂದಿರುವ ಅರ್ಹ ಮಾಜಿ ದೇವದಾಸಿಯರಿಂದ ಅರ್ಜಿಗಳನ್ನು ಆಹ್ವಾನಿಸುವುದು.

ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳನ್ನು ಹಾಗೂ ಅರ್ಜಿ ಸ್ವೀಕರಿಸುವ ಕಡೆಯ ದಿನಾಂಕವನ್ನು ಹಾಗೂ ಅರ್ಹತೆಗಳನ್ನು ಸ್ಪಷ್ಟವಾಗಿ ಪ್ರಕಟಣೆಯಲ್ಲಿ ತಿಳಿಸಿರತಕ್ಕದ್ದು.

2. ನಿಗದಿತ ದಿನಾಂಕದವರೆಗೆ ನಮೂನೆ –1 ರ ಅರ್ಜಿಗಳನ್ನು ವಿತರಿಸುವುದು.
3. ಬಂದಂತಹ ಅರ್ಜಿಗಳನ್ನು ಜಿಲ್ಲಾ ಯೋಜನಾ ಕಛೇರಿಗಳಲ್ಲಿ ನಿಗದಿಪಡಿಸಿದ ಅರ್ಜಿ ಸ್ವೀಕೃತಿ ವಹಿಯಲ್ಲಿ ಕಡ್ಡಾಯವಾಗಿ ಅರ್ಜಿಗಳನ್ನು ನೊಂದಾಯಿಸಬೇಕು.

III. ಅರ್ಜಿಗಳ ಪರಿಶೀಲನೆ:

ಸ್ವೀಕೃತವಾದ ಅರ್ಜಿಗಳನ್ನು ಯೋಜನಾಧಿಕಾರಿಗಳು ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುವುದನ್ನು ಖಚಿತಪಡಿಸಿಗೊಂಡು ಪ್ರಾಥಮಿಕ ಪರಿಶೀಲನೆ ಮಾಡಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಆಯ್ಕೆ ಸಮಿತಿ ಸಭೆಯನ್ನು ನಡೆಸಲು ಕ್ರಮಕೈಗೊಂಡು ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯುವುದು. ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಅನುಮೋದನೆಗೊಂಡ ಅರ್ಜಿಗಳ ವಿವರಗಳೊಂದಿಗೆ ಪಟ್ಟಿಯನ್ನು ಹಾಗೂ ಸಮಿತಿ ನಡೆವಳಿಗಳೊಂದಿಗೆ ಮಂಜೂರಾತಿಗಾಗಿ ನಿಗಮದ ಕೇಂದ್ರ ಕಛೇರಿಗೆ ಒಂದು ಭಾವ ಚಿತ್ರದೊಂದಿಗೆ ಸಲ್ಲಿಸುವುದು.

ಅರ್ಜಿಯೊಂದಿಗೆ ಸಲ್ಲಿಸಬೇಕಾದ ಅಗತ್ಯ ದಾಖಲಾತಿಗಳು:

1) ಜಾತಿ ಪ್ರಮಾಣ ಪತ್ರ.
2) ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.
3) ಮತದಾರರ ಗುರುತಿನ ಚೀಟಿ
4) ಭಾವ ಚಿತ್ರ–2
5) ನಿವೇಶನದ ಖಾತೆ

IV. ಯೋಜನಾಧಿಕಾರಿಗಳ ಇತರೆ ಕರ್ತವ್ಯಗಳು:

1) ಯೋಜನಾಧಿಕಾರಿಗಳು ಸ್ವೀಕರಿಸಿದ ಅರ್ಜಿಗಳನ್ನು ಅರ್ಹತೆ ಪೂರೈಸಿರುವ ಬಗ್ಗೆ ಸ್ವೀಕೃತ ವಹಿಯಲ್ಲಿ ನಮೂದಿಸುವುದು.
2) ಅರ್ಹ ಅಭ್ಯರ್ಥಿಗಳ ಪಟ್ಟಿ ತಯಾರಿಸುವುದು.
3) ಆಯ್ಕೆ ಸಮಿತಿ ಸಭೆಯನ್ನು ನಡೆಸಲು ಕ್ರಮಕೈಗೊಳ್ಳುವುದು.
4) ಪಟ್ಟಿಯನ್ನು ಜಿಲ್ಲಾ ಸಮಿತಿಗೆ ಮಂಡಿಸಿ ಅನುಮೋದನೆ ಪಡೆಯುವುದು.
5) ವಸತಿಗಳ ನಕ್ಷೆಯನ್ನು ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿಯಿಂದ ಅನುಮೋದನೆ ಮಾಡಿಸಿ ಸಲ್ಲಿಸುವುದು. ವಸತಿಗಳ ನಕ್ಷೆಯನ್ನು ಗ್ರಾಮ ಪಂಚಾಯಿತಿ /ತಾಲ್ಲೂಕು ಪಂಚಾಯಿತಿಯಿಂದ ಅನುಮೋದನೆ ಮಾಡಿಸಿ ಸಲ್ಲಿಸುವುದು.
6) ಸದರಿ ಯೋಜನೆಯ ಬಗ್ಗೆ ನಿಗದಿತ ದಾಖಲೆಗಳನ್ನು ನಿರ್ವಹಿಸುವುದು.
7) ಜಿಲ್ಲೆಯಲ್ಲಿನ ಯೋಜನಾ ಅನುಷ್ಠಾನದ ಪೂರ್ಣ ಜವಾಬ್ದಾರಿ ಯೋಜನಾಧಿಕಾರಿಗಳದ್ದಾಗಿರುತ್ತದೆ.
8) ಪ್ರತಿ ತಿಂಗಳು ನಿಗದಿತ ನಮೂನೆಯಲ್ಲಿ ನಿಗಮಕ್ಕೆ ವರದಿ ಸಲ್ಲಿಸುವುದು.
9) ಮನೆಗಳ ಹಂತ,ಹಂತಗಳ ವಿವರಗಳನ್ನು ಪ್ರತಿ ಮಾಹೆ ವರದಿ ಸಲ್ಲಿಸುವುದು.
10) ಪೂರ್ಣಗೊಂಡ ಮನೆಗಳ ಹಸ್ತಾಂತರವನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ಸಹಿಯೊಂದಿಗೆ ನಿಗದಿತ ನಮೂನೆಯಲ್ಲಿ ಫಲಾನುಭವಿಗಳಿಗೆ ನೀಡಲು ಕ್ರಮವಹಿಸುವುದು.

V. ಫಲಾನುಭವಿಗಳ ಆಯ್ಕೆಗೆ ರಚಿಸಲಾದ ಜಿಲ್ಲಾ ಆಯ್ಕೆ ಸಮಿತಿಯ ಸದಸ್ಯರು:

ಫಲಾನುಭವಿಗಳ ಆಯ್ಕೆಗೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿ ಇರತಕ್ಕದ್ದು.

1.	ಜಿಲ್ಲಾಧಿಕಾರಿಗಳು	– ಅಧ್ಯಕ್ಷರು.
2.	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,	– ಸದಸ್ಯರು.
3.	ಜಿಲ್ಲಾ ಮಟ್ಟದ ಸಮಾಜ ಕಲ್ಯಾಣಾಧಿಕಾರಿಗಳು	– ಸದಸ್ಯರು.
4.	ದೇವದಾಸಿ ಪುನರ್ ವಸತಿ ಯೋಜನಾಧಿಕಾರಿಗಳು/ಅಭಿವೃದ್ಧಿ ನಿರೀಕ್ಷಕರು, ಮಹಿಳಾ ಅಭಿವೃದ್ಧಿ ನಿಗಮ.	– ಸದಸ್ಯ ಕಾರ್ಯದರ್ಶಿಗಳು

VI. ಜಿಲ್ಲಾ ಆಯ್ಕೆ ಸಮಿತಿಯ ಕರ್ತವ್ಯಗಳು:

1) ಸಭೆ ಸೇರಿ ಜಿಲ್ಲಾ ಯೋಜನಾಧಿಕಾರಿಗಳು ಸಲ್ಲಿಸುವ ಪಟ್ಟಿಯನ್ನು ಅರ್ಜಿಗಳೊಂದಿಗೆ ಪರಿಶೀಲಿಸಿ ಫಲಾನುಭವಿಗಳನ್ನು ಅಂತಿಮವಾಗಿ ಆಯ್ಕೆಮಾಡುವುದು.
2) ನಿಗಮಕ್ಕೆ ಅಂತಿಮ ಆಯ್ಕೆ ಪಟ್ಟಿಯನ್ನು ಸಭಾ ನಡೆವಳಿಗಳೊಂದಿಗೆ ಸಲ್ಲಿಸುವುದು.

VII. ಆಯ್ಕೆ ಮಾಡುವಾಗ ಸಮಿತಿಯು ಪರಿಗಣಿಸಬೇಕಾದ ಅಂಶಗಳು:

1) ನಿರ್ಗತಿಕರಿಗೆ, ಹೆಚ್ಚಿನ ವಯಸ್ಸಾದವರಿಗೆ, ಅಂಗವಿಕಲರಿಗೆ ಆದ್ಯತೆ ನೀಡುವುದು.
2) ಕಡಿಮೆ ಆದಾಯ ಇರುವವರಿಗೆ ಆದ್ಯತೆ ನೀಡುವುದು.
3) ಹೆಚ್ಚಿನ ಅವಧಿ ಗ್ರಾಮದಲ್ಲಿ ವಾಸಿಸಿರುವವರಿಗೆ ಆದ್ಯತೆ ನೀಡುವುದು.
4) ಒಂದು ಗ್ರಾಮದಲ್ಲಿ ಕಡಿಮೆ ಸಂಖ್ಯೆಯಲ್ಲಿ ಅರ್ಹ ಫಲಾನುಭವಿಗಳಿದ್ದಲ್ಲಿ ಎಲ್ಲರನ್ನೂ ಆಯ್ಕೆ ಮಾಡುವುದು.

VIII. ನಿಗಮದ ಕರ್ತವ್ಯಗಳು:

1) ಜಿಲ್ಲಾವಾರು, ತಾಲ್ಲೂಕುವಾರು ಗುರಿ ನಿಗಧಿಪಡಿಸುವುದು.
2) ಮನೆಗಳನ್ನು ನಿರ್ಮಿಸಲು ಸಂಸ್ಥೆಗಳನ್ನು (Agency) ಅಯ್ಕೆಮಾಡುವುದು.
3) ಹಂತ ಹಂತವಾರು ಅನುದಾನ ಬಿಡುಗಡೆಮಾಡುವುದು.
4) ನಿಯತಕಾಲಿಕವಾಗಿ ಪರಾಮರ್ಶಿಸುವುದು.
5) ರಿಜಿಸ್ಟರ್‌ನಲ್ಲಿ ಭಾವ ಚಿತ್ರದೊಂದಿಗೆ ವಿವರಗಳನ್ನು ನಮೂದಿಸುವುದು.

IX. ನಿಭಂದನೆಗಳು:

1) ಒಂದು ಮನೆ ನಿರ್ಮಿಸಲು ಸರ್ಕಾರದಿಂದ ರೂ.40000/- ಮಾತ್ರ ನೀಡಲಾಗುವುದು.
2) ಸರ್ಕಾರ ಮಂಜೂರು ಮಾಡುವ ಪೂರ್ತ ಹಣವು ಅನುದಾನವಾಗಿರುತ್ತದೆ.
3) ವಸತಿಯನ್ನು 20x15 ಅಳತೆಯಲ್ಲಿ ನಿರ್ಮಿಸಲಾಗುವುದು.
4) ವಸತಿ ಗೃಹವನ್ನು ನಿಗದಿತ ನಕ್ಷೆಯಂತೆ ನಿರ್ಮಿಸಲಾಗುವುದು.
5) ಮಂಜೂರಾದ ಮೊತ್ತವನ್ನು ಮೂರು ಹಂತಗಳಲ್ಲಿ ಬಿಡುಗಡೆಮಾಡಲಾಗುವುದು.
6) ಮೊದಲನೇ ಹಂತದಲ್ಲಿ ಪಾಯಕ್ಕಾಗಿ, ಮಂಜೂರಾದ ಮೊತ್ತದಲ್ಲಿ ರೂ.10000/- ಗಳನ್ನು 2ನೇ ಹಂತದಲ್ಲಿ ಅಂದರೆ ಗೋಡೆ ಪ್ರಾರಂಭಿಸಿದ ನಂತರ ರೂ.10,000/- ಗಳನ್ನು, 3ನೇ ಹಂತದಲ್ಲಿ ಅಂದರೆ ಪ್ಲಾಸ್ಟಿಂಗ್ ನಡೆಯುವಾಗ ರೂ.10,000/- ಗಳನ್ನು ಮನೆ ಎಲ್ಲಾ ರೀತಿಯಲ್ಲಿ ಪೂರ್ತಿಯಾದ ನಂತರ ಬಾಕಿ ಉಳಿದಿರುವ ಹಣ ರೂ.10,000/- ಗಳನ್ನು ಬಿಡುಗಡೆ ಮಾಡಲಾಗುವುದು.
7) ಈ ಯೋಜನೆಯಡಿ ವಸತಿ ನಿರ್ಮಾಣವನ್ನು ನಿರ್ಮಿತಿ ಕೇಂದ್ರದ/ಗುತ್ತಿಗೆದಾರರ ಮುಖಾಂತರ ನಿರ್ಮಿಸುವುದಾದರು ಸಹ ಯೋಜನಾಧಿಕಾರಿಗಳು ಪೂರ್ಣ ಜವಾಬ್ದಾರರಾಗಿದ್ದು ಮೇಲುಸ್ತುವಾರಿ ಅಧಿಕಾರಿಗಳಾಗಿರುತ್ತಾರೆ.
8) ನಿಗಮದ "ಲೋಗೊವು" ಪ್ರತಿ ಮನೆಯ ಮುಂದಿನ ಗೋಡೆಯಲ್ಲಿರತಕ್ಕದ್ದು ವಸತಿಯನ್ನು ಯಾವುದೇ ಕಾರಣಕ್ಕೂ ಪರಭಾರೆ ಮಾಡತಕ್ಕದಲ್ಲ, ಆಕಸ್ಮಿಕವಾಗಿ ಪರಭಾರೆ ಮಾಡಿದ್ದಲ್ಲಿ ಅದು ಕಾನೂನು ಬದ್ಧವಾಗಿರುವುದಿಲ್ಲ.

ಅನುಸರಣೆ: (Follow up)

ವಸತಿ ಪೂರ್ಣಗೊಳಿಸಿದ ನಂತರ ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ಯೋಜನಾಧಿಕಾರಿಗಳು, ದೇವದಾಸಿ ಪುನರ್ ವಸತಿ ಯೋಜನೆರವರು ಭೇಟಿ ನೀಡಿ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರವನ್ನು ನಿಗಮಕ್ಕೆ ಸಲ್ಲಿಸುವುದು.

ಆರ್. ನರಸಿಂಹಯ್ಯ

ಪಿ.ಆರ್. 1420

ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

HORTICULTURE SECRETARIAT

Sub: "Scheme for Integrated Farming in Coconut for Productivity/ Improvement with Coconut Development Board Assistance (100% CDB)" – State Level Administrative Approval for the year 2009-10- reg.

Read: 1) GO. No. AHD 145 HPP 2007, dated 25.04.2008.
2) G.O No. ಕೃತೋಇ 44 ತೋಯೋಕಾ 2009 dated 6.4.2009.
3) Letter of CDB F.No.233/2009 –Dev/219 dated 23.4.2009
4) Letter of CDB No.ROB/13011/Dev-Kar/Sch/09-10 dated 14.5.2009
5) Letter of Director of Horticulture No.DH/PC/AHO-2/1/2009-10 dated 15.6.2009.

Preamble:

1. Coconut Development Board has conveyed the approval of the Board vide its letter read at (3) above for an amount of Rs.720.514 lakhs for implementing various schemes in Karnataka State during

2009-10 of which the share of the Coconut Development Board is Rs.717.389 lakhs. The balance has to be provided by the State Government to the tune of Rs.3.125 lakhs as matching contribution. Coconut Development Board has informed that funds for the year 2009-10 will be released by the Board in accordance with the prescribed pattern, on receipt of State Level Administrative Approval and Utilization Certificate in respect of continuing schemes implemented during 2008-09.

2. Coconut Development Board has further clarified that the component of organic manure units numbering 350 under Integrated Farming in Coconut Holdings for Productivity Improvement at a cost of Rs.70.00 lakhs is to be implemented by the Department of Horticulture, Government of Karnataka and not directly by the Board vide its letter read at (4) above.

3. Thus, components to the tune of Rs.329.264 lakhs will have to be implemented directly by the Coconut Development Board and components to the tune of Rs.391.25 lakhs will have to be implemented by the Department of Horticulture, Government of Karnataka. Out of Rs.391.25 lakhs the State share will be Rs.3.125 lakhs and Coconut Development Board share will be Rs.388.125 lakhs.

4. During 2009-10 under the State Budget the following allocations has been made.

(1) As per the Detailed Estimate of Expenditure Volume-VI of 2009-10 at page 13, an amount of Rs. 300.00 lakhs (State Plan) and;

(2) As per the Budget Allotment for Zilla Panchayath Plan and Non-plan for the year 2009-10 at page 88, an amount of Rs. 20.36 lakhs (District Plan).

Thus, a total amount of Rs.320.36 lakhs has been provided at the State Budget as against a requirement of Rs.391.25 lakhs.

5. The said scheme has been transferred from District Plan to State Plan during 11th plan period as per Government Order read at (1) above. The State share of Rs.3.125 lakhs towards production and distribution of planting material for propagation of 25,000 hybrid coconut seedlings at K.R.S farm, Mandya will be met under the State Plan scheme namely, "Development and Maintenance of Farms and Nurseries" Head of Account 2401-00-119-4-05-139 (Major Works). Thus, the amount of Rs.20.36 lakhs provided under District Plan is to be treated as surrendered and Rs.388.264 lakhs is to be provided under State Plan "Scheme for Integrated Farming in Coconut for Productivity/ Improvement with Coconut Development Board Assistance (100% CDB)" Head of Account 2401-00-108-2-35-100 (Financial Assistance/ Relief).

6. The "Scheme for Integrated Farming in Coconut for Productivity/ Improvement with Coconut Development Board Assistance (100% CDB)" Head of Account 2401-00-108-2-35-100 (Financial Assistance/ Relief) has been continued during 2009-10 as an ongoing basis as per Government Order read at (2) above with a condition that the scheme will be implemented limiting to the budget provided during 2009-10 and as per the guidelines provided by the Coconut Development Board.

7. The Deputy Director, Coconut Development Board, Regional Office Cum Training Center, Bangalore met the Secretary, Horticulture and informed that Coconut Development Board is awaiting the State Level Administrative Approval for release of grants to the State Government. The Director of Horticulture in its letter read at (5) above has requested the Government to provide State Level Administrative Approval for Rs.632.294 lakhs of which components to the tune of Rs.329.264 lakhs will be implemented directly by the Coconut Development Board and components to the tune of Rs.303.03 lakhs will be implemented by the Department of Horticulture, Government of Karnataka.

8. The proposal of the Director of Horticulture has been examined and hence this order;

Government Order No.AHD 53 HPP 2009, Bangalore, Dated: 24th June 2009

Government is pleased to accord State Level Administrative Approval for implementing the Coconut Development Programmes during the year 2009-10 with a total financial outlay of Rs. 632.294 lakhs of which components to the tune of Rs.303.03 lakhs will be implemented by the Department of

Horticulture and components to the tune of Rs.329.264 lakhs will be implemented by the Coconut Development Board directly. Component wise details are given below:-

Programmes for the year 2009-10

(Rs.in lakhs)

Sl. No	Name of the scheme	Department of Horticulture (Target)			
		Phy.	Fin.		
			State share	CDB share	Total
	STATE				
1	**Production and Distribution of Planting Materials**				
	Production and Distribution of TXD hybrids and other released varieties (50:50 basis)	25,000 Nos	3.125	3.125	6.25
2	**Integrated farming in Coconut holdings for Productivity Improvement**				
	1. Laying out demonstration plots (New)	1000 ha		175.00	175.00
	2. Laying out demonstration plots (Old)	296 ha		51.78	51.78
	3. Organic Manure Unit	350 Nos		70.00	70.00
	TOTAL		**3.125**	**299.905**	**303.03**
	COCONUT DEVELOPMENT BOARD				
1	Aid to Private nurseries and seed gardens				
	1) Seed garden (Big unit)	2 Nos		9.00	9.00
	2) Nursery (Small unit)	5 Nos		6.00	6.00
2	Expansion of area under coconut	200 ha		19.00	19.00
3	Integrated Farming in Coconut Holding for Productivity Improvement-laying out of Demonstration plots	1000 ha		295.264	295.264
	COCONUT DEVELOPMENT BOARD TOTAL			**329.264**	**329.264**
	GRAND TOTAL		**3.125**	**629.169**	**632.294**

2. The State share of Rs.3.125 lakhs towards production and distribution of planting material for propagation of 25,000 hybrid coconut seedlings at K.R.S farm, Mandya will be met under the State Plan scheme namely, "Development and Maintenance of Farms and Nurseries" Head of Account 2401-00-119-4-05-139 (Major Works).

3. The Coconut Development Board share of Rs.299.905 lakhs will be met under the State Plan scheme namely, "Scheme for Integrated Farming in Coconut for Productivity/ Improvement with Coconut Development Board Assistance (100% CDB)" Head of Account 2401-00-108-2-35-100 (Financial Assistance/ Relief).

4. All efforts shall be made by the Director of Horticulture to ensure that the physical and financial targets fixed are achieved completely during 2009-10. The monthly progress report of the schemes to be implemented by the Department of Horticulture indicating the physical and financial achievements shall be furnished to the Coconut Development Board by the 10th of every month with a copy to the Government in MPIC format.

5. The Director of Horticulture shall ensure the following: -

a) In the case of production of TXD hybrid seedlings the details of male and female parent sources should be clearly indicated. The receipts accrued from the sale of seedlings under the TXD schemes may also be intimated to Coconut Development Board without fail. These receipts are to be shared by the Board and the State Governments on 50:50 basis.

b) Under the Area Expansion Programme, the source of planting materials shall be from the Nurseries of State Govt./CDB/CPCRI/CDB assisted Private Nurseries/ SAUs.

c) The basic yield data prior to the adoption of improved packages should be recorded from the plots identified for demonstration purpose.

d) The schemes 'Laying out demonstration plots' & 'Establishment of organic manure units' will be implemented as per the approved pattern. Under the scheme 'Laying out demonstration plots' financial assistance is limited to Rs.35,000/- per hectare depending on the activities under taken in the gardens in two annual installments. Necessary instructions shall be issued to the District Level Implementing Officers to initiate action to implement the Integrated Farming Scheme on a cluster basis. While selecting the cluster, preference should be given for areas with high incidence of pests and diseases. Modalities/ Criteria to be followed for implementation of the integrated farming scheme on cluster basis are as below:-

- A compact area approach with an extent of 25 ha. shall be selected by implementation of integrated farming scheme. All the small and marginal farmers coming under the cluster should be considered as beneficiaries of the programme based on the suitability of their coconut gardens irrespective of size of land holding.
- Conduct base line survey to record the present status of the crop and status of farmers before implementation of the projects. Data should be analyzed, and properly documented.
- Preference should be given to groups, which are promoted or supported by NGO/ Community based organizations/ Co-op societies etc.
- Cluster should have a technical resource group for monitoring and implementation of the different components of the programme. This resource group should visit different areas in the cluster in fixed days in a month. The resource groups should consist of the field level functionaries of the Horticulture Department, the Agricultural University, Coconut Development Board officials and scientists from Research Stations.
- A farmer leader should be identified for each group in the project area and the leader should be trained on all technologies to be adopted in the project area.
- The possibility of promoting farm level processing in the project area is to be ascertained and economically desirable coconut products are to be promoted through the groups.
- The technical programme and the calendar of operations for the year 2008-09 shall be prepared and distributed to the beneficiaries immediately for making arrangements for supply of inputs and timely adoption of the management practices.
- Supply of quality coconut seedlings is to be ensured in the selected clusters for new planting/ under planting. Their groups shall be promoted for production of quality seedlings by procuring seed nuts from the disease tolerant mother palm available in the project area. The mother palms selected in the root wilt affected areas shall be subjected to serological test at CPCRI as far as possible.

e) Under the scheme Organic Manure Unit, financial assistance is extended to popularize the use of Organic Manure in coconut holdings. Financial assistance is extended at the rate of Rs.20,000/- limited to 50% of the fixed and maintenance cost (size=15m X 1.5m X 0.70m). However, smaller units may be promoted and financial assistance may be reduced accordingly.

6. Releases will be made as and when Coconut Development Board provides funds.

7. The Director of Horticulture shall give wide publicity to the technology mission on coconut and identify, formulate and forward suitable projects to be proposed to Coconut Development Board as per the guidelines under the Technology Mission on Coconut.

8. The Director of Horticulture shall submit suitable proposals to the Government for additionality required under the scheme towards spillover works and as per the action plan approved by Coconut Development Board. Further, he shall send a separate proposal surrendering funds allocated under District Plan.

9. This order issues with the concurrence of Internal Financial Advisor, Agriculture and Horticulture Department vide Note No: ಕೃತೋಇ 150 ಆಂಆಸ 2009 dated 22.6.2009.

By order and in the name of Governor of Karnataka

S. RAJU

P.R. 1663 Under Secretary to Government, Horticulture Department

COMMERCE AND INDUSTRIES SECRETARIAT

Sub: Placing Services of Shri I.S.N.Prasad, IAS, Chief Project Officer, Karnataka State Highways Improvement Project and Managing Director, Karnataka Road Development Corporation Ltd, on additional charge as Project Coordinator of Mangalore SEZ Project and as one of the Directors on the Board of Directors of Mangalore Special Economic Zone Limited.

Read: 1. Chairman & Managing Director, Oil and Natural Gas Corporation Ltd., D.O. letter dated 10.7.2009 addressed to Chief Secretary Government of Karnataka.

2. U.O. Note No. CI DPAR 331 S.A.S 2009 dated 20.07.2009.

Preamble:

The Chairman and Managing Director, Oil and Natural Gas Corporation Limited in his letter read at (1) above has requested for designating Shri I.S.N.Prasad, IAS, as Project Coordinator of Mangalore SEZ Project and to nominate him as a Director on the Board of Mangalore SEZ Limited. The DPAR (Services) has concurred for the said request vide its U.O. Note read at (2) above. Hence the following order:-

Government Order No. CI 180 SPI 2009, Bangalore, Dated: 21st July 2009

In the circumstances explained in the preamble, the Government is pleased to designate Shri I.S.N.Prasad, IAS., Chief Project Officer, Karnataka State Highways Improvement Project and Managing Director, Karnataka Road Development Corporation Limited, as Project Coordinator of Mangalore SEZ Project as an additional charge and is also nominated as Director on the Board of Mangalore SEZ Limited, till further orders.

As Project Coordinator of Mangalore SEZ Project, Shri I.S.N.Prasad, IAS will be handling issues relating to land acquisition, Rehabilitation and Resettlement of Project Displaced Families, various matters pertaining to the Government of Karnataka in terms of SEZ Policy and regarding converting Mangalore SEZ from its present status of Sector Specific SEZ to General Purpose Multi-Product SEZ.

By order and in the name of the Governor of Karnataka

APARNA PAVATE

P.R. 1752 Desk Officer (Technical Cell), Commerce & Industries Department.

ಕಂದಾಯ ಸಚಿವಾಲಯ

ವಿಷಯ: 2009–10ನೇ ಸಾಲಿನಲ್ಲಿ ಭಾರಿ ಮಳೆ ಹಾಗೂ ಪ್ರವಾಹದ ವಿಕೋಪಗಳಿಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರಗಳು.

ಪ್ರಸ್ತಾವನೆ:

2009ನೇ ಜುಲೈ ತಿಂಗಳಲ್ಲಿ ಬಿದ್ದ ಭಾರಿ ಮಳೆಯಿಂದ ಪ್ರವಾಹ ಪರಿಸ್ಥಿತಿ ಉಂಟಾಗಿ ಮಾನವ ಜೀವಹಾನಿ, ಜಾನುವಾರುಹಾನಿ, ಮನೆಹಾನಿ, ಬೆಳೆಹಾನಿ ಹಾಗೂ ಮೂಲಭೂತ ಸೌಕರ್ಯಗಳಿಗೆ ಹಾನಿ ಉಂಟಾಗಿದೆ. ಇಂತಹ ಹಾನಿಗೆ ತುರ್ತು ಪರಿಹಾರ ಕೈಗೊಳ್ಳಲು ಹಣ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ. ಜಿಲ್ಲಾಧಿಕಾರಿಗಳ ಕೋರಿಕೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಹಣ ಬಿಡುಗಡೆ ಮಾಡಲು ತೀರ್ಮಾನಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 137 ಟಿಎನ್‌ಆರ್ 2009, ಬೆಂಗಳೂರು, ದಿನಾಂಕ: 17ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಪ್ರಕೃತಿ ವಿಕೋಪ ಪರಿಹಾರ ಕಾರ್ಯ ಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ರೂ. ಲಕ್ಷಗಳಲ್ಲಿ
1	ದಕ್ಷಿಣ ಕನ್ನಡ	500.00
2	ಉತ್ತರ ಕನ್ನಡ	500.00
3	ಉಡುಪಿ	500.00
4	ಶಿವಮೊಗ್ಗ	500.00
	ಒಟ್ಟು	**2000.00**

(ರೂ. ಎರಡು ಸಾವಿರ ಲಕ್ಷಗಳು ಮಾತ್ರ)

1) ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಈ ಕೆಳಕಂಡಂತೆ ಆದ್ಯತೆಯ ಮೇರೆಗೆ ಉಪಯೋಗಿಸುವುದು.

a) ಮಾನವ / ಪ್ರಾಣಿ ಜೀವಹಾನಿ

b) ಮನೆ ಹಾನಿ

c) ಬೆಳೆಹಾನಿ

d) ಕುಡಿಯುವ ನೀರು ಸರಬರಾಜು

e) ಮೇವು ಸರಬರಾಜು

f) ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ತುರ್ತು ರಿಪೇರಿ

2) ಕೇಂದ್ರ ಸರ್ಕಾರವು ದಿನಾಂಕ: 27-06-2007 ರಂದು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.

3) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಸಿಆರ್‌ಎಫ್/ಎನ್‌ಸಿಸಿಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

4) ಪ್ರಕೃತಿ ವಿಕೋಪದಿಂದ ಆದಂತಹ ವಿಪತ್ತು ಹಾನಿಗೆ ಮಾತ್ರ ಪರಿಹಾರ ನೀಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಸಿ.ಆರ್.ಎಫ್. ಪಿ.ಡಿ. ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು 2009-10ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245-02-110-0-01-100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 692 ವೆಚ್ಚ-7/2009 ದಿನಾಂಕ: 17-07-2009ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ದೇಸಾಯಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ, ಸರ್ಕಾರದ ಉಪ ಕಾರ್ಯದರ್ಶಿ,

ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು)

ಪಿ.ಆರ್. 1768

COMMERCE AND INDUSTRIES SECRETARIAT

Sub: Implementation of Integrated Sugar Factory Project at Hullatti Village, Haliyala Taluk, Uttara Kannada District by M/s Bharath Sugar Mills Ltd. – Consideration of their project under 2006-11 Industrial Policy – Reg.

Read:
1. Govt. Order No. CI 22 SPI 2006 Dt: 05-05-2006
2. Company's representation Dt: 19.12.2008.
3. Letter No. ID/E3/ETE-BSM/2008-09 Dt:20.05.2009

Preamble:

In the Govt. Order read above at (1), the incentives and concessions was offered as per Industrial Policy 2001-06 to M/s Bharath Sugar Mills Ltd. to establish Integrated Sugar Factory project.

The said company has represented vide letter dated 19.12.2008 read above at (2) to consider the incentives and concessions as applicable in Industrial Policy 2006-11. The said representation was referred to the Commissioner for Industrial Development and Director of Industries & Commerce for verification of the proposal vide letter dated 11.03.2009. The Joint Director (ID), Industries & Commerce Dept. has recommended to consider the said project under the Industrial Policy 2006-11, since the said unit has taken effective steps only after the issual of Govt. Order i.e. after 05-05-2006 and investments have been made only after 01.04.2006.

The proposal has been examined. Hence the following order.

Govt. Order No. CI 65 SPI 2009, Bangalore, Dated: 17th July 2009

In the circumstances explained in the preamble, Government is pleased to consider the incentives and concessions to M/s Bharath Sugar Mills Ltd. under Industrial Policy 2006-11 for the reasons cited in the preamble.

By Order and in the name of the Governor of Karnataka

P.R. 1776

APARNA PAVATE

Desk Officer (Technical Cell), Commerce & Industries Department.

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಪರ ನಿರ್ದೇಶಕರು (ಸಪ್ರಕೈ) ಹುದ್ದೆಯನ್ನು ಅಪರ ನಿರ್ದೇಶಕರು (ಎಂ.ಎಸ್.ಎಂ.ಇ.) ಎಂದು ಮರು ಪದನಾಮಗೊಳಿಸುವ ಬಗ್ಗೆ.

ಓದಲಾಗಿದೆ:
1. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ ಆಡಳಿತ/ಸಿಬ್ಬಂದಿ/ಇ2/32/2009–10 ದಿ:09.06.2009
2. ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಾಲಯ, ಭಾರತ ಸರ್ಕಾರ ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಎಸ್.ಒ. 1154 (ಇ) ದಿ: 18–07–2006

ಪ್ರಸ್ತಾವನೆ:

ಮೇಲೆ ಓದಲಾದ (2)ರ ಪತ್ರದಲ್ಲಿ Micro, Small & Medium Enterprises (MSME) ಕಾಯ್ದೆ 2006 ಜಾರಿಗೆ ತರಲಾಗಿರುವುದನ್ನು ಪ್ರಸ್ತಾಪಿಸಿ ಕೇಂದ್ರ ಸರ್ಕಾರದ ಪತ್ರ ವ್ಯವಹಾರಗಳಲ್ಲಿ MSME ಎಂದು ಉಲ್ಲೇಖಿಸಲಾಗುತ್ತಿದ್ದು ಈ ಹಿನ್ನೆಲೆಯಲ್ಲಿ ಸಮಾನಾಂತರ ಕ್ರಮವಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಪರ ನಿರ್ದೇಶಕರು (ಸ.ಪ್ರ.ಕೈ.) ಹುದ್ದೆಯ ಪದನಾಮವನ್ನು ಅಪರ ನಿರ್ದೇಶಕರು (ಎಂ.ಎಸ್.ಎಂ.ಇ,) ಎಂದು ಮರುಪದನಾಮಗೊಳಿಸಲು ಕೈಗಾರಿಕಾ ನಿರ್ದೇಶನಾಲಯ ಶಿಫಾರಸ್ಸು ಮಾಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 137 ಕೈಸೇವಿ 2009, ಬೆಂಗಳೂರು, ದಿನಾಂಕ: 23ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಅಪರ ನಿರ್ದೇಶಕರು (ಸಪ್ರಕೈ) ಹುದ್ದೆಯ ಪದನಾಮವನ್ನು ಅಪರ ನಿರ್ದೇಶಕರು (ಎಂ.ಎಸ್.ಎಂ.ಇ.) ಎಂದು ಮರುಪದನಾಮಗೊಳಿಸಿ ಆದೇಶಿಸಲಾಗಿದೆ. ಈ ಕುರಿತಂತೆ ಸಿ ಅಂಡ್ ಆರ್ ನಿಯಮ ಹಾಗೂ ಕರ್ನಾಟಕ ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳಿಗೆ ತಿದ್ದುಪಡಿ ತರಲು ಪ್ರತ್ಯೇಕವಾಗಿ ಕ್ರಮ ಜರುಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಸಿ. ಪ್ರಕಾಶ್

ಪಿ.ಆರ್. 1777

ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

HORTICULTURE SECRETARIAT

Sub: "Scheme for Integrated Farming in Coconut for Productivity/ Improvement with Coconut Development Board Assistance (100% CDB)" – Release of funds reg.

Read: 1) GO. No. AHD 53 HPP 2009, dated 24.06.2009.

2) Letter of CDB F.No.597/2009 –DEV(Kar) dated 7/13.7.2009

3) Government Letter No.ಕೃತೋಇ 53 ತೋಯೋಕಾ 2009 dated 14.7.2009

Preamble:

1. During the year 2009-10, State Level Administrative Approval for implementing the Coconut Development Board Programmes with a total financial outlay of Rs.632.294 lakhs vide Government Order read at (1) above. Under these programmes components to the tune of Rs.303.03 lakhs will be implemented by the Department of Horticulture and components to the tune of Rs.329.264 lakhs will be implemented by the Coconut Development Board directly.

2. Coconut Development Board vide its letter read at (2) above has released an amount of Rs.1,74,28,000/- (Rupees One Crore Seventy Four Lakhs Twenty Eight Thousand only) to the Secretary, Horticulture through a Demand Draft No.994901 dated 1.7.2009 as first installment during 2009-10 for the following purpose.

Particulars	Amount (Rs.)
Integrated Farming in coconut holdings for Productivity Improvement in Karnataka State:	
a) Laying out of demonstration plots (500 ha-New)	87,50,000/-
(296 ha-Maintenance)	51,78,000/-
b) Organic manure unit	35,00,000/-
TOTAL	**1,74,28,000/-**

The said D.D has been sent to the Director of Horticulture for remittance to Treasury vide Government Letter cited at (3) above.

3. The issue of releasing of funds to the Director of Horticulture was discussed in detail during MPIC review meeting held on 15.7.2009 under the Chairmanship of Secretary, Horticulture. It was decided to release funds for the first two quarters and hence this order;

Government Order No.AHD 53 HPP 2009, Bangalore, Dated: 28th July 2009

Government is pleased to release an amount of Rs.1,74,28,000/- (Rupees One Crore Seventy Four Lakhs Twenty Eight Thousand only) to the Director of Horticulture under the "Scheme for Integrated Farming in Coconut for Productivity/ Improvement" in the State during 2009-10 under the Head of Account 2401-00-108-2-35-100 (Financial Assistance/ Relief).

2. This order is issued as per the delegation of powers vested with Secretaries vide Government Order No.FD 1 TFP 2008 dated 16.5.2008 and concurrence by the Internal Financial Advisor, Agriculture and Horticulture Department vide Note No.ಕೃತೋಇ 168 ಆಂಆಸ 2009 dated 24.7.2009.

By order and in the name of Governor of Karnataka

S. RAJU

Under Secretary to Government, Horticulture Department.

P.R. 1787

ತೋಟಗಾರಿಕೆ ಸಚಿವಾಲಯ

ವಿಷಯ: ಕೋಲಾರ ಜಿಲ್ಲೆಯಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ: ತೋಟಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ:ತೋಇ:ಯೋ:ಸತೋಅ–1:06:2009–10:4, ದಿನಾಂಕ:28/30.4.2009.

ಪ್ರಸ್ತಾವನೆ:

ಕೋಲಾರ ಜಿಲ್ಲೆಯು ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಸೂಕ್ತವಾದ ತೋಟಗಾರಿಕೆ ಹವಾಮಾನ ಮತ್ತು ನೈಸರ್ಗಿಕ ಸಂಪತ್ತುಗಳನ್ನು ಹೊಂದಿರುತ್ತದೆ. ಈ ಪ್ರದೇಶದ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಇರುವ ಅವಕಾಶವನ್ನು ಮನಗಂಡು ಆಧುನಿಕ ತಂತ್ರಜ್ಞಾನವನ್ನು ಶಿಕ್ಷಣದ ಮೂಲಕ ಪ್ರಸಾರ ಮಾಡಲು ಅನುವಾಗುವಂತೆ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು 2009–10ನೇ ಸಾಲಿನ ಆಯವ್ಯಯ ಭಾಷಣದ ಪ್ಯಾರಾ 50ರಲ್ಲಿ ಹಣ್ಣು ಮತ್ತು ತೋಟಗಾರಿಕೆ ಬೆಳೆಗಳಿಗೆ ಹೆಸರುವಾಸಿಯಾದ ಕೋಲಾರ ಜಿಲ್ಲೆಯಲ್ಲಿ ನೂತನ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ರೂ.5.00 ಕೋಟಿಗಳನ್ನು ನೀಡಲಾಗುವುದು ಎಂದು ಘೋಷಿಸಲಾಗಿದೆ. ಈ ಅನ್ವಯ ಕೋಲಾರದಲ್ಲಿ ತೋಟಗಾರಿಕೆ ಕಾಲೇಜು (2401–00–800–2–44–101 ಎಂಬ ಹೊಸ ಯೋಜನೆಯಡಿ ರೂ.5.00 ಕೋಟಿಗಳನ್ನು ಒದಗಿಸಲಾಗಿದೆ.

ಮೇಲೆ ಓದಲಾದ ತೋಟಗಾರಿಕೆ ನಿರ್ದೇಶಕರ ಪತ್ರದಲ್ಲಿ ಕೋಲಾರ ಜಿಲ್ಲೆಯಲ್ಲಿ ಹಣ್ಣು ಮತ್ತು ತೋಟಗಾರಿಕೆ ಬೆಳೆಗಳಿಗೆ ಹೆಸರುವಾಸಿಯಾದ ಕೋಲಾರ ಜಿಲ್ಲೆಯಲ್ಲಿ ನೂತನ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸುವ ಬಗ್ಗೆ ವಿವರಗಳನ್ನು ಮಂಡಿಸಿ 2009–10ನೇ ಸಾಲಿನಲ್ಲಿ ಇದನ್ನು ಹೊಸ ಯೋಜನೆಗಾಗಿ ಮಂಜೂರು ಮಾಡಲು ಮನವಿ ಮಾಡಿರುತ್ತಾರೆ. ಅದನ್ನು ಪರಿಶೀಲಿಸಿ, ಕೆಳಕಾಣಿಸಿದ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಕೃತೋಇ 114 ತೋಇವಿ 2009, ಬೆಂಗಳೂರು, ದಿನಾಂಕ: 23ನೇ ಜುಲೈ 2009

ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕೋಲಾರದಲ್ಲಿ ತೋಟಗಾರಿಕೆ ಕಾಲೇಜನ್ನು 2009–10ನೇ ಸಾಲಿನ ಶೈಕ್ಷಣಿಕ ವರ್ಷದಿಂದಲೇ ಆರಂಭಿಸಲು ವಿಶೇಷಾಧಿಕಾರಿ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,ಬಾಗಲಕೋಟೆ ಇವರಿಗೆ ಅನುಮತಿ ನೀಡಲಾಗಿದೆ. ಈ ಉದ್ದೇಶಕ್ಕಾಗಿ ಹೊಸ ಲೆಕ್ಕಶೀರ್ಷಿಕೆ 2401–00–800–2–44–101 (ಸಹಾಯಾನುದಾನ)ದಡಿ ವಿಶೇಷಾಧಿಕಾರಿ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ ಇವರಿಗೆ ರೂ.500.00(ಐದು ನೂರು ಲಕ್ಷಗಳು ಮಾತ್ರ)ಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ ರೂ.125.00(ಒಂದು ನೂರ ಇಪ್ಪತ್ತೈದು ಲಕ್ಷಗಳು ಮಾತ್ರ)ಗಳನ್ನು ಈ ಆದೇಶದ ಮೂಲಕ ಬಿಡುಗಡೆ ಮಾಡಲಾಗಿದೆ. ಸದರಿ ಸಹಾಯಧನ ಪಡೆಯಲು ಮಂಡಿಸುವ ಬಿಲ್ಲಿಗೆ ಮೇಲು ಸಹಿ ಮಾಡಲು ತೋಟಗಾರಿಕೆ ನಿರ್ದೇಶಕರಿಗೆ ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 27 ಪಿಎಫ್ಒ 2009, ದಿನಾಂಕ:17.6.2009, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 327 ವೆಚ್ಚ–4:2009, ದಿನಾಂಕ:26.6.2009ರ ಸಹಮತಿಯಂತೆ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1788

ಎಸ್. ರಾಜು

ಸರ್ಕಾರದ ಅಧೀನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ

ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ಟರ್ನ್ ಕೀ ಆಧಾರದ ಮೇಲೆ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಕಇ 152 ಎಸ್‌ಡಿಸಿ 2002 ದಿನಾಂಕ: 6–6–2006

2) ಪತ್ರ ಸಂಖ್ಯೆ ಡಾ: ಬಿ.ಆರ್.ಅಂ.ಅ.ನಿ/ಗಂಕಯೋ/ಘ.ವೆ/2008–09/4020, ದಿನಾಂಕ:24–07–2008

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿ ಕೊರೆಯುವ ವೈಯಕ್ತಿಕ ಕೊಳವೆ ಬಾವಿಗಳ ಘಟಕ ವೆಚ್ಚವನ್ನು ರೂ. 1.00 ಲಕ್ಷ ನಿಗಧಿಪಡಿಸಲಾಗಿದ್ದು, ಈ ಮೊತ್ತದಲ್ಲಿ ರೂ. 86,000.00 ಸಹಾಯ ಧನವಾಗಿದ್ದು ಉಳಿದ ರೂ. 14,000.00 ಸಾಲ ಆಗಿರುತ್ತದೆ. ಈ ಘಟಕ ವೆಚ್ಚದಲ್ಲಿ ವೈಯಕ್ತಿಕ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಕಂಪನಿಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಪಡೆಯುವ ಸಲುವಾಗಿ ಪಾವತಿಸುವ ಡಿಪಾಸಿಟ್ ಹಣ (ವಾರ್ಷಿಕ ಕನಿಷ್ಠ ಠೇವಣಿ) ಸಹಾ ಸೇರಿರುತ್ತದೆ. ಗಂಗಾ ಕಲ್ಯಾಣ ಯೋಜನೆ ಅಡಿ ವೈಯಕ್ತಿಕ ಕೊಳವೆ ಬಾವಿ ಹಾಗೂ ಸಾಮೂಹಿಕ ಕೊಳವೆ ಬಾವಿ ಇದ್ದು, ಸಾಮೂಹಿಕ ಕೊಳವೆ ಬಾವಿಗಳ ಕುರಿತಂತೆ 02 ಕೊಳವೆ ಬಾವಿಗಳ ಹಾಗೂ 03 ಕೊಳವೆ ಬಾವಿಗಳ ಘಟಕ ವೆಚ್ಚವು ಕ್ರಮವಾಗಿ ರೂ. 2.53 ಲಕ್ಷ ಹಾಗೂ ರೂ. 3.59 ಲಕ್ಷ ಆಗಿರುತ್ತದೆ.

ಕೊಳವೆ ಬಾವಿಗಳನ್ನು "ನೀರಿಲ್ಲದಿದ್ದರೆ ಹಣವಿಲ್ಲ" ಎಂಬುದರ ಆಧಾರದ ಮೇಲೆ ಕೊರೆಯಲಾಗುತ್ತಿದೆ. ಅಂದರೆ 1000 ಜಿ.ಪಿ.ಹೆಚ್. ನಷ್ಟು ಕನಿಷ್ಠ ನೀರಿನ ಇಳುವರಿ ಇರಬೇಕೆಂಬ ಷರತ್ತನ್ನು ಪೂರೈಸಿದಲ್ಲಿ ಮಾತ್ರ ಕೊರೆಯುವಿಕೆದಾರರು ಕೊರೆಯುವ ವೆಚ್ಚವನ್ನು ಪಡೆಯುತ್ತಾರೆ.

ಪ್ರಸ್ತುತ ಕೊಳವೆಬಾವಿಗಳನ್ನು ಕೊರೆಯಲು ಹಾಗೂ ಕೇಸಿಂಗ್ ಪೈಪ್ ಅಳವಡಿಸಿ ನೀರಿನ ಇಳುವರಿ ಪರೀಕ್ಷೆಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಮಾಡಿಸುವ ಸಲುವಾಗಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತಿದ್ದು, ಪಂಪ್ ಮೋಟಾರುಗಳು ಹಾಗೂ ಪೂರಕಗಳನ್ನು ಸರಬರಾಜು ಮಾಡುವುದರ ಜೊತೆಗೆ ಪಂಪ್ ಮೋಟಾರು ಅಳವಡಿಸಿ ವಿದ್ಯುದ್ಧೀಕರಣಗೊಳಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಮಟ್ಟದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತಿದೆ.

ಈ ಕುರಿತಂತೆ ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರು ಸಲ್ಲಿಸುವ ಕ್ರೋಢೀಕೃತ ಪ್ರಸ್ತಾವನೆಯನ್ನು ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಖರೀದಿ ಸಮಿತಿಯಲ್ಲಿ ಚರ್ಚಿಸಿದ ನಂತರ ಟಂಡರ್‌ಗಳನ್ನು ಅಂತಿಮಗೊಳಿಸಲಾಗುತ್ತದೆ.

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಅಲ್ಪ ಸಂಖ್ಯಾತರ ನಿಗಮ–ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಕೊಳವೆ ಬಾವಿಗಳ ಕೊರೆಯುವಿಕೆ ಹಾಗೂ ಕೊಳವೆ ಬಾವಿಗಳ ಸ್ಥಾಪಿಸುವ ಚಟುವಟಿಕೆಗಳು ಆಂತರಿಕ ಸಂಬಂಧ ಹೊಂದಿದ್ದರೂ ಪ್ರತ್ಯೇಕವಾಗಿ ಟಂಡರ್‌ಗಳನ್ನು ಆಹ್ವಾನಿಸುವುದಲ್ಲದೆ, ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ವಿಳಂಬ ಉಂಟಾಗುವುದರ ಪರಿಣಾಮವಾಗಿ ಯೋಜನೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡುತ್ತಿದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 48 ಎಸ್‌ಡಿಸಿ 2008, ಬೆಂಗಳೂರು, ದಿನಾಂಕ: 16ನೇ ಜುಲೈ 2009

ಗಂಗಾ ಕಲ್ಯಾಣ ಯೋಜನೆಯನ್ನು "ಟರ್ನ್ ಕೀ ಆಧಾರದ ಮೇಲೆ" ಅನುಷ್ಠಾನಗೊಳಿಸುವ ಸಲುವಾಗಿ ಕೊಳವೆ ಬಾವಿಗಳನ್ನು ಕೊರೆಯುವ, ಪಂಪ್‌ಸೆಟ್‌ಗಳನ್ನು ಸರಬರಾಜು/ಅಳವಡಿಸುವ ಹಾಗೂ ಅಂತಹ ಕೊಳವೆ ಬಾವಿಗಳಿಗೆ ಬೇಕಾಗುವ ವಿದ್ಯುತ್ ಸರಬರಾಜು ಸೇರಿದಂತೆ ಒಂದೆ ಪ್ಯಾಕೇಜಿನಲ್ಲಿ ಟೆಂಡರ್ ಕರೆಯಲು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಕಇ 152 ಎಸ್‌ಡಿಸಿ 2002 ದಿನಾಂಕ: 6–6–2006 ರಲ್ಲಿ ನಿಗಧಿಪಡಿಸಲಾದ ರೂ. 1.00 ಲಕ್ಷ ಘಟಕ ದರವನ್ನು ತೆಗೆದು ಹಾಕಿ ಮುಕ್ತ ಹರಾಜಿನಲ್ಲಿ ಬಿಡ್ಸ್ ಮುಖಾಂತರ ಸ್ವೀಕರಿಸುವ ದರಗಳನ್ನು ಪರಿಗಣಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಮಸ್ವಾಮಿ

ಪಿ.ಆರ್. 1789

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರ),
ಸಮಾಜ ಕಲ್ಯಾಣ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಕಂದಾಯ ನಿರೀಕ್ಷಕರ ಹುದ್ದೆಯನ್ನು ರದ್ದುಪಡಿಸುವ ಕುರಿತು.

ಓದಲಾಗಿದೆ: 1) ಅಧಿಸೂಚನೆ ಸಂಖ್ಯೆ ಸಿಆಸುಇ 23 ಎಸ್‌ಆರ್ 89, ದಿನಾಂಕ : 6.11.1992.

ಪ್ರಸ್ತಾವನೆ:

ಮೇಲೆ ಓದಲಾದ 1ರ ದಿನಾಂಕ 6.11.1992ರ ಅಧಿಸೂಚನೆಯಲ್ಲಿ ಕರ್ನಾಟಕ ಸರ್ಕಾರಿ ಸಚಿವಾಲಯದ (ನೇಮಕಾತಿ) ನಿಯಮಗಳು 1992ನ್ನು ಹೊರಡಿಸಲಾಗಿದೆ. ಅದರಲ್ಲಿ ಸಚಿವಾಲಯದ ಸಿಬ್ಬಂದಿಗಳ ಗೃಹ ನಿರ್ಮಾಣ ಮುಂಗಡ ಸಾಲ ಪಡೆದಂತಹ ಸಂದರ್ಭದಲ್ಲಿ ಗೃಹ ನಿರ್ಮಾಣ ಕಾರ್ಯದ ಪ್ರಗತಿ, ದ್ವಿತೀಯ ಕಂತು ಮಂಜೂರು ಆಗುವ ಸಮಯದಲ್ಲಿ ಕಟ್ಟಡದ ಪ್ರಗತಿ ಕುರಿತು ಪರಿವೀಕ್ಷಣೆ ನಿರ್ಮಾಣ ಪೂರ್ಣಗೊಂಡ ನಂತರ ಸ್ಥಳದ ಪರಿವೀಕ್ಷಣೆ ವರದಿ, ನೋಟೀಸ್ ಜಾರಿ ಮಾಡುವ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ–ಎ) ಶಾಖೆಯಲ್ಲಿ ಒಂದು ಕಂದಾಯ ನಿರೀಕ್ಷಕ (ಪ್ರಥಮ ದರ್ಜೆ ಸಹಾಯಕ) ಹುದ್ದೆಯನ್ನು ಕಂದಾಯ ಇಲಾಖೆಯಿಂದ ನಿಯೋಜನೆ ಮೇಲೆ ತುಂಬಲು ಅವಕಾಶವನ್ನು ಮಾಡಲಾಗಿತ್ತು.

ಪ್ರಸ್ತುತ ಈ ಹುದ್ದೆ ಖಾಲಿ ಇರುತ್ತದೆ ಹಾಗೂ ಹೆಚ್.ಡಿ.ಎಫ್.ಸಿ. ಯಿಂದ ಗೃಹ ನಿರ್ಮಾಣಕ್ಕಾಗಿ ಮುಂಗಡ ಹಣವನ್ನು ಮಂಜೂರು ಮಾಡುತ್ತಿಲ್ಲವಾದ್ದರಿಂದ ಹಾಗೂ ಈ ಹುದ್ದೆಗೆ ನಿಗದಿಪಡಿಸಿರುವ ಕೆಲಸ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಇಲ್ಲದೆ ಇರುವುದರಿಂದ ಈ ಹುದ್ದೆಯನ್ನು ರದ್ದುಪಡಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ. ಹಾಗೂ ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮಗಳಡಿ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 27 ಆಸಸೇ 2008, ಬೆಂಗಳೂರು, ದಿನಾಂಕ: 21ನೇ ಜುಲೈ 2009

ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 225 ಆಸಸೇ 2006, ದಿನಾಂಕ 30.11.2006ರಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯ (ನೇಮಕಾತಿ) ನಿಯಮಗಳು 1992ರಲ್ಲಿ ಕಂದಾಯ ಇಲಾಖೆಯಿಂದ ನಿಯೋಜನೆ ಮೇಲೆ ತುಂಬಲಾಗುತ್ತಿದ್ದ ಒಂದು ಕಂದಾಯ ನಿರೀಕ್ಷಕರ ಹುದ್ದೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ತಾರಾ

ಪಿ.ಆರ್. 1793

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ–1).

ಸೇರ್ಪಡೆ

ಸಂಖ್ಯೆ: ಸಿಆಸುಇ 30 ಪಿಎಫ್‌ಜಿ 2006 (ಭಾಗ), ದಿನಾಂಕ: 20ನೇ ಜುಲೈ 2009

ದಿನಾಂಕ: 04.02.2009 ಸಂಖ್ಯೆ:ಸಿಆಸುಇ 30 ಪಿಎಫ್‌ಜಿ 2006 (ಭಾಗ) ರ ಸರ್ಕಾರಿ ಆದೇಶದ ಮೊದಲನೇ ಸಾಲಿನಲ್ಲಿ "ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯವರಿಗೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ" ಎಂಬುದಕ್ಕೆ ಬದಲಾಗಿ "ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬೆಂಗಳೂರು ವಾಯುವ್ಯ-ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ ಮತ್ತು ಈಶಾನ್ಯ-ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾ ಬಸ್ಸುಗಳಲ್ಲಿ" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ಚಂದ್ರಶೇಖರರಾವ್

ಪಿ.ಆರ್. 1795 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು-ರಾಜಕೀಯ ವಿಶ್ರಾಂತಿ ವೇತನ)

ವಿಷಯ: ಶ್ರೀ ಐ.ಎಸ್.ಎನ್. ಪ್ರಸಾದ್, ಐ.ಎ.ಎಸ್. ರವರ ಕಡ್ಡಾಯ ನಿರೀಕ್ಷಣಾ ಅವಧಿಯನ್ನು ಸಕ್ರಮಗೊಳಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 75 ಎಸ್‌ಎಎಸ್ 2009 ದಿ: 08-07-2009.

2) ಶ್ರೀ ಐ.ಎಸ್.ಎನ್. ಪ್ರಸಾದ್, ಐ.ಎ.ಎಸ್., ರವರ ಪತ್ರ ದಿ: 14-07-2009.

ಪ್ರಸ್ತಾವನೆ:

ಶ್ರೀ ಐ.ಎಸ್.ಎನ್. ಪ್ರಸಾದ್, ಐ.ಎ.ಎಸ್. ಇವರ ಕೇಂದ್ರ ನಿಯೋಜನೆಯು ಮುಕ್ತಾಯಗೊಂಡ ನಂತರ, ಸದರಿಯವರು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ದಿನಾಂಕ 6.7.2009 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು ನೇಮಕಾತಿ ನಿರೀಕ್ಷಣೆಯಲ್ಲಿದ್ದರು. ತದನಂತರ ಅವರನ್ನು ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಮುಖ್ಯ ಯೋಜನಾ ಅಧಿಕಾರಿ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆ.ಎಸ್.ಹೆಚ್.ಐ.ಪಿ.), ಬೆಂಗಳೂರು, ಹುದ್ದೆಗೆ ನೇಮಿಸಿದ್ದರ ಮೇರೆಗೆ ಅವರು ದಿನಾಂಕ 10-07-2009ರ ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಐ.ಎಸ್.ಎನ್. ಪ್ರಸಾದ್, ಐ.ಎ.ಎಸ್. ರವರು ದಿನಾಂಕ:6.7.2009 ರಿಂದ 9.7.2009ರ ವರೆಗೆ ನೇಮಕಾತಿ ನಿರೀಕ್ಷಣೆಯಲ್ಲಿ ಕಳೆದ ಅವಧಿಯನ್ನು ಸಕ್ರಮಗೊಳಿಸುವ ನಿಟ್ಟಿನಲ್ಲಿ ಸೂಕ್ತ ಆದೇಶ ಹೊರಡಿಸಲು ಕೋರಿದ್ದಾರೆ. ಸರ್ಕಾರವು ಪ್ರಕರಣವನ್ನು ಪರಿಶೀಲಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 144 ಎಸ್‌ಎಎಸ್ 2009, ಬೆಂಗಳೂರು, ದಿನಾಂಕ: 29ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಐ.ಎಸ್.ಎನ್. ಪ್ರಸಾದ್, ಐ.ಎ.ಎಸ್.ರವರು ದಿನಾಂಕ:6.7.2009 ರಿಂದ 9.7.2009ರ ವರೆಗೆ ಕಳೆದ ಅವಧಿಯನ್ನು ಸರ್ಕಾರವು ಈ ಕೆಳಕಂಡಂತೆ ಪರಿಗಣಿಸಿ ಸಕ್ರಮಗೊಳಿಸಿದೆ.

1. ದಿನಾಂಕ 6.7.2009 ರಿಂದ 8.7.2009ರವರೆಗಿನ ಅವಧಿಯನ್ನು ಕ.ನಾ.ಸೇ. ನಿಯಮಗಳ ನಿಯಮ 8(15) (ಎಫ್) ರಡಿಯಲ್ಲಿ ಕಡ್ಡಾಯ ನಿರೀಕ್ಷಣಾ ಅವಧಿಯೆಂದು ಪರಿಗಣಿಸಿದೆ.
2. ದಿನಾಂಕ 9.7.2009 ರಂದು ಒಂದು ದಿನದ ಗಳಿಕೆ ರಜೆಯೆಂದು ಪರಿಗಣಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ/1/ಟಿಎಫ್‌ಪಿ/96, ದಿ: 10-07-96 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾದ ಪಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಜಿ. ಅನಂತ

ಪಿ.ಆರ್. 1796 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-1)

ವಿಷಯ: ಶ್ರೀ ಎ. ಮರೀಗೌಡ, ಕೆ.ಎ.ಎಸ್. (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ, ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣ ಮತ್ತು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ: 1) ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ದಿನಾಂಕ:15.06.09 ರ ಪತ್ರ ಸಂಖ್ಯೆ Lok/INV(G)/GD-33/CR-3/2009/ರಾಮನಗರ

2) ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರ, ಇವರ ದಿನಾಂಕ : 24.06.09ರ ಪತ್ರ ಸಂಖ್ಯೆ : ಸಿಆರ್‌ಎಂ/ಕಲೋ/ಸಿಆರ್/03/2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಶ್ರೀ ಎ. ಮರೀಗೌಡ, ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ರವರನ್ನು ಕೆಳಕಂಡ ಪ್ರಕರಣದಲ್ಲಿ ವಿವರಿಸಿರುವಂತೆ ಇವರ ವಿರುದ್ಧದ ಭ್ರಷ್ಟಾಚಾರದ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವ ಕಾರಣ, ಪ್ರಕರಣದ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಇವರನ್ನು ಅಮಾನತ್ತಿನಲ್ಲಿಡಬೇಕೆಂದು ಮತ್ತು ಇವರ ಲೀನ್ (ಸ್ಥಾನ) ಅನ್ನು ಬೇರೆ ಕಡೆಗೆ ವರ್ಗಾಯಿಸಲು ಶಿಫಾರಸ್ಸು ಮಾಡುತ್ತಾ, ತಮ್ಮ ವರದಿಯೊಂದಿಗೆ ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆಗಳನ್ನು ಲಗತ್ತಿಸಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಶ್ರೀ ಜಿ.ಎಸ್. ವಿಶಾಲಾಕ್ಷ @ ರವಿ ಬಿನ್ ಜಿ.ಎಸ್. ಸಿದ್ಧಯ್ಯ, ಇವರ ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಗಬ್ಬಾಡಿ ಗ್ರಾಮದಲ್ಲಿನ ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ಸಾಮಾನುಗಳು ಸರಿಯಾಗಿ ವಿತರಣೆಯಾಗುತ್ತಿಲ್ಲವೆಂಬ ಬೇನಾಮಿದಾರರೊಬ್ಬರ ದೂರನ್ನು ಆಧರಿಸಿ, ಆಹಾರ ನಿರೀಕ್ಷಕರು ಸಲ್ಲಿಸಿದ ವರದಿಯ ಸಂಬಂಧವಾಗಿ ಸದರಿ ನ್ಯಾಯಬೆಲೆಯ ಪರವಾನಗಿಯನ್ನು ಅಮಾನತ್ತುಪಡಿಸದೇ ಇರಲು ಶ್ರೀ ಮರೀಗೌಡ ರವರು ರೂ.10,000.00 ಗಳ ಲಂಚದ ಹಣಕ್ಕೆ ಒತ್ತಾಯಿಸಿರುವರೆಂದೂ, ಇದಕ್ಕೆ ಇಷ್ಟವಿಲ್ಲದಿದ್ದರಿಂದ ಈ ಎಲ್ಲ ವಿವರಗಳನ್ನು ಶ್ರೀ ವಿಶಾಲಾಕ್ಷ ರವರು ದಿನಾಂಕ: 3.6.09 ರಂದು ರಾಮನಗರ ಲೋಕಾಯುಕ್ತ ಪೊಲೀಸರಲ್ಲಿ ದೂರು ದಾಖಲಿಸಿರುತ್ತಾರೆ. ಈ ದೂರನ್ನು ಆಧರಿಸಿ, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ರಾಮನಗರ, ಇವರು ಮೇಲ್ಕಂಡ ಅಧಿಕಾರಿಯ ವಿರುದ್ಧ ಲಂಚ ನಿರೋಧಕ ಕಾಯ್ದೆ 1988 ರ ಕಲಂ 7, 13(1) ರ ಜೊತೆಗೆ 13(2)ರ ಪ್ರಕಾರ ಮೊಕದ್ದಮೆ ಸಂಖ್ಯೆ: 03/2009 ರಲ್ಲಿ ಪ್ರಕರಣ ದಾಖಲಿಸಿರುತ್ತಾರೆ.

ತನಿಖಾಧಿಕಾರಿಗಳು ಎಲ್ಲ ಪ್ರಾಥಮಿಕ ಪ್ರಕ್ರಿಯೆಗಳನ್ನು ಕೈಗೊಂಡು, ಫಿರ್ಯಾದುದಾರರಾದ ಶ್ರೀ ವಿಶಾಲಾಕ್ಷ, ಮತ್ತೊಬ್ಬರಾದ ಶ್ರೀ ಆರ್. ರಂಗಯ್ಯ ಮತ್ತು ಪಂಚ--I ರವರುಗಳನ್ನು ದಿನಾಂಕ 3.6.09 ರಂದು ರಾಮನಗರದ ಲೋಕ ರುಚಿ ಹೋಟಲಿನ ಹತ್ತಿರ ಆರೋಪಿತ ಅಧಿಕಾರಿ ಶ್ರೀ ಮರೀಗೌಡ ರವರನ್ನು ಭೇಟಿ ಮಾಡಿ ಲಂಚದ ಹಣವನ್ನು ನೀಡಲು ವ್ಯವಸ್ಥೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಶ್ರೀ ರಂಗಯ್ಯ ರವರ ಮೂಲಕ ಆರೋಪಿತ ಅಧಿಕಾರಿಯು ರೂ. 10.000-00 ಗಳ ಲಂಚದ ಹಣವನ್ನು ಸ್ವೀಕರಿಸುತ್ತಿದ್ದಾಗ, ಲೋಕಾಯುಕ್ತ ಪೊಲೀಸರು ಬೀಸಿದ ಬಲೆಗೆ ಸಿಕ್ಕಿಬಿದ್ದಿರುತ್ತಾರೆ. ಲಂಚದ ಹಣ ನೀಡಿದ ಶ್ರೀ ರಂಗಯ್ಯ ಮತ್ತು ಸ್ವೀಕರಿಸಿದ ಶ್ರೀ ಮರೀಗೌಡ ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ, ನೀರು ತಿಳಿ ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ಇದರಿಂದಾಗಿ, ಆರೋಪಿತ ಅಧಿಕಾರಿ ಲಂಚದ ಹಣವನ್ನು ಸ್ವೀಕರಿಸಿರುವುದು ದೃಢಪಟ್ಟಿರುತ್ತದೆ ಲಂಚದ ಹಣವನ್ನು ಜೀಪಿನ ಸೀಟಿನ ಅಡಿ ಬಿದ್ದಿರುವುದನ್ನು ಪಂಚರ ಸಾಕ್ಷಿದಾರರುಗಳ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ. ಆರೋಪಿತರು ಲಂಚದ ಹಣಕ್ಕಾಗಿ ಒತ್ತಾಯಿಸಿ ಸ್ವೀಕರಿಸಿರುವುದನ್ನು ಫಿರ್ಯಾದುದಾರರು, ನೆರಳು ಸಾಕ್ಷಿದಾರರು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮಗಳನ್ನು ಅನುಸರಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಲು ಅವೇಳೆಯಾದ ಕಾರಣ, ಆರೋಪಿತರನ್ನು ಪೊಲೀಸು ಠಾಣೆಯಲ್ಲಿ ಬಂಧನದಲ್ಲಿರಿಸಿ, ದಿನಾಂಕ: 4.6.09 ರಂದು ಜಿಲ್ಲಾ ಸತ್ರ ಮತ್ತು ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಸದರಿ ನ್ಯಾಯಾಲಯವು ಆರೋಪಿಯನ್ನು ಸಕ್ಷಮ ನ್ಯಾಯಾಲಯವು ದಿನಾಂಕ: 5.6.09 ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ವರದಿ ಮಾಡಲಾಗಿದೆ.

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಆಪಾದಿತ ಅಧಿಕಾರಿಯು ಲಂಚದ ಹಣವನ್ನು ಸ್ವೀಕರಿಸುತ್ತಿರುವಾಗ ಲೋಕಾಯುಕ್ತ ಪೊಲೀಸರಿಗೆ ನೇರವಾಗಿ ಸಿಕ್ಕಿಬಿದ್ದಿರುವುದರಿಂದಲೂ, ಕೈಗಳನ್ನು ದ್ರಾವಣದಲ್ಲಿ ಅದ್ದಿದಾಗ ಬಣ್ಣ ಬದಲಾಗಿರುವುದರಿಂದಲೂ, ಮೇಲ್ನೋಟಕ್ಕೆ ಭ್ರಷ್ಟಾಚಾರದ ಆಪಾದನೆಯು ಸಾಬೀತುಗೊಂಡಿದೆ ಎಂದು ಭಾವಿಸಿರುವುದರಿಂದಲೂ. ಪ್ರಕರಣದ ಸುಗಮ ತನಿಖೆಗೆ ಅವಕಾಶ ಕಲ್ಪಿಸುವ ಅವಶ್ಯಕತೆ ಇರುವುದರಿಂದಲೂ, ಸರ್ಕಾರವು ಶ್ರೀ ಎ. ಮರೀಗೌಡ, ಕೆ.ಎ.ಎಸ್ (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ, ಇವರನ್ನು ಮುಂದಿನ ತನಿಖೆ/ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತಿನಲ್ಲಿರಿಸಲು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸುತ್ತದೆ

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 017 ಕೆಇವಿ 09, ಬೆಂಗಳೂರು, ದಿನಾಂಕ: 24ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶಿಸ್ತು ಕ್ರಮವನ್ನು ಕಾಯ್ದಿರಿಸಿ, ಸರ್ಕಾರವು ಶ್ರೀ ಎ. ಮರೀಗೌಡ, ಕೆ.ಎ.ಎಸ್ (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ

ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ಹಾಗೂ ಪ್ರಸ್ತುತ ನೇಮಕಾತಿ ನಿರೀಕ್ಷಣೆಯಲ್ಲಿರುವ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡುತ್ತದೆ ಹಾಗೂ ಇವರ ಲೀನ್ (ಸ್ಥಾನ) ಅನ್ನು ಬಾಡಿಗೆ ನಿಯಂತ್ರಣಾಧಿಕಾರಿ, ಬೆಂಗಳೂರು (ದಕ್ಷಿಣ), ಬೆಂಗಳೂರು ಹುದ್ದೆಗೆ (ಖಾಲಿ) ವರ್ಗಾಯಿಸಿ ಗುರುತಿಸಿರುತ್ತದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎ. ಮುನೀಗೌಡ, ಕೆ.ಎ.ಎಸ್. (ಕಿರಿಯ ಶ್ರೇಣಿ) ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98 ರಂತೆ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಇವರು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ಪಿ.ಆರ್. 1797

ವಿಷಯ: ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆ.ಎ.ಎಸ್. (ಕಿರಿಯ ಶ್ರೇಣಿ), ಹಿಂದಿನ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಶಿವಮೊಗ್ಗ, ಇವರ ವಿರುದ್ಧ ಇಲಾಖಾ ವಿಚಾರಣೆ -- ಅಂತಿಮ ಆದೇಶ.

ಓದಲಾಗಿದೆ:
1) ದಿನಾಂಕ: 7.11.07ರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 020 ಕೆಇವಿ 07
2) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಹಾಗೂ ವಿಚಾರಣಾಧಿಕಾರಿಗಳು ಇವರ ದಿನಾಂಕ: 26.6.08ರ ವಿಚಾರಣಾ ವರದಿ
3) ದಿನಾಂಕ: 06/18.08.08ರ 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ: ಸಿಆಸುಇ 020 ಕೆಇವಿ 07
4) ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆ.ಎ.ಎಸ್. (ಕಿರಿಯ ಶ್ರೇಣಿ) ಇವರ ದಿನಾಂಕ: 29.08.08ರ ಲಿಖಿತ ಉತ್ತರ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆ.ಎ.ಎಸ್. (ಕಿರಿಯ ಶ್ರೇಣಿ) ಇವರು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಶಿವಮೊಗ್ಗ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಆರು ಅನುದಾನಿತ ವಸತಿ ನಿಲಯಗಳಿಗೆ ಸಂಬಂಧಿಸಿದಂತೆ ಆಹಾರ ವೆಚ್ಚದ ಬಿಲ್ಲುಗಳನ್ನು ಹೆಚ್ಚಿಗೆ ಡ್ರಾ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟುಮಾಡಿರುವ ಆರೋಪದಲ್ಲಿನ ಸತ್ಯಾಸತ್ಯತೆಯನ್ನು ವಿಚಾರಣೆಯ ಮೂಲಕ ತಿಳಿಯುವ ಸಲುವಾಗಿ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 11 (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ,ಆರೋಪದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಂತೆ ವಿಚಾರಣಾಧಿಕಾರಿಯವರು ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಇವರ ವಿರುದ್ಧದ ಆಹಾರ ವೆಚ್ಚದ ಬಿಲ್ಲುಗಳನ್ನು ಹೆಚ್ಚಿಗೆ ಡ್ರಾ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟುಮಾಡಿರುವ ಆರೋಪವು ಸಾಬೀತಾಗಿದೆ ಎಂದು ವರದಿ ನೀಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ 2ನೇ ಕಾರಣ ಕೇಳುವ ನೋಟೀಸಿನ ಜೊತೆ ವಿಚಾರಣಾ ವರದಿಯ ಪ್ರತಿಯನ್ನು ಆಪಾದಿತರಿಗೆ ಒದಗಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಲಿಖಿತ ಉತ್ತರದಲ್ಲಿ ವಿವರಣೆಯನ್ನು ಪಡೆಯಲಾಗಿದೆ. ವಿಚಾರಣಾ ವರದಿಯನ್ನು ಹಾಗೂ ಅಧಿಕಾರಿಯು ನೀಡಿದ ಉತ್ತರವನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 020 ಕೆಇವಿ 07, ಬೆಂಗಳೂರು, ದಿನಾಂಕ: 23ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 8 (iii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ (ಪ್ರಸ್ತುತ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ, ಬೆಂಗಳೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ) ಇವರಿಗೆ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರದಂತೆ (without cumulative effect) ತಡೆಹಿಡಿಯುವ ದಂಡನೆ ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ಪಿ.ಆರ್. 1798

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಇಮುವಿ 2009, ಬೆಂಗಳೂರು, ದಿನಾಂಕ: 15ನೇ ಜುಲೈ 2009

ವಿಷಯ: ಶ್ರೀ ಎಸ್.ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್ ಅವರ ಅಮಾನತ್ತನ್ನು ರದ್ದುಪಡಿಸಿ ಮತ್ತೆ ಸೇವೆಗೆ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಎಸ್.ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್ ಅವರನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 6 ಇಮುವಿ 2009, ದಿನಾಂಕ: 5.6.2009ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವುದರಿಂದಲೂ,

ಶ್ರೀ ಎಸ್.ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್ ಅವರ ಅಮಾನತ್ತನ್ನು ರದ್ದುಪಡಿಸಿ ಅವರನ್ನು ಮತ್ತೇ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರವು ತೀರ್ಮಾನಿಸಿರುವುದರಿಂದಲೂ,

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(5)(ಸಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಎಸ್.ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್ ಅವರ ವಿರುದ್ಧ ಶಿಸ್ತಿನ ಕ್ರಮ/ಲೋಕಾಯುಕ್ತ ತನಿಖೆಯನ್ನು ಬಾಕಿ ಇಟ್ಟು ಅವರ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಅವರನ್ನು ಈ ಮೂಲಕ ಸೇವೆಗೆ ತೆಗೆದುಕೊಳ್ಳುತ್ತದೆ.

ಶ್ರೀ ಎಸ್.ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್ ಅವರನ್ನು ಸೂಕ್ತ ಹುದ್ದೆಗೆ ನಿಯುಕ್ತಿಗೊಳಿಸಲು ಪ್ರತ್ಯೇಕವಾಗಿ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 1799

ಒಳಾಡಳಿತ ಸಚಿವಾಲಯ

ವಿಷಯ: ಖಾಸಗಿ ವಕೀಲರನ್ನು ಸರ್ಕಾರದ ಪರವಾಗಿ ಪ್ರಕರಣಗಳನ್ನು ನಡೆಸಲು, ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಿದ ಪ್ರಕರಣಗಳಲ್ಲಿ ಸಂಭಾವನೆ/ಶುಲ್ಕ ನಿಗದಿಗೊಳಿಸುವ ಬಗೆಗಿನ ಸಮಿತಿಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1) ದಿನಾಂಕ 18.5.2005 ರಂದು ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಇವರ ಕೊಠಡಿಯಲ್ಲಿ ನಡೆದ ಸಭೆಯ ನಡಾವಳಿಗಳು
2) ಸರ್ಕಾರದ ಆದೇಶ ಸಂಖ್ಯೆ : ಒಇ: 540:ಪಿಪಿಇ: 2005 ದಿನಾಂಕ: 18.7.2005

ಪ್ರಸ್ತಾವನೆ:

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ, ಮತ್ತು ಸೇವಾ ಷರತ್ತುಗಳು) ನಿಯಮಾವಳಿ-1977ರ ನಿಯಮ-30ರಲ್ಲಿ ಯಾವುದೇ ಅಪರಾಧಿಕ ಪ್ರಕರಣ ಅಥವಾ ಯಾವುದೇ ಮೇಲ್ಮನವಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ನಡವಳಿಗಳನ್ನು ಸರ್ಕಾರದ ಪರವಾಗಿ ನಡೆಸಲು ಯಾವುದೇ ವಕೀಲರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಲು ಸರ್ಕಾರಕ್ಕೆ ಅಧಿಕಾರವನ್ನು ಪ್ರದತ್ತಗೊಳಿಸುವ ಉಪಬಂಧವನ್ನು ಮಾಡಲಾಗಿದೆ, ಮತ್ತು ಹಾಗೆ ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಲ್ಪಟ್ಟ ವಕೀಲರಿಗೆ ಪ್ರತಿಯೊಂದು ಪ್ರಕರಣದಲ್ಲೂ ಪ್ರಕರಣದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು ಸರ್ಕಾರವು ನಿರ್ಧರಿಸಬಹುದಾದಂತಹ ಸಂಭಾವನೆಯನ್ನು ಸಂದಾಯಿಸಬಹುದಾಗಿದೆ.

ಯಾವುದೇ ಪ್ರಕರಣದಲ್ಲಿ ಅಥವಾ ಪ್ರಕರಣಗಳ ವರ್ಗದಲ್ಲಿ ಯಾವುದೇ ವಕೀಲರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಲ್ಪಟ್ಟ ಪ್ರಕರಣಗಳಲ್ಲಿ ಪ್ರಕರಣದ ಪ್ರಾಮುಖ್ಯತೆ:ಸಂಕೀರ್ಣತೆ ಮತ್ತು ಪ್ರಕರಣದ ಸ್ಥಿತಿಗತಿ, ಪ್ರಕರಣದಲ್ಲಿ ವಿಚಾರಣೆಯ ಸ್ವರೂಪ, ನ್ಯಾಯಾಲಯ ಇರುವ ಸ್ಥಳ ಮತ್ತು ವಕೀಲರ ವಾಸ ಸ್ಥಳ ಇತ್ಯಾದಿ ಅಂಶಗಳನ್ನು ಪರಿಶೀಲಿಸಿ ವಕೀಲರ ಸಂಭಾವನೆ/ಶುಲ್ಕವನ್ನು ನಿಗದಿಗೊಳಿಸಲು ಮೇಲೆ (2) ರಲ್ಲಿ ಓದಲಾದ ದಿನಾಂಕ: 18.7.2005 ರ ಅದೇಶದಲ್ಲಿ (1) ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಇವರನ್ನು ಅಧ್ಯಕ್ಷರನ್ನಾಗಿ, (2) ಕಾರ್ಯದರ್ಶಿ, ಕಾನೂನು ಇಲಾಖೆ, ಹಾಗೂ (3) ಅಪರ ಕಾರ್ಯದರ್ಶಿ-1, ಕಾನೂನು ಇಲಾಖೆ, ಇವರನ್ನು ಸದಸ್ಯರುಗಳನ್ನಾಗಿ ಮತ್ತು ಒಳಾಡಳಿತ ಇಲಾಖೆಯ ಜಂಟಿ ಕಾರ್ಯದರ್ಶಿ (ಕಾನೂನು ಮತ್ತು ಸುವ್ಯವಸ್ಥೆ) ಇವರನ್ನು ಸಂಚಾಲಕರನ್ನಾಗಿ ಒಳಗೊಂಡ ಸಮಿತಿಯನ್ನು ರಚಿಸಲಾಗಿತ್ತು.

ಹಾಲಿ ಒಳಾಡಳಿತ ಇಲಾಖೆಯಲ್ಲಿ ಅಭಿಯೋಜನೆಗೆ ಸಂಬಂಧಪಟ್ಟ ಪ್ರಕರಣಗಳು ಹಾಗೂ ಕಾನೂನು ಇಲಾಖೆಯಿಂದ ಗೃಹ ಇಲಾಖೆಗೆ ವರ್ಗಾವಣೆಯಾದ ಕ್ರಿಮಿನಲ್ ವಿಷಯವನ್ನು ಕಾರ್ಯದರ್ಶಿ (ಪಿಸಿಎಎಸ್)ರವರು ನಿರ್ವಹಿಸುತ್ತಿರುವುದರಿಂದ, ಇವರನ್ನು ಹಾಗೂ ಸಂಭಾವನೆ/ಶುಲ್ಕ ಮಂಜೂರು ಮಾಡಲು ಆರ್ಥಿಕ ಇಲಾಖೆಯ ಸಹಮತದೊಂದಿಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಆರ್ಥಿಕ ಇಲಾಖೆಯ ಅಧಿಕಾರಿಯೊಬ್ಬರನ್ನು ಸದರಿ ಸಮಿತಿಯ ಸದಸ್ಯರನ್ನಾಗಿ ನೇಮಿಸುವುದು ಸಮಂಜಸವಾಗಿದೆ. ಅಲ್ಲದೆ ಒಳಾಡಳಿತ ಇಲಾಖೆಯಲ್ಲಿ ಸಂಭಾವನೆ ಮಂಜೂರಾತಿಯ ವಿಷಯವನ್ನು 1ನೇ ಅಪರ ವಾದೇಕ್ಷಕರು

ನಿರ್ವಹಿಸುತ್ತಿರುವುದರಿಂದ ಜಂಟಿ ಕಾರ್ಯದರ್ಶಿ (ಕಾನೂನು ಮತ್ತು ಸುವ್ಯವಸ್ಥೆ) ಇವರ ಬದಲಾಗಿ 1ನೇ ಅಪರ ವಾದೇಕ್ಷಕರನ್ನು ಸದಸ್ಯ ಕಾರ್ಯದರ್ಶಿಗಳನ್ನಾಗಿ ನೇಮಿಸಬಹುದಾಗಿದೆ. ಕಾನೂನು ಇಲಾಖೆಯ ಕಾರ್ಯದರ್ಶಿ ಹಾಗೂ ಅಪರ ಕಾರ್ಯದರ್ಶಿ–1, ಇವರಲ್ಲಿ ಒಬ್ಬರನ್ನು ಸದಸ್ಯರನ್ನಾಗಿ ನೇಮಿಸಬಹುದಾಗಿದೆ ಎಂದು ಕಂಡು ಬಂದಿರುವುದರಿಂದ ಮೇಲೆ (2) ರಲ್ಲಿ ಓದಲಾದ ದಿನಾಂಕ: 18.7.2005ರ ಆದೇಶದಲ್ಲಿರುವ ಸಮಿತಿಯನ್ನು ಪರಿಷ್ಕರಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ:4948:ಹೆಚ್‌ಪಿ–2:2009, ಬೆಂಗಳೂರು, ದಿನಾಂಕ: 28ನೇ ಜುಲೈ 2009

ಯಾವುದೇ ಕ್ರಿಮಿನಲ್ ಪ್ರಕರಣ ಅಥವಾ ಪ್ರಕರಣಗಳ ವರ್ಗಗಳಲ್ಲಿ ಸರ್ಕಾರದ ಪರವಾಗಿ ಪ್ರಕರಣಗಳನ್ನು ನಡೆಸಲು ಯಾವುದೇ ವಕೀಲರನ್ನು : ನ್ಯಾಯವಾದಿಗಳನ್ನು ವಿಶೇಷ ಸರ್ಕಾರಿ ಅಭಿಯೋಜಕರನ್ನಾಗಿ ನೇಮಿಸಲ್ಪಟ್ಟ ಪ್ರಕರಣಗಳಲ್ಲಿ ಅಂತಹ ವಕೀಲರ ಸಂಭಾವನೆ/ಶುಲ್ಕವನ್ನು ನಿರ್ಧರಿಸುವ ಬಗ್ಗೆ ಈ ಕೆಳಕಂಡ ಸಂಭಾವನಾ ನಿರ್ಧಾರಣಾ ಸಮಿತಿಯನ್ನು ಕೂಡಲೇ ಜಾರಿಗೆ ಬರುವಂತೆ ರಚಿಸಲಾಗಿದೆ.

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ	–	ಅಧ್ಯಕ್ಷರು
2) ಸರ್ಕಾರದ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮತ್ತು ಮಾನವ ಹಕ್ಕುಗಳ ಇಲಾಖೆ	–	ಸದಸ್ಯರು
3) ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ) ಆರ್ಥಿಕ ಇಲಾಖೆ	–	ಸದಸ್ಯರು
4) ಸರ್ಕಾರದ ಕಾರ್ಯದರ್ಶಿಗಳು (ಪಿಸಿಎಎಸ್) ಒಳಾಡಳಿತ ಇಲಾಖೆ	–	ಸದಸ್ಯರು
5) ಒಂದನೇ ಅಪರ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಒಳಾಡಳಿತ ಇಲಾಖೆ.	–	ಸದಸ್ಯ–ಕಾರ್ಯದರ್ಶಿ

ಸಮಿತಿಯ ಸಭೆಯನ್ನು ತಿಂಗಳಿಗೊಮ್ಮೆ ಅಥವಾ ಅವಶ್ಯಕತೆಗೆ ಅನುಸಾರ ನಡೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಗುರುಮೂರ್ತಿ

ಪಿ.ಆರ್. 1806

ಒಂದನೇ ಅಪರ ವಾದೇಕ್ಷಕರು ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ, (ಪ್ರ), ಒಳಾಡಳಿತ ಇಲಾಖೆ.

ವಿಷಯ: ಶ್ರೀ ರಮೇಶ್ ಕುಲಕರ್ಣಿ, ಪ್ರೊ .ಪಿ.ಎಸ್.ಐ. ಎಂ.ಎಂ. ಹಳ್ಳಿ, ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ, ರವರ ಖಾಯಂ ಪೂರ್ವ ಅವಧಿ ವಿಸ್ತರಿಸುವ ಕುರಿತು.

ಓದಲಾಗಿದೆ: ಡಿ.ಜಿ. ಮತ್ತು ಐಪಿಜಿ ರವರ ಪತ್ರ ಸಂಖ್ಯೆ : 63/ಸಿಬ್ಬಂದಿ–1/2007–08 ದಿನಾಂಕ: 31.10.2008

ಪ್ರಸ್ತಾವನೆ:

ಶ್ರೀ ರಮೇಶ್ ಕುಲಕರ್ಣಿ, ಪ್ರೊ: ಪಿ.ಎಸ್.ಐ. ಎಂ.ಎಂ. ಹಳ್ಳಿ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ, ರವರು ಪಿ.ಎಸ್.ಐ. (ಸಿವಿಲ್) ಹುದ್ದೆಗೆ ದಿನಾಂಕ: 15.12.2003 ರಂದು ನೇಮಕಾತಿ ಹೊಂದಿ, ಬುನಾದಿ ತರಬೇತಿಯಲ್ಲಿ ಅಂತಿಮವಾಗಿ ನಡೆಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುತ್ತಾರೆ. ಕನ್ನಡ ಭಾಷಾ ಪರೀಕ್ಷೆಯನ್ನು ಪಾಸಲು ಮಾಡಲು ವಿನಾಯಿತಿ ಪಡೆದಿರುತ್ತಾರೆ. ಆದರೆ, ಅಕೌಂಟ್ಸ್ ಹೈಯರ್ ಪರೀಕ್ಷೆಯನ್ನು ಈವರೆಗೂ ಪಾಸು ಮಾಡಿರುವುದಿಲ್ಲ. ಸದರಿ ಪಿ.ಎಸ್.ಐ. ರವರು ದಿನಾಂಕ:14.06.2006ಕ್ಕೆ $2^1/_2$ ವರ್ಷಗಳ ಖಾಯಂಪೂರ್ವ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ಇವರು ಚಾಲ್ತಿ ಶಿಕ್ಷೆಯಲ್ಲಿರುವ ಮೇರೆಗೆ ಹಾಗೂ ಅಕೌಂಟ್ಸ್ ಹೈಯರ್ ಪರೀಕ್ಷೆಯನ್ನು ಪಾಸು ಮಾಡದಿರುವುದರಿಂದ, ಐಜಿಪಿ, ಪೂರ್ವ ವಲಯ ದಾವಣಗೆರೆ ರವರ ಆದೇಶ ದಿ: 6.11.2007 ರಲ್ಲಿ 1977ರ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಾವಳಿ 4(1)(ii)ರ ಮೇರೆಗೆ ಇವರ ಖಾಯಂಪೂರ್ವ ಅವಧಿಯನ್ನು 14.06.2006 ರಿಂದ 14.09.2007 ರವರೆಗೆ ವಿಸ್ತರಿಸಿರುತ್ತಾರೆ.

ಸದರಿ ಪಿ.ಎಸ್.ಐ. ರವರ 2004–05, 2005–06 ಮತ್ತು 2006–07ನೇ ಸಾಲಿನ ಎ.ಸಿ.ಆರ್ ನಲ್ಲಿ ಪ್ರತಿಕೂಲ ಷರಾ ಇಲ್ಲದಿರುವುದರಿಂದ, ಇವರು ಈವರೆಗೂ ಅಕೌಂಟ್ಸ್ ಹೈಯರ್ ಇಲಾಖಾ ಪರೀಕ್ಷೆಯನ್ನು ಪಾಸು ಮಾಡದೆ ಇದ್ದು ಮತ್ತು ದಿನಾಂಕ: 31.05.2009 ರವರೆಗೆ ಚಾಲ್ತಿ ಶಿಕ್ಷೆಯಲ್ಲಿರುವುದರಿಂದ ಶ್ರೀ ರಮೇಶ್ ಕುಲಕರ್ಣಿ, ಪ್ರೊ: ಪಿ.ಎಸ್.ಐ. ಎಂ.ಎಂ. ಹಳ್ಳಿ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ, ರವರ ಖಾಯಂಪೂರ್ವ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ಪರಿವೀಕ್ಷಣೆ ನಿಯಮಾವಳಿ [illegible]77ರ ನಿಯಮ 4(1)(i) ರನ್ವಯ ದಿನಾಂಕ: 15.0[illegible] ರಿಂದ 31.05.2009 ರವರೆಗೆ ವಿಸ್ತರಿಸುವಂತೆ ಡಿ.ಜಿ. ಮತ್ತು ಐ.ಜಿ.ಪಿ. ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 75 ಪೊಸಇ 2008, ಬೆಂಗಳೂರು, ದಿನಾಂಕ: 23ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್ ನಿಯಮಾವಳಿಗಳು, 1977ರ ನಿಯಮ 4(1)(i) ರನ್ವಯ ಶ್ರೀ ರಮೇಶ್ ಕುಲಕರ್ಣಿ, ಪ್ರೊ: ಪಿ.ಎಸ್.ಐ. ಎಂ.ಎಂ. ಹ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ ಇವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ: 15.09.2007 ರಿಂದ 31.05.2009ರ ವರೆಗೆ ವಿಸ್ತರಿಸಿ ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ. (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನು ನಿಗದಿಪಡಿಸುವುದು. ಹೀಗೆ ನಿಗದಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ. (ಪೊಲೀಸ್ ಸೇವೆಗಳು)

ಪಿ.ಆರ್. 1813

ವಿಷಯ: ಶ್ರೀ ಕೆ.ಎ. ನಾರಾಯಣಸ್ವಾಮಿ, ದ್ವಿ.ದ.ಸ., ಡಿ.ಸಿ.ಪಿ ದಕ್ಷಿಣ ವಿಭಾಗ ರವರ ಕಚೇರಿ, ಬೆಂಗಳೂರು ನಗರ ರವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಬಗ್ಗೆ.

ಓದಲಾಗಿದೆ:
1. ದೋಷಾರೋಪಣಾ ಪಟ್ಟಿ ದಿನಾಂಕ 22–01–2007.
2. ದೋಷಾರೋಪಣೆಗೆ ಸಮಜಾಯಿಷಿ ದಿನಾಂಕ 05–02–2007.
3. ಶಿಸ್ತು ಪ್ರಾಧಿಕಾರಿಯವರು ಹೊರಡಿಸಿದ ಅಂತಿಮ ಆದೇಶ ಸಂಖ್ಯೆ: ಡಿಇ.2/142/ಸಿಸಿಎ–12/2003–07 ಬೆಂಗಳೂರು ದಿನಾಂಕ 08–05–2007.
4. ಶ್ರೀ ಕೆ.ಎ. ನಾರಾಯಣಸ್ವಾಮಿ, ದ್ವಿ.ದ.ಸ ರವರ ಮೇಲ್ಮನವಿ ಅರ್ಜಿ ದಿನಾಂಕ 24–07–2007.
5. ಮೇಲ್ಮನವಿ ಪ್ರಾಧಿಕಾರಗಳ ಆದೇಶ ದಿನಾಂಕ 24–05–2008.
6. ಪರಿಷ್ಕರಣ ಮೇಲ್ಮನವಿ ದಿನಾಂಕ 15–07–2008.

ಪ್ರಸ್ತಾವನೆ:

ಶ್ರೀ ಕೆ.ಎ. ನಾರಾಯಣಸ್ವಾಮಿ, ದ್ವಿದಸ ರವರು ಈ ಹಿಂದೆ ಡಿ.ಸಿ.ಪಿ ಪೂರ್ವ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಈ ಕೆಳಕಂಡ ಆರೋಪಗಳನ್ನು ಎಸಗಿದ್ದು ಇವರ ವಿರುದ್ಧ ಕೆ.ಸಿ.ಎಸ್ (ಸಿ.ಸಿ.ಎ) ನಿಯಮಾವಳಿ, 1957ರ ನಿಯಮ 12ರನ್ವಯ ದೋಷಾರೋಪಣೆ ಪತ್ರವನ್ನು ಮೇಲೆ(1)ರಲ್ಲಿ ಓದಲಾದ ಪತ್ರದಲ್ಲಿ ಹೊರಡಿಸಲಾಗಿತ್ತು.

ಆರೋಪಗಳು:

1) ಇನ್‌ವಾಯ್ಸ್ ನಂ.276:99–2000 ದಿನಾಂಕ 2–2–2000 ರಲ್ಲಿ 20 ಹ್ಯಾವರ್ಸ್ ಸಾಕ್ಸ್‌ಗಳನ್ನು ಮತ್ತು 7.9 ಮೀಟರ ವಿತರಣೆ ಮಾಡಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.
2) ಇನ್‌ವಾಯ್ಸ್ ನಂ.292:99:2000 ದಿನಾಂಕ 23–02–2000 ಮತ್ತು 297:2000 ದಿನಾಂಕ 1–3–2000, ಇದರಲ್ಲಿ ಸ್ವೀಕರಿಸಿದ 25 ಬಿಳಿ ಮಳೆ ಕವಚಗಳ ಪೈಕಿ 24ನ್ನು ವಿತರಿಸಿದ್ದು, ಒಂದನ್ನು ವಿತರಿಸಿರುವುದಿಲ್ಲ. ಹಾಗೂ 170 ಬೆಲ್ಟ್‌ಗಳ ಪೈಕಿ 154 ಬೆಲ್ಟ್‌ಗಳನ್ನು ವಿತರಿಸಿದ್ದು 16 ಬೆಲ್ಟ್‌ಗಳನ್ನು ವಿತರಿಸಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.
3) ಇನ್‌ವಾಯ್ಸ್ ನಂ.297:99–2000 ರಲ್ಲಿ 1100 ಬಿ.ಸಿ.ಪಿ. ಬ್ಯಾಡ್ಜ್‌ಗಳ ಪೈಕಿ 1080 ಅನ್ನು ವಿತರಿಸಿದ್ದು 20 ಬಿ.ಸಿ.ಪಿ ಬ್ಯಾಡ್ಜ್‌ಗಳನ್ನು ವಿತರಿಸದೇ ಬಾಕಿ ಇಟ್ಟಿರುವುದು ಮತ್ತು 200 ಬಾಕಿ ಟೈಗಳ ಪೈಕಿ 180 ನ್ನು ಮಾತ್ರ ವಿತರಿಸಿದ್ದು 20 ಅನ್ನು ವಿತರಿಸದೇ ಬಾಕಿ ಇಟ್ಟಿರುವುದು.
4) ಇನ್‌ವಾಯ್ಸ್ ನಂ.2:2000 ದಿನಾಂಕ 29–04–2000 ರಲ್ಲಿ 840 ರೈನ್‌ಕೋಟ್‌ಗಳ ಪೈಕಿ 835 ವಿತರಿಸಿದ್ದು 5 ವಿತರಿಸದೇ ಬಾಕಿ ಇಟ್ಟಿರುವುದು ಹಾಗೂ 1359 ಬಿಳಿ ಕೈ ಚೀಲಗಳ ಜೊತೆ ಹಿಂದಿನ ಬಾಕಿ ಇದ್ದವು ಸೇರೆ 3801 ಆಗಿದ್ದು ಅವುಗಳ ಪೈಕಿ 3835 ಬಿಳಿ ಕೈ ಚೀಲಗಲನ್ನು ವಿತರಿಸಿದ್ದು ಹೆಚ್ಚಿಗೆ ವಿರಿಸಿರುವ 34 ಜೊತೆ ಬಿಳಿ ಕೈ ಚೀಲಗಳು ಎಲ್ಲಿಂದ ಬಂದಿದೆ ಎಂಬ ಬಗ್ಗೆ ವಿವರ ಇರುವುದಿಲ್ಲ.
5) ಇನ್‌ವಾಯ್ಸ್ ನಂ.191/01, ದಿನಾಂಕ 18–07–2001 ರಲ್ಲಿ 1900 ಬಿಳಿ ಟೋಪಿಗಳಲ್ಲಿ 1871 ವಿತರಿಸಿದ್ದು ಉಳಿದ 29 ಟೋಪಿಗಳನ್ನು ವಿತರಿಸದೇ ಇರುವ ಬಗ್ಗೆ ಮಾಹಿತಿ ಇರುವುದಿಲ್ಲ. ಹಾಗೂ 5000 ಬಟನ್‌ಗಳ ಪೈಕಿ 4535 ಬಟನ್‌ಗಳನ್ನು ವಿತರಿಸಿದ್ದು 465 ಬಟನ್‌ಗಳನ್ನು ವಿತರಿಸಿರುವ ಬಗ್ಗೆ ಮಾಹಿತಿ ಇರುವುದಿಲ್ಲ.

6) ಇನ್‌ವಾಯ್ಸ್ ನಂ.345:2002 ದಿನಾಂಕ 18–04–2002 ರಲ್ಲಿ 160 ಕೆಂಪು ಚವರಿನ್‌ಗಳ ಪೈಕಿ 150 ಅನ್ನು ವಿತರಿಸಿದ್ದು 10 ಕೆಂಪು ಜವರಿನ್‌ಗಳನ್ನು ವಿತರಿಸಿರುವುದಿಲ್ಲ.

7) ಇನ್‌ವಾಯ್ಸ್ ನಂ.419:2002 ದಿನಾಂಕ 05–09–2002 ರಲ್ಲಿ 470 ಬಿಳಿ ಸ್ಲೋಚ್ ಹ್ಯಾಟ್‌ಗಳನ್ನು ಸ್ವೀಕರಿಸಿದ್ದು 20 ಸ್ಲೋಚ್ ಹ್ಯಾಟ್‌ಗಳನ್ನು ವಿತರಿಸಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಶ್ರೀ ಕೆ.ಎ. ನಾರಾಯಣಸ್ವಾಮಿ, ದ್ವಿದ.ಸ. ಇವರು ದೋಷಾರೋಪಣಾ ಪತ್ರವನ್ನು ಸ್ವೀಕರಿಸಿ ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸಮಜಾಯಿಷಿ ಸಮಂಜಸವಾಗಿಲ್ಲದ ಕಾರಣ ಶಿಸ್ತು ಪ್ರಾಧಿಕಾರವು ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ದಿನಾಂಕ 08–05–2007ರಲ್ಲಿ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿರುತ್ತದೆ.

"ಶ್ರೀ ಕೆ.ಎ. ನಾರಾಯಣಸ್ವಾಮಿ, ದ್ವಿದ.ಸ. ಸಂಚಾರ (ಪೂರ್ವ) ರವರ ಕಛೇರಿ, (ಹಾಲಿ ಉಪ ಪೊಲೀಸ್ ಕಮೀಷನರ್, ದಕ್ಷಿಣ ವಿಭಾಗ) ಬೆಂಗಳೂರು ನಗರ ರವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗೆ ಲೆಕ್ಕೆಯಾಗದಂತೆ ಒಂದು ವರ್ಷಗಳ ಕಾಲ ಮುಂದೂಡಲಾಗಿದೆ. ದಿನಾಂಕ 07–05–2003 ರಿಂದ 08–01–2004 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದೇ ಪರಿಗಣಿಸಲಾಗಿದೆ"

ಶಿಸ್ತು ಪ್ರಾಧಿಕಾರದ ಆದೇಶದ ವಿರುದ್ಧ ಮೇಲ್ಮನವಿ ಪ್ರಾಧಿಕಾರಿಯವರಿಗೆ ದಿನಾಂಕ 24–07–2007 ರಂದು ಮೇಲ್ಮನವಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಮೇಲ್ಮನವಿ ಪ್ರಾಧಿಕಾರವು ಪರಿಶೀಲಿಸಿ ದಿನಾಂಕ 24–05–2008 ರಂದು ತಿರಸ್ಕರಿಸಿರುತ್ತದೆ.

ತದನಂತರ ಈ ಎರಡು ಆದೇಶಗಳ ವಿರುದ್ಧ ಪರಿಷ್ಕರಣ ಮೇಲ್ಮನವಿಯನ್ನು ಮೇಲೆ ಓದಲಾದ (6)ರಲ್ಲಿ ಸರ್ಕಾರಕ್ಕೆ ದಿನಾಂಕ 15–07–2008ರಂದು ಸಲ್ಲಿಸಲಾಗಿರುತ್ತದೆ.

ಪರಿಷ್ಕರಣ ಮೇಲ್ಮನವಿಯ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿ ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಸದರಿಯವರು ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಂಡನಾದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 72 ಪೊಸಿಲಿ 2008, ಬೆಂಗಳೂರು, ದಿನಾಂಕ: 18ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಕೆ.ಎ. ನಾರಾಯಣಸ್ವಾಮಿ, ದ್ವಿದ.ಸ., ಡಿ.ಸಿ.ಪಿ ದಕ್ಷಿಣ ವಿಭಾಗ ರವರ ಕಚೇರಿ, ಬೆಂಗಳೂರು ನಗರ ರವರು ಸರ್ಕಾರಕ್ಕೆ ಸಲ್ಲಿಸಿದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 26(ಎ) ರ ಪ್ರಕಾರ ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1814 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀಮತಿ ಚಂದ್ರಭಾಗ, ದ್ವಿದ.ಸ. ಜಿಲ್ಲಾ ಪೊಲೀಸ್ ಕಛೇರಿ, ಗುಲ್ಬರ್ಗಾ ರವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಬಗ್ಗೆ.

ಓದಲಾಗಿದೆ: 1. ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್, ಗುಲಬರ್ಗಾ ರವರ ನಡವಳಿ ಸಂಖ್ಯೆ:ಪಿ.ಆರ್.198/2007 ಡಿ.ಓ.ಡಿ. ಸಂಖ್ಯೆ:2093:07 ದಿನಾಂಕ 05–11–2007.

2. ಮೇಲ್ಮನವಿ ಆದೇಶ ಸಂಖ್ಯೆ:ಅಪೀಲು/110/ಈವ/2007 ದಿನಾಂಕ 26–02–2008.
3. ಪರಿಷ್ಕರಣ ಮೇಲ್ಮನವಿ ದಿನಾಂಕ 01–10–2008.
4. ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಪತ್ರ ಸಂಖ್ಯೆ: ಅಪೀಲು(2)105/2008–09 ದಿನಾಂಕ 23–05–2009.

ಪ್ರಸ್ತಾವನೆ:

ಶ್ರೀಮತಿ ಚಂದ್ರಭಾಗ, ದ್ವಿದ.ಸ. ಜಿಲ್ಲಾ ಪೊಲೀಸ್ ಕಛೇರಿ, ಗುಲ್ಬರ್ಗಾ ರವರು ದಿನಾಂಕ 23–07–2007 ರಿಂದ 26–09–2007 ರವರೆಗೆ 66 ದಿವಸ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಇವರು ಶಿಸ್ತಿನ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಯಾವುದೇ ರಜೆ ಅರ್ಜಿ ಸಲ್ಲಿಸದೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿ ಕಾರ್ಯ ವಿಮುಖತೆ ಹಾಗೂ ನಿರ್ಲಕ್ಷತನ ತೋರಿಸಿದ್ದರಿಂದ ಕೆ.ಸಿ.ಎಸ್. (ಸಿಸಿಎ) ನಿಯಮಾವಳಿ, 1957ರ ನಿಯಮ 12ರ ಪ್ರಕಾರ ಶಿಸ್ತು ಕ್ರಮ ಜರುಗಿಸಲಾಗಿರುತ್ತದೆ. ನಂತರ ಸದರಿಯವರ ಸಮಜಾಯಿಷಿಯಲ್ಲಿ ಅನಾರೋಗ್ಯದ ಕಾರಣ ಗೈರು ಹಾಜರಾದ ಬಗ್ಗೆ ತಿಳಿಸಲಾಗಿರುತ್ತದೆ. ಇವರು ಸಲ್ಲಿಸಿದ ಸಮಜಾಯಿಷಿ ಸಮಂಜಸವಾಗಿರುವುದಿಲ್ಲವೆಂದು ಶಿಸ್ತು ಪ್ರಾಧಿಕಾರವು ಮೇಲೆ ಓದಲಾದ

(1)ರ ಆದೇಶದಲ್ಲಿ ಸದರಿಯವರ ವಾರ್ಷಿಕ ವೇತನ ಮುಂಬಡ್ತಿಯನ್ನು ಎರಡು (2) ತಿಂಗಳ ಕಾಲ ಮುಂದಿನ ವಾರ್ಷಿಕ ವೇತನ ಮುಂಬಡ್ತಿಯ ಮೇಲೆ ಪರಿಣಾಮ ಬೀರದಂತೆ ಮುಂದೂಡಿರುತ್ತದೆ. ದಿನಾಂಕ 23-07-2007 ರಿಂದ 26-09-2007 ರವರೆಗೆ (66) ದಿವಸ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದ ಅವಧಿಯನ್ನು ವೇತನ ರಹಿತ ರಜೆ ಎಂದು ಪರಿಗಣಿಸಲಾಗಿರುತ್ತದೆ.

ಶಿಸ್ತು ಪ್ರಾಧಿಕಾರದ ಆದೇಶದ ವಿರುದ್ಧ ಮೇಲ್ಮನವಿ ಪ್ರಾಧಿಕಾರಕ್ಕೆ ಸದರಿಯವರು ಮನವಿ ಸಲ್ಲಿಸಿದ್ದು, ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಮೇಲ್ಮನವಿ ಪ್ರಾಧಿಕಾರವು ಅವರ ಮನವಿಯನ್ನು ತಿರಸ್ಕರಿಸಿರುತ್ತದೆ.

ತದನಂತರ ಸದರಿಯವರು ಮೇಲಿನ ಆದೇಶಗಳ ವಿರುದ್ಧ ಸರ್ಕಾರಕ್ಕೆ ಮೇಲೆ ಓದಲಾದ (3)ರಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಮನವಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಸಮರ್ಥನೀಯ ಅಂಶಗಳು ಕಂಡು ಬರುತ್ತಿಲ್ಲವಾದ ಕಾರಣ, ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ಈಗಾಗಲೇ ವಿಧಿಸಿರುವ ದಂಡನಾ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 1 ಪೊಸಿಲ್ಪಿ 2008, ಬೆಂಗಳೂರು, ದಿನಾಂಕ: 27ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಕಾರಣಗಳ ಹಿನ್ನೆಲೆಯಲ್ಲಿ ಶ್ರೀಮತಿ ಚಂದ್ರಭಾಗ, ದ್ವಿದ.ಸ. ಜಿಲ್ಲಾ ಪೊಲೀಸ್ ಕಛೇರಿ, ಗುಲ್ಬರ್ಗಾ ಜಿಲ್ಲೆ ರವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 26(ಎ) ಪ್ರಕಾರ ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1815

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಶಿಕ್ಷಣ ಸಚಿವಾಲಯ

ವಿಷಯ: ಡಿಪ್ಲೋಮಾಧಾರಕರಿಗೆ 2ನೇ ವರ್ಷ 3ನೇ ಸೆಮಿಸ್ಟರ್ ಬಿಇ:ಬಿ.ಟೆಕ್ ಕೋರ್ಸಿಗೆ ಶೇ 15ರಷ್ಟು ಸೀಟುಗಳನ್ನು ನಿಗದಿಪಡಿಸುವ ಕುರಿತು.

ಓದಲಾಗಿದೆ:
1. ದಿನಾಂಕ: 15.6.1992ರ ನವದೆಹಲಿಯ ಎಐಸಿಟಿಇಯ ಮಾರ್ಗಸೂಚಿಗಳು.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಟಿಜಿಎಲ್ 96 ದಿನಾಂಕ: 22.9.2001.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಟಿಇಸಿ 2002 ದಿನಾಂಕ: 11.12.2002.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: ಡಿಟಿಇ 12 ಎಸಿಎಂ (1) 2009 ದಿನಾಂಕ: 25.07.2009.

ಪ್ರಸ್ತಾವನೆ:

ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಎಐಸಿಟಿಇ ಮಾರ್ಗಸೂಚಿಯನ್ವಯ ಕರ್ನಾಟಕ ರಾಜ್ಯದ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್‌ಗೆ ನೇರವಾಗಿ ಪ್ರವೇಶ ಪಡೆಯಲು ಪ್ರಥಮ ವರ್ಷಕ್ಕೆ ನಿಗದಿಪಡಿಸಿರುವ ಇಂಟೇಕ್‌ಗೆ ಶೇ 5ರಷ್ಟು ಸ್ಥಾನಗಳನ್ನು ಹೆಚ್ಚುವರಿಯಾಗಿ 2001–02ನೇ ಸಾಲಿನಿಂದ ಅನ್ವಯವಾಗುವಂತೆ ಕಾದಿರಿಸಲಾಗಿತ್ತು. ನಂತರ ಡಿಪ್ಲೊಮಾ ಪ್ರವೇಶದಲ್ಲಿ ಗಣನೀಯವಾಗಿ ಏರಿಕೆಯಾಗಿ ಇಂಜಿನಿಯರಿಂಗ್ ಪ್ರವೇಶಕ್ಕೂ ಅಷ್ಟೇ ಪ್ರಮಾಣದಲ್ಲಿ ಬೇಡಿಕೆ ಹೆಚ್ಚಾದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 91, ಟಿಇಸಿ 2002, ದಿನಾಂಕ:11.12.2002 ರಲ್ಲಿ 2002–03ನೇ ಸಾಲಿನಿಂದ ಜಾರಿಗೆ ಬರುವಂತೆ ಶೇ.5 ರಿಂದ ಶೇ. 10ಕ್ಕೆ ಹೆಚ್ಚಿಸಲಾಗಿತ್ತು.

2002–03ನೇ ಸಾಲಿನಲ್ಲಿದ್ದ ಪಾಲಿಟೆಕ್ನಿಕ್‌ಗಳ ಸಂಖ್ಯೆ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣ ಹಾಗೂ ತೃತೀಯ ಸೆಮಿಸ್ಟರ್ ಬಿ.ಇ. ಪ್ರವೇಶಕ್ಕೆ ನೋಂದಣಿ ಸಂಖ್ಯೆಯ ಪ್ರಮಾಣ ಗಣನೀಯವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಕಾದಿರಿಸಿರುವ ಶೇ. 10ರ ಸ್ಥಾನಗಳ ಲಭ್ಯತೆಗಿಂತ ಡಿಪ್ಲೊಮಾಧಾರಕರ ಬೇಡಿಕೆ ಹೆಚ್ಚಾಗಿರುವುದರಿಂದ ಅರ್ಹ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕದೆ ಇಂಜಿನಿಯರಿಂಗ್ ಪ್ರವೇಶದಿಂದ ವಂಚಿತರಾಗುತ್ತಿದ್ದಾರೆ. ಆದುದರಿಂದ ಡಿಪ್ಲೊಮಾಧಾರಕರ ಮುಂದಿನ ಶೈಕ್ಷಣಿಕ ಹಿತದೃಷ್ಟಿಯಿಂದ ಡಿಪ್ಲೊಮಾಧಾರಕರಿಗೆ ತೃತೀಯ ಸೆಮಿಸ್ಟರ್ ಪ್ರವೇಶಕ್ಕೆ ಪ್ರಸ್ತುತ ನಿಗದಿಪಡಿಸಿರುವ ಸ್ಥಾನಗಳನ್ನು ಶೇ. 10 ರಿಂದ ಶೇ. 20ಕ್ಕೆ ಹೆಚ್ಚಿಸಿ ಪರಿಷ್ಕೃತ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 108 ಟಿಇಸಿ 2009, ಬೆಂಗಳೂರು, ದಿನಾಂಕ: 31ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಡಿಪ್ಲೊಮಾಧಾರಕರುಗಳಿಗೆ ಬಿ.ಇ/ಬಿ.ಟೆಕ್ ಕೋರ್ಸುಗಳ 2ನೇ ವರ್ಷದ ಮೂರನೇ ಸೆಮಿಸ್ಟರ್‌ಗೆ ಪ್ರಸ್ತುತ ಶೇಕಡ 10 ರಷ್ಟು ಸೀಟುಗಳನ್ನು ನಿಗದಿಪಡಿಸಿರುವುದನ್ನು 2009-10ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಶೇ. 15ಕ್ಕೆ ಹೆಚ್ಚಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1817

ಎನ್.ಆರ್. ಪ್ರಭು

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ವಿಷಯ: ಮಂಡ್ಯ ಕೃಷಿಕ ಸರ್ವೋದಯ ಟ್ರಸ್ಟ್ (ರಿ) ವಸತಿ ನಿಲಯ ಕಟ್ಟಡ ಕಾಮಗಾರಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಅಧ್ಯಕ್ಷರು, ಮಂಡ್ಯ, ಕೃಷಿಕ ಸರ್ವೋದಯ ಟ್ರಸ್ಟ್ (ರಿ), ಪಿ.ಇ.ಎಸ್. ವಿಜ್ಞಾನ ಕಾಲೇಜಿನ ಆವರಣ, ಎಂ.ಜಿ. ರಸ್ತೆ, ಮಂಡ್ಯ, ಇವರು ದಿನಾಂಕ 17.10.2008 ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿ ಬಗ್ಗೆ.

2. ಸರ್ಕಾರದ ಆದೇಶ ಸಂಖ್ಯೆ ಇಡಿ 138 ಯೋಯೋಕ 2007 ದಿನಾಂಕ: 3.7.2007

ಪ್ರಸ್ತಾವನೆ:

ಮಂಡ್ಯ ಕೃಷಿಕ ಸರ್ವೋದಯ ಟ್ರಸ್ಟ್ (ರಿ) ಮಂಡ್ಯ ನಗರದ ಕಾರಸವಾಡಿ ರಸ್ತೆ - ಹೊಸಹಳ್ಳಿ ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಾಗಿ ಬರುವ ಉದ್ಯೋಗಾಕಾಂಕ್ಷಿ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಒದಗಿಸುವಂತೆ ಕೋರಿರುವರು.

ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಲೆಕ್ಕ ಶೀರ್ಷಿಕ "2203-00-104-0-01-101" ಸರ್ಕಾರೇತರ ತಾಂತ್ರಿಕ ಶಾಲೆಗಳು, ಸಹಾಯಾನುದಾನ (ಯೋಜನೇತರ) ಅಡಿಯಲ್ಲಿ ರೂ. 75.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಅವರ ಮನವಿಯನ್ನು ಪರಿಶೀಲಿಸಿದ ಸರ್ಕಾರವು ಸದರಿ ಟ್ರಸ್ಟ್‌ಗೆ ಈ ಹಿಂದೆ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈಗ ಪುನ: ರೂ. 50.00 ಲಕ್ಷ ಬಿಡುಗಡೆ ಮಾಡಲು ಕೋರಿರುವುದರಿಂದ ಈ ಅನುದಾನವನ್ನು ಮುಂದುವರೆದ ಯೋಜನೆಯ ಪಟ್ಟಿಯಲ್ಲಿ ಸೇರಿಸಿ ಒದಗಿಸಲು ಉದ್ದೇಶಿಸಿರುವುದರಿಂದ ಮುಂದೆ ಈ ಸಂಸ್ಥೆಗೆ ಯಾವುದೇ ರೀತಿಯ ಅನುದಾನ ನೀಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಸದರಿ ಸಂಸ್ಥೆಯು ಯಾವುದೇ ಅನುದಾನ ಕೋರಿ ಮನವಿ ಸಲ್ಲಿಸಬಾರದು ಎಂಬ ಷರತ್ತು ವಿಧಿಸಿ ಕೊನೆಯ ಬಾರಿಗೆ ರೂ. 50.00 ಲಕ್ಷ (ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಮಂಜೂರು ಮಾಡಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 265 ಯೋಯೋಕ 2008, ಬೆಂಗಳೂರು, ದಿನಾಂಕ: 30ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮಂಡ್ಯ ಕೃಷಿಕ ಸರ್ವೋದಯ ಫೌಂಡೇಶನ್ ಟ್ರಸ್ಟ್ (ರಿ), ಮಂಡ್ಯ ಇವರು ಮಂಡ್ಯ ನಗರದಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಾಗಿ ಬರುವ ಉದ್ಯೋಗಾಕಾಂಕ್ಷಿಗಳಿಗೆ ವಸತಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಅಂತಿಮ ಕಂತಾಗಿ ರೂ. 50.00 ಲಕ್ಷಗಳನ್ನು (ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕ "2203-00-104-0-01-101" ಸರ್ಕಾರೇತರ ತಾಂತ್ರಿಕ ಶಾಲೆಗಳು ಸಹಾಯಾನುದಾನ (ಯೋಜನೇತರ) ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಇವರಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಈ ಕೆಳಕಂಡ ಷರತ್ತಿನೊಂದಿಗೆ ಅನುಮತಿ ನೀಡಲಾಗಿದೆ.

(1) ಸರ್ಕಾರವು ಇನ್ನು ಮುಂದೆ ಈ ಸಂಸ್ಥೆಗೆ ಯಾವುದೇ ರೀತಿಯ ಅನುದಾನ ನೀಡಲು ಸಾಧ್ಯವಾಗುವುದಿಲ್ಲ.

(2) ಅನುದಾನ ಬಳಕೆಯ ಬಗ್ಗೆ ಪ್ರಮಾಣ ಪತ್ರವನ್ನು ಸಂಸ್ಥೆಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 18.7.2009ರ ಸಂಖ್ಯೆ ಆಇ 989 ವೆಚ್ಚ-8/09ರ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1818

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ಬೆಂಗಳೂರಿನ ಕೇಂದ್ರ ಪರಿಹಾರ ಸಮಿತಿಗೆ ಸೇರಿದ ಭೂಮಿಯ ವರ್ಗಾವಣೆ ಮತ್ತು ಅಭಿವೃದ್ಧಿಗೊಳಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ : ಸಕಇ 18 ಎಸ್‌ಬಿಆರ್ 77 ದಿನಾಂಕ: 5.12.1977.

2) ಸರ್ಕಾರಿ ಆದೇಶ ಸಂಖ್ಯೆ : ಸಕಇ 38 ಎಸ್‌ಬಿಆರ್ 2007, ದಿನಾಂಕ: 8.10.2007.

ಪ್ರಸ್ತಾವನೆ:

ಬೆಂಗಳೂರಿನ ಕೇಂದ್ರ ಪರಿಹಾರ ಸಮಿತಿಯ ಸ್ವಾಧೀನದಲ್ಲಿದ್ದ ಒಟ್ಟು 308.02 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಕೆಲವೊಂದು ಭೂಮಿಯನ್ನು ಸರ್ಕಾರದ ವಿವಿಧ ನಿಗಮ:ಮಂಡಳಿ:ಸಂಸ್ಥೆಗಳಿಗೆ ವರ್ಗಾವಣೆ:ಲೀಸ್ ಆಧಾರ ನೀಡಲಾಗಿತ್ತು. ಈ ಮಧ್ಯೆ ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಸುಮನಹಳ್ಳಿ ಕುಷ್ಠರೋಗಿಗಳ ಪುನರ್ವಸತಿ ಕೇಂದ್ರಕ್ಕೆ ನೀಡಲಾದ 63.02 ಎಕರೆ ವಿಸ್ತೀರ್ಣದ ಭೂಮಿಯ ಲೀಸ್ ಅವಧಿಯು 2007ನೇ ಸಾಲಿನಲ್ಲಿ ಮುಗಿದಿರುತ್ತದೆ. ಈ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಸ್ತೆ ಮಾಡುವ ಸಲುವಾಗಿ 7.17 ಎಕರೆ ಭೂಮಿ ವಿಸ್ತೀರ್ಣದ ಭೂಮಿ ನೀಡಲಾಗಿದೆ. ಈಗ ಉಳಿದಿರುವ 55.25 ಎಕರೆ ವಿಸ್ತೀರ್ಣದ ಭೂಮಿಯು ಜೊತೆಗೆ ಶ್ರೀಗಂಧದಕಾವಲು ಗ್ರಾಮದಲ್ಲಿ 166.30 ಎಕರೆ ವಿಸ್ತೀರ್ಣದ ಜಮೀನು ಕೇಂದ್ರ ಪರಿಹಾರ ಸಮಿತಿಗೆ ಸೇರಿರುತ್ತದೆ.

ಸುಮನಹಳ್ಳಿ ಕುಷ್ಠರೋಗಿಗಳ ಪುನರ್ವಸತಿ ಕೇಂದ್ರಕ್ಕೆ ಲೀಸ್ ಆಧಾರದ ಮೇಲೆ ನೀಡಲಾಗಿದ್ದ ಭೂಮಿಯನ್ನು ಮೇಲ್ಕಂಡ ಕೇಂದ್ರ ಹಾಗೂ ಸಮಾಜ ಕಲ್ಯಾಣ ಸಚಿವಾಲಯದ ವ್ಯಾಪ್ತಿಗೆ ಬರುವ ವಿವಿಧ ಕ್ಷೇತ್ರ ಇಲಾಖೆ/ನಿಗಮಗಳಿಗೆ ಹಂಚಿಕೆ ಮಾಡುವುದರ ಜೊತೆಗೆ ಕೇಂದ್ರ ಪರಿಹಾರ ಸಮಿತಿಯ ಇತರೆ ಭೂಮಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಾರ್ವಜನಿಕ ಉಪಯೋಗಗಳಿಗೆ ಅಂದರೆ ಸಾರ್ವಜನಿಕ ಆಸ್ಪತ್ರೆ, ಕನ್ವೆಂಷನ್ ಸೆಂಟರ್ ಹಾಗೂ ಉದ್ಯಾನವನ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 33 ಎಸ್.ಬಿ.ಆರ್. 2004, ಬೆಂಗಳೂರು, ದಿನಾಂಕ: 27ನೇ ಜುಲೈ 2009

ಕೇಂದ್ರ ಪರಿಹಾರ ಸಮಿತಿಗೆ ಸೇರಿದ ಎಲ್ಲಾ ಭೂಮಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಪರಿಶೀಲಿಸಿ ಕ್ರಮ ಜರುಗಿಸಲು ಈ ಹಿಂದೆ ಸರ್ಕಾರದ ಆದೇಶ ಸಂಖ್ಯೆ ಸಕಇ 38 ಎಸ್‌ಬಿಆರ್ 2007, ದಿನಾಂಕ 8.10.2007 ರಲ್ಲಿ ರಚಿಸಲಾದ ಸಮಿತಿಯನ್ನು ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯನ್ನಾಗಿ ಮಾರ್ಪಡಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಈ ಕೆಳಗಿನಂತೆ ಪುನರ್ ರಚಿಸಲಾಗಿದೆ.

1)	ಸರ್ಕಾರದ ಮುಖ್ಯ ಕಾರ್ಯದರ್ಶಿ	– ಅಧ್ಯಕ್ಷರು
2)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	– ಸದಸ್ಯರು
3)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ	– ಸದಸ್ಯರು
4)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	– ಸದಸ್ಯರು
5)	ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	– ಸದಸ್ಯರು
6)	ಸರ್ಕಾರದ ಕಾರ್ಯದರ್ಶಿ ಸಮಾಜ ಕಲ್ಯಾಣ ಇಲಾಖೆ	– ಸದಸ್ಯರು
7)	ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ ಬೆಂಗಳೂರು.	– ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಮಸ್ವಾಮಿ

ಪಿ.ಆರ್. 1820

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರ),
ಸಮಾಜ ಕಲ್ಯಾಣ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಡಾ:ಮಹಮದ್ ಅಫ್ಜಾಲ್ ವಾಸೀಂ, ವೈದ್ಯರು ದರ್ಜೆ–2(ಹೋ) ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ, ಶಾಸಕರ ಭವನ, ಬೆಂಗಳೂರು ಇವರ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಡಿನೋವಾ ವಿಚಾರಣೆ ನಡೆಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 442 ಪಿಐಎಂ 2007 ದಿನಾಂಕ: 30–01–2008

2) ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ:16–7–2008

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.(1) ರಲ್ಲಿನ ಸರ್ಕಾರದ ಆದೇಶದಲ್ಲಿ ಡಾ: ಮಹಮದ್ ಅಫ್ತಾಬ್ ವಾಸೀಂ, ವೈದ್ಯರು ದರ್ಜೆ-2 (ಹೋ), ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ, ಶಾಸಕರ ಭವನ, ಬೆಂಗಳೂರು ಇವರ ವಿರುದ್ಧ ಕರ್ನಾಟಕ ಹೋಮಿಯೋಪತಿ ಮಂಡಳಿಯಲ್ಲಿ ನಿಯೋಜನೆಯ ಮೇಲೆ ನೋಂದಣಾಧಿಕಾರಿಯಾಗಿ 11/1998 ರಿಂದ 05/2003 ರವರೆಗೆ ಕೆಲಸ ನಿರ್ವಹಿಸಿದ್ದ ಅವಧಿಯಲ್ಲಿ 1961 ರ ಹೋಮಿಯೋಪತಿ ಆಕ್ಟ್ ಅಂಡ್ ರೂಲ್ಸ್ ಅನುಚ್ಛೇದ 15 ಮತ್ತು 36 ರ ಅನುಸಾರ ಸೂಕ್ತ ನಿಯಮಗಳನ್ನು ರಚಿಸಿಕೊಳ್ಳದೇ, ಸರ್ಕಾರದಿಂದ ಪೂರ್ವಾನುಮತಿ ಹಾಗೂ ಮಂಜೂರಾತಿ ಪಡೆಯದೇ ಆರ್ಥಿಕವಾಗಿ ಕೆಲವು ಅಧಿಕಾರ ದುರುಪಯೋಗ ಹಾಗೂ ಮಂಡಳಿಗೆ ನಷ್ಟ ಉಂಟು ಮಾಡಿ ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1)(11) ನ್ನು ಉಲ್ಲಂಘಿಸಿರುವ ಬಗ್ಗೆ ವಿಚಾರಣೆ ನಡೆಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಸತ್ಯಮೂರ್ತಿ ಹೊಳ್ಳ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಆಯುಷ್ ಇಲಾಖೆಯ ಮುಖ್ಯ ಆಡಳಿತಾಧಿಕಾರಿಯವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶಿಸಿತ್ತು.

ಮೇಲೆ ಓದಲಾದ ಕ್ರ.ಸಂ.(2) ರಲ್ಲಿ ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿ ಆಪಾದಿತ ನೌಕರರ ಮೇಲಿನ ಆಪಾದನೆಗಳ ಬಗ್ಗೆ ವಿಚಾರಣಾ ವರದಿಯಲ್ಲಿ Audit report is neither produced nor marked before the enquiry authority for perusal ಎಂದು ತಿಳಿಸಿದ್ದು ಸದರಿ ವರದಿಯನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯವನ್ನು ನೀಡಿರುವುದಿಲ್ಲ. ಆದರೆ, ಆಪಾದಿತ ಅಧಿಕಾರಿಯ ವಿರುದ್ಧ ಮಾಡಲಾದ ಆಪಾದನೆಗಳು ಸ್ಪಷ್ಟವಾಗಿವೆ. ಹಣ ಪಾವತಿಸಿರುವುದು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆಯೋ ಇಲ್ಲವೋ ಅನ್ನುವುದನ್ನು ಪರಿಶೀಲಿಸುವುದಕ್ಕೆ ಸಾಕ್ಷಿಗಳ ಹೇಳಿಕೆಗಳು ಅವಶ್ಯಕತೆ ಇರುವುದಿಲ್ಲ. ಆಪಾದಿತ ನೌಕರರ ಎಲ್ಲಾ 13 ಆರೋಪಗಳ ಕುರಿತು ನಿಖರವಾಗಿ ವಿಚಾರಣಾ ವರದಿಯಲ್ಲಿ ತಿಳಿಸದೇ ಇರುವುದರಿಂದ, ಆರೋಪಿಯ ಮೇಲಿನ ಆರೋಪಗಳು ಸಾಬೀತಾಗುವ ಸಾಧ್ಯತೆಗಳಿಂದ ನುಣುಚಿಕೊಳ್ಳುವ ಸಾಧ್ಯತೆಗಳು ಇರುತ್ತವೆ. ಈ ಹಿನ್ನೆಲೆಯಲ್ಲಿ ಆರೋಪಿತ ಅಧಿಕಾರಿಯ ವಿರುದ್ಧ ಮಾಡಲಾದ ಆಪಾದನೆಗಳ ಬಗ್ಗೆ ಸ್ಪಷ್ಟವಾಗಿ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ಸದರಿ ವೈದ್ಯಾಧಿಕಾರಿಯ ವಿರುದ್ಧ ಇರುವ ಆಪಾದನೆಗಳ ಕುರಿತು ಮರು ವಿಚಾರಣೆಯನ್ನು ಕೈಗೊಳ್ಳುವುದು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಕರಣದಲ್ಲಿ ಈಗ ಸರ್ಕಾರಕ್ಕೆ ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪದೆ, ಮರು ವಿಚಾರಣೆಯನ್ನು (Denova Inquiry) ಕೈಗೊಳ್ಳಲು ನಿವೃತ್ತ ನ್ಯಾಯಾಧೀಶರಾದ ಶ್ರೀ ಸಿ.ಕೆ.ಬಾಲಕೃಷ್ಣ, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 442 ಪಿಐಎಂ 2007, ಬೆಂಗಳೂರು, ದಿನಾಂಕ: 30ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಡಾ:ಮಹಮದ್ ಅಫ್ತಾಬ್ ವಾಸೀಂ, ವೈದ್ಯರು ದರ್ಜೆ-2 (ಹೋ) ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ, ಶಾಸಕರ ಭವನ, ಬೆಂಗಳೂರು ಇವರ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಸಲ್ಲಿಸಿರುವ ಇಲಾಖಾ ವಿಚಾರಣೆಯನ್ನು ಸರ್ಕಾರವು ಒಪ್ಪದೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 11(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮರುವಿಚಾರಣೆಯನ್ನು (Denova Inquiry) ನಡೆಸಲು ಆದೇಶಿಸಿದೆ. ಇದಕ್ಕಾಗಿ ಶ್ರೀ ಸಿ.ಕೆ.ಬಾಲಕೃಷ್ಣ, ನಿವೃತ್ತ ನ್ಯಾಯಾಧೀಶರು, ನಂ.2209, ತ್ರಿಕನ್ಯ, 80 ಅಡಿ ರಸ್ತೆ, ಹೆಚ್.ಎ.ಎಲ್. 3ನೇ ಹಂತ, ಇಂದಿರಾನಗರ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ ಹಾಗೂ ಮುಖ್ಯ ಆಡಳಿತಾಧಿಕಾರಿಗಳು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ. ಈ ವಿಚಾರಣೆಗಾಗಿ ಅವರು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007, ದಿನಾಂಕ:11-04-2008 ರನ್ವಯ ರೂ. 8000/- (ಎಂಟು ಸಾವಿರ ರೂಪಾಯಿಗಳು ಮಾತ್ರ) ಗೌರವಧನ ಹಾಗೂ ರೂ. 1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ವಾಹನ ಭತ್ಯೆಯನ್ನು ಪಡೆಯುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಮಹಾಲಕ್ಷ್ಮಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಪಿ.ಆರ್. 1823

ಉನ್ನತ ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಇಡಿ 248 ಯೋಸಕ 2008 (ಭಾಗ) ದಿನಾಂಕ: 6ನೇ ಆಗಸ್ಟ್ 2009

ವಿಷಯ: ಆರ್.ಐ.ಡಿ.ಎಫ್.-13 ಯೋಜನೆಯಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ತರಗತಿ ಕೊಠಡಿಗಳನ್ನು ನಿರ್ಮಾಣ ಮಾಡುವ ಬಗ್ಗೆ ಹೊರಡಿಸಿದ ಆದೇಶಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ : ಇಡಿ 172 ಯೋಸಕ 2008, ದಿನಾಂಕ: 30.12.2008

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿನ ಅನುಬಂಧದಲ್ಲಿ ಈ ಕೆಳಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿಗಳನ್ನು

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹೆಸರು	ಅಂದಾಜು ಮೊತ್ತ	ಈ ಹಿಂದಿನ ಆದೇಶದಲ್ಲಿ ಕಾಮಗಾರಿ ವಹಿಸಿದ ಸಂಸ್ಥೆಯ ಹೆಸರು	ಪರಿಷ್ಕರಿಸಿ ಕಾಮಗಾರಿ ವಹಿಸಿದ ಇಲಾಖೆ
೧.	ರಾಮನಗರ	ಬಿಡದಿ	137.80	ರೈಟ್ಸ್ ಸಂಸ್ಥೆ	ಲೋಕೋಪಯೋಗಿ ದಕ್ಷಿಣ
೨.	ಚಿಕ್ಕಮಗಳೂರು	ಬೀರೂರು	200.00	ರೈಟ್ಸ್ ಸಂಸ್ಥೆ	
೩.		ಕಳಸ	100.00	ರೈಟ್ಸ್ ಸಂಸ್ಥೆ	
೪.		ಅಜ್ಜಂಪುರ	25.00	ರೈಟ್ಸ್ ಸಂಸ್ಥೆ	
೫.		ಪಂಚನಹಳ್ಳಿ	50.00	ರೈಟ್ಸ್ ಸಂಸ್ಥೆ	
೬.	ಕೊಪ್ಪಳ	ಹೊಸಬಂಡಿ ಹರ್ಲಾಪುರ	100.00	ರೈಟ್ಸ್ ಸಂಸ್ಥೆ	ಲೋಕೋಪಯೋಗಿ ಉತ್ತರ
೭.	ರಾಯಚೂರು	ಮಸ್ಕಿ	100.00	ರೈಟ್ಸ್ ಸಂಸ್ಥೆ	

ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ. ನಂದಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. 1847

HEALTH AND FAMILY WELFARE SECRETARIAT

Sub: Strengthening of Project Office reg.

Read: 1. G.O. No.HFW/KHSDRP/Sect/1/2006, Bangalore, dt. 30.12.2006

2 Proceedings of the 3rd meeting of the Project Governing Board, dt. 13.11.2008

3. G.O. No.HFW/KHSDRP/Sect/1/2006 Bangalore, dt. 21.11.2007

4 GO . No.HFW/KHSDRP/Sect-54/2007,. Bangalore, dt. 13.03.200

5. G.O. No.HFW/KHSDRP/Merge-1/2007-08, Bangalore, dt. 18.02.2008 & G.O. No.HFW/KHSDRP/Merge-2/2007-08, Bangalore, dt. 28.03.2008

Preamble:

In the Govt. Order referred above, approval was given to the Karnataka Health System Development Project and its Organization set up, that included an Office of the Additional Director (KAS Senior Sclae), KHSDRP at Gulbarga. The said GO. Also approved creation of temporary posts in the Project that could be filled up on deputation from the Govt. or through an agency on hire basis.

The office at Gulbarga was created in order to monitor both KHSDRP and KFW Works taken up by the KHSDRP Project, in the backward region of Gulbarga. So far, only the ministerial level staff is functioning in this office with the post of Additional Director remaining vacant ever since it was created.

Meanwhile, the Engineering Wing of the Project is executing works of the entire Department including NRHM. Steps have been taken to strengthen it by creation of extra filed offices, i.e. Division and Sub-Division Offices and the required number of temporary posts for effective execution of civil works vide Govt. Orders at Read (3) and (4) above. The Administrative, Finance and Procurement wings of the Project have been merged with the NHRM and a District level merger of the two programmes has also been effected for a better coordinated implementation of both KHSDRP and NRHM. District Programme Management Officers have been placed at the district level plan, supervise and execute project activities and also steer NRHM activities, with no added financial implication.

Hence, it was proposed to wind up the Office at Gulbarga and instead strengthen the Project's head office by creating a few temporary posts in place of the surrendered posts in the office of the Additional Director KHSDRP, Gulbarga. The said proposal was discussed in the 3rd meeting of the Project

Governing Board held on 13.11.2008. The Board agreed to to the proposal of closing down the office of the Additional Director, KHSDRP, Gulbarga and creation of other posts.

Hence the following

Govt. Order No. HFW (PR) 40 WBA 2009, Dated: 21st July 2009

Government are pleased to approve the closure of the Office of the Additional Director, KHSDRP Gulbarga and its temporary staff created vide G.O. No.HFW/KHSDRP/Sect/1/2006, Bangalore, dated:30.12.2006 and instead create temporary posts for the KHSDRP Project Office as shown hereunder :

Existing				Posts created			
Post	No.of posts	Basic Pay	Total Emoluments (in Rs.) PM	Post	No.of posts	Basic Pay	(Approximate) Total Emoluments (in Rs.) PM
Additional Director	1	20025	28694		-		
Accounts Superintendent	1	10800	15613	Office Superintendent	1	10000	14479
FDA	1	7275	10465	FDA	1	7275	10465
SDA	1	5800	8374	SDA	1	5800	8374
Typist	1	5800	8374	Typist	1	5800	8374
Group "D"	1	4800 (x2)	13912	Group "D"	2	4800(x2)	13912
				Steno	2	7275 (x2)	20930
				Typist	1	5800	8374
Grand Total			**85432**				**84908**
Total emoluments include Basic Pay, D.A., HRA. and CCA							

The Accounts Superintendent and First Division Assistant of the Additional Director's Office shall hand over all records pertaining to both KHSDRP and KFW to the Office of the Executive Engineer, KHSDRP Engineering Division, Gulbarga and obtain acknowledgement. A copy of the same shall be marked to the Project Administrator, KHSDRP, Chief Finance Officer, Chief Administrative Officer, KHSDRP. The existing office furniture shall be handed over to the DPMO District Project Management Unit, Gulbarga, under acknowledgement. The Facsimile machine, Photocopier, Computer Systems, if any, shall be handed over to the Office of the Executive Engineer, KHSDRP Engineering Division Office, Gulbarga. The receiving Officer/official shall take to Stock all items received as per Office Procedure. The Accounts Superintendent of Division Office and FDA of Division Office shall take charge of all files from the Accounts Superintendent Sri Tibashetty.

The persons presently working in the Additional Director's office shall get themselves relieved from their work place and report to the Office/department shown against their name in the following table.

Sl. No.	Name	Designation	Category	Reporting Office
1	Sri Aiyappa G. Tibashetty	Accounts Superintendent	Government	State Accounts Department
2	Sri Mahesh	Group-D	Government	Office of the DPMO, Gulbarga
3	Sri Srinivas	Computer Operator	Outsourcing	To be relieved
4	Sri Sharanabasappa	Group-D	Outsourcing	To be relived

The Accounts Superintendent, Office of the Additional Director, KHSDRP, Gulbarga shall submit a report on the action taken to this office. The Executive Engineer shall alsl furnish a report to this office.

By Order and in the name of Governor of Karnataka,

SUSHAMA GODBOLE

P.R. 1845

Deputy Secretary to Government, KHSDRP,
Health and Family Welfare Department

ಉನ್ನತ ಶಿಕ್ಷಣ ಸಚಿವಾಲಯ

ವಿಷಯ: 2009–10ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆ, ಹೊಸಬಂಡಿ ಹರ್ಲಾಪುರದಲ್ಲಿ ಪ್ರಾರಂಭಿಸಲಾಗಿರುವ ನೂತನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ನಿರ್ಮಾಣ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ ಇಡಿ 124 ಯೋಸಕಾ 2008, ದಿ: 2.6.2008 (ಸ್ವೀಮರ ಇಡಿ 124 (ಯುನಿಕ್) 2008, ದಿ: 2.6.2008
2. ಸರ್ಕಾರಿ ಆದೇಶ ಸಂಖ್ಯೆ : ಇಡಿ 248 ಯೋಸಕಾ 2008 ದಿ: 30.12.2008 (ಸ್ವೀಮರ ಇಡಿ 198 (ಯುನಿಕ್) 2008 ದಿ: 30.12.2008

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಕೊಪ್ಪಳ ಜಿಲ್ಲೆ, ಹೊಸಬಂಡಿ ಹರ್ಲಾಪುರದಲ್ಲಿ ಪ್ರಾರಂಭಿಸಲಾಗಿರುವ ನೂತನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ನಿರ್ಮಾಣ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಸದರಿ ಕಟ್ಟಡದ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮ ವತಿಯಿಂದ ಕೈಗೊಳ್ಳಲು ಆದೇಶಿಸಲಾಗಿತ್ತು. ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ಕೆಲವೊಂದು ತಿದ್ದುಪಡಿ ಮಾಡಿ ಕರ್ನಾಟಕ ಭೂಸೇನಾ ನಿಗಮಕ್ಕೆ ಬದಲಾಗಿ ಒಟ್ಟು 23 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ಕಾಮಗಾರಿಗಳನ್ನು ರೈಟ್ಸ್ ಸಂಸ್ಥೆಗೆ ವಹಿಸಿಕೊಡಲಾಗಿತ್ತು. ಪ್ರಸ್ತುತ 23 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪೈಕಿ ಸಂಖ್ಯೆ ಇಡಿ 248 ಯೋಸಕಾ 2008 ದಿನಾಂಕ: 30.12.2008 (ಸ್ವೀಮರ ಇಡಿ 198 (ಯುನಿಕ್) 2008 ದಿ: 30.12.2008ರ ಸರ್ಕಾರಿ ಆದೇಶದಲ್ಲಿನ ಕ್ರಮ ಸಂಖ್ಯೆ 23 ರಲ್ಲಿ ನಮೂದಿಸಿರುವ ಕೊಪ್ಪಳ ಜಿಲ್ಲೆ, ಹೊಸಬಂಡಿ ಹರ್ಲಾಪುರದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡಲು ಉದ್ದೇಶಿಸಿರುವುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 03 ಯೋಸಕ 2008, ಬೆಂಗಳೂರು, ದಿನಾಂಕ: 7ನೇ ಆಗಸ್ಟ್ 2009

ಕೊಪ್ಪಳ ಜಿಲ್ಲೆ, ಹೊಸಬಂಡಿ ಹರ್ಲಾಪುರದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ರೈಟ್ಸ್ ಸಂಸ್ಥೆಯಿಂದ ವಾಪಸ್ಸು ಪಡೆದು, 2009–10ನೇ ಸಾಲಿಗೆ ರೂ. 1.00 ಕೋಟಿ (ಒಂದು ಕೋಟಿ ಮಾತ್ರ) ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಟ್ಟು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಅನುಮತಿ ನೀಡಿದೆ.

ಷರತ್ತುಗಳು :

1. ಕಾಮಗಾರಿಯನ್ನು ನಿಗದಿತ ಸಮಯದೊಳಗೆ ಮುಗಿಸಲು ಕ್ರಮ ಕೈಗೊಳ್ಳತಕ್ಕದ್ದು. ಕಟ್ಟಡ ನಿರ್ಮಾಣದ ಗುಣಮಟ್ಟದ ಬಗ್ಗೆ ನಿಗಾ ವಹಿಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.
2. ಕೇಂದ್ರ ಕಛೇರಿಯಿಂದ ತಿಂಗಳಿಗೊಮ್ಮೆ ಕಟ್ಟಡ ನಿರ್ಮಾಣದ ಕಾಮಗಾರಿ ಅಭಿವೃದ್ಧಿಯನ್ನು ಪರಿಶೀಲಿಸಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು. ಕಟ್ಟಡ ನಿರ್ಮಾಣ ಕಾರ್ಯವನ್ನು ವಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಪ್ರತಿ ಮಾಹೆಯ ಕಾಮಗಾರಿಯ ಪ್ರಗತಿ ವರದಿಯನ್ನು ಆಯಾ ಮಾಹೆಯ ಎಂ.ಎಂ.ಆರ್ ವರದಿಯಲ್ಲಿ ನಮೂದಿಸತಕ್ಕದ್ದು.
3. ಮೇಲ್ಕಂಡ ಮೊತ್ತಕ್ಕೆ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು 2009–10ನೇ ಸಾಲಿನ ದರದಂತೆ ತಯಾರಿಸಿ ಸರ್ಕಾರದ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆ ನೀಡತಕ್ಕದ್ದು.
4. ಇದಕ್ಕೆ ಸಂಬಂಧಿಸಿದ ಮೊತ್ತವನ್ನು 2009–10ನೇ ಸಾಲಿಗೆ ಲೆಕ್ಕ ಶೀರ್ಷಿಕೆ 4202–01–203–1–01–139 ಅಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1851

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ರಾಮಕೃಷ್ಣ ಆರ್. ಮಹಾಲಕ್ಷ್ಮೀಪುರಂ, ಬೆಂಗಳೂರು ಇವರ ಸಾವಿನ ತನಿಖೆಯನ್ನು ಸಿ.ಐ.ಡಿ.ಗೆ ವಹಿಸುವ ಬಗ್ಗೆ.

ಓದಲಾಗಿದೆ: 1. ರಿಟ್ ಅರ್ಜಿ 2334/06 (ಜಿ.ಎಂ. ಪೊಲೀಸ್) ಇದರಲ್ಲಿ ದಿನಾಂಕ: 24.4.2009 ರಂದು ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ತೀರ್ಪು.

ಪ್ರಸ್ತಾವನೆ:

ಶ್ರೀ ಕೆ.ಕೆ. ರಂಗಸ್ವಾಮಿ ಬಿನ್ ಲೇಟ್ ಕೆಂಚಪ್ಪ, ಬೋವಿಪಾಳ್ಯ, ಮಹಾಲಕ್ಷ್ಮೀಪುರಂ, ಬೆಂಗಳೂರು, ಇವರು ತಮ್ಮ ಮಗನಾದ ಆರ್ ರಾಮಕೃಷ್ಣ ಎಂಬುವವರು ದಿನಾಂಕ 29.08.2005 ರಂದು ನಿಗೂಢ ರೀತಿಯಲ್ಲಿ ಮೃತಪಟ್ಟಿದ್ದು, ಈ ಬಗ್ಗೆ ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಪ್ರಕರಣದ ವಿಚಾರಣೆಯನ್ನು ಪೊಲೀಸರು ಸರಿಯಾದ ರೀತಿಯಲ್ಲಿ ನಡೆಸದೇ ಇದ್ದುದರಿಂದ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 2334/06ನ್ನು ಸಲ್ಲಿಸಿದ್ದರು.ಈ ರಿಟ್ ಅರ್ಜಿಯಲ್ಲಿ ಗೃಹ ಕಾರ್ಯದರ್ಶಿ, ಮತ್ತು ಬೆಂಗಳೂರು ನಗರದ ಪೊಲೀಸ್ ಆಯುಕ್ತರನ್ನು ಕ್ರಮವಾಗಿ 1 ಮತ್ತು 2ನೇ ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯವು ದಿನಾಂಕ:24.4.09 ರಂದು ನೀಡಿರುವ ತೀರ್ಪಿನಲ್ಲಿ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ವಹಿಸಲು ಆದೇಶಿಸಿರುತ್ತದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂ: ಒಇ 76, ಸಿಒಡಿ 09, ಬೆಂಗಳೂರು, ದಿನಾಂಕ: 12ನೇ ಆಗಸ್ಟ್ 2009

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಆರ್. ರಾಮಕೃಷ್ಣ ಇವರ ನಿಗೂಢ ರೀತಿಯ ಸಾವಿನ ಬಗ್ಗೆ ಮಾನ್ಯ ರಾಜ್ಯ ಉಚ್ಛ ನ್ಯಾಯಾಲದ ರಿಟ್ ಅರ್ಜಿ ಸಂ. 2334/06ರಲ್ಲಿ ದಿನಾಂಕ: 24.4.09ರ ತೀರ್ಪಿನಲ್ಲಿ ಸೂಚಿಸಿರುವಂತೆ ಸದರಿ ಪ್ರಕರಣದ ತನಿಖೆಯನ್ನು ಸಿ.ಐ.ಡಿ.ಗೆ. ವಹಿಸಿ ಆದೇಶಿಸಲಾಗಿದೆ.

ಸಿ.ಐ.ಡಿ. ತಂಡವು ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಶೀಘ್ರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1852

ಪಿ. ಶಿವರಾಮ ಭಟ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಅಪರಾಧಗಳು)

ವಿಷಯ: ಶ್ರೀ ಆರ್.ಕೆ. ರಮೇಶ್, ದ್ವಿದ.ಸ., ರಾಮನಗರ ಜಿಲ್ಲೆ ರವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಬಗ್ಗೆ.

ಓದಲಾಗಿದೆ: ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಪತ್ರ ಸಂಖ್ಯೆ: ಅಪೀಲು(2)115/2008–09 ದಿನಾಂಕ: 18–04–2009.

ಪ್ರಸ್ತಾವನೆ:

ಶ್ರೀ ಆರ್.ಕೆ. ರಮೇಶ್, ದ್ವಿದಸ ರವರು ಈ ಕೆಳಗಿನ ಕರ್ತವ್ಯ ನಿರ್ಲಕ್ಷ್ಯತೆಗಾಗಿ 1957ರ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳ ನಿಯಮ 12 ರ ಮೇರೆಗೆ ದೋಷಾರೋಪಣೆ ಹೊರಡಿಸಿರುತ್ತಾರೆ.

ದೋಷಾರೋಪಣೆ:

"ಶ್ರೀ ಆರ್.ಕೆ.ರಮೇಶ್, ದ್ವಿದಸ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ನಿಮಗೆ ಈ ಕಛೇರಿಯ ಜ್ಞಾಪನ ಸಂಖ್ಯೆ:ಸಿಬ್ಬಂದಿ(1)/ಆರ್‌ಡಿಪಿಒ/2007–08 ದಿನಾಂಕ: 08–02–2008 ಮತ್ತು 20–03–2008 ರಲ್ಲಿ ಇಲಾಖಾ ವಿಚಾರಣೆ ಹಾಗೂ ನಿವೃತ್ತಿ ವೇತನ ಶಾಖೆಯನ್ನು ಹಂಚಿಕೆ ಮಾಡಿ ಪ್ರಭಾರವನ್ನು ವಹಿಸಿಕೊಳ್ಳಲು ಸೂಚಿಸಿದ್ದರು ಸಹ ಹಿರಿಯ ಅಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ನಿಮಗೆ ವಹಿಸಿದ ಶಾಖೆಯು ಪ್ರಭಾರವನ್ನು ವಹಿಸಿಕೊಳ್ಳಲು ನಿರಾಕರಿಸಿರುವುದು ಹಾಗೂ ದಿನಾಂಕ: 27–03–2008 ರಿಂದ 05–04–2008 ರವರೆಗೆ 10 ದಿವಸ ಪರಿವರ್ತಿತ ರಜೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿ ರಜೆ ಮಂಜೂರು ಮಾಡಿಸಿಕೊಳ್ಳದೇ ದಿನಾಂಕ: 27–03–2008 ರಿಂದ ಕರ್ತವ್ಯಕ್ಕೆ ಗೈರುಹಾಜರಾಗಿರುವುದು ನಿಮ್ಮ ಮೇಲಿನ ಆರೋಪವಾಗಿರುತ್ತದೆ."

ಮೇಲ್ಕಂಡ ದೋಷಾರೋಪಣೆ ಪತ್ರವನ್ನು ಸದರಿಯವರು ದಿನಾಂಕ: 09–04–2008 ರಂದು ಪಡೆದು ತಮ್ಮ ಸಮಜಾಯಿಷಿಯನ್ನು ದಿನಾಂಕ: 17–04–2008 ರಂದು ಸಲ್ಲಿಸಿರುತ್ತಾರೆ. ಸಮಜಾಯಿಷಿಯನ್ನು ಪರಿಶೀಲಿಸಿ ಶಿಸ್ತು ಪ್ರಾಧಿಕಾರಿಯವರು ಈ ಕೆಳಕಂಡಂತೆ ಆದೇಶಿಸಿರುತ್ತಾರೆ.

"ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ, ರಾಮನಗರ ರವರು ದಿನಾಂಕ: 12–06–2008 ರಂದು ಶ್ರೀ ಆರ್.ಕೆ.ರಮೇಶ್, ದ್ವಿದಸ, ಜಿಲ್ಲಾ ಪೊಲೀಸ್ ಕಛೇರಿ, ರಾಮನಗರ ರವರು ಗೈರುಹಾಜರಾದ ಅವಧಿ ದಿನಾಂಕ:27–03–2008 ರಿಂದ 09–04–2008 ರವರೆಗೆ 10 ದಿವಸ ವೇತನ ರಹಿತ ರಜೆಯೆಂದು ಪರಿಗಣಿಸಿರುತ್ತಾರೆ."

ಶಿಸ್ತು ಪ್ರಾಧಿಕಾರದ ದಿನಾಂಕ: 12–06–2008ರ ಆದೇಶದ ವಿರುದ್ಧ ಮೇಲ್ಮನವಿದಾರರು ಅರ್ಜಿ ದಿನಾಂಕ: 04–12–2008 ರಂದು ಸಲ್ಲಿಸಿದ್ದರಿಂದ ನಿಯಮಗಳ ಪ್ರಕಾರ 3 ತಿಂಗಳು ಅವಕಾಶವಿದೆ. ಅಪೀಲು ಅವಧಿ ನಂತರ ಸಲ್ಲಿಸಿದ್ದರಿಂದ ಸ್ವೀಕರಿಸಲು ಸಾಧ್ಯವಿರುವುದಿಲ್ಲ ವೆಂದು ದಿನಾಂಕ: 19–12–2008 ರಂದು ಅರ್ಜಿದಾರರಿಗೆ ಹಿಂಬರಹವನ್ನು ನೀಡಿರುತ್ತಾರೆ.

ಶಿಸ್ತು ಪ್ರಾಧಿಕಾರದ ಆದೇಶ ದಿನಾಂಕ: 12–06–2008 ಹಾಗೂ ದಿನಾಂಕ 30–09–2008ರ ಹಿಂಬರಹಗಳ ವಿರುದ್ಧ ಸರ್ಕಾರಕ್ಕೆ ದಿನಾಂಕ: 05–01–2009 ರಂದು ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 21 ಪೊಸಿಲಿ 2009, ಬೆಂಗಳೂರು, ದಿನಾಂಕ: 30ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಆರ್.ಕೆ. ರಮೇಶ್, ದ್ವಿದ.ಸ. ರಾಮನಗರ ಜಿಲ್ಲೆ ರವರು ಸರ್ಕಾರಕ್ಕೆ ಸಲ್ಲಿಸಿದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 26(ಎ) ಪ್ರಕಾರ ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1861

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಕೆ. ಮಂಜುನಾಥ ಶೆಟ್ಟಿ, ಪ್ರೊ ಪಿ.ಎಸ್.ಐ. ರವರ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ: 1. ಡಿ.ಜಿ. ಮತ್ತು ಐ.ಜಿ.ಪಿ. ರವರ ಪತ್ರ ಸಂಖ್ಯೆ: 90/ಸಿಬ್ಬಂದಿ–1/2006–07, ದಿನಾಂಕ:03.02.2006, 11,03.2006, 11.12.2008, 11.03.2009, 28.04.2009 ಮತ್ತು 20.06.2009.

ಪ್ರಸ್ತಾವನೆ:

ಶ್ರೀ ಕೆ. ಮಂಜುನಾಥ ಶೆಟ್ಟಿ, ಪ್ರೊಬೇಷನರಿ ಸೇವಾ ನಿರತ ಪಿ.ಎಸ್.ಐ. (ಸಿವಿಲ್) ಚಿತ್ರದುರ್ಗ ಜಿಲ್ಲೆ, ಇವರು ಪಿ.ಎಸ್.ಐ. ಹುದ್ದೆಗೆ ನೇಮಕಾತಿ ಹೊಂದಿ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ಹಾಗೂ ತರಬೇತಿಯಲ್ಲಿ ನಿಗದಿಪಡಿಸಿದ ಪರೀಕ್ಷೆಗಳನ್ನು ಪಾಸು ಮಾಡಿರುತ್ತಾರೆ. ಇವರ ಖಾಯಂಪೂರ್ವ ಅವಧಿಯು ದಿನಾಂಕ:30.06.2004ಕ್ಕೆ ಮುಗಿದಿರುತ್ತದೆ. ಈ ಅವಧಿಯಲ್ಲಿ ಇವರ ಮೇ ಚಾಲ್ತಿ ಶಿಕ್ಷೆಗಳಿದ್ದುದರಿಂದ ಹಾಗೂ ಇಲಾಖಾ ವಿಚಾರಣೆ ಬಾಕಿ ಇದ್ದುದರಿಂದ ಐ.ಜಿ.ಪಿ. ಪೂರ್ವ ವಲಯ, ದಾವಣಗೆರೆ ರವರು ದಿನಾಂಕ 30.06.2004 ರಿಂದ 30.06.2005 ರವರೆಗೆ ಹಾಗೂ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಇವರು ಸದರಿಯವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ: 30.06.2005 ರಿಂದ 30.09.2005ರ ವರೆಗೆ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4 (1) (ii) ರನ್ವಯ ವಿಸ್ತರಿಸಿ ಆದೇಶಿಸಿರುತ್ತಾರೆ. ಸದರಿ ಪಿ.ಎಸ್.ಐ. ರವರ ಪ್ರೊಬೇಷನರಿ ಅವಧಿಯನ್ನು ದಿನಾಂಕ: 1.10.2005 ರಿಂದ 30.01.2008ರವರೆಗೆ ವಿಸ್ತರಿಸುವಂತೆ ಮೇಲೆ ಓದಲಾದ (1) ರ ಪತ್ರದಲ್ಲಿ ಕೋರಲಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 52 ಪೊಸಇ 2006, ಬೆಂಗಳೂರು, ದಿನಾಂಕ: 29ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4(1) (i)ರನ್ವಯ ಶ್ರೀ ಕೆ. ಮಂಜುನಾಥ ಶೆಟ್ಟಿ, ಪಿ.ಎಸ್.ಐ. ಇವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ: 01.10.2005 ರಿಂದ 30.01.2008 ರವರೆಗೆ ವಿಸ್ತರಿಸಿ ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ. (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗದಿಪಡಿಸುವುದು. ಹೀಗೆ ನಿಗದಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1862

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಚಿಕ್ಕರಾಮಯ್ಯ, ಶಾಖಾಧೀಕ್ಷಕರು ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 224ಎ ರನ್ವಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯ ಪರಿಗಣಿಸುವ ಬಗ್ಗೆ.

ಓದಲಾಗಿದೆ: ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಪತ್ರ ಸಂಖ್ಯೆ: ಸಿಬ್ಬಂದಿ–6/86/2008–09 ದಿನಾಂಕ: 13–03–2009.

ಪ್ರಸ್ತಾವನೆ:

ಶ್ರೀ ಚಿಕ್ಕರಾಮಯ್ಯ, ಶಾಖಾಧೀಕ್ಷಕರು ಇವರು ಪೊಲೀಸ್ ಇಲಾಖೆಗೆ ಸೇರುವ ಪೂರ್ವದಲ್ಲಿ ಅಂದರೆ ದಿನಾಂಕ: 07–12–1977 ರಿಂದ 02–11–1983 ರ ವರೆಗೆ ದ್ವಿತೀಯ ದರ್ಜೆ ಸಹಾಯಕರಾಗಿ ವಿಮಾ ಇಲಾಖೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ನಂತರ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಪ್ರಥಮ ದರ್ಜೆ ಸಹಾಯಕರಾಗಿ ಆಯ್ಕೆಯಾಗಿ ದಿನಾಂಕ: 02–11–1983 ರಂದು ವರದಿ ಮಾಡಿಕೊಂಡಿರುತ್ತಾರೆ. ಆದ್ದರಿಂದ ಈ ಹಿಂದೆ ವಿಮಾ ಇಲಾಖೆಯಲ್ಲಿ ಸಲ್ಲಿಸಿದ ಸೇವೆಯನ್ನು ಕೆ.ಸಿ.ಎಸ್.ಆರ್. ನಿಯಮ 224(ಎ) ಪ್ರಕಾರ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ:ಒಇ 47 ಪೊಸಿಲಿ 2009, ಬೆಂಗಳೂರು, ದಿನಾಂಕ: 29ನೇ ಜುಲೈ 2009

ಶ್ರೀ ಚಿಕ್ಕರಾಮಯ್ಯ, ಶಾಖಾಧೀಕ್ಷಕರು, ಕೇಂದ್ರ ವಲಯ ಕಚೇರಿ, ಬೆಂಗಳೂರು ಇವರು ಈ ಹಿಂದೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ದಿನಾಂಕ: 07–12–1977 ರಿಂದ 02–11–1983 ರ ವರೆಗೆ ದ್ವಿತೀಯ ದರ್ಜೆ ಸಹಾಯಕರಾಗಿ ಸಲ್ಲಿಸಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 224–ಎ ಅನ್ವಯ ನಿವೃತ್ತಿ ಸೌಲಭ್ಯಗಳಿಗೆ ಮಾತ್ರ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 366 ವೆಚ್ಚ–11/2009 ದಿನಾಂಕ: 05–06–2009ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1863

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

INFRASTRUCTURE DEVELOPMENT SECRETARIAT

Sub: Suminfra 2009 – A summit on Sustainable PPPs in Infrastructure to be held on 6th and 7th August, 2009 in Chennai – reg.

Read: 1. Letter No. Nil dated 20th June, 2009 from the Chairman, Confederation of Indian Industry (SR).

Premable:

Chairman, Confederation of Indian Industry (CII) vide his letter referred to above, has stated that Confederation of Indian Industry (SR) is organizing the 7th Edition of its annual summit on Sustainable PPPs in infrastructure **"Suminfra 2009"** on 6th and 7th of August, 2009 at Hotel Le Royal Meridien, Chennai.

2. Suminfra is a unique forum promoted by the CII jointly with the State Government in Southern Region to promote Public Private Partnership (PPP) in Infrastructure Development in the Southern States. It brings together all stakeholders concerned with infrastructure development on a common platform and also showcase private sector experiences with PPP's in Infrastructure.

3. It has also been stated that the two days summit would be addressed by the Union Ministers, Chief Ministers of the Southern states and Senior bureaucrats from the Central and State Governments and also Industry Leaders from Infrastructure. He has further requested to participate at the SIIP session and to support this initiative by way of sponsorship.

4. The proposal of the Chairman, Confederation of Indian Industry has been examined. Hence this order.

Government Order No.IDD 44 IDM 2009, Bangalore, Dated: 31st July 2009

Government is pleased to extend its support and sanction an amount of Rs. 5.00 lakhs (Rupees Five Lakhs only) for Suminfra 2009 to be held at Chennai on 6th and 7th August, 2009.

2. The above expenditure is to be met under the Head of Account "3451-00-090-1-06-059-Infrastructure Preliminary Studies–other Expenses (Plan)'.

3. The Managing Director, IDeGK would draw this amount on a payee's receipt duly countersigned by the Under Secretary to Govt., Infrastructure Development Department and to make suitable arrangements for onward payment to Suminfra 2009.

4. This order is issued in accordance with the financial powers delegated to Principal Secretaries/Secretaries vide G.O. No.FD 1 TFP 2008 dated 16.5.2008.

By Order and in the name of Governor of Karnataka,

N. MANJULA GEETHA

P.R. 1864

Under Secretary to Government,
Infrastrcutre Development Department

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಪ್ರಕಾಶ್, ನಿವೃತ್ತ ಸಹಾಯಕ, ಅಭಿಯೋಗ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ) (1)ರ ಸೌಲಭ್ಯಕ್ಕೆ ಪರಿಗಣಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ–II ಸಂ ಲಾ 161 ಪಿಪಿಇ 86, ದಿನಾಂಕ: 24.07.1989
2. ಸರ್ಕಾರದ ಪತ್ರದ ಸಂ. ಲಾ 199 ಪಿಪಿಇ 91, ದಿನಾಂಕ: 5.12.1991
3. ಸದರಿ ಅಧಿಕಾರಿಯವರ ಮನವಿ ದಿನಾಂಕ: 17.05.2007
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಇವರ ಪತ್ರ ಸಂ.ಡಿಪಿಎಸ್/ ಸಿಶಾ–1/45/2007–08 ದಿನಾಂಕ: 22.05.2007

ಪ್ರಸ್ತಾವನೆ:

ಶ್ರೀ ಪ್ರಕಾಶ್, ನಿವೃತ್ತ ಸಹಾಯಕ ಅಭಿಯೋಗ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು, ಇವರು ಮೇಲೆ (1) ರಲ್ಲಿ ಓದಲಾದ ದಿನಾಂಕ: 24.07.1989ರ ಸರ್ಕಾರದ ಅಧಿಸೂಚನೆಯ ಕ್ರ.ಸಂ. 49ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ: 5.8.1989 ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ: 5.12.1991ರ ಸರ್ಕಾರದ ಪ್ರತದನ್ವಯ ಸದರಿ ನಿವೃತ್ತ ಅಧಿಕಾರಿಯ ಜನ್ಮ ದಿನಾಂಕವನ್ನು 28.06.1949 ಎಂದು ಒಪ್ಪಲಾಗಿದೆ.

ಮೇಲೆ (3) ರಲ್ಲಿ ಓದಲಾದ ಮನವಿಯಲ್ಲಿ ಸದರಿ ನಿವೃತ್ತ ಅಧಿಕಾರಿರವರು – ಮೇಲೆ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆ ಮತ್ತು (2) ರಲ್ಲಿ ಓದಲಾದ ಸರ್ಕಾರದ ಪತ್ರದನ್ವಯ 40 ವರ್ಷ, 1 ತಿಂಗಳು 7 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಕೆಲಸಕ್ಕೆ ಸೇರಿದಂತೆ ಆಗಿರುತ್ತದೆ. ಆದುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ) ರನ್ವಯ ಗರಿಷ್ಠ ಮಿತಿಯಾದ 4 ವರ್ಷಗಳ ಹೆಚ್ಚುವರಿ ಸೇವೆಗೆ ಅರ್ಹರಿದ್ದು, ಸದರಿಯವರ ಅರ್ಹತಾದಾಯಕ ಸೇವೆಗೆ ಹೆಚ್ಚುವರಿ ಸೇವೆಯನ್ನು ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ದಿನಾಂಕ: 22.05.2007ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರುರವರು ಮೇಲೆ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆ ಹಾಗೂ (2) ಮತ್ತು (3) ರಲ್ಲಿ ಓದಲಾದ ಪತ್ರಗಳ ಹಿನ್ನೆಲೆಯಲ್ಲಿ ಶ್ರೀ ಪ್ರಕಾಶ್, ನಿವೃತ್ತ ಸಹಾಯಕ ಅಭಿಯೋಗ ನಿರ್ದೇಶಕರವರು 40 ವರ್ಷ 1 ತಿಂಗಳು, 7 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ) (1)ರ ಪ್ರಕಾರ ನಿವೃತ್ತಿ ವೇತನಕ್ಕೆ ಮಾತ್ರ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಸೇವೆಯನ್ನು ಹೆಚ್ಚುವರಿಯಾಗಿ ಸದರಿ ಅಧಿಕಾರಿಯ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡಲು ಸರ್ಕಾರವು ಆದೇಶವನ್ನು ಹೊರಡಿಸುವುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಒಇ 265 ಪಿಪಿಇ 2007, ಬೆಂಗಳೂರು, ದಿನಾಂಕ: 5ನೇ ಆಗಸ್ಟ್ 2009

ಶ್ರೀಯುತ ಪ್ರಕಾಶ್, ನಿವೃತ್ತ ಸಹಾಯಕ ಅಭಿಯೋಗ ನಿರ್ದೇಶಕರು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ) (1) ರನ್ವಯ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಅಧಿಕ ಸೇವೆಯನ್ನು ಶ್ರೀಯುತರ ನಿವೃತ್ತಿ ವೇತನಕ್ಕೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 619 ವೆಚ್ಚ-11/2009, ದಿನಾಂಕ: 01.07.2009ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಪಿ. ಸಿದ್ದಪ್ಪ
ಪಿ.ಆರ್. 1865 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಗುಬ್ಬಿಯ ಹೆಚ್ಚುವರಿ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಯನ್ನು ಹಾಗೂ ಅವರ ಕಛೇರಿಗೆ ಪೂರಕ ಸಿಬ್ಬಂದಿಯ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ: ಲಾ 47 ಎಲ್‌ಸಿಇ 2004, ದಿನಾಂಕ 23.06.2005.
2. ಸರ್ಕಾರದ ಆದೇಶ ಸಂ: ಲಾ 360 ಎಲ್‌ಸಿಇ 2007, ದಿನಾಂಕ : 31.01.2008.
3. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಇವರ ಪತ್ರ ಸಂಖ್ಯೆ: ಡಿಪಿಎನ್/ಸಿಶಾ1/178/2007-08, ದಿನಾಂಕ: 29.02.2008.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದ ವಿವಿಧ ದರ್ಜೆಯ 90 ನ್ಯಾಯಾಲಯಗಳನ್ನು ಸ್ಥಾಪಿಸಲು ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಗುಬ್ಬಿಯ ಹೆಚ್ಚುವರಿ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯವನ್ನು ಪ್ರಾರಂಭಿಸಲು ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಪತ್ರದಲ್ಲಿ ಗುಬ್ಬಿಯ ಹೆಚ್ಚುವರಿ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿ ಓದಲಾದ ಸರ್ಕಾರದ ಆದೇಶಗಳನ್ವಯ ಸೃಜನೆಯಾಗಿ, ಕಾರ್ಯಾರಂಭಿಸಿರುತ್ತದೆ. ಸದರಿ ನ್ಯಾಯಾಲಯದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಪ್ರಕರಣಗಳನ್ನು ನಡೆಸಲು ಸದರಿ ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ, ಅಭಿಯೋಗ ಇಲಾಖೆಗೆ ತಲಾ ಒಂದು ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ, ಒಂದು ದ್ವಿತೀಯ ದರ್ಜೆ ಸಹಾಯಕ ಮತ್ತು ಒಂದು ಅಟೆಂಡರ್ ಹುದ್ದೆಯನ್ನು ಸೃಜನೆ ಮಾಡುವಂತೆ ಕೋರಿರುತ್ತಾರೆ.

ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಒಇ 118 ಪಿಪಿಇ 2008, ಬೆಂಗಳೂರು, ದಿನಾಂಕ: 5ನೇ ಆಗಸ್ಟ್ 2009

ಮೇಲಿನ ವಿವರಿಸಿರುವ ಹಿನ್ನೆಲೆಯಲ್ಲಿ, ಗುಬ್ಬಿಯ ಹೆಚ್ಚುವರಿ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಒಂದು ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಯನ್ನು ಮತ್ತು ಅವರ ಕಛೇರಿಗೆ ಹೊಂದಿಕೊಂಡಂತೆ ಒಂದು ದ್ವಿತೀಯ ದರ್ಜೆ ಸಹಾಯಕರ (ಕಂಪ್ಯೂಟರ್ ಜ್ಞಾನವನ್ನು ಮತ್ತು ಬೆರಳಚ್ಚುಗಾರಿಕೆಯಲ್ಲಿ ನೈಪುಣ್ಯತೆ ಅಗತ್ಯ) ಬೆರಳಚ್ಚುಗಾರರಿಗೆ ಸರಿಸಮಾನದ ಹುದ್ದೆಯನ್ನಾಗಿ ಮೊದಲಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಲಾಗಿದೆ.

ಸದರಿ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ. 1 ಟಿಎಫ್‌ಪಿ 96, ದಿನಾಂಕ: 10.07.1996 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. ಎಫ್.ಡಿ. 533 ವೆಚ್ಚ-11/2008, ದಿನಾಂಕ 25.06.2009 ಮತ್ತು ಎಫ್.ಡಿ. 647 ವೆಚ್ಚ-11/2009, ದಿನಾಂಕ: 17.07.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಪಿ. ಸಿದ್ದಪ್ಪ
ಪಿ.ಆರ್. 1866 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ಬಳೇಪೇಟೆ ಶ್ರೀ ಶ್ರೀನಿವಾಸ ಮಂದಿರ ಚಾರಿಟೀಸ್‌ನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರಿರುವ ಕುರಿತು.

ಓದಲಾಗಿದೆ: ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ಸಂಖ್ಯೆ:ಎಡಿಎಂ.6.ಸಿಆರ್.54/2006–07, ದಿನಾಂಕ:02.11.2007

ಪ್ರಸ್ತಾವನೆ:

ಮೇಲೆ ಓದಲಾದ ಧಾರ್ಮಿಕ ದತ್ತಿ ಆಯುಕ್ತರ ಪತ್ರ ದಿನಾಂಕ: 02.11.2007 ರಲ್ಲಿ ಬೆಂಗಳೂರು ನಗರ ಶ್ರೀನಿವಾಸ ಮಂದಿರಂ ಚಾರಿಟೀಸ್‌ನ ಆಡಳಿತ ನಿರ್ವಹಣೆಗಾಗಿ ಸರ್ಕಾರದ ಆದೇಶ ಸಂ.679–85–182–31–8, ದಿನಾಂಕ:02.11.1932 ರನ್ವಯ ಪ್ರತ್ಯೇಕ ನಿಯಮಾವಳಿಯನ್ನು ರಚಿಸಲಾಗಿತ್ತು. ನಿಯಮಾವಳಿಗಳ ನಿಯಮ 5ರನ್ವಯ ಈ ಸಂಸ್ಥೆಗೆ ಧಾರ್ಮಿಕ ದತ್ತಿ ಆಯುಕ್ತರು 9 ಜನರ ವ್ಯವಸ್ಥಾಪನಾ ಸಮಿತಿಯನ್ನು ರಚಿಸಬೇಕೆಂದಿರುತ್ತದೆ. ನಿಯಮ 16 ರಂತೆ ಸದರಿ ಸಂಸ್ಥೆಯ ವ್ಯವಸ್ಥಾಪಾನಾ ಸಮಿತಿಯವರು ಮೈಸೂರು ಮತೀಯ ಮತ್ತು ಧರ್ಮದಾಯ ದತ್ತಿ ಸಂಸ್ಥೆಗಳ ಕಾಯ್ದೆ 1927ರ ಸೆಕ್ಷನ್ 6 ರಲ್ಲಿ ನಿರ್ಧಿಷ್ಟಪಡಿಸಿರುವಂತೆ ಕರ್ತವ್ಯ ನಿರ್ವಹಣೆ ನಿರ್ವಹಿಸಬೇಕೆಂದಿರುತ್ತದೆ.

ದಿನಾಂಕ 1.5.2003 ರಿಂದ ಜಾರಿಗೆ ಬಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 23ರನ್ವಯ ಈ ಸಂಸ್ಥೆಯನ್ನು ಅಧಿಸೂಚಿತ ಸಂಸ್ಥೆ ಎಂದು ಪ್ರಕಟಿಸಿರುವುದಿಲ್ಲ. ಸಂಸ್ಥೆಯ ಕಾರ್ಯದರ್ಶಿಗಳು ಮನವಿಯನ್ನು ಸಲ್ಲಿಸಿ, ಈ ಸಂಸ್ಥೆಗೆ ವ್ಯವಸ್ಥಾಪಾನಾ ಸಮಿತಿಯನ್ನು ರಚಿಸಲು ಕೋರಿದ್ದಾರೆ. ಸದರಿ ವಿಷಯದ ಬಗ್ಗೆ ಬೆಂಗಳೂರು ನಗರ ಸಭಾ ವಲಯದ ಸಹಾಯಕ ಆಯುಕ್ತರು, ಶ್ರೀ ಶ್ರೀನಿವಾಸ ಮಂದಿರಂ ಚಾರಿಟೀಸ್ ರೂ. 197.70 ತಸ್ಧೀಕ್ ನಿಗದಿಯಾಗಿರುತ್ತದೆ. ಸದರಿ ಸಂಸ್ಥೆಗೆ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಇವರ ಅಧಿಸೂಚನೆ ದಿನಾಂಕ: 27.06.1972ರಲ್ಲಿ ಹಾಗೂ ದಿನಾಂಕ: 05.02.77ರಲ್ಲಿ 3 ವರ್ಷಗಳ ಅವಧಿಗೆ 12 ಸದಸ್ಯರನ್ನೊಳಗೊಂಡ ಧರ್ಮದರ್ಶಿಯ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರದ ಆದೇಶ ಸಂ. ಕಂಇ 22 ಮುಸರ 97, ದಿನಾಂಕ: 04.02.1998ರಲ್ಲಿ 3 ವರ್ಷಗಳ ಅವಧಿಗೆ 9 ಸದಸ್ಯತರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಿದ್ದು, ನಂತರದಲ್ಲಿ ಸಂಸ್ಥೆಯ ಆಡಳಿತಕ್ಕೆ ಸಮಿತಿಯನ್ನು ಪುನರ್ ರಚಿಸಿರುವುದು ಕಂಡುಬರುತ್ತಿಲ್ಲ. ಸಂಸ್ಥೆಯ ಲೆಕ್ಕಪತ್ರಗಳನ್ನು 1999–2000 ರಿಂದ 2004–05ರ ಸಾಲಿನವರೆಗೆ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಂಗಳೂರು, ಇವರು ಲೆಕ್ಕಪರಿಶೋಧನೆ ನಡೆಸಿರುವುದರಿಂದ ಕಂಡುಬರುತ್ತದೆ ಎಂದು ವರದಿ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಬಳೇಪೇಟೆ ಶ್ರೀ ಶ್ರೀನಿವಾಸ ಮಂದಿರಂ ಸಂಸ್ಥೆಯ ಆಡಳಿತಕ್ಕೆ ಸರ್ಕಾರವು ನಿಯಮಾವಳಿಗಳನ್ನು ರೂಪಿಸಿದ್ದು, ಅದರ ಅನ್ವಯ ಆಡಳಿತ ನಡೆಸುತ್ತಿದ್ದು, ಸಂಸ್ಥೆಯ ಲೆಕ್ಕಪತ್ರಗಳನ್ನು ಸರ್ಕಾರದ ವತಿಯಿಂದ ಲೆಕ್ಕ ತಪಾಸಣೆ ನಡೆಸುತ್ತಿದ್ದರಿಂದ, ಸಂಸ್ಥೆಯ ಲೆಕ್ಕಪತ್ರಗಳನ್ನು ಸರ್ಕಾರದ ವತಿಯಿಂದ ಲೆಕ್ಕ ತಪಾಸಣೆ ನಡೆಸುತ್ತಿದ್ದರಿಂದ, ಸರ್ಕಾರದ ವತಿಯಿಂದ ಸಂಸ್ಥೆಯ ನಿರ್ವಹಣೆಗಾಗಿ ತಸ್ಧೀಕ್ ಅನುದಾನವನ್ನು ಪಾವತಿ ಮಾಡುತ್ತಿರುವುದರಿಂದ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 23ರ ಅನ್ವಯ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಿ ಆದೇಶ ಹೊರಡಿಸಲು ಸರ್ಕಾರಕ್ಕೆ ಕೋರಿಕೆ ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 151 ಮುಆಬಿ 2007, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಬೆಂಗಳೂರು ನಗರ ಬಳೇಪೇಟೆ ಶ್ರೀ ಶ್ರೀನಿವಾಸ ಮಂದಿರ ಹೆಸರನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಅಧಿನಿಯಮ 1997ರ ಕಲಂ 23ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 77 ಎಂಇಟಿ 2003 ದಿನಾಂಕ: 30.04.2003 ರಲ್ಲಿ ಪುಟ ಸಂಖ್ಯೆ 3ರ ಕ್ರಮ ಸಂಖ್ಯೆ 68ರ ನಂತರ 69ರಲ್ಲಿ ಸೇರ್ಪಡೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ. ರಾಮಚಂದ್ರಯ್ಯ

ಪಿ.ಆರ್. 1867

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ)

ವಿಷಯ: ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಚೋಳನಾಯಕನಹಳ್ಳಿ ಗ್ರಾಮಕ್ಕೆ ಸೇರಿದ ಶ್ರೀ ಮಾರಮ್ಮ ದೇವಾಲಯವು ಧಾರ್ಮಿಕ ದತ್ತಿ ಇಲಾಖೆಗೆ ಸೇರಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ಸಂಖ್ಯೆ ಏಕರೂಪ ಶಾಸನ:ಸಿ.ಆರ್.76/2008–09, ದಿನಾಂಕ: 24.03.2009

ಪ್ರಸ್ತಾವನೆ:

ಮೇಲೆ ಓದಲಾದ ಧಾರ್ಮಿಕ ದತ್ತಿ ಆಯುಕ್ತರ ಪತ್ರ ದಿನಾಂಕ: 24.03.2009ರಲ್ಲಿ ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಚೋಳನಾಯಕನಹಳ್ಳಿ ಗ್ರಾಮದ ಶ್ರೀ ಮಾರಮ್ಮ ದೇವಾಲಯವು ಮುಜರಾಯಿ ಇಲಾಖೆಗೆ ಒಳಪಟ್ಟ ಸಮೂಹ "ಸಿ" ಪ್ರವರ್ಗದ ಸಂಸ್ಥೆಯಾಗಿರುತ್ತದೆ. ಈ ದೇವಾಲಯಕ್ಕೆ ರೂ. 6,000/- ಪರಿಷ್ಕೃತ ತಸ್ತೀಕ್ ನಿಗದಿಪಡಿಸಲಾಗಿರುತ್ತದೆ. ದೇವಾಲಯಕ್ಕೆ ಸುಮಾರು ರೂ. 10.00 ಲಕ್ಷಗಳ ಕಾಮಗಾರಿಯಾಗಿದ್ದು, ದೇವಾಲಯದ ಹುಂಡಿಯಿಂದ ವಾರ್ಷಿಕ ರೂ. 50,000/- ಆದಾಯ ಬರುತ್ತಿದೆ. ದೇವಾಲಯವು ಮುಜರಾಯಿ ಸಂಸ್ಥೆಯಾಗಿದ್ದರೂ, ಖಾಸಗಿ ಸಂಸ್ಥೆಯಂತೆ ನಡೆಯುತ್ತಿದೆಯೆಂದು, ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಕೈಬಿಟ್ಟು ಹೋಗಿದೆ ಎಂದು ತಹಶೀಲ್ದಾರ್‌ರವರು ವರದಿ ಮಾಡಿರುವುದರಿಂದ ಈ ದೇವಾಲಯವನ್ನು ಮುಜರಾಯಿ ಆಡಳಿತಕ್ಕೆ ಒಳಪಡಿಸಲು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆರವರು ಕೋರಿರುತ್ತಾರೆ.

ಶ್ರೀ ಮಾರಮ್ಮ ದೇವಾಲಯವು ಮುಜರಾಯಿ ಸಂಸ್ಥೆಯಾಗಿದ್ದು, ಕೈಬಿಟ್ಟು ಹೋಗಿರುವುದರಿಂದ ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಚೋಳನಾಯಕನಹಳ್ಳಿ ಗ್ರಾಮ, ಶ್ರೀ ಮಾರಮ್ಮ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವಂತೆ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 57 ಮುಆಬಿ, 2009, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಚೋಳನಾಯಕನಹಳ್ಳಿ ಗ್ರಾಮ, ಶ್ರೀ ಮಾರಮ್ಮ ದೇವಾಲಯದ ಹೆಸರನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಅಧಿನಿಯಮ 1997ರ ಕಲಂ 23ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 77 ಎಂಇಟಿ 2003 ದಿನಾಂಕ: 30.04.2003 ರಲ್ಲಿನ ಪುಟ ಸಂಖ್ಯೆ 12ರ ಕ್ರಮ ಸಂಖ್ಯೆ 193 ನಂತರ 194 ರಲ್ಲಿ ಸೇರ್ಪಡೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1868 **ಜಿ. ರಾಮಚಂದ್ರಯ್ಯ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ)

ವಿಷಯ: ಬೆಂಗಳೂರು ನಗರ ಜಿಲ್ಲೆ, ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೊಮ್ಮಸಂದ್ರ ಗ್ರಾಮದ ಶ್ರೀ ಸೋಮೇಶ್ವರಸ್ವಾಮಿ ದೇವಾಲಯವನ್ನು ಅಧಿಸೂಚಿತ ಸಂಸ್ಥೆಯೆಂದು ಘೋಷಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ಸಂಖ್ಯೆ ಏಕರೂಪ ಶಾಸನ:ಸಿ.ಆರ್.78/2008-09, ದಿನಾಂಕ: 26.03.2009.

ಪ್ರಸ್ತಾವನೆ:

ಮೇಲೆ ಓದಲಾದ ಧಾರ್ಮಿಕ ದತ್ತಿ ಆಯುಕ್ತರ ಪತ್ರ ದಿನಾಂಕ 26.03.2009ರಲ್ಲಿ ಬೆಂಗಳೂರು ನಗರ ಜಿಲ್ಲೆ, ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೊಮ್ಮಸಂದ್ರ ಗ್ರಾಮದ ಶ್ರೀ ಸೋಮೇಶ್ವರಸ್ವಾಮಿ ದೇವಾಲಯವನ್ನು ಶ್ರೀ ಕೆಂಪಣ್ಣ ಎಂಬುವವರು ಸ್ವಯಂ ಘೋಷಿತ ಅಧ್ಯಕ್ಷರು ಎಂದು ಹೇಳಿಕೊಂಡು ದೇವಾಲಯದ ಸೇವಾರ್ಥ ನಿಗದಿಪಡಿಸಿ, ಸೇವಾ ಹಣವನ್ನು ವಸೂಲಿ ಮಾಡುವುದು, ಹುಂಡಿಯನ್ನು ಅವರೇ ತೆರೆದು ಉಪಯೋಗಿಸುವುದು ಹಾಗೂ ದೇವಾಲಯಕ್ಕೆ ಸೇರಿದ ಜಾಗವನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಿರುವ ಬಗ್ಗೆ ಬಂದ ದೂರಿನ ಕುರಿತು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ ಸಹಾಯಕ ಆಯುಕ್ತರು, ನಗರಸಭಾ ವಲಯ, ಬೆಂಗಳೂರು, ಇವರು ತನಿಖೆ ಮಾಡಿ ತನಿಖೆ ಸಮಯದಲ್ಲಿ ಶ್ರೀ ಕೆಂಪಣ್ಣ ಎಂಬುವವರು ಅನಧಿಕೃತವಾಗಿ ದೇವಾಲಯದ ಆಡಳಿತದಲ್ಲಿ ಕೈಹಾಕಿ ದೇವಾಲಯದ ಆದಾಯವನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದಾರೆಂದು, ದೇವಾಲಯದ ಆದಾಯಕ್ಕೆ ಯಾವುದೇ ಲೆಕ್ಕ ಪತ್ರಗಳು ಇಟ್ಟಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ.

ದೇವಾಲಯಕ್ಕೆ ತಸ್ತೀಕ್ ಸಹ ನಿಗದಿಯಾಗಿರುತ್ತದೆ ಹಾಗೂ ಪ್ರಸ್ತುತ ದೇವಾಲಯದ ಆಡಳಿತವನ್ನು ಇಲಾಖೆಯ ವತಿಯಿಂದ ನಿರ್ವಹಿಸಬೇಕಾಗಿರುವುದರಿಂದ ಸಂಸ್ಥೆಯನ್ನು ಅಧಿಸೂಚಿತ ಸಂಸ್ಥೆಯೆಂದು ಘೋಷಿಸುವಂತೆ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ. ಜಿಲ್ಲಾಧಿಕಾರಿಗಳ ವರದಿಯಂತೆ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೊಮ್ಮಸಂದ್ರ ಗ್ರಾಮದ ಶ್ರೀ ಸೋಮೇಶ್ವರಸ್ವಾಮಿ ದೇವಾಲಯವನ್ನು ಘೋಷಿತ ಸಂಸ್ಥೆಯೆಂದು ಆದೇಶ ಹೊರಡಿಸುವಂತೆ ಧಾರ್ಮಿಕ ದತ್ತಿ ಆಯುಕ್ತರು ಸರ್ಕಾರಕ್ಕೆ ಕೋರಿಕೆ ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ: ಕಂಇ 56 ಮುಆಬಿ 2009, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಬೆಂಗಳೂರು, ನಗರ ಜಿಲ್ಲೆ, ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೊಮ್ಮಸಂದ್ರ ಗ್ರಾಮದ ಶ್ರೀ ಸೋಮೇಶ್ವರಸ್ವಾಮಿ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು, ಮತ್ತು ಧರ್ಮದಾಯ ದತ್ತಿ ಅಧಿನಿಯಮ 1997ರ ಕಲಂ 23ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 77 ಎಂಇಟಿ 2003 ದಿನಾಂಕ:30.04.2003 ರಲ್ಲಿನ ಪುಟ ಸಂಖ್ಯೆ 9ರಲ್ಲಿ ಕ್ರಮ ಸಂಖ್ಯೆ 167ರ ನಂತರ 168 ರಲ್ಲಿ ಸೇರ್ಪಡೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1869

ಜಿ. ರಾಮಚಂದ್ರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ)

ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರಿಗೆ ಭೂಮಿ ಖರೀದಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಕಇ 168 ಎಸ್‌ಡಿಸಿ 2000 ದಿನಾಂಕ: 4.8.2000.
2) ಸರ್ಕಾರಿ ಆದೇಶ ಸಂಖ್ಯೆ: ಸಕಇ 42 ಎಸ್‌ಡಿಸಿ 2004 ದಿನಾಂಕ: 6.6.2006.
3) ಸರ್ಕಾರಿ ಆದೇಶ ಸಂಖ್ಯೆ: ಸಕಇ 80 ಎಸ್‌ಡಿಸಿ 2007 ದಿನಾಂಕ: 21.08.2007.

ಪ್ರಸ್ತಾವನೆ:

ಭೂ ಒಡೆತನದ ಯೋಜನೆಯು 1990–91ನೇ ಸಾಲಿನಿಂದ ಜಾರಿಯಲ್ಲಿದ್ದು, ಈ ಯೋಜನೆ ಅಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿರ ಪ್ರತಿ ಫಲಾನುಭವಿಗೆ 2.00 ಎಕರೆ ಖುಷ್ಕಿ ಭೂಮಿ ಅಥವಾ 1.00 ಎಕರೆ ನೀರಾವರಿ ಭೂಮಿ ಖರೀದಿಸಲು ಅವಕಾಶವಿದೆ. ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಘಟಕ ವೆಚ್ಚವನ್ನು ರೂ. 50,000.00 ರಿಂದ ರೂ. 60,000.00 ಗೆ ಹೆಚ್ಚಿಸಲಾಗಿದ್ದು ಅಂತಹ ಮೊತ್ತದಲ್ಲಿ ಶೇಕಡ 50 ರಷ್ಟು ಸಹಾಯಧನ ಹಾಗೂ ಉಳಿದ ಶೇಕಡ 50 ರಷ್ಟು ಅವಧಿ ಸಾಲವಾಗಿರುತ್ತದೆ. ರಾಜ್ಯದಲ್ಲಿ ಪ್ರತಿ ಹಳ್ಳಿಗೆ ನೋಂದಣಿ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಭೂಮಿ ಖರೀದಿಸಲು ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು. ಅಂತಹ ಮಾರ್ಗಸೂಚಿ ಬೆಲೆಗೆ ಭೂಮಿ ಲಭ್ಯವಾಗದಿದ್ದಲ್ಲಿ ಮಾರ್ಗಸೂಚಿ ಬೆಲೆಯ ಮೇಲೆ ಶೇಕಡ 25ರಷ್ಟು ಹೆಚ್ಚುವರಿಯಾಗಿ ಪಾವತಿಸಲು ಮೇಲೆ (3) ರಲ್ಲಿ ಓದಲಾದ ಆದೇಶದ ಪ್ರಕಾರ ಅವಕಾಶವಿರುತ್ತದೆ.

ಆದಾಗ್ಯೂ ರಾಜ್ಯದ ಕೆಲವು ಜಿಲ್ಲೆಗಳಲ್ಲಿ (ಅಂದರೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬಳ್ಳಾರಿ, ಚಾಮರಾಜನಗರ, ಮೈಸೂರು, ಮಂಡ್ಯ, ಕೊಡಗು) ಹಾಲಿ ಜಾರಿಯಲ್ಲಿರುವ ಅಂತಹ ಬೆಲೆಗೆ ಸಾಕಷ್ಟು ಭೂಮಿ ಲಭ್ಯವಾಗುತ್ತಿಲ್ಲ ಎಂಬುದಾಗಿ ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ತಿಳಿಸಿರುತ್ತಾರೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ: ಸಕಇ 80 ಎಸ್‌ಡಿಸಿ 2007, ಬೆಂಗಳೂರು, ದಿನಾಂಕ: 5ನೇ ಆಗಸ್ಟ್ 2009

ಭೂ ಒಡೆತನ ಯೋಜನೆ ಅಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಮುಖಾಂತರ ಭೂಮಿ ಖರೀದಿಸುವುದರ ಘಟಕ ವೆಚ್ಚವನ್ನು ನೋಂದಾಯಿತ ಬೆಲೆಯ ಎರಡು ಪಟ್ಟುವರೆಗೆ ಏರಿಸಿ ಘಟಕ ವೆಚ್ಚದ ಗರಿಷ್ಠ ಮಿತಿ ರೂ. 2.50 ಲಕ್ಷಗಳನ್ನು ಮೀರದಂತೆ ಖರೀದಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಒಂದು ಪಕ್ಷ, ಈ ಬೆಲೆಯು ನೋಂದಾಯಿತ ಬೆಲೆಯ ಎರಡು ಪಟ್ಟಿಗಿಂತ ಹೆಚ್ಚಾಗಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಇವರ ಅನುಮೋದನೆ ಪಡೆಯಲು ಸರ್ಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಭೂ ಒಡೆತನ ಯೋಜನೆಯ ಇತರೆ ಷರತ್ತುಗಳು ಈ ಹಿಂದೆ ಇದ್ದಂತೆ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1876

ಬಿ. ರಾಮಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರ), ಸಮಾಜ ಕಲ್ಯಾಣ ಇಲಾಖೆ.

ನಗರಾಭಿವೃದ್ಧಿ ಸಚಿವಾಲಯ

ವಿಷಯ: ನಗರ ಯೋಜನಾ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕಛೇರಿಗಳ ಯೋಜನಾ ವಿಭಾಗಗಳನ್ನು/ಹುದ್ದೆಗಳನ್ನು ದಿನಾಂಕ: 1-4-2009 ರಿಂದ ಮುಂದುವರೆಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96(1) ದಿನಾಂಕ:26-8-89

2) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96(2) ದಿನಾಂಕ:26-8-99.

3) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96(3) ದಿನಾಂಕ:26-8-99

4) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96(4) ದಿನಾಂಕ:26-8-98

5) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96(5) ದಿನಾಂಕ:26-8-99

6) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96 ದಿನಾಂಕ:19-8-2000

7) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96(ಭಾ) ದಿನಾಂಕ:2-8-2001

8) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 96(ಭಾ) ದಿನಾಂಕ:3-7-2002

9) ಸರ್ಕಾರಿ ಆದೇಶ ಸಂ:ನಅಇ 33 ಎಂಎಸ್‌ಟಿ 03 ದಿನಾಂಕ:13-2-2003

10) ಕಡತ ಸಂ:ನಯೋ:ಸಿ(1):1450.ಕ.ಮು.ವೆ.2003 ದಿನಾಂಕ:19-1-2004 ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.

11) ಸರ್ಕಾರಿ ಆದೇಶ ಸಂ:ನಅಇ 56 ನಯೋಸೇ 04 ದಿನಾಂಕ:6-4-2004

12) ಸರ್ಕಾರಿ ಆದೇಶ ಸಂ:ನಅಇ 25 ನಯೋಸೇ 05 ದಿನಾಂಕ:6-3-2005.

13) ಸರ್ಕಾರಿ ಆದೇಶ ಸಂ:ನಅಇ 52 ನಯೋಸೇ 06 ದಿನಾಂಕ:22-6-2006.

14) ಸರ್ಕಾರಿ ಆದೇಶ ಸಂ.ನಅಇ 84 ನಯೋಸೇ 07, ದಿನಾಂಕ:23-06-07.

15) ಸರ್ಕಾರಿ ಆದೇಶ ಸಂ.ನಅಇ 48 ನಯೋಸೇ 08, ದಿನಾಂಕ:22-06-08.

16) ನಗರ ಯೋಜನಾ ನಿರ್ದೇಶನಾಲಯದ ಏಕ ಕಡತ ಸಂಖ್ಯೆ: ನಯೋ:ಸಿ(2)ಕಮುವ:08-09, ದಿನಾಂಕ:23-03-09.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ರಿಂದ (15) ರವರೆಗಿನ ಸರ್ಕಾರಿ ಆದೇಶಗಳಲ್ಲಿ ನಗರ ಯೋಜನಾ ಇಲಾಖೆಯ ವಿವಿಧ ಕಛೇರಿಗಳ ಯೋಜನಾ ವಿಭಾಗಗಳು/ಹುದ್ದೆಗಳನ್ನು ದಿನಾಂಕ: 01-04-2008 ರಿಂದ ಒಂದು ವರ್ಷದ ಅವಧಿಗೆ ಮುಂದುವರಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿತ್ತು.

ಮೇಲ್ಕಂಡ ಸರ್ಕಾರಿ ಆದೇಶಗಳಲ್ಲಿ ಹೇಳಲಾಗಿರುವ ಯೋಜನೆಯ ಎಲ್ಲಾ ಸಿಬ್ಬಂದಿ ವರ್ಗದವರನ್ನು ಶಾಶ್ವತವಾಗಿ ಮುಂದುವರೆಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ನಿರ್ದೇಶಕರು ನಗರ ಯೋಜನಾ ಇಲಾಖೆ, ಬೆಂಗಳೂರು ಇವರು ನಗರ ಯೋಜನಾ ವಿವಿಧ ಕಛೇರಿಗಳಿಗೆ ಮಂಜೂರಾಗಿರುವ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ: 01-04-2009 ರಿಂದ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರೆಸುವಂತೆ ಕೋರಿರುತ್ತಾರೆ. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ನಅಇ 46 ನಯೋಸೇ 2009, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ನಗರ ಯೋಜನಾ ಇಲಾಖೆಯಲ್ಲಿನ ಈ ಕೆಳಕಂಡ ಯೋಜನಾ ವಿಭಾಗಗಳ ಕಛೇರಿಗಳ ಹಾಗೂ ಅವುಗಳ ಎದುರಾಗಿ ನಮೂದಿಸಿರುವ ಹುದ್ದೆಗಳನ್ನು ದಿನಾಂಕ 01-04-2009 ರಿಂದ ಒಂದು ವರ್ಷದ ಅವಧಿಗೆ ಮುಂದುವರಿಸಿ ಆದೇಶಿಸಿದೆ.

ಕ್ರ ಸಂ	ಕಛೇರಿಯ ಹೆಸರು	ಹುದ್ದೆಗಳ ಪದನಾಮ	ಹುದ್ದೆಗಳ ಸಂಖ್ಯೆ
1	ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು.	ಶೀಘ್ರಲಿಪಿಗಾರರು	1
		ಬೆರಳಚ್ಚುಗಾರರು	1
		ಒಟ್ಟು	**2**
2	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರ ವಲಯ ಕಛೇರಿ, ಧಾರವಾಡ	ನಗರ ಮತ್ತು ಗ್ರಾ ಯೋಜನಾ ಹೆಚ್ಚುವರಿ ನಿರ್ದೇಶಕರು	1
		ನಗರ ಮತ್ತು ಗ್ರಾ ಯೋಜನಾ ಸಹಾಯಕ ನಿರ್ದೇಶಕರು	1
		ನಗರ ಯೋಜಕ	1

ಕ್ರ ಸಂ	ಕಛೇರಿಯ ಹೆಸರು	ಹುದ್ದೆಗಳ ಪದನಾಮ	ಹುದ್ದೆಗಳ ಸಂಖ್ಯೆ
	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರ ವಲಯ ಕಛೇರಿ, ಧಾರವಾಡ	ಸಹಾಯಕ ನಗರ ಯೋಜಕ	2
		ಛಾಯಾ ಮುದ್ರಕರು	1
		ಕಛೇರಿ ಅಧೀಕ್ಷಕರು	1
		ವ್ಯವಸ್ಥಾಪಕರು	1
		ಪ್ರಥಮ ದರ್ಜೆ ಸಹಾಯಕರು	3
		ದ್ವಿತೀಯ ದರ್ಜೆ ಸಹಾಯಕರು	2
		ಶೀಘ್ರಲಿಪಿಗಾರರು	1
		ಬೆರಳಚ್ಚುಗಾರರು	1
		ವಾಹನ ಚಾಲಕರು	1
		ಅನುಚಾರಕ	1
		ಗ್ರೂಪ್–ಡಿ	3
		ಒಟ್ಟು	**20**
3	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ಯೋಜನಾ ವಿಭಾಗ, ಬೆಂಗಳೂರು.	ನಗರ ಮತ್ತು ಗ್ರಾ. ಯೋಜನಾ ಉಪ ನಿರ್ದೇಶಕರು	1
		ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ಶೀಘ್ರಲಿಪಿಗಾರರು	1
		ಬೆರಳಚ್ಚುಗಾರರು	1
		ವಾಹನ ಚಾಲಕರು	1
		ಒಟ್ಟು	**5**
4	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ವಿನ್ಯಾಸ ವಿಭಾಗ, ಬೆಂಗಳೂರು	ನಗರ ಮತ್ತು ಗ್ರಾ. ಯೋಜನಾ ಉಪ ನಿರ್ದೇಶಕರು	1
		ಶೀಘ್ರಲಿಪಿಗಾರರು	1
		ಪ್ರಥಮ ದರ್ಜೆ ಸಹಾಯಕರು	1
		ವಾಹನ ಚಾಲಕರು	1
		ಗ್ರೂಪ್–ಡಿ	1
		ಒಟ್ಟು	**5**
5	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಬಳ್ಳಾರಿ	ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ಪ್ರಥಮ ದರ್ಜೆ ಸಹಾಯಕರು	1
		ಬೆರಳಚ್ಚುಗಾರರು	1
		ವಾಹನ ಚಾಲಕರು	1
		ಮೋಜಣಿ ಸಹಾಯಕರು	3
		ಸೇವಕ	1
		ಒಟ್ಟು	**8**
6	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಚಿತ್ರದುರ್ಗ	ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ನಗರ ಯೋಜಕ	1
		ಸಹಾಯಕ ನಗರ ಯೋಜಕ	1
		ಪ್ರಥಮ ದರ್ಜೆ ಸಹಾಯಕರು	1
		ಬೆರಳಚ್ಚುಗಾರ	1
		ವಾಹನ ಚಾಲಕರು	1
		ಮೋಜಣಿ ಸಹಾಯಕರು	2
		ಸೇವಕ	1
		ಒಟ್ಟು	**9**

ಕ್ರ ಸಂ	ಕಛೇರಿಯ ಹೆಸರು	ಹುದ್ದೆಗಳ ಪದನಾಮ	ಹುದ್ದೆಗಳ ಸಂಖ್ಯೆ
7	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಶಿರಸಿ	ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ಪ್ರಥಮ ದರ್ಜೆ ಸಹಾಯಕರು	1
		ಬೆರಳಚ್ಚುಗಾರರು	1
		ಒಟ್ಟು	3
8	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಬಾಗಲಕೋಟೆ	ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ರೇಖಿಕ	1
		ಪ್ರಥಮ ದರ್ಜೆ ಸಹಾಯಕರು	1
		ಬೆರಳಚ್ಚುಗಾರರು	1
		ಒಟ್ಟು	4
9	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಕೋಲಾರ	ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ಸಹಾಯಕ ನಗರ ಯೋಜಕ	1
		ಪ್ರಥಮ ದರ್ಜೆ ಸಹಾಯಕರು	1
		ಬೆರಳಚ್ಚುಗಾರ	1
		ಛಾಯಾಮುದ್ರಕ	1
		ವಾಹನ ಚಾಲಕರು	1
		ಒಟ್ಟು	6
10	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಗದಗ	ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ಸಹಾಯಕ ನಗರ ಯೋಜಕ	3
		ರೇಖಿಕ	1
		ಪ್ರಥಮ ದರ್ಜೆ ಸಹಾಯಕರು	1
		ಗ್ರೂಪ್-ಡಿ	1
		ಒಟ್ಟು	7
11	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ	ನಗರ ಮತ್ತು ಗ್ರಾ. ಯೋಜನಾ ಸಹಾಯಕ ನಿರ್ದೇಶಕರು	1
		ನಗರ ಯೋಜಕ	2
		ಸಹಾಯಕ ನಗರ ಯೋಜಕ	1
		ಛಾಯಾಮುದ್ರಕ	1
		ಪ್ರಥಮ ದರ್ಜೆ ಸಹಾಯಕರು	1
		ಬೆರಳಚ್ಚುಗಾರ	1
		ವಾಹನ ಚಾಲಕರು	1
		ಗ್ರೂಪ್-ಡಿ	3
		ಒಟ್ಟು	11
12	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಧಾರವಾಡ	ಬೆರಳಚ್ಚುಗಾರ	1
		ಗ್ರೂಪ್-ಡಿ	1
		ಒಟ್ಟು	2
13	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ದಾವಣಗೆರೆ	ಪ್ರಥಮ ದರ್ಜೆ ಸಹಾಯಕ	1
		ಬೆರಳಚ್ಚುಗಾರ	1
		ಒಟ್ಟು	2

ಕ್ರ ಸಂ	ಕಛೇರಿಯ ಹೆಸರು	ಹುದ್ದೆಗಳ ಪದನಾಮ	ಹುದ್ದೆಗಳ ಸಂಖ್ಯೆ
14	ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ರಾಯಚೂರು	ಬೆರಳಚ್ಚುಗಾರ	1
		ಒಟ್ಟು	**1**

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2217–ನಗರಾಭಿವೃದ್ಧಿ–05 ಇತರೆ ನಗರಾಭಿವೃದ್ಧಿ ಯೋಜನೆಗಳು–001– ನಿರ್ದೇಶನ ಮತ್ತು ಆಡಳಿತ–1–01ರ ಅಡಿಯಲ್ಲಿ 2009–10 ರ ಸಾಲಿನಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಇಲಾಖಾ ಕಾರ್ಯದರ್ಶಿಗಳಿಗೆ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ: 10–7–96 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1879

ಎಸ್.ಎನ್. ಕೃಷ್ಣಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಕಂದಾಯ ಸಚಿವಾಲಯ

ವಿಷಯ: ಶ್ರೀ ಎಂ. ವಿಜಯಚಂದ್ರ ಮತ್ತು ಶ್ರೀ ಎಂ. ಎಸ್. ವೆಂಕಟೇಶ್‌ಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು, ಇವರ ಮೇಲಿನ ಆರೋಪಗಳ ಬಗ್ಗೆ ಜಂಟಿ ಇಲಾಖಾ ವಿಚಾರಣೆ – ಅಂತಿಮ ಆದೇಶ.

ಓದಲಾಗಿದೆ:
1) ಸರ್ಕಾರದ ತಿಳುವಳಿಕೆ ಪತ್ರ ಸಂಖ್ಯೆ. ಕಂಇ 120 ಎಂಇಟಿ 95 ದಿ: 29.03.2000.
2) ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಇವರ ಲಿಖಿತ ಹೇಳಿಕೆ ದಿನಾಂಕ: 24.04.2000.
3) ಶ್ರೀ ಎಂ. ವಿಜಯಚಂದ್ರ ಇವರ ಲಿಖಿತ ಹೇಳಿಕೆ ದಿನಾಂಕ : 15.05.2000
4) ಸರ್ಕಾರದ ಆದೇಶ ಸಂಖ್ಯೆ : ಕಂಇ 120 ಎಂಇಟಿ 95 ದಿನಾಂಕ : 19.03.2001
5) ವಿಚಾರಣಾಧಿಕಾರಿಗಳು ವಿಚಾರಣಾ ವರದಿ ದಿನಾಂಕ : 31.05.2002

ಪ್ರಸ್ತಾವನೆ:

ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಸೇವಾ ವಿಭಾಗದಲ್ಲಿ ರೂ.4,57,301/– ಗಳು ದುರುಪಯೋಗವಾಗಿರುವುದು ದಿನಾಂಕ: 01.01.93 ರಿಂದ 30.06.95 ರವರೆಗಿನ ಲೆಕ್ಕ ಪತ್ರಗಳನ್ನು ವಿಶೇಷ ಲೆಕ್ಕ ಪರಿಶೋಧನಾಧಿಕಾರಿಗಳು ಮಾಡಿದ ಆಡಿಟ್ ವರದಿಯಿಂದ ತಿಳಿದು ಬಂದ ಕಾರಣ ಸದರಿ ಅವಧಿ ದಿನಾಂಕ:01.01.93 ರಿಂದ 30.06.95 ರವರೆಗೆ ಈ ಕೆಳಕಂಡ ಅಧಿಕಾರಿಗಳು ಸದರಿ ದೇವಾಲಯದ ಸೇವಾ ವಿಭಾಗದಲ್ಲಿ ಕಾರ್ಯನಿರ್ವಹಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳಿಂದ ಈ ಕೆಳಕಂಡಂತೆ ಹಣ ದುರುಪಯೋಗವಾಗಿರುತ್ತದೆಂದು:

ಕ್ರ. ಸಂ.	ಅಧಿಕಾರಿಗಳ ಹೆಸರು	ದುರುಪಯೋಗವಾಗಿರುವ ಹಣ
1.	ಶ್ರೀ ರಾಮಾಜಿ ಹೆಗ್ಡೆ ದಿನಾಂಕ:01.01.93 ರಿಂದ 30.06.93 ರವರೆಗೆ	ರೂ. 93,850/–
2.	ಶ್ರೀ ಎಂ. ವಿಜಯಚಂದ್ರ ದಿನಾಂಕ:01.07.93 ರಿಂದ 27.10.93 ರವರೆಗೆ	ರೂ. 5,201/–
3.	ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ ದಿನಾಂಕ:28.10.93 ರಿಂದ 30.06.95 ರವರೆಗೆ	ರೂ. 3,58,250/–

ಈ ಮೇಲ್ಕಂಡ 3 ಜನ ಅಧಿಕಾರಿಗಳ ಪೈಕಿ ಶ್ರೀ ರಾಮಾಜಿ ಹೆಗ್ಡೆರವರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಹಾಗೂ ದುರುಪಯೋಗದ ಘಟನೆ ನಡೆದು 4 ವರ್ಷಗಳಿಗೂ ಮೇಲ್ಪಟ್ಟಿರುವುದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿಯಮಗಳಲ್ಲಿ ತೊಡಕುಂಟಾಗಿರುವುದರಿಂದ ಸದರಿಯವರಿಂದ ದುರುಪಯೋಗವಾಗಿರುವ ಮೊತ್ತದ ವಸೂಲಿ ಬಗ್ಗೆ ಪ್ರತ್ಯೇಕ ಕ್ರಮ ಕೈಗೊಳ್ಳುತ್ತಿದೆಯೆಂದು, ಶ್ರೀ ಎಂ.ವಿಜಯಚಂದ್ರ ಮತ್ತು ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ ಇವರುಗಳಿಗೆ ಮೇಲೆ (1) ರಲ್ಲಿ ಓದಲಾದ ತಿಳುವಳಿಕೆ ಪತ್ರದಲ್ಲಿ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ ಇವರು ಮೇಲೆ (2) ರಲ್ಲಿ ಓದಲಾದ ದಿನಾಂಕ: 24.04.2000ರ ತಮ್ಮ ಲಿಖಿತ ಹೇಳಿಕೆಯಲ್ಲಿ ಶ್ರೀ ರಾಮ್‌ಜಿ ಹೆಗ್ಡೆಯವರು ಶ್ರೀ ವಿಜಯಚಂದ್ರರವರಿಗೆ ದಿನಾಂಕ: 30.06.93 ರಂದು ಪ್ರಭಾರ ವಹಿಸಿಕೊಡುವಾಗ ದೇವಳಕ್ಕೆ ಜಮಾ ಆಗಲು ರೂ. 1,40,715/- ಗಳು ಬಾಕಿ ಇರುವ ಬಗ್ಗೆ ದಾಖಲಿಸಿರುತ್ತಾರೆ. ದಿನಾಂಕ: 28.10.93 ರಂದು ಶ್ರೀ ವಿಜಯಚಂದ್ರರವರು ತನಗೆ ಪ್ರಭಾರ ವಹಿಸಿಕೊಡುವಾಗ ರೂ. 2,74,408/-ಗಳು ಬಾಕಿ ಇರುವುದನ್ನು ದಾಖಲಿಸಿದ್ದಾರೆ; ಆದುದರಿಂದ ಒಟ್ಟು ಮೊಬಲಗು ರೂ. 3,58,250/- ಗಳಲ್ಲಿ ರೂ. 2,74,400/- ಗಳು ತನಗೆ ಪ್ರಭಾರ ವಹಿಸಿಕೊಡುವ ಮೊದಲೇ ದುರುಪಯೋಗವಾಗಿರುವುದು ಸ್ಪಷ್ಟವಾಗಿರುತ್ತದೆ. ಈ ದುರುಪಯೋಗವು ದಿನಾಂಕ: 01.01.93 ರಿಂದಲೇ ಪ್ರಾರಂಭವಾಗಿರುವುದು ಲೆಕ್ಕ ಪರಿಶೋಧನೆಯಿಂದ ತಿಳಿದುಬರುತ್ತದೆ; ಆದುದರಿಂದ ಸದರಿ ಹಣ ದುರುಪಯೋಗವು ತನ್ನ ಅವಧಿಯಲ್ಲಿ ನಡೆದಿರುವುದಿಲ್ಲವೆಂದು ತಾನು ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ ಅವಧಿಯಲ್ಲಿ ದುರುಪಯೋಗವಾಗಿರುವ ಬಗ್ಗೆ ಇರುವ ಮೊಬಲಗು ದಿನಾಂಕ: 15.05.95 ರಿಂದ ರಶೀದಿ ನಂ. 295 ರಲ್ಲಿ ರೂ. 33,117-00 ಗಳನ್ನು ದಿನಾಂಕ: 13.06.95 ರಲ್ಲಿ ರಶೀದಿ ನಂ. 334 ರಲ್ಲಿ ರೂ. 40,000/- ಗಳನ್ನು ಮತ್ತು ರಶೀದಿ ಸಂ. 4535 ರಲ್ಲಿ ರೂ. 36,000/- ಗಳನ್ನು ಒಟ್ಟು ರೂ. 1,09,117/- ಗಳನ್ನು ತಾನು ವಸೂಲಿ ಮಾಡಿ ದೇವಾಲಯದ ನಿಧಿಗೆ ಜಮಾ ಮಾಡಿರುತ್ತೇನೆಂದು, ಆದುದರಿಂದ ತನ್ನ ಅವಧಿಯಲ್ಲಿ ಯಾವುದೇ ಹಣ ದುರುಪಯೋಗವಾಗಿಲ್ಲವೆಂದು ತಿಳಿಸಿರುತ್ತಾರೆ.

ಅಲ್ಲದೆ ತಾನು ಪ್ರಭಾರ ವಹಿಸಿಕೊಂಡ ನಂತರ ಹಣ ದುರುಪಯೋಗದ ಬಗ್ಗೆ ಪರಿಶೀಲಿಸಿ, ಸೇವಾ ಕೌಂಟರ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಅಶೋಕ್ ಕುಮಾರ್‌ರವರನ್ನು ಅಮಾನತ್ತುಗೊಳಿಸಿ ವಿಶೇಷ ಲೆಕ್ಕ ಪರಿಶೋಧನೆ ಮಾಡಿಸಿ ವರದಿಯೊಂದಿಗೆ ಸ್ಥಳೀಯ ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ದಾಖಲಿಸಿ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ತಿಳಿಸಿ, ಹಣ ದುರುಪಯೋಗವು ತಾನು ಪ್ರಭಾರ ವಹಿಸಿಕೊಳ್ಳುವುದಕ್ಕೆ ಮುಂಚಿತವಾಗಿ ನಡೆದಿರುವುದರಿಂದ ತನ್ನನ್ನು ಆರೋಪದಿಂದ ಮುಕ್ತರನ್ನಾಗಿಸುವಂತೆ ಕೋರಿರುತ್ತಾರೆ.

ಶ್ರೀ ಎಂ. ವಿಜಯಚಂದ್ರ ಇವರು ಮೇಲೆ (3) ರಲ್ಲಿ ಓದಲಾದ ದಿನಾಂಕ: 15.05.2000ರ ತಮ್ಮ ಲಿಖಿತ ಹೇಳಿಕೆಯಲ್ಲಿ ತಾನು ಯಾವುದೇ ತಪ್ಪನ್ನು ಮಾಡಿಲ್ಲವೆಂದೂ, ಆದಾಗ್ಯೂ ತನ್ನ ಅವಧಿಯಲ್ಲಿ ದುರುಪಯೋಗವಾಗಿರುವ ರೂ. 5,201/- ಗಳನ್ನು ಕಟ್ಟಲು ಸಿದ್ಧನಿದ್ದೇನೆಂದು, ತನ್ನ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಧಿಕಾರಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ನೀಡಿರುವ ವರದಿಯ ಹಿನ್ನೆಲೆಯಲ್ಲಿ ಮತ್ತು ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಇದನ್ನು ಕೂಲಂಕುಷವಾಗಿ ವಿಚಾರಣೆ ಮಾಡಲು ಸರ್ಕಾರವು ತೀರ್ಮಾನಿಸಿ ಮೇಲೆ (4) ರಲ್ಲಿ ಓದಲಾದ ದಿನಾಂಕ: 19.03.2001ರ ಆದೇಶದಲ್ಲಿ ಶ್ರೀ ಎಂ.ಜೆ. ಇಂದ್ರಕುಮಾರ್, ನಿವೃತ್ತ ಸೆಷನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿಯವರು ವಿವರವಾದ ಇಲಾಖಾ ವಿಚಾರಣೆ ನಡೆಸಿ ಮೇಲೆ (5) ರಂತೆ ದಿನಾಂಕ: 31.05.2002 ರಂದು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಆರೋಪಿತ ಅಧಿಕಾರಿಯಾದ ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿಯವರ ಮೇಲೆ ಮಾಡಿರುವ ಆಪಾದನೆಯನ್ನು ಸಾಬೀತುಪಡಿಸುವಲ್ಲಿ ಯಾವ ಸಾಕ್ಷ್ಯಾಧಾರಗಳನ್ನು ಒದಗಿಸದೇ ಇರುವುದರಿಂದ ಇವರ ಮೇಲೆ ಮಾಡಿರುವ ಆಪಾದನೆಯನ್ನು ಸಾಬೀತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು ವಿಫಲಗೊಂಡಿರುವುದರಿಂದ ಅವರ ಮೇಲಿನ ಆರೋಪವು ಸಾಬೀತಾಗಿಲ್ಲವೆಂದು ಮತ್ತು ಶ್ರೀ ಎಂ. ವಿಜಯಚಂದ್ರ ಇವರು ತನ್ನ ಮೇಲೆ ಮಾಡಿರತಕ್ಕ ಆಪಾದನೆಯನ್ನು ತಾವೇ ಒಪ್ಪಿಕೊಂಡಿರುವುದರಿಂದ ಸದರಿಯವರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆಯೆಂದು ವಿಚಾರಧಿಕಾರಿಯವರು ಅಭಿಪ್ರಾಯಪಟ್ಟಿರುತ್ತಾರೆ.

ವಿಚಾರಣಾಧಿಕಾರಿಗಳ ವಿಚಾರಣಾ ವರದಿ, ಆಪಾದಿತರ ಲಿಖಿತ ಹೇಳಿಕೆ ಮತ್ತು ಸಾಕ್ಷ್ಯಾಧಾರಗಳನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಿಕೊಂಡು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 120 ಎಂಇಟಿ 95, ಬೆಂಗಳೂರು, ದಿನಾಂಕ: 29ನೇ ಜುಲೈ 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು, ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ, ನಿವೃತ್ತ ಗ್ರೂಪ್-ಎ ಅಧಿಕಾರಿ ಇವರ ವಿರುದ್ಧದ ಆರೋಪಗಳು ವಿಚಾರಣಾ ವರದಿಯಲ್ಲಿ ಸಾಬೀತಾಗಿಲ್ಲದಿರುವುದರಿಂದ ಸರ್ಕಾರವು ಇವರನ್ನು ದೋಷಮುಕ್ತರನ್ನಾಗಿಸಿ ಆದೇಶಿಸಿದೆ.

ಪ್ರಕರಣದ ಇನ್ನೊಬ್ಬ ಆರೋಪಿಯಾದ ಶ್ರೀ ಎಂ. ವಿಜಯಚಂದ್ರ, ನಿವೃತ್ತ ಗ್ರೂಪ್-ಬಿ ಅಧಿಕಾರಿ ಇವರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1880

ಜಿ. ರಾಮಚಂದ್ರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ವಿ.ವಿ. ಬ್ಯಾಲಿಹಾಳ್, ನಿವೃತ್ತ ಅಭಿಯೋಗ ಉಪ ನಿರ್ದೇಶಕರು, ಬೆಂಗಳೂರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ) (1) ರ ಸೌಲಭ್ಯಕ್ಕೆ ಪರಿಗಣಿಸುವ ಕುರಿತು.

ಓದಲಾಗಿದೆ:
1) ಸರ್ಕಾರದ ಅಧಿಸೂಚನೆ–। ಸಂಖ್ಯೆ. ಲಾ 67 ಪಿಪಿಇ 82, ದಿ: 22.12.82
2) ಸರ್ಕಾರದ ಆದೇಶದ ಸಂ. ಲಾ 69 ಪಿಪಿಇ 86, ದಿನಾಂಕ: 21/23.10.1986
3) ಸದರಿ ಅಧಿಕಾರಿಯವರ ಮನವಿ ದಿನಾಂಕ: 14.04.2009
4) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಇವರ ಪತ್ರ ಸಂ. ಡಿಪಿಎನ್/ಲೆಕ್ಕ–1/313/08–09 ದಿನಾಂಕ: 22.04.2008

ಪ್ರಸ್ತಾವನೆ:

ಶ್ರೀ ವಿ.ವಿ. ಬ್ಯಾಲಿಹಾಳ್, ನಿವೃತ್ತ ಅಭಿಯೋಗ ಉಪ ನಿರ್ದೇಶಕರು, ಬೆಂಗಳೂರು, ಇವರು ಮೇಲೆ (1) ರಲ್ಲಿ ಓದಲಾದ ದಿನಾಂಕ :22.12.82ರ ಸರ್ಕಾರದ ಅಧಿಸೂಚನೆಯ ಕ್ರ. ಸಂ. 11ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ:01.01.1983 ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ:21/23.10.1986ರ ಸರ್ಕಾರದ ಆದೇಶದನ್ವಯ ಸದರಿ ನಿವೃತ್ತ ಅಧಿಕಾರಿಯ ಜನ್ಮ ದಿನಾಂಕವನ್ನು 12.05.1949 ಎಂದು ಒಪ್ಪಲಾಗಿದೆ.

ಮೇಲೆ (3) ರಲ್ಲಿ ಓದಲಾದ ಮನವಿಯಲ್ಲಿ, ಸದರಿ ನಿವೃತ್ತ ಅಧಿಕಾರಿಯವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ) (i)ರ ರನ್ವಯ ಹೆಚ್ಚುವರಿ ಸೇವೆಗೆ ಅರ್ಹರಿದ್ದು, ಸದರಿಯವರ ಅರ್ಹತಾದಾಯಕ ಸೇವೆಗೆ ಹೆಚ್ಚುವರಿ ಸೇವೆಯನ್ನು ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ದಿನಾಂಕ: 22.04.2009ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು, ಇವರು ಶ್ರೀ ವಿ.ವಿ. ಬ್ಯಾಲಿಹಾಳ್, ನಿವೃತ್ತ ಅಭಿಯೋಗ ಉಪ ನಿರ್ದೇಶಕರು, ಬೆಂಗಳೂರು, ಇವರು ದಿನಾಂಕ: 01.01.1983 ರಂದು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಹಾಜರಾಗಿರುತ್ತಾರೆ. ಇವರ ಜನ್ಮ ದಿನಾಂಕ:12.05.1949 ಆಗಿರುತ್ತದೆ. ಸದರಿ ಅಧಿಕಾರಿಯು 33 ವರ್ಷ, 07 ತಿಂಗಳು, 19 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ) (1) ರ ಪ್ರಕಾರ ನಿವೃತ್ತಿ ವೇತನಕ್ಕೆ ಮಾತ್ರ ಮೂರು ವರ್ಷಗಳ ಸೇವೆಯನ್ನು ಹೆಚ್ಚುವರಿಯಾಗಿ ಸದರಿ ಅಧಿಕಾರಿಯ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡಲು ಸರ್ಕಾರವು ಆದೇಶವನ್ನು ಹೊರಡಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ; ಒಇ 501 ಪಿಪಿಇ 2008, ಬೆಂಗಳೂರು, ದಿನಾಂಕ: 30ನೇ ಜುಲೈ 2009

ಶ್ರೀ ವಿ.ವಿ. ಬ್ಯಾಲಿಹಾಳ್, ನಿವೃತ್ತ ಅಭಿಯೋಗ ಉಪ ನಿರ್ದೇಶಕರು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ, 247 (ಎ) (1) ರನ್ವಯ ಮೂರು ವರ್ಷಗಳ ಅಧಿಕ ಸೇವೆಯನ್ನು ಶ್ರೀಯುತರ ನಿವೃತ್ತಿ ವೇತನಕ್ಕೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. ಆಈ 528 ವೆಚ್ಚ–11/2009, ದಿನಾಂಕ: 01.07.2009ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಪಿ.ಆರ್. 1884

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು (ಸ್ವತಂತ್ರ ಪ್ರಭಾರ) ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ, ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಓದಲಾಗಿದೆ:
1) ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಡಿಪಿಎನ್. ಸಿಶಾ 1:99:2009–10 ದಿನಾಂಕ : 10.07.2009.
2) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಎಲ್–23/ಸಿಆರ್–7/2009/ಶಿವಮೊಗ್ಗ, ದಿನಾಂಕ: 09.07.2009.

ಪ್ರಸ್ತಾವನೆ:

ಮೇಲೆ (1) ರಲ್ಲಿ ದಿನಾಂಕ: 10.07.2009ರ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರವರ ಪತ್ರ ಮತ್ತು ಮೇಲೆ (2) ರಲ್ಲಿ ದಿನಾಂಕ: 09.07.2009ರ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರಗಳಲ್ಲಿ ಶಿವಮೊಗ್ಗ ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:7/2009ರ ಪ್ರಕರಣದಲ್ಲಿ ಆರೋಪಿಯಾಗಿರುವ ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ, ಸರ್ಕಾರಿ ಅಭಿಯೋಜಕರು (ಸ್ವತಂತ್ರ ಪ್ರಭಾರ), ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಶಿವಮೊಗ್ಗ, ಇವರನ್ನು ದಿನಾಂಕ:04.07.2009 ರಂದು ಮಧ್ಯಾಹ್ನ 4.30 ಗಂಟೆ ಸುಮಾರಿಗೆ ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ: 244/2009ರಲ್ಲಿ ಶ್ರೀ ಎಂ. ಲೋಕೇಶ್ ಈಸೂರು, ನ್ಯಾಯವಾದಿಗಳು, ಶಿವಮೊಗ್ಗ, ಇವರಿಂದ ಆರೋಪಿಯ ಜಾಮೀನು ಅರ್ಜಿಗೆ ತಕರಾರು ಸಲ್ಲಿಸಲು ರೂ. 500.00 ಲಂಚ ಪಡೆಯುವಾಗ ಶಿವಮೊಗ್ಗ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿರುವುದಾಗಿ ತಿಳಿಸಿರುತ್ತಾರೆ. ಸದರಿ ಆರೋಪಿತ ಸರ್ಕಾರಿ ಅಧಿಕಾರಿಯವರ ಮೇಲೆ ಸದರಿ ಲೋಕಾಯುಕ್ತ ಪೊಲೀಸರು ಗುನ್ನೆ ನಂ. 7/2009, ಕಲಂ 7, 13 (1) (ಡಿ) ಸಹವಾಚಕ 13 (2) ಲಂಚ ಪ್ರತಿಬಂಧಕ ಕಾಯಿದೆ 1988ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ಸದರಿ ಅಧಿಕಾರಿಯನ್ನು ದಸ್ತಗಿರಿ ಮಾಡಿ ತನಿಖೆ ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ಆದ ಕಾರಣ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1) (ಎ) ರ ರೀತ್ಯಾ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ದಿನಾಂಕ:04.07.2009 ರಿಂದ ಜಾರಿಗೆ ಬರುವಂತೆ ನಿಲಂಬನೆಯಲ್ಲಿಟ್ಟು ಆದೇಶ ಹೊರಡಿಸುವಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ಒಇ 339 ಪಿಪಿಇ 2009, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಕ್ಕಾಗಿ ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು (ಸ್ವತಂತ್ರ ಪ್ರಭಾರ), ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಶಿವಮೊಗ್ಗ, ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10 (1) (ಎ)ರ ಅನುಸಾರ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ದಿನಾಂಕ:04.07.2009 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿದೆ.

ಸದರಿ ಅಧಿಕಾರಿಯವರು ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ 1957ರ ನಿಯಮ 98ರ ಅನುಸಾರ ಅಮಾನತ್ತಿನ ಅವಧಿಯಲ್ಲಿ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ನೇಮಕಾತಿ ಪ್ರಾಧಿಕಾರ/ಮೇಲಾಧಿಕಾರಿಯ ಪೂರ್ವಾನುಮತಿಯನ್ನು ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1885

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಡಾ: ನಿಶ್ಚಯ್ ಆರ್. ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾರನಹಳ್ಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ, ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು, ಇವರ ಪತ್ರ ಸಂಖ್ಯೆ ಜೆಆರ್ಓ (2) 322/2008–09 ದಿನಾಂಕ: 07/05/2009.

ಪ್ರಸ್ತಾವನೆ:

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರು ಮೇಲೆ ಓದಲಾದ ಪತ್ರದಲ್ಲಿ ಡಾ: ನಿಶ್ಚಯ್ ಆರ್., ಇವರು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡು ಸರ್ಕಾರದ ಅಧಿಸೂಚನೆ ಸಂಖ್ಯೆ ಆಕುಕ 739 ಹೆಚ್ಎಸ್ಹೆಚ್ 2008, ದಿನಾಂಕ: 09.01.2009 ರನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾರನಹಳ್ಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ, ಇಲ್ಲಿ ದಿನಾಂಕ: 29.01.2009 ರಿಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ನಂತರ ಉನ್ನತ ವ್ಯಾಸಂಗದ ನಿಮಿತ್ತ ಹುದ್ದೆಗೆ ರಾಜೀನಾಮೆ ಸಲ್ಲಿಸಿ, ದಿನಾಂಕ: 31.01.2009 ರಿಂದ ಕರ್ತವ್ಯಕ್ಕೆ ಹಾಜರಾಗದಿರುವುದರಿಂದ ದಿನಾಂಕ:31.01.2009 ರಿಂದಲೇ ಸದರಿ ವೈದ್ಯರ ರಾಜೀನಾಮೆಯನ್ನು ಅಂಗೀಕರಿಸಲು ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ. ಆಕುಕ 169 ಹೆಚ್‌ಎಸ್‌ಹೆಚ್ 2009, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಡಾ: ನಿಶ್ಚಯ್ ಆರ್., ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾರನಹಳ್ಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ, ಇವರು ತಮ್ಮ ಹುದ್ದೆಗೆ ಸಲ್ಲಿಸಿರುವ ರಾಜೀನಾಮೆಯನ್ನು ದಿನಾಂಕ: 31.01.2009 ರಿಂದ ಅನ್ವಯವಾಗುವಂತೆ ಸರ್ಕಾರವು ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ. ಹೇಮನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು–1)

ಪಿ.ಆರ್. 1891

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 144 ಎಲ್‌ಎಸಿ 2009, ಬೆಂಗಳೂರು, ದಿನಾಂಕ: 6ನೇ ಆಗಸ್ಟ್ 2009

ಕರ್ನಾಟಕ ಅಧೀನ ನ್ಯಾಯಾಲಯಗಳಿಗೆ ಸಮಾನ ರೀತಿಯ ಸಿಬ್ಬಂಧಿ ಒದಗಿಸುವ ಕುರಿತಂತೆ ಸಂಖ್ಯೆ: ಲಾ 137 ಎಲ್‌ಎಸಿ 2005, ದಿನಾಂಕ: 25.03.2008ರ ಸರ್ಕಾರಿ ಆದೇಶದಲ್ಲಿ ಸೃಜಿಸಿ ತುಂಬಲು ನೀಡಲಾಗಿರುವ ಷರತ್ತುಗಳಿಗೆ ಒಳಪಟ್ಟು ಮೊದಲನೆಯ ಹಂತವಾಗಿ ವಿವಿಧ ವೃಂದದ 800 (ಎಂಟು ನೂರು) ಹುದ್ದೆಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದ ಪಟ್ಟಿಯಲ್ಲಿ ನಮೂದಿಸಿರುವಂತೆ ರಾಜ್ಯದ ಜಿಲ್ಲಾ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ, (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸರ್ಕಾರದ ಅಧಿಸೂಚನೆ ಸಂಖ್ಯೆ : ಲಾ 144 ಎಲ್‌ಎಸಿ 2009, ದಿನಾಂಕ: 06.08.2009ರ ಅನುಬಂಧ

Sl. No.	District/Unit	Sheristedars	Judgement Writer	Stenographer	F.D.A.	S.D.A.	Total
01	Bangalore City	14	08	07	20	29	78
02	S.C.C. Bangalore	03	01	03	10	10	27
03	Bangalore Rural	03	01	02	07	10	23
04	Bagalkot	03	01	02	08	12	26
05	Belgaum	06	01	04	14	23	48
06	Bellary	03	01	01	05	10	20
07	Bidar	03	01	01	06	09	20
08	Bijapur	04	01	03	08	13	29
09	Chikkaballapur	02	01	01	02	02	08
10	Chikkamagalur	03	01	02	08	11	25
11	C.R.Nagar	02	01	01	04	06	14
12	Chitradurga	03	01	02	07	09	22
13	Davanagere	03	01	02	06	10	22
14	Dharwad	04	01	03	09	13	30
15	D.K. Mangalore	04	01	03	08	15	31
16	Gadag	03	01	01	04	09	18
17	Gulbarga	05	01	04	11	14	35
18	Hassan	04	01	03	09	14	31

Sl. No.	District/Unit	Sheristedars	Judgement Writer	Stenographer	F.D.A.	S.D.A.	Total
19	Haveri	03	01	01	07	10	22
20	Kodagu Madikeri	02	01	01	05	07	16
21	Kolar	02	01	01	05	08	17
22	Koppal	02	01	01	04	06	14
23	Mandya	04	01	03	08	13	29
24	Mysore	05	01	04	12	19	41
25	Raichur	03	01	02	05	06	19
26	Ramanagara	03	01	01	04	06	15
27	Shimoga	04	01	03	08	14	30
28	Tumkur	04	01	03	12	16	36
29	Udupi	03	01	02	05	09	20
30	U.K. Karwar	05	01	03	10	15	34
	TOTAL	**112**	**37**	**70**	**231**	**350**	**800**

ಇ. ಶಿವಾನಂದ

ಪಿ.ಆರ್. 1895 ಸರ್ಕಾರದ ಅಧೀನ ಕಾರ್ಯದರ್ಶಿ (ಅಡಳಿತ-1),

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ವಿವಿಧ ವರ್ಗಗಳ ಮಾರಾಟಗಾರರ ನಮೂದಿತ ಪಟ್ಟಿಯ ಕುರಿತು.

ಓದಲಾಗಿದೆ: 1. ದಿನಾಂಕ: 9.1.2007ರ ಸರ್ಕಾರದ ಆದೇಶ ಸಿಆಸುಇ 74 ವಿಮಅ 2005.

2. ದಿನಾಂಕ: 5.1.2009ರ ಸರ್ಕಾರದ ಆದೇಶ ಸಿಆಸುಇ 74 ವಿಮಅ 2005.

3. ದಿನಾಂಕ: 31.03.2009ರ ಸರ್ಕಾರದ ಆದೇಶ ಸಿಆಸುಇ 74 ವಿಮಅ 2005.

ಪ್ರಸ್ತಾವನೆ:

ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಗಣಕೀಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು, ಪ್ರಿಂಟರ್‌ಗಳು, ಅವುಗಳ ಪೂರಕ ಸಾಧನಗಳು, ವಿವಿಧ ತಂತ್ರಾಂಶಗಳು, ತಂತ್ರಾಂಶ ಸಿದ್ದಪಡಿಸುವ, ನೆಟ್ ವರ್ಕಿಂಗ್, ಯು.ಪಿ.ಎಸ್. ತರಬೇತಿ, ವೆಬ್ ಡಿಸೈನಿಂಗ್, ಡೇಟಾ ಎಂಟ್ರಿ, ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ ಸಾಮಗ್ರಿ/ಸೇವೆಗಳನ್ನು ಪೂರೈಸುವುದಕ್ಕಾಗಿ ನಾನಾ ಸಂಸ್ಥೆಗಳನ್ನು ಸಂಕ್ಷಿಪ್ತಗೊಳಿಸಿ, ಮಾರಾಟಗಾರರ ಪಟ್ಟಿಗೆ ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದ ಮೂಲಕ ಅನುಮೋದನೆ ನೀಡಲಾಗಿತ್ತು. ಸದರಿ ಪಟ್ಟಿಯಲ್ಲಿರುವ ಸಂಸ್ಥೆಗಳ ಸಿಂಧುತ್ವವು 31.12.2008ಗೆ ಕೊನೆಗೊಂಡಿರುತ್ತದೆ. 2009-10ನೇ ಸಾಲಿಗೆ ಹೊಸ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆ ಇನ್ನೂ ಅಂತಿಮವಾಗಿಲ್ಲವಾದ್ದರಿಂದ, ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ಚಾಲ್ತಿಯಲ್ಲಿದ್ದ ಮಾರಾಟಗಾರರ ಪಟ್ಟಿಯ ಸಿಂಧುತ್ವವನ್ನು 31.03.2009ರ ರವರಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಮೂಲಕ ಮತ್ತು 31.07.2009ರವರಿಗೆ ಮೇಲೆ (3) ರಲ್ಲಿ ಓದಲಾದ ಸರ್ಕಾರದ ಆದೇಶದ ಮೂಲಕ ವಿಸ್ತರಿಸಲಾಗಿತ್ತು.

2. ಹೊಸ ಪಟ್ಟಿ ಸಿದ್ದಪಡಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇನ್ನೂ ಅಂತಿಮವಾಗಿಲ್ಲವಾದ್ದರಿಂದ ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ಚಾಲ್ತಿಯಲ್ಲಿದ್ದ ಮಾರಾಟಗಾರರ ಪಟ್ಟಿಯ ಸಿಂಧುತ್ವವನ್ನು 30.09.2009ರವರೆಗೆ ಅಥವಾ ಹೊಸ ಪಟ್ಟಿ ಸಿದ್ದಗೊಳ್ಳುವವರೆಗೆ ಯಾವುದೂ ಮೊದಲೋ ಅಲ್ಲಿಯವರೆಗೆ ಮತ್ತೊಮ್ಮೆ ವಿಸ್ತರಿಸುವುದು ಅವಶ್ಯವಾಗಿದೆ. ಅದರಂತೆ ಕೆಳಕಾಣಿಸಿದ ಸರ್ಕಾರದ ಆದೇಶವನ್ನು ಪ್ರಸ್ತಾಪಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಇಮಅ 2008, ಬೆಂಗಳೂರು, ದಿನಾಂಕ: 1ನೇ ಆಗಸ್ಟ್, 2009

3. ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಗಣಕೀಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು, ಪ್ರಿಂಟರ್‌ಗಳು, ಅವುಗಳ ಪೂರಕ ಸಾಧನಗಳು, ವಿವಿಧ ತಂತ್ರಾಂಶಗಳು, ತಂತ್ರಾಂಶ ಸಿದ್ಧಪಡಿಸುವ, ನೆಟ್ ವರ್ಕಿಂಗ್, ಯು.ಪಿ.ಎಸ್/ ತರಬೇತಿ ವೆಬ್ ಡಿಸೈನಿಂಗ್, ಡೇಟಾ ಎಂಟ್ರಿ ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ ಸಾಮಗ್ರಿ/ಸೇವೆಗಳನ್ನು

ಪೂರೈಸುವುದಕ್ಕಾಗಿ ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿನ ಸಂಸ್ಥೆಗಳ ಸಿಂಧುತ್ವವನ್ನು ದಿನಾಂಕ:30.09.2009ರ ವರೆಗೆ ಅಥವಾ ಹೊಸ ಪಟ್ಟಿ ಸಿದ್ಧಗೊಳ್ಳುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚಂದ್ರಶೇಖರ
ಪೀಠಾಧಿಕಾರಿ-1, ಇ-ಆಡಳಿತ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು)

ಪಿ.ಆರ್. 1901

INFRASTRUCTURE DEVELOPMENT SECRETRIAT

Sub: Release of funds towards cost sharing Railway Project– Kotturu- Harihar new broad gauge railway line project.

Read:
1. GO No. IDD I NSW 2002 dated 22.03.02
2. GO No. IDD 47 NSW 2003 (P) dated 26.03.04
3. GO No. IDD 51 NSW 2004 dated 19.07.2004
4. GO No. IDD 98 NSW 2003 dated 21.10.2006
5. GO No. IDD 98 NSW 2003 dated 20.12.2006
6. GO No. IDD 98 NSW 2003 dated 5.09.2007
7. GO No. IDD 15 NSW 2008 dated 22.10.2008
8. GO No. IDD 15 NSW 2008 dated 17.12.2008
9. GO No. IDD 15 NSW 2008 dated 20.01.2009
10. GO No. IDD 15 NSW 2008 dated 18.02.2009
11. GO No IDD 15 NSW 2008 dated 21.07.2009
12. GO No. Letter No.W.359/CN/BN/IDcCK dated 14.07.2009 of C.A.O. SWR. Bangalore.

Premable:

In the Government Orders referred to at Sl. No. (1) to (11) above Government of Karnataka has so far released an amount of Rs. 130.26 crore towards cost sharing for Kotturu-Harihar New Railway Line Project.

2. The Chief Administrative Officer, South Western Railway, Bangalore in his letter read at Sl No.(12) above has stated that the railways had already spent Rs. 104.06 crores towards Kotturu-Harihar new raily line project and requested for immediate deposit of balance of Rs. 81.39 crores i.e. 2/3 share of Government of Kanrataka. However, in Government Orders read above an amount of Rs. 130.26 crores has so far been released by the State Government. As such the balance to be released by the State Government will be Rs. 71.13 crore instead of Rs. 81.39 crores requested by South Western Railway.

3. The proposal of Railway has been examined and it has been decided to release an amount of Rs. 24.31 crore out of the Budget of Rs. 100.00 crores provided under the Head of Account "5465-01-190-3-05" (Plan) 211 investment towards cost sharing for new railway projects during 2009-10. Hence this order.

Government Order No. IDD 15 NSW 2008, Bangalore, Dated: 4th August 2009

After careful examination of the request of Railways, Government is pleased to release Rs. 24.31 crores (Rupees Twenty Four Crores Thirty One Lakhs only) towards Kotturu-Harihar new railway line being the part of the balance 2/3rd share of Government of Karnataka. The above amount shall be met under the Head of Account "5465-01-190-3-05" (Plan) 211 Investment out of the budget provisions of Rs. 100.00 crores towards cost sharing for new railway projects during 2009-10.

2. The Chief Executive Officer K.R.IDE is authorized to draw the amount on a payees' receipt duly countersigned by the Under Secretary to Government, Infrastucture Development Department and K-RIDE, shall in turn deposit the same with the Financial Advisor and Chief Accounts Officer (Construction), South Western Railway, Bangalore, under intimation to the Government.

3. This order is issued in accordance with the concurrence of Finance Department given vide U.O. Note No.FD 1265 Exp-1/09 dated 31.07.2009.

By order and in the name of Govenor of Karnataka,

N. MANJULA GEETHA

P.R. 1905

Under Secretary to Government,

Infrastructure Development Department

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಹುಬ್ಬಳ್ಳಿಯಲ್ಲಿ ಆರ್ಯಭಟ ಮಾಹಿತಿ ತಂತ್ರಜ್ಞಾನ ಉದ್ಯಾನದ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 25 ಎಂಡಿಎ 2008, ದಿನಾಂಕ: 6.9.2008.

2. ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆರವರ ಪತ್ರ ಸಂಖ್ಯೆ: ಹೆಚ್‌ಡಿಎಂಸಿ: 100:02: 469:09, ದಿನಾಂಕ: 14.07.2009

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ 6.9.2008ರ ಸರ್ಕಾರಿ ಆದೇಶದಲ್ಲಿ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆರವರಿಗೆ ಹುಬ್ಬಳ್ಳಿಯಲ್ಲಿ ಆರ್ಯಭಟ ಮಾಹಿತಿ ತಂತ್ರಜ್ಞಾನ ಉದ್ಯಾನದ ಅಭಿವೃದ್ಧಿ ಯೋಜನೆಗೆ ರೂ. 1.00 ಕೋಟಿ ಅನುದಾನವನ್ನು ಪ್ರಥಮ ಕಂತಾಗಿ ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆರವರ ಪತ್ರದಲ್ಲಿ 2008-09ನೇ ಸಾಲಿನಲ್ಲಿ ಆರ್ಯಭಟ ಮಾಹಿತಿ ತಂತ್ರಜ್ಞಾನ ಉದ್ಯಾನ, ರಸ್ತೆಗಳ ಅಭಿವೃದ್ಧಿಗಾಗಿ ರೂ. 200 ಲಕ್ಷ ಬಿಡುಗಡೆ ಮಾಡಲಾಗಿದ್ದು, ಸದರಿ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು, ಈಗ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಕಂಪನಿಗಳ ಹಂಚಿಕೆಯಾದ ಜಾಗವನ್ನು ಸಂಪೂರ್ಣವಾಗಿ ಅಂದರೆ, ಕಾಂಪೌಂಡ್ ಗೋಡೆ, ಲ್ಯಾಂಡ್ ಸ್ಕೇಪಿಂಗ್, ನೀರು ಸರಬರಾಜು ಯೋಜನೆ, ಜಲಾಗಾರದೊಂದಿಗೆ ವಿದ್ಯುತ್ತೀಕರಣ ಹಾಗೂ ಆಪ್ಟಿಕಲ್ ಕೇಬಲ್ ಅಳವಡಿಸಲು ರೂ. 716 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿ, ಈ ಅನುದಾನವನ್ನು ವಿಶೇಷವಾಗಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಆರ್ಯಭಟ ಮಾಹಿತಿ ತಂತ್ರಜ್ಞಾನ ಉದ್ಯಾನಕ್ಕೆ 2009-10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ 2.00 ಕೋಟಿಗಳ ಅನುದಾನದಲ್ಲಿ ರೂ. 1.00 ಕೋಟಿ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಮಾತಂಇ 25, ಎಂಡಿಎ 2008, ಬೆಂಗಳೂರು, ದಿನಾಂಕ: 10ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಆರ್ಯಭಟ ಮಾಹಿತಿ ತಂತ್ರಜ್ಞಾನ ಉದ್ಯಾನದ ಅಭಿವೃದ್ಧಿಗಾಗಿ 2009-10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ. 2.00 ಕೋಟಿಗಳ ಅನುದಾನದಲ್ಲಿ ರೂ. 1.00 ಕೋಟಿ ಅನುದಾನವನ್ನು (ರೂ. ಒಂದು ಕೋಟಿ ಮಾತ್ರ) ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆರವರಿಗೆ ಹಂಚಿಕೆ ಮಾಡುವ ಸಲುವಾಗಿ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆರವರಿಗೆ ವಿತರಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **"5465-01-190-1-12 ಹುಬ್ಬಳ್ಳಿ ಆರ್ಯಭಟ ಮಾಹಿತಿ ತಂತ್ರಜ್ಞಾನ ಪಾರ್ಕ್ (ಯೋಜನೆ)"** ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಆಇ 1 ಟಿಎಫ್‌ಪಿ 2008, ದಿನಾಂಕ:16.5.2008ರನ್ವಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1906

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಶ್ರೀಮತಿ ಜಯದೇವಿ. ಕೆ.ಹೆಚ್.ಎಸ್., ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ದಾಖಲಾಗಿರುವ ಲಂಚದ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು-ಆದೇಶ.

ಓದಲಾಗಿದೆ:
1. ಪೊಲೀಸ್ ಇನ್ಸ್‌ಪೆಕ್ಟರ್, ಪೊಲೀಸ್ ವಿಂಗ್, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಹೆಸರಿಸಿರುವ ತಿಳುವಳಿಕೆ ಪತ್ರ ಲೋ.ಮೊ.ಸಂಖ್ಯೆ 53/2009 ದಿ:25-7-2009.
2. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆರವರು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರುರವರಿಗೆ ಹೆಸರಿಸಿರುವ ಪತ್ರ ಸಂ.ಉಪನಿ.ಬೆಂ/ನ/ಅಂಕವಿ/ಲೋ. ಪತ್ರ/2009-10/452/ದಿನಾಂಕ:27-7-2009.
3. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರ ಕಛೇರಿಯ ಪತ್ರ ಸಂಖ್ಯೆ ನಿಅಕಇ/ಸಿಬ್ಬಂದಿ/ಮಾಹಿತಿ/2008-09/5931/ ದಿ: 29-07-2009.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 25-07-2009 ರ ಪತ್ರದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್, ಪೊಲೀಸ್ ವಿಂಗ್, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಶ್ರೀಮತಿ ಜಯದೇವಿ.ಕೆ.ಹೆಚ್.ಎಸ್., ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ದಿ:25-7-2009 ರಂದು ಫೀರ್ಯಾದುದಾರರಾದ ಶ್ರೀಮತಿ ರೇನಿಟಾ ಸೋಜಾ ಇವರಿಂದ ಲಂಚದ ಹಣ ರೂ.20,000/- ಗಳನ್ನು ಒತ್ತಾಯಿಸಿ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಯಲ್ಲಿ ಸಿಕ್ಕಿಬಿದ್ದಿದ್ದು, ಅವರನ್ನು ಲಂಚ ಸ್ವೀಕಾರದ ಆರೋಪದ ಮೇಲೆ ದಿ:25-7-2009 ರಂದು ಸಂಜೆ 4.30 ಗಂಟೆಗೆ ದಸ್ತಗಿರಿ ಮಾಡಿರುತ್ತಾರೆಂದು ಹಾಗೂ ಅವರನ್ನು ಘನ 23 ನೇ ಹೆಚ್ಚುವರಿ ಸಿಟಿ ಮತ್ತು ಸಿವಿಲ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುವುದೆಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ರವರಿಗೆ ತಿಳಿಸಿರುತ್ತಾರೆ. ಈ ಸಂಬಂಧದಲ್ಲಿ ಮೇಲೆ (2) ರಲ್ಲಿ ಓದಲಾದ ದಿ:27-7-2009 ರ ಪತ್ರದಲ್ಲಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಇವರು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಶ್ರೀಮತಿ ಜಯದೇವಿ.ಕೆ.ಹೆಚ್.ಎಸ್., ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಲೋಕಾಯುಕ್ತರ ಬಲೆಗೆ ಸಿಕ್ಕಿಬಿದ್ದು ದಸ್ತಗಿರಿ ಆಗಿರುವ ವಿಷಯವನ್ನು ತಿಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿ:29-07-2009 ರ ಪತ್ರದಲ್ಲಿ ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರು ಶ್ರೀಮತಿ ಜಯದೇವಿ.ಕೆ.ಹೆಚ್.ಎಸ್., ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಲೋಕಾಯುಕ್ತರ ಬಲೆಗೆ ಸಿಕ್ಕಿಬಿದ್ದು ದಸ್ತಗಿರಿಯಾಗಿ ಕ.ಸ.ಸೇ.ನಿ 1987 ನಿಯಮ 10 (2) (ಎ) ರೀತ್ಯಾ 48 ಗಂಟೆಗಳಿಗಿಂತ ಹೆಚ್ಚಿನ ಅವಧಿಯಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಿದ್ದರಿಂದ ಸದರಿಯವರನ್ನು ಅಮಾನತ್ತುಗೊಳಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ನಿರ್ದೇಶಕರ ಶಿಫಾರಸ್ಸನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಮಮಇ 420 ಎಸ್‌ಜಿಡಿ 2009, ಬೆಂಗಳೂರು, ದಿನಾಂಕ: 31ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀಮತಿ ಜಯದೇವಿ.ಕೆ.ಹೆಚ್.ಎಸ್., ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರನ್ನು ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ) ನಿಯಮಾವಳಿಗಳು 1957ರ ನಿಯಮ 10(1)(ಎ) ರ ಮೇರೆಗೆ ದಿ:25.7.2009 ರಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು 1957ರ ನಿಯಮ 98(1)ರನ್ವಯ ಜೀವನಾಂಶ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅಲ್ಲದೆ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಸಕ್ಷಮ ಪ್ರಾಧಿಕಾರದ ಲಿಖಿತ ಅನುಮೋದನೆ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ನರಸಿಂಹಯ್ಯ

ಪಿ.ಆರ್. 1907

ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರಭಾರ),

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ವೈದ್ಯಕೀಯ ಮುರುಪಾವತಿ ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಪ್ರಾಧಿಕಾರವನ್ನು ಮುಖ್ಯ ಆಡಳಿತಾಧಿಕಾರಿಗಳಿಗೆ ನೀಡುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ರೂ. 25,000/- ಗಳೊಳಗಿನ ವೈದ್ಯಕೀಯ ಮರುಪಾವತಿಯ ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಮುಖ್ಯ ಆಡಳಿತಾಧಿಕಾರಿ, ಕೆ.ಹೆಚ್.ಎಸ್.ಡಿ.ಆರ್.ಪಿ, ಬೆಂಗಳೂರು, ಇವರಿಗೆ ಪ್ರತ್ಯಾಯೋಜಿಸುವುದು ಆಡಳಿತದ ಹಿತದೃಷ್ಟಿಯಿಂದ ಸೂಕ್ತವೆಂದು ಕಂಡುಬಂದಿರುತ್ತದೆ.

ಆದ್ದರಿಂದ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ/ಕೆ.ಹೆಚ್.ಎಸ್.ಡಿಆರ್.ಪಿ/ಸಿಎಒ/ಎಎಸ್‌ಟಿ/32/2007-08,
ಬೆಂಗಳೂರು, ದಿನಾಂಕ: 30ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ರೂ.25,000/- ಗಳೊಳಗಿನ ವೈದ್ಯಕೀಯ ಮರುಪಾವತಿಯ ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಮುಖ್ಯ ಆಡಳಿತಾಧಿಕಾರಿ, ಕೆ.ಹೆಚ್.ಎಸ್.ಡಿ.ಆರ್.ಪಿ. ಬೆಂಗಳೂರು, ಇವರಿಗೆ ಪ್ರತ್ಯಾಯೋಜಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುಷಮಾ ಗೋಡಬೋಲೆ

ಪಿ.ಆರ್. 1910

ಸರ್ಕಾರದ ಉಪ ಕಾರ್ಯದರ್ಶಿ, ಕೆಹೆಚ್‌ಎಸ್‌ಡಿಆರ್‌ಪಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ವಿಷಯ: ಕೆ.ಹೆಚ್.ಎಸ್.ಡಿ.ಆರ್.ಪಿ. ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್. ಪುರುಷೋತ್ತಮ್ ಕಂಪ್ಯೂಟರ್ ಟೆಕ್ನೀಷಿಯನ್ ರವರಿಗೆ ಸಂಭಾವನೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ. ಆಕುಕ (ಯೋ) 44 ಡಬ್ಲ್ಯೂಬಿಎ 2009, ದಿನಾಂಕ: 28.02.2009.
2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 79 ಎಸ್‌ಆರ್‌ಡಿ 97, ದಿನಾಂಕ: 10.08.1999.
3. ದಿನಾಂಕ: 14.07.2009 ರಂದು ನಡೆದ ಕಾರ್ಯಕ್ರಮ ಚಾಲನಾ ಸಮಿತಿಯ 15ನೇ ಸಭೆಯ ನಡವಳಿಗಳು.

ಪ್ರಸ್ತಾವನೆ:

ಸರ್ಕಾರಿ ನೌಕರನಿಗೆ ವೇತನ ಆಯೋಗದಲ್ಲಿ ವೇತನವನ್ನು ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿ ಮಾನವ ಸಂಪನ್ಮೂಲ ವತಿಯಿಂದ ಗುತ್ತಿಗೆ ಆಧಾರದ ಮೇಲೆ ಪಡೆದಿರುವ ಸಿಬ್ಬಂದಿಯವರಿಗೂ ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸಂಭಾವನೆಯನ್ನು ಹೆಚ್ಚಿಸಲಾಗಿತ್ತು. ಶ್ರೀ ಎನ್. ಪುರುಷೋತ್ತಮ್ ಇವರು ಯೋಜನಾ ಕಛೇರಿಯಿಲ್ಲಿ ಮಾನವ ಸಂಪನ್ಮೂಲ ವತಿಯಿಂದ ಕೆಹೆಚ್‌ಎಸ್‌ಡಿಆರ್‌ಪಿ-ಎನ್‌ಆರ್‌ಹೆಚ್‌ಎಂ ಮತ್ತು ಪ್ರಾಧನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಯೋಜನಾ ಕಛೇರಿಯಲ್ಲಿ ಗಣಕ ಯಂತ್ರಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿಧದ ತಾಂತ್ರಿಕ ಸಲಹೆ ನೀಡುವುದರಲ್ಲಿ, ಅವಶ್ಯವಿದ್ದಲ್ಲಿ ಸೂಕ್ತ ತಾಂತ್ರಿಕ ವ್ಯವಸ್ಥೆಯನ್ನು ಅಳವಡಿಸುವುದರಲ್ಲಿ, ಸಣ್ಣ ಪುಟ್ಟ ದುರಸ್ತಿಗಳನ್ನು ಕೈಗೊಂಡು, ಸಭೆಗಳಲ್ಲಿ ಸೂಕ್ತ ವ್ಯವಸ್ಥೆ ಮಾಡುವುದರಲ್ಲಿ ಸಹಕರಿಸುತ್ತಿದ್ದಾರೆ. ಇಲ್ಲಿಯವರೆಗೆ ಇವರ ಸೇವೆಯು ತೃಪ್ತಿಕರವಾಗಿರುತ್ತದೆ.

ಉಲ್ಲೇಖ (1) ರನ್ವಯ ಮಾನವ ಸಂಪನ್ಮೂಲ ನೌಕರರಿಗೆ ಸಂಭಾವನೆ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಶ್ರೀ ಎನ್. ಪುರುಷೋತ್ತಮ್ ಇವರ ಸಂಭಾವನೆಯನ್ನು ಹೆಚ್ಚಿಸಿರುವುದಿಲ್ಲ. ಸದರಿ ಕಂಪ್ಯೂಟರ್ ಟೆಕ್ನೀಷಿಯನ್ ಇವರಿಗೆ ರೂ.8000.00 ಗಳ ಸಂಭಾವನೆಯನ್ನು ನಿಗದಿಪಡಿಸಿದ್ದು, ಸರ್ಕಾರದಲ್ಲಿ ಇನ್‌ಪುಟ್/ಔಟ್‌ಪುಟ್ ಮ್ಯಾನೇಜರ್, ಹಾರ್ಡ್‌ವೇರ್ ಸೂಪರ್‌ವೈಸರ್ ಮತ್ತು ಅಸಿಸ್ಟೆಂಟ್ ಸೂಪರ್‌ವೈಸರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಉಲ್ಲೇಖ (2) ರ ಅಧಿಸೂಚನೆ ಸಂಖ್ಯೆ ಡಿಪಿಎಆರ್ 79 ಎಸ್‌ಆರ್‌ಡಿ 97 ದಿನಾಂಕ: 10.08.1999ರ Karnataka General Services (Government Computer–Centre and Cadre Recruitment) Rules 1997 ರನ್ವಯ ಪರಿಷ್ಕೃತ ವೇತನ ಶ್ರೇಣಿ ರೂ. 10,800–20,025/– ಗಳ ಪ್ರಕಾರ ವೇತನವನ್ನು ನಿಗದಿಪಡಿಸಲಾಗಿದೆ. ಸರ್ಕಾರದ ಉಲ್ಲೇಖಿತ ಆದೇಶದನ್ವಯ ಹಾರ್ಡ್‌ವೇರ್ ಸೂಪರ್‌ವೈಸರ್ ಇನ್‌ಪುಟ್/ಔಟ್‌ಪುಟ್ ಮ್ಯಾನೇಜರ್ ಹುದ್ದೆಯ ತತ್ಸಮಾನವಾಗಿ ಶ್ರೀ ಎನ್. ಪುರುಷೋತ್ತಮ್ ಇವರು ಕೆಲಸ ನಿರ್ವಹಿಸುತ್ತಿರುವರು. ಆದ್ದರಿಂದ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಗುತ್ತಿಗೆ ಆಧಾರದ ಮೇಲೆ ಪಡೆದಿರುವ ಕಂಪ್ಯೂಟರ್ ಟೆಕ್ನೀಷಿಯನ್ ಸಿಬ್ಬಂದಿಯವರಿಗೂ ಸಂಭಾವನೆಯನ್ನು ಹೆಚ್ಚಿಸಲು ದಿನಾಂಕ: 14.07.2009 ರಂದು ನಡೆದ ಕಾರ್ಯಕ್ರಮ ಚಾಲನಾ ಸಮಿತಿಯ 15ನೇ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಸಮಿತಿಯು ಮೇಲೆ (3) ರಲ್ಲಿ ಓದಲಾದ ನಡವಳಿಕೆಗಳಲ್ಲಿ ಒಪ್ಪಿಗೆ ನೀಡಿರುತ್ತದೆ. ಅದರಂತೆ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ (ಯೋ) 93, ಡಬ್ಲ್ಯೂಬಿಎ 2009, ಬೆಂಗಳೂರು, ದಿನಾಂಕ: 4ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿ ಮಾನವ ಸಂಪನ್ಮೂಲ ಸೇವಾ ಸಂಸ್ಥೆ ವತಿಯಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಶ್ರೀ ಎನ್. ಪುರುಷೋತ್ತಮ್ ಕಂಪ್ಯೂಟರ್ ಟೆಕ್ನೀಷಿಯನ್ ಇವರಿಗೆ ದಿನಾಂಕ: 01.06.2009 ರಿಂದ ಜಾರಿಗೆ ಬರುವಂತೆ ಈ ಕೆಳಗೆ ನಮೂದಿಸಿದಂತೆ ಸಂಭಾವನೆಯನ್ನು ಹೆಚ್ಚಿಸಿ ಆದೇಶಿಸಿದೆ.

ಕಂಪ್ಯೂಟರ್ ಟೆಕ್ನೀಷಿಯನ್	ಪ್ರಸ್ತುತ ಪಡೆಯುತ್ತಿರುವ ಮಾಹೆಯಾನ ಸಂಭಾವನೆಯ ವಿವರ (ರೂ.ಗಳಲ್ಲಿ)	ಹೆಚ್ಚಿಸಲು ಅನುಮೋದಿಸಲಾದ ಸಂಭಾವನೆ (ರೂ.ಗಳಲ್ಲಿ)
1) ಸಿಬ್ಬಂದಿಯ ಕೈಗೆ ಪಾವತಿಸುವ ಸಂಭಾವನೆ	6.900	10,350.00
2) ನೌಕರರ ವಂತಿಗೆ ಪಿ.ಎಫ್. ಇಎಫ್ಐ	(ಪಿ.ಎಫ್): 960.00 (ಇ.ಎಸ್.ಐ.) 140.00	1,650.00
3) ಉದ್ಯೋಗದಾತರ ವಂತಿಗೆ ಪಿ.ಎಫ್ ಇಎಸ್ಐ	(ಪಿ.ಎಫ್) 1089.00 (ಇ.ಎಸ್.ಐ.) 380.00	(ಪಿ.ಎಫ್) 1673.00 (ಇ.ಎಸ್.ಐ.) 570.00
4) ಏಜನ್ಸಿಯ ವಂತಿಗೆ	–	–
5) ವೃತ್ತಿ ತೆರಿಗೆ	ಅನ್ವಯವಾಗುವಂತೆ	ಅನ್ವಯವಾಗುವಂತೆ
ಒಟ್ಟು	9469.00 (ಏಜನ್ಸಿ ಶುಲ್ಕ ಹೊರತುಪಡಿಸಿ)	14,203.00 (ಏಜನ್ಸಿ ಶುಲ್ಕ ಹೊರತುಪಡಿಸಿ

ಈ ವೆಚ್ಚವನ್ನು ಲೆಕ್ಕಶೀರ್ಷಿಕೆ "2210–06–800–0–84–051" (ಸಾಮಾನ್ಯ ವೆಚ್ಚ) ದ ಅಡಿಯಲ್ಲಿ 2009–10ನೇ ಸಾಲಿನಲ್ಲಿ ಭರಿಸತಕ್ಕದ್ದು. ಇವರು ಸಂಭಾವನೆಯನ್ನು ಸಂಬಂಧಿಸಿದ ಏಜೆನ್ಸಿಯಿಂದ ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುಷಮಾ ಗೋಡಬೋಲೆ

ಪಿ.ಆರ್. 1911

ಸರ್ಕಾರದ ಉಪ ಕಾರ್ಯದರ್ಶಿ, ಕೆ.ಹೆಚ್.ಎಸ್.ಡಿಆರ್.ಪಿ.
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ: ಅಖಿಲ ಭಾರತ ಪೊಲೀಸ್ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾಗಿರುವ ಕ್ರೀಡಾಪಟುಗಳಿಗಾಗಿ ಆಯೋಜಿಸುವ ವಿಶೇಷ ತರಬೇತಿ ಅವಧಿಯಲ್ಲಿ ಈಗ ನೀಡುತ್ತಿರುವ ಪೌಷ್ಠಿಕ ಆಹಾರ ಭತ್ಯೆಯ ದರವನ್ನು ಪರಿಷ್ಕರಿಸಿ ರೂ. 100/–ಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ: ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: 40/ಕ್ರೀಡೆ/2008–09, ದಿನಾಂಕ: 12.05.2009

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಪ್ರತಿವರ್ಷ ಬೇರೆ ಬೇರೆ ರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಕೇಂದ್ರೀಯ ಪೊಲೀಸ್ ಸಂಘಟನೆಗಳು ಸರದಿ ಪ್ರಕಾರ ಆಯೋಜಿಸುವ ಅಖಿಲ ಭಾರತ ಪೊಲೀಸ್ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾಗುವ ಪೊಲೀಸ್ ಕೀಡಾಪಟುಗಳಿಗೆ, ಕ್ರೀಡಾಕೂಟದಲ್ಲಿ ಭಾಗವಹಿಸಲು ತೆರಳುವ ಪೂರ್ವದಲ್ಲಿ ಆಯೋಜಿಸುವ ವಿಶೇಷ ತರಬೇತಿ ಶಿಬಿರದ ಅವಧಿಯಲ್ಲಿ ಪ್ರತಿನಿತ್ಯ ಸೇವಿಸುವ ಆಹಾರದೊಂದಿಗೆ, ತರಬೇತಿ ಶಿಬಿರದ ಕಠಿಣತೆಯನ್ನು ಸಹಿಸಲು ಅಧಿಕ ಪೌಷ್ಠಿಕಾಂಶವುಳ್ಳ ಆಹಾರಪದಾರ್ಥಗಳನ್ನು ಪಡೆದು ಸೇವಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ ಹೆಚ್.ಡಿ/392/ ಇಎಫ್ಎಸ್/99, ದಿನಾಂಕ:6.6.2000 ರಲ್ಲಿ ಒಬ್ಬ ಕ್ರೀಡಾಪಟುವಿಗೆ ಒಂದು ದಿನಕ್ಕೆ ರೂ. 25.00 ರಂತೆ 30 ದಿವಸಗಳಿಗೆ ಒಟ್ಟು ರೂ. 750.00 ಪೌಷ್ಠಿಕ ಆಹಾರ ಭತ್ಯೆಯಾಗಿ ಮಂಜೂರು ಮಾಡಲು ಅವಕಾಶ ಮಾಡಲಾಗಿದೆಯೆಂದು, ಆದರೆ ಈ ಸರ್ಕಾರಿ ಆದೇಶ ಹೊರಡಿಸಿ 8 ವರ್ಷಗಳಾಗಿದ್ದು, ಈಗ ಪೌಷ್ಠಿಕ ಆಹಾರ ಪದಾರ್ಥಗಳ ಬೆಲೆಯು ಕೂಡ ಗಣನೀಯವಾಗಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ, ಈ ದರವನ್ನು ರೂ. 25.00 ರಿಂದ ರೂ. 100 00 ಕ್ಕೆ ಪರಿಷ್ಕರಿಸಿ ಹೆಚ್ಚಿಸಲು ಹಾಗೂ ಇದರಿಂದಾಗಿ ತಗಲುವ ವಾರ್ಷಿಕ ಅಂದಾಜು ವೆಚ್ಚ ರೂ. 5,22,000.00 ಗಳಿಗೆ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿದ್ದಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 126 ಇಎಫ್‌ಎಸ್ 2009, ಬೆಂಗಳೂರು, ದಿನಾಂಕ: 7ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಖಿಲ ಭಾರತ ಪೊಲೀಸ್ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾಗುವ ಕ್ರೀಡಾಪಟುಗಳಿಗಾಗಿ ಆಯೋಜಿಸುವ ವಿಶೇಷ ತರಬೇತಿ ಅವಧಿಯಲ್ಲಿ ಈಗ ನೀಡುತ್ತಿರುವ ಪೌಷ್ಠಿಕ ಆಹಾರ ಭತ್ಯೆಯ ದರವನ್ನು ದಿನಕ್ಕೆ ರೂ. 25/– ರಿಂದ ರೂ.50/– ಗಳಿಗೆ (ಐವತ್ತು ರೂಪಾಯಿಗಳು ಮಾತ್ರ) ಪರಿಷ್ಕರಿಸಿ ಈ ಮೂಲಕ ಸರ್ಕಾರದ ಮಂಜೂರಾತಿ ನೀಡಿದ.

ಸದರಿ ವೆಚ್ಚವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 2055–00–001–0–01–051 ಸಾಮಾನ್ಯ ವೆಚ್ಚಗಳು ಇದರಡಿಯಲ್ಲಿ ಒದಗಿಸಲಾದ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 611 ವೆಚ್ಚ–11/2009, ದಿನಾಂಕ: 27/07/2009ರ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1922 **ಬಿ.ಎಂ. ಲಕ್ಷ್ಮೀನಾರಾಯಣ**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ವಿಷಯ: 2009–10ನೇ ಸಾಲಿನ ಪೊಲೀಸ್ ಆಧುನೀಕರಣ ಕ್ರಿಯಾ ಯೋಜನೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ:1/ಎಡಿಜಿಪಿ/ಟಿಟಿಎಂ/ ಎಂಡಿಎನ್/2009–10, ದಿನಾಂಕ: 06.06.2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 6/6/2009ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, 2009–10ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆಯಡಿ ದಿನಾಂಕ:29/05/2009 ರಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ರೂ. 8,88,00,000/– ಗಳನ್ನು ಮಂಜೂರು ಮಾಡಿದೆ. ಸದರಿ ಅನುದಾನವನ್ನು 2009–10ನೇ ಸಾಲಿನ ಕ್ರಿಯಾ ಯೋಜನೆಯ ಕಾರ್ಯ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಲು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ:01:ಪಿಎಫ್‌ಎಸ್:2009, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ರೂ. 8,88,00,000/– ಗಳನ್ನು (ಎಂಟು ಕೋಟಿ, ಎಂಭತ್ತೆಂಟು ಲಕ್ಷ ರೂಪಾಯಿಗಳು ಮಾತ್ರ) ಅನುಮೋದನೆಗೊಂಡ ಕ್ರಿಯಾ ಯೋಜನೆಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 622 ವೆಚ್ಚ–11/2009, ದಿನಾಂಕ:20/07/2009ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1923 **ಬಿ.ಎಂ. ಲಕ್ಷ್ಮೀನಾರಾಯಣ**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಕಾರ್ಮಿಕ ಸಚಿವಾಲಯ

ವಿಷಯ: ಡಾ: ಆರ್. ವನಜಾಕ್ಷಿ, ವಿಮಾ ವೈದ್ಯಾಧಿಕಾರಿ, ಕಾರಾವಿ ಚಿಕಿತ್ಸಾಲಯ, ದಾಸರಹಳ್ಳಿ, ಬೆಂಗಳೂರು, ಇವರು ಕರ್ತವ್ಯದಿಂದ ಅನಧಿಕೃತವಾಗಿ ಗೈರು ಹಾಜರಾದ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:
1. ನಿರ್ದೇಶಕರು, ಕಾರಾವಿ ಯೋಜನೆ, ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ:ESIS/EV/34/05—06 ದಿನಾಂಕ: 06.02.2006
2. ಸರ್ಕಾರದ ನೋಟೀಸ್ ಸಂಖ್ಯೆ ಕಾಇ 117 ಎಲ್ಎಸ್ಐ 2006, ದಿನಾಂಕ: 22.05.2006
3. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ:ESIS/EV/34/05—06 ದಿನಾಂಕ: 21.08.2006
4. ಸರ್ಕಾರದ ಆದೇಶ ಸಂಖ್ಯೆ: ಕಾಇ 117 ಎಲ್ಎಸ್ಐ 2006, ದಿನಾಂಕ : 12.10.2006
5. ವಿಚಾರಣಾಧಿಕಾರಿಗಳ ದಿನಾಂಕ: 09.05.2007ರ ವರದಿ
6. 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಕಾಇ 117 ಎಲ್ಎಸ್ಐ 2006, ದಿನಾಂಕ:28.06.2007
7. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ:ESIS/EV/34/05—06 ದಿನಾಂಕ: 27.08.2007

ಪ್ರಸ್ತಾವನೆ:

ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ರವರು ಮೇಲೆ (1) ರಲ್ಲಿ ಓದಲಾದ ದಿನಾಂಕ:6.2.2006ರ ಪತ್ರದಲ್ಲಿ ಡಾ: ಆರ್. ವನಜಾಕ್ಷಿ, ವಿಮಾ ವೈದ್ಯಾಧಿಕಾರಿ, ಕಾ.ರಾ.ವಿ. ಚಿಕಿತ್ಸಾಲಯ, ದಾಸರಹಳ್ಳಿ, ಬೆಂಗಳೂರು, ಇವರನ್ನು ಕಾ.ರಾ.ವಿ. ನಿಗಮದ ಮಾದರಿ ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು, ಇಲ್ಲಿಗೆ ದಿನಾಂಕ: 01.09.2005 ರಂದು ಕಾರ್ಯವ್ಯವಸ್ಥೆ ಮೇರೆಗೆ ನಿಯೋಜಿಸಲಾಗಿದ್ದು, ವೈದ್ಯರು ನಿಯೋಜನೆ ಮಾಡಿದ್ದ ಸ್ಥಳಕ್ಕೆ ಹಾಜರಾಗದೆ ದಿನಾಂಕ:1.09.2005 ರಿಂದ ಅನಧಿಕೃತವಾಗಿ ಗೈರು ಹಾಜರಾಗಿರುವ ಆರೋಪ ಕುರಿತು ಇಲಾಖಾ ವಿಚಾರಣೆ ನಡೆಸುವಂತೆ ಕೋರಿದ್ದರು. ಡಾ:ಆರ್. ವನಜಾಕ್ಷಿ, ವಿಮಾ ವೈದ್ಯಾಧಿಕಾರಿ ಇವರ ಅನಧಿಕೃತ ಗೈರು ಹಾಜರಾತಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಮೇಲೆ ಓದಲಾದ (2) ರ ದಿನಾಂಕ: 22.05.2006ರ ಷೋಕಾಸ್ ನೋಟೀಸ್‌ನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ನೋಂದಾಯಿತ ಅಂಚೆ ಸ್ವೀಕೃತಿ ಮೂಲಕ ಜಾರಿ ಮಾಡಿ ರಕ್ಷಣಾ ಹೇಳಿಕೆ ಏನಾದರೂ ಇದ್ದಲ್ಲಿ ನೋಟೀಸ್ ತಲುಪಿದ 15 ದಿವಸದೊಳಗಾಗಿ ಲಿಖಿತ ಮೂಲಕ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಡಾ: ಆರ್.ವನಜಾಕ್ಷಿ, ವಿಮಾ ವೈದ್ಯಾಧಿಕಾರಿ ಇವರು ದಿನಾಂಕ: 22.06.2006 ರಂದು ಸರ್ಕಾರದಿಂದ ಹೊರಡಿಸಿದ ನೋಟೀಸಿಗೆ ಉತ್ತರವಾಗಿ ದಿನಾಂಕ:29.06.2006 ರಂದು ಸಲ್ಲಿಸಿರುವ ಮನವಿಯಲ್ಲಿ ಕೆಲವು ವೈಯಕ್ತಿಕ ಕಾರಣಗಳಿಂದ ಮತ್ತು ಅನಾರೋಗ್ಯದ ನಿಮಿತ್ತ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ ರಾಜೀನಾಮೆ ಸಲ್ಲಿಸುತ್ತಿರುವುದಾಗಿ ತಿಳಿಸುತ್ತಾ ಅದನ್ನು ಅಂಗೀಕರಿಸುವಂತೆ ಕೋರಿರುತ್ತಾರೆ ಎಂದು ನಿರ್ದೇಶಕರು, ಕಾರಾವಿ ಇವರು ಮೇಲೆ (3) ರಲ್ಲಿ ಓದಲಾದ ದಿನಾಂಕ: 21.08.2006ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಡಾ: ಆರ್. ವನಜಾಕ್ಷಿ, ವಿಮಾ ವೈದ್ಯಾಧಿಕಾರಿ, ಇವರು ದಿನಾಂಕ: 01.09.2005 ರಿಂದ ಅನಧಿಕೃತ ಗೈರು ಹಾಜರಾಗಿ 10 ತಿಂಗಳ ಬಳಿಕ ಅಂದರೆ ದಿನಾಂಕ 29.06.2006 ರಂದು ಸಲ್ಲಿಸಿರುವ ರಾಜೀನಾಮೆಯನ್ನು ಅಂಗೀಕರಿಸುವ ಬದಲು ಇವರು ನಿಗಧಿತ ಅವಧಿಯ ನಂತರವೂ ಸಹ ಇವರ ವಿರುದ್ಧ ಮಾಡಲಾದ ಆರೋಪಗಳಿಗೆ ಸಂಬಂಧಿಸಿದಂತೆ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿಲ್ಲವಾದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖೆ ವಿಚಾರಣೆಯನ್ನು ನಡೆಸಲು ಶ್ರೀ ಹೆಚ್.ಪಿ. ದೇವೇಂದ್ರಯ್ಯ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮೇಲೆ ಓದಲಾದ (4) ರ ದಿನಾಂಕ: 12.10.2006ರ ಆದೇಶದಲ್ಲಿ ನೇಮಿಸಲಾಗಿತ್ತು. ಅದರಂತೆ ವಿಚಾರಣಾಧಿಕಾರಿಗಳು, ಡಾ: ಆರ್. ವನಜಾಕ್ಷಿ, ಇವರ ಅನಧಿಕೃತ ಗೈರು ಹಾಜರಾತಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಿ ದಿನಾಂಕ: 09.05.2007 ರಂದು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವಿಚಾರಣಾಧಿಕಾರಿಯವರು ವಿಚಾರಣೆಯನ್ನು ನಡೆಸಿ, ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧ ಹೊರಿಸಿರುವ ಆರೋಪವು ರುಜುವಾತಾಗಿದೆಯೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಡಾ: ಆರ್. ವನಜಾಕ್ಷಿ, ವಿಮಾ ವೈದ್ಯಾಧಿಕಾರಿ ಇವರು ಸರ್ಕಾರದಿಂದ ಜಾರಿಯಾದ 2ನೇ ಷೋಕಾಸ್ ನೋಟೀಸಿಗೆ ದಿನಾಂಕ: 07.08.07 ರ ಪತ್ರದಲ್ಲಿ ತಾನು ದಿನಾಂಕ: 30.06.2006 ರಂದು ರಾಜೀನಾಮೆ ಪತ್ರ ಸಲ್ಲಿಸಿರುವುದಾಗಿಯೂ, ಸರ್ಕಾರಿ ಹುದ್ದೆಯಲ್ಲಿ ಮುಂದುವರೆಯಲು ಆಸಕ್ತಿಯಿಲ್ಲವಾದ ಕಾರಣ ರಾಜೀನಾಮೆಯನ್ನು ಅಂಗೀಕರಿಸುವಂತೆಯೂ ತಿಳಿಸಿದ್ದಾರೆಂದು, ಇವರ ಮೇಲಿನ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ದಂಡನೆಯನ್ನು ವಿಧಿಸುವ ಅಥವಾ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ ಶಿಸ್ತು ಪ್ರಾಧಿಕಾರಿಯಾದ ಸರ್ಕಾರವು ಅಗತ್ಯ ತೀರ್ಮಾನ ಕೈಗೊಳ್ಳುವಂತೆ ನಿರ್ದೇಶಕರು, ಇವರ ಮೇಲೆ ಓದಲಾದ (7)ರ ದಿನಾಂಕ 27.08.2007ರ ಪತ್ರದಲ್ಲಿ ಕೋರಿರುತ್ತಾರೆ.

ಈ ವೈದ್ಯಾಧಿಕಾರಿಯವರು ದಿನಾಂಕ 01.09.2005 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿ 10 ತಿಂಗಳ ಬಳಿಕೆ ದಿನಾಂಕ 29.06.2006 ರಂದು ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬದಲು ಇಲಾಖಾ ವಿಚಾರಣೆಯ ವರದಿಯನ್ನು ಆಧರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (viii) ರ ಅನ್ವಯ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 117 ಎಲ್‌ಎಸ್‌ಐ 2006, ಬೆಂಗಳೂರು, ದಿನಾಂಕ: 24ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ: ಆರ್. ವನಜಾಕ್ಷಿ, ವಿಮಾ ವೈದ್ಯಾಧಿಕಾರಿ, ಇವರು ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯ, ದಾಸರಹಳ್ಳಿ, ಇಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ದಿನಾಂಕ: 01.09.2005 ರಿಂದ ಕರ್ತವ್ಯದಿಂದ ಅನಧಿಕೃತವಾಗಿ ಗೈರು ಹಾಜರಾಗಿರುವ ಆರೋಪವು ಇಲಾಖಾ ವಿಚಾರಣೆಯಿಂದ ಸಾಬೀತಾಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 8 (viii) ರ ಅನುಸಾರ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲಾಗಿದೆ. ಹಾಗೂ ತಕ್ಷಣದಿಂದ ಜಾರಿಗೆ ಬರುವಂತೆ ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1924 **ಗೋವಿಂದಸ್ವಾಮಿ**

ಪೀಠಾಧಿಕಾರಿ, ಕಾರ್ಮಿಕ ಇಲಾಖೆ (ಕಾರಾವಿ ಯೋ (ವೈ) ಸೇವೆಗಳು)

ಸಿಬ್ಬಂದಿ ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಸಚಿವರುಗಳ ಕಚೇರಿಗಳಿಗೆ ಅಳವಡಿಸಲು ಹೊಸ ಫ್ಯಾಕ್ಸ್ ಯಂತ್ರಗಳನ್ನು ಖರೀದಿಸುವ ವೆಚ್ಚ ಪಾವತಿ ಮಾಡುವ ಬಗ್ಗೆ.

ಓದಲಾಗಿದೆ:
1. ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳ ಟಿಪ್ಪಣಿ ಸಂಖ್ಯೆ : ಆನಾಸಸ/ಫ್ಯಾಕ್ಸ್/2009-10, ದಿನಾಂಕ 25.05.2009.
2. ಪಶುಸಂಗೋಪನಾ ಸಚಿವರ ಆಪ್ತ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ:ಪಸಂಸ/ಆಕಾ/235/2009 ದಿನಾಂಕ: 02.05.2009.
3. ವಸತಿ ಮತ್ತು ಮುಜರಾಯಿ ಸಚಿವರ ಟಿಪ್ಪಣಿ ಸಂಖ್ಯೆ:ವಮುಸ/ಅಕಾ/5/2009 ದಿನಾಂಕ:03.07.2009.
4. ಸರ್ಕಾರದ ಜಂಟಿ ಕಾರ್ಯದರ್ಶಿ, ಸಿ.ಆ.ಸು.ಇ (ಶಿಷ್ಟಾಚಾರ) ಇವರ ಟಿಪ್ಪಣಿ ಸಂಖ್ಯೆ: ಸಿಆಸುಇ 36 (ಜಕಾ(ಶಿ) 2009, ದಿನಾಂಕ: 10.06.2009.
5. ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 261 ಡಿಟಿಎನ್ 2009 ದಿನಾಂಕ: 20.06.2009.
6. ಸರ್ಕಾರದ ಪತ್ರ ಸಂ. ಸಿಆಸುಇ 261 ಡಿಟಿಎನ್ 2009 ದಿನಾಂಕ : 21.07.2009.
7. ಮೆ: ಅಭಿಷೇಕ್ ಬಿಸಿನೆಸ್ ಸೆಲ್ಯೂಷನ್ ಸಂಸ್ಥೆಯ ಬಿಲ್ ಸಂಖ್ಯೆ: 185 ದಿ: 23.07.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (4) ರಲ್ಲಿನ ಟಿಪ್ಪಣಿಗಳಲ್ಲಿ ಮಾನ್ಯ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು, ಮಾನ್ಯ ಪಶುಸಂಗೋಪನಾ ಸಚಿವರು, ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು, ಹಾಗೂ ಸರ್ಕಾರದ ಜಂಟಿ ಕಾರ್ಯದರ್ಶಿ, ಸಿ.ಆ.ಸು.ಇ (ಶಿಷ್ಟಾಚಾರ) ಇವರುಗಳ ಕಚೇರಿಗಳಿಗೆ ಹೊಸ ಫ್ಯಾಕ್ಸ್ ಯಂತ್ರಗಳನ್ನು ಖರೀದಿಸಿ ಅಳವಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಕೋರಿಕೆ ಸಲ್ಲಿಸಿದ್ದರು. ಮಾನ್ಯ ಸಚಿವರುಗಳು ಹಾಗೂ ಸರ್ಕಾರದ ಜಂಟಿ ಕಾರ್ಯದರ್ಶಿ, ಸಿ.ಆ.ಸು.ಇ. (ರಾಜ್ಯ ಶಿಷ್ಟಾಚಾರ), ಇವರುಗಳ ಕಚೇರಿಗಳಿಗೆ ಅಳವಡಿಸಲು ಹೊಸ ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ-983 ಮಾದರಿಯ ನಾಲ್ಕು ಫ್ಯಾಕ್ಸ್ ಯಂತ್ರಗಳನ್ನು ಖರೀದಿಸುವ ಸಂಬಂಧ ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿನ ಪತ್ರದಲ್ಲಿ ಆರು ಸಂಸ್ಥೆಗಳಿಂದ ದರ ಪಟ್ಟಿಯನ್ನು ಕರೆಯಲಾಗಿತ್ತು. ಈ ಸಂಬಂಧ ಆರು ಸಂಸ್ಥೆಗಳು ದರಪಟ್ಟಿ ಸಲ್ಲಿಸಿದ್ದು, ಅವುಗಳಲ್ಲಿ ಮೆ: ಅಭಿಷೇಕ್ ಬಿಸಿನೆಸ್ ಸೆಲ್ಯೂಷನ್, ಬೆಂಗಳೂರು ಸಂಸ್ಥೆಯು ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ-983 ಮಾದರಿಯ ಫ್ಯಾಕ್ಸ್ ಉಪಕರಣವೊಂದಕ್ಕೆ ಅತಿ ಕಡಿಮೆ ದರ, ಅಂದರೆ ರೂ. 9,360.00 (ತೆರಿಗೆ ಸೇರಿ) ಮೊತ್ತವನ್ನು ನಮೂದಿಸಿರುತ್ತದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (6) ಪತ್ರದಲ್ಲಿ ಒಟ್ಟು 04 (ನಾಲ್ಕು) ಹೊಸ ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ-983 ಮಾದರಿಯ ಫ್ಯಾಕ್ಸ್ ಯಂತ್ರಗಳನ್ನು ಒಟ್ಟು ರೂ. 37,440.00 (ತೆರಿಗೆ ಸೇರಿ) ವೆಚ್ಚದಲ್ಲಿ ಖರೀದಿಸಿ ಒದಗಿಸುವಂತೆ ಮೆ: ಅಭಿಷೇಕ್ ಬಿಸಿನೆಸ್ ಸೆಲ್ಯೂಷನ್ ಸಂಸ್ಥೆಯನ್ನು ಕೋರಲಾಗಿತ್ತು. ಅದರಂತೆ ಈ ಸಂಸ್ಥೆಯು ಒಟ್ಟು 04 ಫ್ಯಾಕ್ಸ್ ಯಂತ್ರಗಳನ್ನು ಖರೀದಿಸಿ ಅಳವಡಿಸಿದ್ದು, ಮೇಲೆ ಕ್ರಮ ಸಂಖ್ಯೆ (7) ರಲ್ಲಿನ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 261 ಡಿಟಿಎನ್ 2009, ಬೆಂಗಳೂರು, ದಿನಾಂಕ: 10ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿನ ವಿವರಣೆಯನ್ವಯ ಮಾನ್ಯ ಸಚಿವರುಗಳ ಮತ್ತು ಅಧಿಕಾರಿಯವರ ಕಚೇರಿಗಳಿಗೆ ಒಟ್ಟು 04 (ನಾಲ್ಕು) ಹೊಸ ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ–987 ಮಾದರಿಯ ಫ್ಯಾಕ್ಸ್ ಯಂತ್ರಗಳನ್ನು ಖರೀದಿಸಿ ಅಳವಡಿಸಿರುವ ವೆಚ್ಚ ಒಟ್ಟು ರೂ.37,440.00 (ರೂ. ಮೂವತ್ತೇಳು ಸಾವಿರ ನಾಲ್ಕು ನೂರ ನಲವತ್ತು ಮಾತ್ರ) (ತೆರಿಗೆ ಸೇರಿ) ಗಳನ್ನು ಮೆ: ಅಭಿಷೇಕ್ ಬಿಸಿನೆಸ್ ಸೆಲ್ಯೂಷನ್, ನಂ. 31/1, 2ನೇ ಅಡ್ಡರಸ್ತೆ, ಸಿ.ಕೆ.ಸಿ,. ಗಾರ್ಡನ್, ಲಾಲ್‌ಬಾಗ್ ರಸ್ತೆ, ಬೆಂಗಳೂರು, ಸಂಸ್ಥೆಗೆ ಪಾವತಿ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ "2013–ಮಂತ್ರಿ ಮಂಡಲ–800–ಇತರೆ ವೆಚ್ಚಗಳು–051–ಸಾಮಾನ್ಯ ವೆಚ್ಚಗಳು" ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್‌ಟಿ 1 ಟಿಎಫ್‌ಪಿ 1996, ದಿನಾಂಕ: 10.07.2006 ರಲ್ಲಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್. ಮಂಜುನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1926

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ: ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕು ಚಿಕ್ಕಬೆಣಕಲ್‌ರಾಯ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಚಿಕ್ಕಬೆಣಕಲ್ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 28/05/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ ಭೂಸ್ವಾಪ್ರ/2009–10/3072.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕು ಚಿಕ್ಕಬೆಣಕಲ್‌ರಾಯ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಚಿಕ್ಕಬೆಣಕಲ್ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ.33,02,271–00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 27/02/03
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 29/09/04

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗಂಗಾವತಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ:ಆರ್‌ಡಿ 384 ಮತ್ತು 382 ಎಲ್‌ಸಿಜಿ 2009, ದಿನಾಂಕ 16/03/09ರಲ್ಲಿ ಅಭಿಪ್ರಾಯ ನೀಡಿದೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್‌ಎಸಿ ಸಂಖ್ಯೆ	ಚಿಕ್ಕಬೆಣಕಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	01/06	62/ಅ1	6–04	1714359
2	02/06	63/ಅ–3	5–26	1587912
	ಒಟ್ಟು			**3302271**

- **ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 91 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 10ನೇ ಆಗಸ್ಟ್ 2009.

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕು ಚಿಕ್ಕಬೆಣಕಲ್‌ರಾಯ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಚಿಕ್ಕಬೆಣಕಲ್ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್

ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.33,02,271–00ಗಳನ್ನು ಮೂವತ್ಮೂರು ಲಕ್ಷದ ಎರಡು ಸಾವಿರದ ಇನ್ನೂರ ಎಪ್ಪತ್ತೊಂದು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1932 **ಕೆ.ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಶ್ರೀ ಡಿ.ಬಿ. ನಾಯಕ್, ಕೆ.ಎ.ಎಸ್, (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಹಿಂದಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾಂ, ಇವರಿಗೆ ಜೀವನಾಧಾರ ಭತ್ಯೆ ಪಾವತಿಯ ಆದೇಶ ತಿದ್ದುಪಡಿ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ: ಸಿಆಸುಇ 68 ಕೆಇವಿ 08 ದಿ: 28.10.2008.
2. ಸರ್ಕಾರಿ ಆದೇಶ ಸಂ: ಸಿಆಸುಇ 6 ಕೆಇವಿ 09 ದಿ: 26.05.2009.
3. ಅಧಿಕಾರಿಯ ಮನವಿ ದಿ: 31.07.2009.

ಪ್ರಸ್ತಾವನೆ:

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಶಿಫಾರಸ್ಸಿನ ಅನ್ವಯ ಬಲ್ಲ ಮೂಲಗಳಿಂದ ಅಧಿಕ ಆಸ್ತಿಯನ್ನು ಹೊಂದಿರುವ ಕುರಿತು ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಸಿಲುಕಿದ್ದ ಶ್ರೀ ಡಿ.ಬಿ. ನಾಯಕ್, ಕೆ.ಎ.ಎಸ್., (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಇವರನ್ನು ಮೇಲೆ ಓದಲಾದ ಕ್ರಮ ಸಂ. (1) ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಿ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿ ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 98ರ ನಿಯಮದನ್ವಯ ಜೀವನಾಧಾರದ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಆದೇಶಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂ. (2)ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 98ರ ಪ್ರಕಾರ ಇವರ ಅಮಾನತ್ತಿನ ಆದೇಶ ದಿ: 28.10.2008 ರಿಂದ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆಗೆ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಆದೇಶಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂ (3) ರ ಮನವಿಯಲ್ಲಿ ಸದರಿ ಅಧಿಕಾರಿಗಳು ತಮ್ಮನ್ನು ದಿ: 19.09.08 ರಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿದ್ದರೂ ದಿ: 28.10.2008 ರಿಂದ ಜೀವನಾಧಾರ ಭತ್ಯೆ ಮಂಜೂರಾತಿ ನೀಡಿ ಆದೇಶಿಸಲಾಗಿದೆಯೆಂದು ಇದರಿಂದ ಮಹಾಲೇಖಪಾಲರು Authorization ನಲ್ಲಿ ದಿ: 28.10.2008 ರಿಂದ ಪಡೆಯಲು ಆದೇಶ ನೀಡಿರುತ್ತಾರೆ ಎಂದು ತಿಳಿಸುತ್ತಾ ದಿ: 19.09.08 ರಿಂದ ಜಾರಿಗೆ ಬರುವಂತೆ ಜೀವನಾಧಾರ ಭತ್ಯೆಯನ್ನು ಪಡೆಯಲು ಅನುಕೂಲವಾಗುವಂತೆ ತಿದ್ದುಪಡಿ ಆದೇಶವನ್ನು ಹೊರಡಿಸುವಂತೆ ಕೋರಿದ್ದಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ. ಸಿಆಸುಇ 06 ಕೆಇವಿ 2009, ಬೆಂಗಳೂರು, ದಿನಾಂಕ: 5ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್ಕಾರಿ ಆದೇಶ ಸಂ. ಸಿಆಸುಇ 6 ಕೆಇವಿ 2009 ದಿ: 26.05.2009ರ ಆದೇಶದಲ್ಲಿನ ಆದೇಶ ಭಾಗದಲ್ಲಿ ದಿ: 28.10.2008 ರಿಂದ ಎಂದಿರುವುದನ್ನು ದಿ: 19.092008 ರಿಂದ ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ನಾಗೇಂದ್ರ

ಪಿ.ಆರ್. 1945 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

HORTICULTURE SECRETARIAT

Sub: "Scheme for Integrated Farming in Coconut for Productivity/ Improvement with Coconut Development Board Assistance (100% CDB)" – Release of funds reg.

Read:
1) Government Order No. AHD 53 HPP 2009, dated 24.06.2009.
2) Government Order No.AHD 161 HPP 2008 dated 07.07.2009.
3) Letter of CDB F.No.00102(31)/TMOC-MKG-2009 dated 17.07.2009.
4) Letter of CDB F.No.272/2007 –DEV(Kar) dated 20.07.2009.
5) Government Order No.AHD 53 HPP 2009 dated 28.07.2009.
6) Director of Horticulture Letter No.ತೋಇ/ತೋಬೆ/ಸತೋಅ2/1/2009-10/982 dated:31.07.2009.

Preamble:

1. During the year 2009-10, State Level Administrative Approval for implementing the Coconut Development Board Programmes with a total financial outlay of Rs.632.294 lakhs vide Government Order read at (1) above. Under these programmes components to the tune of Rs.303.03 lakhs will be implemented by the Department of Horticulture and components to the tune of Rs.329.264 lakhs will be implemented by the Coconut Development Board directly. An amount of Rs.178.34 lakhs has been released to the Director of Horticulture vide Government Orders read at (2) and (5) above.

2. Coconut Development Board has revalidated Rs.32.33 lakhs vide its letters read at (3) and (4) above to be utilized during 2009-10.

Sl. No	Schemes	Amount (Rs.in lakhs)
1	The project establishment of demonstration-cum-training center for coconut products-Revalidation of fund	27.33
2	Modernization of coconut processing by introduction of Modern Copra Dryer	5.00
	TOTAL	**32.33**

3. Accordingly, the Director of Horticulture has requested the Government vide his letter read at (6) above to release Rs.32.33 lakhs under the Head of Account 2401-00-108-2-35-100 (Financial Assistance/ Relief) for implementation of the spill over works as revalidated by Coconut Development Board.

4. This has been examined and it is ordered as below;

Government Order No.AHD 53 HPP 2009, Bangalore, Dated: 17th August 2009

Government is pleased to release an amount of Rs.32.33/- (Rupees Thirty Two Lakhs Thirty Three Thousand only) to the Director of Horticulture under the "Scheme for Integrated Farming in Coconut for Productivity/ Improvement" in the State during 2009-10 under the Head of Account 2401-00-108-2-35-100 (Financial Assistance/ Relief).

2. This shall be utilized for the purpose as mentioned in the preamble above and as per the guidelines of Coconut Development Board.

3. This order is issued as per the delegation of powers vested with Secretaries vide Government Order No.FD 1 TFP 2008 dated 16.5.2008 and concurrence by the Internal Financial Advisor, Agriculture and Horticulture Department vide Note No.ಕೃತೋಇ 168 ಆಂಆಸ 2009 dated 11.08.2009.

By order and in the name of Governor of Karnataka

S. RAJU

Under Secretary to Government, Horticulture Department.

P.R. 1958

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಆಯುಷ್ ಪದ್ಧತಿಗಳನ್ನು ಮುಖ್ಯವಾಹಿನಿಗೆ ತರುವ ಬಗ್ಗೆ - ಜಿಲ್ಲಾ ಆಯುಷ್ ಅಧಿಕಾರಿಗಳ ಸ್ವತಂತ್ರ ಕಾರ್ಯ ನಿರ್ವಹಣೆ.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ:ಆಕುಕ 199 ಪಿಐಎಂ 2009, ದಿನಾಂಕ:23-05-2009.

(2) ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಆಯುಷ್/12/ಐಇಸಿ(3)/2008-09, ದಿನಾಂಕ: 23-07-2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರದ ಆದೇಶದಲ್ಲಿ, ಆಯುಷ್ ಇಲಾಖೆಯ ಎಲ್ಲಾ ಜಿಲ್ಲಾ ಆಯುಷ್ ಅಧಿಕಾರಿಗಳು ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಇಲಾಖಾ ಕಾರ್ಯಕ್ರಮ ಅಧಿಕಾರಿಗಳಾಗಿ ಮತ್ತು ಅವರುಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೊಂದಿಗೆ ಸಮನ್ವಯಿಸಿ, ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವುದು ಹಾಗೂ ಆಯುಷ್ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಎಲ್ಲಾ ಪತ್ರ ವ್ಯವಹಾರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮುಖಾಂತರ ಮತ್ತು ಅವರ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು. ಹಾಗೂ ಜಿಲ್ಲಾ ಆಯುಷ್ ಅಧಿಕಾರಿಗಳ ರಜಾ ಮಂಜೂರಾತಿ ಮಾಡಲು ಮತ್ತು ಜಿಲ್ಲಾ ಆಯುಷ್ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಸೂಕ್ತ ಬದಲಿ ವ್ಯವಸ್ಥೆಯನ್ನು ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಿ ಆದೇಶಿಸಿತ್ತು.

ಮೇಲೆ ಓದಲಾದ ಕ್ರ.ಸಂ. (2) ರ ಪತ್ರದಲ್ಲಿ, ನಿರ್ದೇಶಕರು, ಆಯುಷ್ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಭಾರತ ಸರ್ಕಾರವು ಆಯುಷ್ ಇಲಾಖೆಯನ್ನು ಮುಖ್ಯವಾಹಿನಿಯಲ್ಲಿ ತರುವ ದೃಷ್ಟಿಯಿಂದ ಹಲವಾರು ಸುಧಾರಣೆಗಳನ್ನು ತಂದಿರುತ್ತದೆ. ಇದರ ಪ್ರಕಾರ ಆಯುಷ್ ಪದ್ಧತಿಗಳನ್ನು ಅಭಿವೃದ್ಧಿಪಡಿಸಬೇಕೆಂದು ಸಹ ತಿಳಿಸಿದೆ. ಇದರರ್ಥ ಆಯುಷ್ ಇಲಾಖೆಯು ಸ್ವತಂತ್ರವಾಗಿ ಬೆಳೆದು ಅಭಿವೃದ್ಧಿ ಆಗಬೇಕೆಂದಾಗಿರುತ್ತದೆ. ಆದರೆ, ಸರ್ಕಾರದ ಆದೇಶ ಸಂಖ್ಯೆ:ಆಕುಕ 199 ಪಿಐಎಂ 2009, ದಿನಾಂಕ:23-05-2009 ರಿಂದ ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಲ್ಲಿ ವರದಿ ಮಾಡಿಕೊಂಡು, ಆಯುಷ್ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳಲ್ಲಿ ಅವರಿಂದ ಆದೇಶ ಪಡೆಯುವುದರಿಂದ, ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೂ ಕೂಡ ಆಯುಷ್ ನಿರ್ದೇಶಕರ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸಲು ಕ್ರಮ ವಹಿಸಬೇಕಾಗುತ್ತದೆ. ಇದಲ್ಲದೇ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಆಯುಷ್ ವೈದ್ಯ ಪದ್ಧತಿಗಳ ಬಗ್ಗೆ ಸೂಕ್ತ ಮಾಹಿತಿ ಹಾಗೂ ಅನುಭವ ಇರುವುದಿಲ್ಲ. ಯಾವುದೇ ಇಲಾಖೆಯು ಅಭಿವೃದ್ಧಿ ಆಗಬೇಕಾದಲ್ಲಿ ಆ ಇಲಾಖೆಯು ಸ್ವತಂತ್ರವಾಗಿ ಕರ್ತವ್ಯ ನಿರ್ವಹಿಸುವುದು ಪ್ರಮುಖವಾಗಿರುತ್ತದೆಂದು ಹಾಗೂ ದಿನಾಂಕ:27-06-2009 ರಂದು ಆಯುಷ್ ನಿರ್ದೇಶನಾಲಯದಲ್ಲಿ ನಡೆದ ಜಿಲ್ಲಾ ಆಯುಷ್ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಬಹುತೇಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಆಯುಷ್ ಬಗ್ಗೆ ಹೆಚ್ಚಿನ ಮಹತ್ವ ನೀಡದೇ, ಇನ್ನಿತರೆ ಕೆಲಸ ಮಾಡಲು ಸೂಚಿಸುವುದರಿಂದ ಆಯುಷ್ ಕಾರ್ಯಕ್ರಮಗಳನ್ನು ನಿಗದಿತ ವೇಳೆಯಲ್ಲಿ ಸರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆಂದು, ಇದಲ್ಲದೇ ಆಯುಷ್ ಇಲಾಖೆಯು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಕ್ರಮ ಕೈಗೊಳ್ಳಲು ವಿವಿಧ ಸಂಘ-ಸಂಸ್ಥೆಗಳು ಒತ್ತಾಯಿಸಿರುತ್ತಾರೆಂದು ತಿಳಿಸುತ್ತಾ, ಮೇಲೆ ಓದಲಾದ ಕ್ರ.ಸಂ. (1) ರಲ್ಲಿನ ಸರ್ಕಾರದ ಆದೇಶಕ್ಕೆ ಈ ಕೆಳಕಂಡಂತೆ ಸೂಕ್ತ ತಿದ್ದುಪಡಿಯನ್ನು ತರುವಂತೆ ಸರ್ಕಾರವನ್ನು ಕೋರಿರುತ್ತಾರೆ.

1. ಜಿಲ್ಲಾ ಆಯುಷ್ ಅಧಿಕಾರಿಗಳು ಆಯಾ ಜಿಲ್ಲೆಗಳಲ್ಲಿ ಸ್ವತಂತ್ರವಾಗಿ ಕರ್ತವ್ಯ ನಿರ್ವಹಿಸುವುದು.
2. ಇವರುಗಳ ರಜೆ ಮಂಜೂರಾತಿ, ಸೂಕ್ತ ಬದಲಿ ವ್ಯವಸ್ಥೆ ಹಾಗೂ ಪತ್ರ ವ್ಯವಹಾರಗಳನ್ನು ಆಯುಷ್ ಇಲಾಖಾ ನಿರ್ದೇಶಕರ ಜೊತೆ ಮಾಡುವುದು.
3. ಎನ್.ಆರ್.ಹೆಚ್.ಎಂ. ಕಾರ್ಯಕ್ರಮಗಳಿಗೆ ಸೀಮಿತವಾಗುವಂತೆ ಮಾತ್ರ ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೊಂದಿಗೆ ಸಮನ್ವಯಿಸಿ ಕರ್ತವ್ಯ ನಿರ್ವಹಿಸುವುದು.

ನಿರ್ದೇಶಕರ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಆಕುಕ 199 ಪಿಐಎಂ 2009, ದಿನಾಂಕ:23.05.2009 ನ್ನು ಹಿಂಪಡೆದು, ನಿರ್ದೇಶಕರು ಮಾಡಿರುವ ಶಿಫಾರಸ್ಸುಗಳಂತೆ ಆಯುಷ್ ಇಲಾಖೆಯ ಅಭಿವೃದ್ಧಿಯ ದೃಷ್ಟಿಯಿಂದ ಜಿಲ್ಲಾ ಆಯುಷ್ ಅಧಿಕಾರಿಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು ಸೂಕ್ತವೆಂದು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 199 ಪಿಐಎಂ 2009, ಬೆಂಗಳೂರು, ದಿನಾಂಕ: 17ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಆಕುಕ 199 ಪಿಐಎಂ 2009, ದಿನಾಂಕ:23-05-2009 ನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ಹಾಗೂ ಆಯುಷ್ ಇಲಾಖೆಯ

ಅಭಿವೃದ್ಧಿ ಮತ್ತು ಸುಲಲಿತ ಹಾಗೂ ಪರಿಣಾಮಕಾರಿ ಕಾರ್ಯ ನಿರ್ವಹಣೆ ದೃಷ್ಟಿಯಿಂದ ಜಿಲ್ಲಾ ಆಯುಷ್ ಅಧಿಕಾರಿಗಳು ಸ್ವತಂತ್ರವಾಗಿ ಈ ಕೆಳಕಂಡಂತೆ ಕಾರ್ಯ ನಿರ್ವಹಿಸಲು ಆದೇಶಿಸಿದೆ.

1. ಜಿಲ್ಲಾ ಆಯುಷ್ ಅಧಿಕಾರಿಗಳು ಆಯಾ ಜಿಲ್ಲೆಗಳಲ್ಲಿ ಸ್ವತಂತ್ರವಾಗಿ ಕರ್ತವ್ಯ ನಿರ್ವಹಿಸುವುದು.
2. ಇವರುಗಳ ರಜೆ ಮಂಜೂರಾತಿ, ಸೂಕ್ತ ಬದಲಿ ವ್ಯವಸ್ಥೆ ಹಾಗೂ ಪತ್ರ ವ್ಯವಹಾರಗಳನ್ನು ಆಯುಷ್ ಇಲಾಖಾ ನಿರ್ದೇಶಕರ ಜೊತೆ ಮಾಡುವುದು.
3. ಎನ್.ಆರ್.ಹೆಚ್.ಎಂ. ಕಾರ್ಯಕ್ರಮಗಳಿಗೆ ಸೀಮಿತವಾಗುವಂತೆ ಮಾತ್ರ ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೊಂದಿಗೆ ಸಮನ್ವಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಮಹಾಲಕ್ಷ್ಮಮ್ಮ

ಪಿ.ಆರ್. 1959 ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಆರ್.ಕೆ. ಕುಂಬಾರಗೋಳ, ಮಾಜಿ ಸಿ.ಪಿ.ಸಿ.–1184, ದೊಡ್ಡವಾಡ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರ ಆದೇಶ ಸಂಖ್ಯೆ: ಸಿಬ್ಬಂದಿ–2/ಇವಿ/09/2007 [ಅ.ಪು.ಸಂ:87/08] ದಿ:18–01–2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲ/21/ಉವ/2008 ದಿ:26–06–08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:28–08–2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)72/2008–09 ದಿ:04–02–2008
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 29 ಸಿಎನ್‌ಎಸ್ 2009 ದಿನಾಂಕ:16.06.2009

ಪ್ರಸ್ತಾವನೆ:

ಶ್ರೀ ಆರ್.ಕೆ. ಕುಂಬಾರಗೋಳ, ಇವರು ದೊಡ್ಡವಾಡ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾದ ಆರೋಪದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

"ಆಪಾಧಿತ ಪೊಲೀಸ್ ಅಧಿಕಾರಿ ಸಿ.ಪಿ.ಸಿ.–1184, ಶ್ರೀ.ಆರ್.ಕೆ. ಕುಂಬಾರಗೋಳ, ದೊಡ್ಡವಾಡ ಪೊಲೀಸ್ ಠಾಣೆ, ರವರಾದ ನೀವು ದಿ:28–03–2005 ರಿಂದ 31–03–2005ರ ಮೇರೆಗೆ ನಾಲ್ಕು ದಿವಸ ಸಾಂದರ್ಭಿಕ ರಜೆಯನ್ನು ಪಡೆದುಕೊಂಡು ಹೋಗಿ ದಿ:01–04–05 ರಂದು ಮರಳಿ ಕರ್ತವ್ಯಕ್ಕೆ ಹಾಜರಾಗಬೇಕಾಗಿತ್ತು. ಆದರೆ ದಿ:01–04–2005 ರಂದು ಕರ್ತವ್ಯಕ್ಕೆ ಹಾಜರಾಗದೇ ಕಾಯಿಲೆ ಇದ್ದ ಬಗ್ಗೆ ತಂತಿ ಸಂದೇಶ ಕಳುಹಿಸಿ ನಂತರ ವೈದ್ಯಕೀಯ ಉಪಚಾರ ಕುರಿತು ಎಂ.ಎಚ್.ಎಸ್.ನ್ನು ಪಡೆಯಲು ಠಾಣೆಗೆ ಬಾರದೇ ಹಾಗೂ ವೈದ್ಯಕೀಯ ಉಪಚಾರ ಪಡೆಯುತ್ತಿದ್ದ ಬಗ್ಗೆ ಕಾಲಕಾಲಕ್ಕೆ ಮಾಹಿತಿಯನ್ನು ನಿಮ್ಮ ಮೇಲಾಧಿಕಾರಿಗಳಿಗೆ ತಿಳಿಸದೇ ಇದ್ದಾಗ ಪಿ.ಎಸ್.ಐ. ದೊಡ್ಡವಾಡ, ಇವರು ಜಿಲ್ಲಾ ಪೊಲೀಸ್ ಆಸ್ಪತ್ರೆ ಬೆಳಗಾವಿ, ರವರಿಗೆ ಪತ್ರ ಬರೆದು ಕೇಳಲಾಗಿ ನೀವು ದಿನಾಂಕ: 01–04–05 ರಂದು ಹೊರರೋಗಿ ಅಂತಾ ದಾಖಲಾಗಿ ಉಪಚಾರ ಹೊಂದಿದ ಬಗ್ಗೆ ಪತ್ರದಲ್ಲಿ ತಿಳಿಸಿರುತ್ತಾರೆ. ನಿಮಗೆ ನಿಜವಾಗಿ ದೀರ್ಘಾವಧಿಯವರೆಗೆ ಕಾಯಿಲೆ ಆಗಿ ಉಪಚಾರ ಪಡೆಯದೇ ದಿ:28–03–2005 ರಿಂದ ದಿ:02–04–2006ರ ವರೆಗೆ ಕರ್ತವ್ಯಕ್ಕೆ ಅನಧೀಕೃತವಾಗಿ ಗೈರು ಹಾಜರ ಉಳಿದು ನಿಮ್ಮ ಕರ್ತವ್ಯದಲ್ಲಿ ಘೋರ ವಿಮುಖತೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 18-01-08ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದಾರೆ ಹಾಗೂ ದಿ:28-03-2005 ರಿಂದ ದಿ:02-04-2006ರ ವರೆಗಿನ ಅನಧಿಕೃತ ಗೈರುಹಾಜರಾದ ಅವಧಿಯನ್ನು ವೇತನರಹಿತ ರಜೆಯೆಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ:26.06.08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿದೆ. ಅರ್ಜಿದರರು ಸರ್ಕಾರದಲ್ಲಿ ಸಲ್ಲಿಸಿದ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 300 ಪೊಸಿಅ 2008 ಬೆಂಗಳೂರು, ದಿನಾಂಕ: 6ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್.ಕೆ. ಕುಂಬಾರಗೋಳ, ಮಾಜಿ ಪಿ.ಸಿ., ಇವರನ್ನು ಸೇವೆಯಿಂದ ಕಡ್ಡಾಯನಿವೃತ್ತಿಗೊಳಿಸಿ ಆದೇಶಿಸಿ, ದಿ:28-03-05 ರಿಂದ 02-04-06ರ ವರೆಗೆ ಅನಧಿಕೃತವಾಗಿ ಗೈರು ಹಾಜರಾದ ಅವಧಿಯನ್ನು ವೇತನರಹಿತ ರಜೆಯೆಂದು ಪರಿಗಣಿಸಲಾಗಿದೆ. ಈ ಆದೇಶವು ಶಿಸ್ತುಪ್ರಾಧಿಕಾರವು ಹೊರಡಿಸಿದ ಆದೇಶದ ದಿನಾಂಕದಿಂದಲೇ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1802 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಸ್ವಾಮಿದೊರೆ, ಮಾಜಿ ಸಿ.ಎಚ್.ಸಿ., ನಂಜನಗೂಡು ಪೊಲೀಸ್ ಠಾಣೆ, ಮೈಸೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು, ಇವರ ಆದೇಶ ಸಂಖ್ಯೆ:ಡಿಇ: 17/2007-08 ದಿ:04-07-2008

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಅಪೀಲು:33/2008-09 ದಿ:06-11-2008

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:05-02-09

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)118/2008-09 ದಿನಾಂಕ:07-05-2009

ಪ್ರಸ್ತಾವನೆ:

ಶ್ರೀ ಸ್ವಾಮಿದೊರೆ, ಸಿ.ಎಚ್.ಸಿ., ಇವರು ನಂಜನಗೂಡು ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಅನಧಿಕೃತವಾಗಿ ಗೈರುಹಾಜರಾದ ಕಾರಣದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

1) "ನೀವು ಪದೇ ಪದೇ ಅನಧಿಕೃತವಾಗಿ ಗೈರು ಹಾಜರಾಗುವ ಪ್ರವೃತ್ತಿಯುಳ್ಳವರಾಗಿದ್ದು, ಈ ಹಿಂದೆ ಗೈರುಹಾಜರಿಯಾದ ಅವಧಿಗಳನ್ನು ಲಘು ಶಿಕ್ಷೆ ಹಾಗೂ ಕಠಿಣ ಶಿಕ್ಷೆ ವಿಧಿಸುವುದರ ಮೂಲಕ ಗೈರು ಹಾಜರಿ ಅವಧಿಗಳನ್ನು ಇತ್ಯರ್ಥಪಡಿಸಿದ್ದರೂ ಸಹ ಈ ಹವ್ಯಾಸದಲ್ಲಿ ಯಾವುದೇ ಸುಧಾರಣೆಯಾಗದೇ ಪುನ: ದಿ:14-07-07 ರಿಂದ ಅನಧಿಕೃತ

ಗೈರುಹಾಜರಾಗಿರುವುದರ ಮೂಲಕ ಕರ್ತವ್ಯದಲ್ಲಿ ಬೇಜವಾಬ್ದಾರಿತನ, ನಿರ್ಲಕ್ಷತೆ ಹಾಗೂ ಅಶಿಸ್ತು ಪ್ರದರ್ಶಿಸಿರುವ ಬಗ್ಗೆ."

2) ಈ ಅನಧಿಕೃತ ಗೈರು ಹಾಜರಿ ಸಂಬಂಧ ಹೊರಡಿಸಿದ ಡೆಸರ್ಟರ್ ನೋಟೀಸ್‌ನಲ್ಲಿ ನೀಡಿರುವ ಸೂಚನೆಯಂತೆ ನಿಗಧಿತ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಪ್ರಯತ್ನಿಸದೇ ಅಥವಾ ಗೈರುಹಾಜರಿ ಬಗ್ಗೆ ಯಾವುದೇ ಮಾಹಿತಿ ನೀಡದೇ ಮೇಲಾಧಿಕಾರಿಗಳ ಸೂಚನೆಯನ್ನು ಬೇಜವಾಬ್ದಾರಿ ಹಾಗೂ ನಿರ್ಲಕ್ಷತೆಯಿಂದ ಉಲ್ಲಂಘಿಸಿ ಅಶಿಸ್ತು ಪ್ರದರ್ಶಿಸಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿ:04–07–08ರ ಆದೇಶದಲ್ಲಿ ಅರ್ಜಿದಾರರನ್ನು ಕಡ್ಡಾಯ ನಿವೃತ್ತಿಗೊಳಿಸಲಾಗಿದೆ ಹಾಗೂ ದಿ:14–07–2007 ರಿಂದ ಶಿಸ್ತು ಪ್ರಾಧಿಕಾರದ ಆದೇಶ ಜಾರಿಯಾಗುವವರೆಗಿನ ಅವಧಿಯನ್ನು ವೇತನರಹಿತ ರಜೆಯೆಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:06.11.08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿದ್ದು, ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 38 ಪೊಸಿಅ 2009 ಬೆಂಗಳೂರು, ದಿನಾಂಕ: 24ನೇ ಜುಲೈ 2008

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸ್ವಾಮಿದೊರೆ, ಮಾಜಿ ಸಿ.ಎಚ್.ಸಿ.–190, ಮೈಸೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1804 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಶಶಿಧರ, ಪಿ.ಸಿ.–5541, ಬಸವನಗುಡಿ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಕಮೀಷನರ್ (ಆಡಳಿತ) ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ:55/ಡಿಇ.1/ಆರ್–6/2006 ದಿ:20–06–2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ:68/ಅಪೀಲ/2007 ದಿ:10–03–08

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:14–08–2008

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)62/2008–09 ದಿ:18–12–2008

5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 02 ಸಿಎನ್‌ಎಸ್ 2009 ದಿನಾಂಕ:12.05.2009

ಪ್ರಸ್ತಾವನೆ:

ಶ್ರೀ ಶಶಿಧರ, ಪಿ.ಸಿ.–5541, ಬಸವನಗುಡಿ ಪೊಲೀಸ್ ಠಾಣೆ, ಇವರು ಈ ಹಿಂದೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಇಮಿಗ್ರೇಷನ್ ವಿಭಾಗದಲ್ಲಿ ಓ.ಓ.ಡಿ.ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯ ದುರುಪಯೋಗದ ಆರೋಪದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು

ನಿಯಮಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:

"ಶ್ರೀ ಶಶಿಧರ, ಪಿ.ಸಿ.-5541, ಸಿದ್ದಾಪುರ ಪೊಲೀಸ್ ಠಾಣೆ (ಹಾಲಿ ಬಸವನಗುಡಿ ಪೊಲೀಸ್ ಠಾಣೆ) ಆದ ನಿಮ್ಮನ್ನು ದಿ:08-08-2006 ರಂದು ರಾತ್ರಿ ಕರ್ತವ್ಯಕ್ಕೆ ವಿಮಾನ ನಿಲ್ದಾಣದ ಆರೈವಲ್ ವಿಭಾಗದಲ್ಲಿ ಇಮಿಗ್ರೇಷನ್ ಕ್ಲೀಯರೆನ್ಸ್ ಅಧಿಕಾರಿಯಾದ ಪಿ.ಐ. ಇಮಿಗ್ರೇಷನ್ ಕ್ಲೀಯರೆನ್ಸ್ ಮಾಡುವ ಸಲುವಾಗಿ ರಾತ್ರಿ ಪಾಳೆಯ ಉಸ್ತುವಾರಿ ಅಧಿಕಾರಿಯಾದ ಪಿ.ಐ. ಇಮಿಗ್ರೇಷನ್ ವಿಭಾಗ ರವರು ನಿಮ್ಮನ್ನು ಕೌಂಟರ್ ನಂ 11ರಲ್ಲಿ ಸೀಟ್ ನಂ: 12 ಕೊಟ್ಟು ಕರ್ತವ್ಯಕ್ಕೆ ನೇಮಕಮಾಡಿದ್ದು, ದಿ:08-08-2006 ರಂದು ರಾತ್ರಿ 23-15 ಗಂಟಗೆ ಮಲೇಷಿಯನ್ ಏರ್‌ಲೈನ್ಸ್ ವಿಮಾನ ಸಂಖ್ಯೆ:ಎಂ.ಎಚ್.192ರಲ್ಲಿ ಆಗಮಿಸಿದ ಭಾರತೀಯ ಪ್ರಯಾಣಿಕರ ಪೈಕಿ ಶ್ರೀ.ಉನ್‌ವಲ್ಲಾ ಜೆಮ್‌ಶೆಡ್ ಸೈರಸ್ ಎಂಬುವವರು ಅವರ ಮಗ ಶ್ರೀ.ಸೈರೀಸ್ ಉನ್‌ವಲ್ಲಾ ಜುಬಿನ್ ರವರ ಜೊತೆ ಬಂದಿದ್ದು, ಅವರು ಇಮಿಗ್ರೇಷನ್ ಕ್ಲೀಯರೆನ್ಸ್ ಸಲುವಾಗಿ ಅರೈವಲ್ ವಿಭಾಗದ ಕೌಂಟರ್ ನಂ011ರಲ್ಲಿದ್ದ ನಿಮ್ಮ ಬಳಿಗೆ ಬಂದು ಅವರ ಪಾಸ್ ಪೋರ್ಟ್ ಮತ್ತು ಎಂಬಾರ್‌ಕೇಷನ್ ಕಾರ್ಡನ್ನು ಹಾಜರುಪಡಿಸಿ ಇಮಿಗ್ರೇಷನ್ ಕ್ಲೀಯರೆನ್ಸ್ ಮಾಡಿಕೊಡುವಂತೆ ಕೋರಿದ್ದು, ಆಗ ನೀವು ಉನ್‌ವಲ್ಲಾ ಜೆಮ್‌ಶೆಡ್ ಸೈರಸ್ ರವರಿಗೆ ನಿಮ್ಮ ಪಾಸ್‌ಪೋರ್ಟ್ ನಂಬರ್ ಎಲ್.ಓ.ಸಿ.ಯಲ್ಲಿ ಇರುತ್ತದೆ, ಆದ್ದರಿಂದ ನಿಮ್ಮ ಪಾಸ್ ಪೋರ್ಟನ್ನು ಅಮಾನತ್ತು ಪಡಿಸಿಕೊಳ್ಳಬೇಕಾಗುತ್ತದೆ ಎಂದು ಅವರಿಗೆ ತಿಳಿಸಿ ಅವರ ಮೇಲೆ ಮಾನಸಿಕ ಒತ್ತಡವನ್ನು ಹೇರಿ ಅವರಿಂದ ಬಲವಂತವಾಗಿ ಆರ್ಥಿಕ ಅಪೇಕ್ಷೆ ಪಡೆಯಲು ಪ್ರಯತ್ನಪಟ್ಟು ಇಮಿಗ್ರೇಷನ್ ವಿಭಾಗದಲ್ಲಿ ಅತ್ಯಂತ ಜವಾಬ್ದಾರಿಯುತವಾದ ಸೂಕ್ಷ್ಮ ಸ್ಥಳದಲ್ಲಿ ಕರ್ತವ್ಯ ಮಾಡುತ್ತಿರುವ ನೀವು ನಿಮ್ಮ ಕರ್ತವ್ಯ ವ್ಯಾಪ್ತಿಯನ್ನು ಮೀರಿ ಕಾನೂನುಬದ್ಧವಾಗಿ ಎಲ್ಲಾ ದಾಖಲೆ ಗಳನ್ನು ಹೊಂದಿದ್ದ ಪಾಸ್‌ಪೋರ್ಟ್ ನಂಬರ್ ಎ-8505189ರಲ್ಲಿ ಜಮಾಲುಲ್ಲಾ ಆಜಾಂ ಬಿನ್ ಜೊಹಾರಿ ಎಂಬ ಮಲೇಷ್ಯ ಪ್ರಜೆಯ ಹೆಸರಿನಲ್ಲಿನ ಎಲ್.ಓ.ಸಿ. ನಂಬರ್ 1999100530ನ್ನು ಕಂಪ್ಯೂಟರ್‌ನಲ್ಲಿ ತೋರಿಸಿ ಅವರಿಗೆ ಮಾನಸಿಕವಾಗಿ ಒತ್ತಡ ಹೇರಿ ನಿಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಬ್ಲಾಕ್‌ಮೇಲ್ ತಂತ್ರ ಅನುಸರಿಸಿ ಶ್ರೀ.ಉನ್‌ವಲ್ಲಾ ಜೆಮ್‌ಶೆಡ್ ಸೈರೀಸ್ ರವರಿಂದ ಬಲವಂತವಾಗಿ ಆರ್ಥಿಕ ಆಪೇಕ್ಷ ಪಡೆಯಲು ಪ್ರಯತ್ನಿಸಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತೆ.

ನೀವು ಶಿಸ್ತು ಇಲಾಖೆಯಲ್ಲಿದ್ದುಕೊಂಡು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಇಮಿಗ್ರೇಷನ್‌ನಂತಹ ಸೂಕ್ಷ್ಮ ಸ್ಥಳಗಳಲ್ಲಿ ಕೆಲಸ ಮಾಡುವಾಗ ಭಾರತೀಯ ಪ್ರಜೆ ಶ್ರೀ.ಉನ್‌ವಲ್ಲಾ ಜೆಮ್‌ಶೆಡ್ ಸೈರಸ್, ರವರ ರಹದಾರಿ ಪತ್ರ ಮತ್ತು ಇತರೆ ಎಲ್ಲಾ ದಾಖಲೆಗಳು ಕಾನೂನಿನಂತೆ ಸರಿಯಾಗಿದ್ದರು ಸಹ ಸರಿಇಲ್ಲವೆಂದು ಅವರ ಮೇಲೆ ಬ್ಲಾಕ್‌ಮೇಲ್ ತಂತ್ರ ಅನುಸರಿಸಿ, ಅವರಿಂದ ಆರ್ಥಿಕ ಅಪೇಕ್ಷೆ ಪಡೆಯಲು ಪ್ರಯತ್ನಿಸಿರುವುದು ಮೇಲ್ನೋಟಕ್ಕೆ ಗೋಚರವಾಗಿರುತ್ತೆ.

ನೀವು ಶಿಸ್ತು ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಕರ್ತವ್ಯದ ಮೇಲೆ ಇರುವ ಸಮಯದಲ್ಲಿ ನಿಮ್ಮ ಕರ್ತವ್ಯ ದುರುಪಯೋಗಪಡಿಸಿಕೊಂಡು ಶಿಸ್ತು ಇಲಾಖೆಯ ನಿಯಮಾವಳಿ ಮತ್ತು ಕಾನೂನನ್ನು ಉಲ್ಲಂಘನೆ ಮಾಡಿರುತ್ತೀರೆಂದು ಆರೋಪಿಸಲಾಗಿದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲವೆಂದು ಸಲ್ಲಿಸಿದ ವರದಿಯನ್ನು ಶಿಸ್ತು ಪ್ರಾಧಿಕಾರವು ವರದಿಯನ್ನು ಒಪ್ಪದೆ, ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಕಮೀಷನರ್ (ಆಡಳಿತ) ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 20-06-2007ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ದಿನಾಂಕ:11-08-06 ರಿಂದ 18-12-2006ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು, ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ: 10–03–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯ ಪ್ರಮಾಣವು ಅಧಿಕವಾಗಿದೆ ಎಂದು ತೀರ್ಮಾನಿಸಿ, ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ, ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿತ್ತು. ಓದಲಾದ (5)ರ ಪತ್ರದಲ್ಲಿ ಆಯೋಗವು ಸರ್ಕಾರದ ಪ್ರಸ್ತಾವನೆಗೆ ಸಹಮತಿಸದೇ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಎತ್ತಿಹಿಡಿದಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 251 ಪೊಸಿಅ 2008 ಬೆಂಗಳೂರು, ದಿನಾಂಕ: 24ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಶಶಿಧರ, ಪಿ.ಸಿ.–5541, ಬಸವನಗುಡಿ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1805 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಸ್.ಎನ್. ಬೀರೇಗೌಡ, ಸಿ.ಎಚ್.ಸಿ.–77, ಸಂಚಾರಿ ಪೊಲೀಸ್ ಠಾಣೆ, ಹಾಸನ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಸಿಬ್ಬಂದಿ/211/2003–04 ದಿ:29–09–2006
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು (6)56/2006–07, ಓ.ಬಿ:ಸಂ:20/07–08 ದಿನಾಂಕ:16–06–2007
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:15–10–2007
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)87/2007–08 ದಿ:18–01–2008
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 129 ಸಿಎನ್‌ಎಸ್ 2008 ದಿನಾಂಕ:18–06–2009

ಪ್ರಸ್ತಾವನೆ:

ಶ್ರೀ ಎಸ್.ಎನ್. ಬೀರೇಗೌಡ, ಸಿ.ಎಚ್.ಸಿ.–77, ಸಂಚಾರಿ ಪೊಲೀಸ್ ಠಾಣೆ, ಇವರು ಹಾಸನ ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಬೇಜವಾಬ್ದಾರಿತನ, ನಿರ್ಲಕ್ಷತೆ ಹಾಗೂ ಕರ್ತವ್ಯಲೋಪವೆಸಗಿದ ಕಾರಣದ ಮೇಲೆ ಇವರನ್ನೊಳಗೊಂಡಂತೆ ಇತರೆ ಮೂವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6ರ ಜೊತೆ 8ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:

1) ಹಾಸನ ಸಂಚಾರಿ ಪೊಲೀಸ್ ಠಾಣೆಗೆ ನೀಡಲಾದ ಕ್ರೇನ್ (ಟೈಗರ್)ನ್ನು ಉಪಯೋಗಿಸಿ ಸಂಚಾರಿ ಠಾಣೆಗೆ ಎಳೆತಂದ ಹಾಗೂ ಪ್ರಕರಣಗಳಲ್ಲಿ ಒಳಗೊಂಡ ವಾಹನಗಳ ಮಾಲೀಕರುಗಳಿಂದ ಟೈಗರ್ ಛಾರ್ಜಸ್ ಎಂದು ಹಾಗೂ ದಂಡವೆಂದು ಲಕ್ಷಾಂತರ ಹಣವನ್ನು ವಸೂಲು ಮಾಡಿರುವುದು.
2) ಸದರಿ ವಾಹನಗಳ ಮಾಲೀಕರಿಂದ ಹಣ ವಸೂಲು ಮಾಡಲು ಇಲಾಖೆಯಿಂದ ಅಥವಾ ಸರ್ಕಾರದ ಅನುಮತಿಯಿಲ್ಲದೆ ಅನಧಿಕೃತವಾಗಿ ರಶೀತಿಗಳನ್ನು ಪ್ರಿಂಟ್‌ಮಾಡಿಸಿಕೊಂಡು ಅವ್ಯವಹಾರ ನಡೆಸಿರುವುದು.

3) ಈ ರೀತಿ ಅಕ್ರಮವಾಗಿ ವಸೂಲು ಮಾಡಿದ ಲಕ್ಷಾಂತರ ರೂಪಾಯಿಗಳಿಗೆ ಸಮರ್ಪಕವಾಗಿ ಲೆಕ್ಕಪತ್ರ ನಿರ್ವಹಿಸದೆ ಮನಸ್ಸಿಗೆ ತೋಚಿದಂತೆ ಖರ್ಚುಮಾಡಿ ಆ ಮೂಲಕ ಸರ್ಕಾರಕ್ಕೆ ವಂಚನೆ, ಸದರಿ ಹಣದ ದುರುಪಯೋಗ, ಅಧಿಕಾರ ದುರುಪಯೋಗ, ಕರ್ತವ್ಯದಲ್ಲಿ ಬೇಜವಾಬ್ದಾರಿತನ, ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಕರ್ತವ್ಯ ಲೋಪವೆಸಗಿರುವ ಆರೋಪಗಳು.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ:29-09-2006ರ ಆದೇಶದಲ್ಲಿ ಅರ್ಜಿದಾರರ ವೇತನವನ್ನು ಮುಖ್ಯಪೇದೆ ಹುದ್ದೆಯ ವೇತನದ ಕನಿಷ್ಠ ಹಂತಕ್ಕೆ ಇಳಿಸಿ, ಈ ಹಂತದಿಂದ ಹೊಸದಾಗಿ ವಾರ್ಷಿಕ ವೇತನ ಬಡ್ತಿಯನ್ನು ಗಳಿಸುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:16-06-2007ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿದೆ ಆದರೆ ಶಿಸ್ತುಪ್ರಾಧಿಕಾರದ ದಂಡನಾದೇಶವು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 59(1)(ಬಿ)ಗೆ ವಿರುದ್ಧವಾಗಿರುವುದನ್ನು ಗಮನಿಸಿ, ದಂಡನಾದೇಶವು ತಾಂತ್ರಿಕ ದೋಷಪೂರಿತ ವಾಗಿದೆಯೆಂದು ಪರಿಗಣಿಸಿ, ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸುವ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 67 ಪೊಸಿಅ 2009 ಬೆಂಗಳೂರು, ದಿನಾಂಕ: 24ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಎನ್. ಬೀರೇಗೌಡ, ಸಿ.ಎಚ್.ಸಿ.-77, ಸಂಚಾರಿ ಪೊಲೀಸ್ ಠಾಣೆ, ಹಾಸನ ನಗರ, ಇವರಿಗೆ ಶಿಸ್ತುಪ್ರಾಧಿಕಾರದ ದಿ:29-09-2006ರ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಇವರ ವೇತನವನ್ನು ಮುಖ್ಯ ಪೇದೆ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ವೇತನಕ್ಕೆ 2 ವರ್ಷಗಳ ಅವಧಿಗೆ ಸಂಚಿತ ಪರಿಣಾಮ ರಹಿತವಾಗಿ ಇಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1807 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ವಿ. ಕೃಷ್ಣಪ್ಪ, ಪಿ.ಐ., ಜಿಲ್ಲಾ ಗುಪ್ತವಾರ್ತೆ, ಜಿಲ್ಲಾ ಪೊಲೀಸ್ ಕಛೇರಿ, ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು(6)49/2005-06 ಓ.ಬಿ:ಸಂ:11/2008-09 ದಿ:03-05-2008

2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:25-07-2008

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)63/2008-09 ದಿ:23-10-2009

4) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 219 ಸಿಎನ್‌ಎಸ್ 2008 ದಿನಾಂಕ:12-05-2009

ಪ್ರಸ್ತಾವನೆ:

ಶ್ರೀ ವಿ.ಕೃಷ್ಣಪ್ಪ, ಪಿ.ಐ., ಡಿ.ಎಸ್.ಬಿ., ಕೆ.ಜಿ.ಎಫ್., ಇವರು ಈ ಹಿಂದೆ ಇಂಡಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರ ವಿರುದ್ಧ ಕರ್ತವ್ಯಲೋಪ, ಬೇಜವಾಬ್ದಾರಿತನ, ಘೋರ ನಿರ್ಲಕ್ಷತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:

"ಶ್ರೀ ವಿ.ಕೃಷ್ಣಪ್ಪ, ಪಿ.ಐ., ಡಿ.ಎಸ್.ಬಿ., ಪೊಲೀಸ್ ಅಧೀಕ್ಷಕರ ಕಛೇರಿ, ಕೆ.ಜಿ.ಎಫ್., ಈ ಹಿಂದೆ ಇಂಡಿ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ:13-07-2004 ರಂದು ಮಹಾದೇವ ತಂದೆ ಕಲ್ಲಪ್ಪ ದಶವಂತ, 35 ವರ್ಷ, ಚನ್ನದಾಸರ ಜಾತಿ ಮಾವಿನಹಳ್ಳಿ ರವರು ಖುದ್ದು ನಿಮ್ಮನ್ನು ಭೇಟಿಯಾಗಿ ದಿನಾಂಕ:11-07-2004 ರಂದು ಕೊಟ್ಟ ಫಿರ್ಯಾದುವಿನ ವಿಷಯವಾಗಿ ವಿಚಾರಿಸಲಾಗಿ ನೀವು ಜಾತಿಯ ಬಗ್ಗೆ ವಿಚಾರಣೆ ಮಾಡುತ್ತಾ ಇದ್ದೇವೆ ಎಂಬುದಾಗಿ ಹೇಳಿ ವಿಳಂಬ ನೀತಿಯನ್ನು ಅನುಸರಿಸಿರುತ್ತೀರಿ. ಅಲ್ಲದೇ ನೀವೂ ಸಹ ನಿಮಗೆ ದಿ:11-07-2004 ರಂದು ಪಿರ್ಯಾದಿಯು ನೀಡಿದ ಪಿರ್ಯಾದುವಿನ ಬಗ್ಗೆ ತಿಳಿದರೂ ವಿಚಾರ ಮಾಡದೇ ಅಂದಾದರೂ ಪ್ರಕರಣವನ್ನು ದಾಖಲಿಸಿಕೊಳ್ಳದೇ, ಕೇವಲ ದಿ:16-07-04 ರಂದು ಡಿ.ಎಸ್.ಪಿ., ಇಂಡಿ ರವರಿಗೆ ಪಿರ್ಯಾದಿಯು ಅರ್ಜಿ ಸಲ್ಲಿಸಿದ್ದು, ಅವರು ಸಿ.ಪಿ.ಐ., ಇಂಡಿ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದ್ದು, ಸಿ.ಪಿ.ಐ. ರವರು ಪಿ.ಎಸ್.ಐ. ರವರಿಗೆ ಪ್ರಕರಣ ದಾಖಲಿಸಿಕೊಳ್ಳುವ ಬಗ್ಗೆ ತಿಳಿಸಿದ ನಂತರವೇ ದಿ:17-07-2004 ರಂದು ಈ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೀರಿ. ಇದರಿಂದಾಗಿ, ನೀವು ಸದರಿ ಘಟನೆಯ ಬಗ್ಗೆ ಕಾನೂನು ಕ್ರಮ ಜರುಗಿಸಲು ಆರು ದಿನ ವಿಳಂಬ ನೀತಿ ಅನುಸರಿಸಿ ಪಿರ್ಯಾದಿಯು ತಮಗಾದ ಅನ್ಯಾಯವನ್ನು ತೋಡಿಕೊಂಡಿದ್ದರೂ ಸಹ ಅದರ ಬಗ್ಗೆ ಕಾನೂನು ಕ್ರಮ ಜರುಗಿಸದೇ ಪ್ರಕರಣ ಮುಚ್ಚಿಹಾಕಿರುತ್ತಾರೆ.

ನಿಮಗೆ ಪಿರ್ಯಾದುದಾರನು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವನೆಂದು 2001ನೇ ಸಾಲಿನಿಂದ ಠಾಣಾ ದಾಖಲೆಗಳು ಇರುವ ಬಗ್ಗೆ ತಿಳುವಳಿಕೆ ಇದ್ದರೂ ಸಹ ಪಿರ್ಯಾದಿದಾರನು ಮತ್ತು ದಿ:13-07-2004 ರಂದು ನಿಮಗೆ ತನ್ನ ಜಾತಿಯ ಪ್ರಮಾಣ ಪತ್ರ ಒದಗಿಸಿದ್ದರೂ ಸಹ ಹಾಗೂ ದಿ:29-07-2004 ರಂದೇ ತಹಶೀಲ್ದಾರ್ ರವರಿಂದ ಪಡೆದ ಪ್ರಮಾಣ ಪತ್ರದ ಆಧಾರದ ಮೇಲೆ ಸದರಿ ಪ್ರಕರಣದಲ್ಲಿ ಕಲಂ 3(1)(10)(11) ಎಸ್‌ಸಿ/ಎಸ್‌ಟಿ ಆಕ್ಟ್ ಅಳವಡಿಸಿಕೊಂಡಿದ್ದಲ್ಲಿ, ಈ ಪ್ರಕರಣದಲ್ಲಿ ಆರೋಪಿತರು ನಿರೀಕ್ಷಣಾ ಜಾಮೀನು ಪಡೆಯಲು ಸಾಧ್ಯ ವಾಗುತ್ತಿರಲಿಲ್ಲ. ಆದರೆ, ನೀವು ಆರೋಪಿತರ ಮೇಲೆ ಮೊ.ನಂ.224/2004 ಕಲಂ 447-143-147-148-354-504-427-506 ರೆ/ವಿ 149 ಐಪಿಸಿ ಕಲಂಗಳ ಅಡಿಯಲ್ಲಿ ಸಾದಾ ಪ್ರಕರಣ ದಾಖಲಿಸಿ ಇಲ್ಲಸಲ್ಲದ ಸಬೂಬು ಹೇಳಿಕೊಂಡು ಅನಾವಶ್ಯಕವಾಗಿ ಕಾಲ ವ್ಯಯಮಾಡಿ ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ಎಸ್‌ಸಿ/ಎಸ್‌ಟಿ ಕಲಂ ಅಳವಡಿಸಲು 2 ತಿಂಗಳು ವಿಳಂಬ ಮಾಡಿ ದಿ:30-07-04 ರಂದು ಆರೋಪಿತರು ಮಾನ್ಯ ನ್ಯಾಯಾಲಯದಿಂದ ಸುಲಭವಾಗಿ ನಿರೀಕ್ಷಣಾ ಜಾಮೀನು ಪಡೆದುಕೊಳ್ಳಲು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಾಯ ಮಾಡಿ ನಿಮ್ಮ ಕರ್ತವ್ಯದಲ್ಲಿ ಕರ್ತವ್ಯಲೋಪ, ಬೇಜವಾಬ್ದಾರಿತನ, ಘೋರ ನಿರ್ಲಕ್ಷತೆ ಮತ್ತು ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 03-05-08ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವಾರ್ಷಿಕ ವೇತನಬಡ್ತಿಗೆ ದಕ್ಕೆಯಾಗದಂತೆ ಎರಡು ವರ್ಷಗಳ ಮಟ್ಟಿಗೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಮಾರ್ಪಡಿಸುವ ಕುರಿತು ಕರ್ನಾಟಕ ಲೋಕಸೇವಾ ಆಯೋಗವನ್ನು ಸಮಾಲೋಚಿಸಲಾಗಿದೆ. ಮೇಲೆ ಓದಲಾದ (4)ರ ಪತ್ರದಲ್ಲಿ ಆಯೋಗವು ಸರ್ಕಾರದ ಪ್ರಸ್ತಾವನೆಗೆ ಸಹಮತಿಸದೇ ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಎತ್ತಿ ಹಿಡಿದಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 243 ಪೊಸಿಅ 2008 ಬೆಂಗಳೂರು, ದಿನಾಂಕ: 24ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ವಿ. ಕೃಷ್ಣಪ್ಪ, ಪಿ.ಐ., ಜಿಲ್ಲಾ ಗುಪ್ತವಾರ್ತೆ, ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1808

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಂ.ಎಸ್ ಮುರಳೀಕೃಷ್ಣ, ಮಾಜಿ ಸಿ.ಪಿ.ಸಿ.-513, ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಇವರ ಆದೇಶ ಸಂಖ್ಯೆ:ಡಿಇ/11/2007–08 ಓ.ಬಿ:389/07–08 ದಿ:29–03–2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಅಪೀಲು:01/2008–09 ಓ.ಬಿ: 8/2008–09 ದಿ:03–05–2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:27–09–08
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು (2)93/2008–09 ದಿನಾಂಕ:04–02–2009.

ಪ್ರಸ್ತಾವನೆ:

ಶ್ರೀ ಎಂ.ಎಸ್ ಮುರಳೀಕೃಷ್ಣ, ಇವರು ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಿ.ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

> "ನೀವು ಪದೇ ಪದೇ ಅನಧಿಕೃತ ಗೈರುಹಾಜರಿಯಾಗುವ ಹವ್ಯಾಸವುಳ್ಳವರಾಗಿದ್ದು, ಈ ಹಿಂದೆ ಗೈರು ಹಾಜರಿಯಾದ ಅವಧಿಗಳನ್ನು ಲಘು ಶಿಕ್ಷೆ ಹಾಗೂ ಕಠಿಣ ಶಿಕ್ಷೆ ವಿಧಿಸುವುದರ ಮೂಲಕ ಗೈರುಹಾಜರಿ ಅವಧಿಗಳನ್ನು ಇತ್ಯರ್ಥ ಪಡಿಸಿದ್ದರೂ ಸಹ ಇವರ ಈ ಹವ್ಯಾಸದಲ್ಲಿ ಯಾವುದೇ ಸುಧಾರಣೆಯಾಗದೇ ದಿನಾಂಕ: 20–06–07 ರಿಂದ ಅನಧಿಕೃತ ಗೈರುಹಾಜರಿಯಾಗಿರುವುದರ ಮೂಲಕ ಬೇಜವಾಬ್ದಾರಿ, ನಿರ್ಲಕ್ಷತೆ ಹಾಗೂ ಅಶಿಸ್ತು ಪ್ರದರ್ಶಿಸಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:29–03–08ರ ಆದೇಶದಲ್ಲಿ "ಅರ್ಜಿದಾರರನ್ನು ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಿದ್ದಾರೆ ಹಾಗೂ ಅನಧಿಕೃತವಾಗಿ ಗೈರುಹಾಜರಾದ ದಿನಾಂಕ:20–06–07 ರಿಂದ 24–12–07ರ ವರೆಗಿನ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಲಾಗಿದೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:03–05–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 55 ಪೊಸಿಅ 2009 ಬೆಂಗಳೂರು, ದಿನಾಂಕ: 8ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎಸ್ ಮುರಳೀಕೃಷ್ಣ, ಮಾಜಿ ಸಿ.ಪಿ.ಸಿ.–513, ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1809

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎನ್.ವೈ. ಶಿವಣ್ಣವರ, ಮಾಜಿ ಎ.ಪಿ.ಸಿ.–152, ಡಿ.ಎ.ಆರ್., ಗದಗ. ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ, ಇವರ ಆದೇಶ ಸಂಖ್ಯೆ:ಡಿಇ/ಪಿಆರ್–6/1/2003 ಅ.ಪು. ಸಂಖ್ಯೆ:361/03 ದಿ:08–10–2003
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು:184/ಉವ/2008 ದಿ:02–04–2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:08–12–08
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)103/2008–09 ದಿನಾಂಕ:08–05–2009

ಪ್ರಸ್ತಾವನೆ:

ಶ್ರೀ ಎನ್.ವೈ. ಶಿವಣ್ಣವರ, ಇವರು ಸಶಸ್ತ್ರ ಪೊಲೀಸ್ ಪೇದೆಯಾಗಿ ಡಿ.ಎ.ಆರ್. ಗದಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಘೋರ ಕರ್ತವ್ಯಲೋಪ ಹಾಗೂ ನಿಷ್ಕಾಳಜಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

> "ಆಪಾದಿತರಿಗೆ ದಿ:05–01–2003 ರಂದು ಸ್ಟ್ಯಾಂಡ್ ಬೈ ಕರ್ತವ್ಯವನ್ನು ನೇಮಿಸಲಾಗಿತ್ತು. ಸದರಿ ದಿನಾಂಕದಂದು ಸಾಯಂಕಾಲ 7–30 ಗಂಟೆಯ ಸುಮಾರಿಗೆ ಸದರಿಯವರು ಮಧ್ಯಪಾನ ಸೇವಿಸಿದ ಅಮಲಿನಲ್ಲಿ ಕಚೇರಿಯ ಒಳಗಡೆ ಬರುತ್ತಿದ್ದು, ಆ ವೇಳೆಯಲ್ಲಿ ಸೇಂಟ್ರಿ ಎಪಿಸಿ 203 ಎಂ.ಎಸ್. ದೇಸಾಯಿ ರವರು ಒಳಗಡೆ ಹೋಗದಂತೆ ತಡೆಯಲಾಗಿ, ಅವರನ್ನು ನೂಕಿ ಹೋಗಿ ಡ್ಯೂಟಿ ಆಫೀಸರ್ ಆರ್.ಎಸ್.ಐ.. ಶ್ರೀ ಎಸ್.ಎಸ್. ಪಗಡಿಯವರನ್ನು, ನೂಕಿ ಅವರ ಕರ್ತವ್ಯಕ್ಕೆ ಅಡೆತಡೆಯನ್ನುಂಟು ಮಾಡಿ ಆರ್.ಪಿ.ಐ. ಕಛೇರಿಯ ಒಳಗಡೆ ಓಡಿ ಹೋಗಿ ಟೇಬಲ್ ಮೇಲಿನ ಗ್ಲಾಸ್ ಒಡೆದು, ದೂರವಾಣಿಯನ್ನು ತನ್ನ ಮನ ಬಂದಂತೆ ಒಗೆದಿದ್ದು. ಅಲ್ಲದೆ ಜೆರಾಕ್ಸ್ ಮಷೀನನ್ನು ಜಗ್ಗಿ ಕೆಳಗೆ ಬೀಳಿಸುವ ಪ್ರಯತ್ನದಲ್ಲಿದ್ದರು, ಅಷ್ಟರಲ್ಲಿ ಎಂ.ಜಿ.ಗಾರ್ಡ್ ಕಮಾಂಡರ್ ಎಹೆಚ್‌ಸಿ 6 ವಿ.ಎಸ್. ಬಾವಿಕಟ್ಟಿ ಗಾರ್ಡ್ ಸಿಬ್ಬಂದಿಗಳಾದ ಎಪಿಸಿ 163 ಎಸ್.ವೈ. ಅರಹುಣಸಿ, ಎಪಿಸಿ–164 ಸಿ.ಜಿ. ಮಡಿವಾಳರ, ಎಪಿಸಿ–247 ಎಂ.ಜಿ. ಶಿರೋಳ ಮತ್ತು ಸ್ಟಾಫ್ ಸಿಬ್ಬಂದಿಗಳಾದ ಎಪಿಸಿ 196 ಆರ್.ಎಂ ಅಂಗಡಿ, ಎಪಿಸಿ–238 ಎಸ್.ಎನ್.ಮಾಳೇಕೊಪ್ಪ ಮತ್ತು ಎಪಿಸಿ–244 ಎಂ.ಕೆ.ಕಾತರಕಿ, ಡಿ.ಎ.ಆರ್ ಗದಗ ಇವರೆಲ್ಲರೂ ಕೂಡಿ ನಿಮ್ಮನ್ನು ಕಛೇರಿಯಿಂದ ಹೊರಗಡೆ ಕರೆದುಕೊಂಡು ಬರಲಾಗಿ ಕರ್ತವ್ಯ ಅಧಿಕಾರಿಗಳಾದ ಆರ್‌ಎಸ್‌ಐ ಎಸ್.ಎಸ್. ಪಗಡಿಯವರಿಗೆ ನಿಮ್ಮನ್ನು ಬಿಡುವುದಿಲ್ಲಾ ಸಾಯಿ ಹೊಡಿಯುತ್ತೇನೆ ಅಂತಾ ಜೀವದ ಬೆದರಿಕೆಯನ್ನು ಹಾಕಿ ನೀವು ಒಬ್ಬ ಶಿಸ್ತು ಇಲಾಖೆಯ ಪೊಲೀಸ್ ಇದ್ದು, ಅದನ್ನು ಮರೆತು ಶಿಸ್ತಿನ ಇಲಾಖೆಯ ವಿರುದ್ಧವಾಗಿ ನಡೆದಿದ್ದು, ಅಲ್ಲದೆ ದುರ್ನಡತೆಯಿಂದಾ ವರ್ತಿಸಿ ನಿಮ್ಮ ಕರ್ತವ್ಯದಲ್ಲಿ ಘೋರ ಕರ್ತವ್ಯಚ್ಯುತಿ ಹಾಗೂ ನಿಷ್ಕಾಳಜಿತನ ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅನುಶಿಸ್ತಿನ ಶಿಸ್ತು ಪ್ರಾಧಿಕಾರಿ ಹಾಗೂ

ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 08–10–03ರ ಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಿ, ಅಮಾನತ್ತಿನ ಅವಧಿಯನ್ನು ನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ಂಕ:02–04–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಸಮರ್ಥನೀಯ ಕಾರಣಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವೆಂದು ಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 08 ಪೊಸಿಅ 2009, ಬೆಂಗಳೂರು, ದಿನಾಂಕ: 8ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ ಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ವೈ. ಶಿವಣ್ಣವರ. ಮಾಜಿ ಎ.ಪಿ.ಸಿ.–152, ಆರ್., ಗದಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರ್. 1810

ಟಿ.ಎಸ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಕೆ.ಎಸ್. ಕಲ್ಲೇದೇವರು, ಪಿ.ಎಸ್.ಐ. ಕಮಲಪುರ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿ, ಬೀದರ್, ಇವರ ಆದೇಶ ಸಂಖ್ಯೆ:ಸಿಬ್ಬಂದಿ:4: ಲಶಿ/147:2005 ಓ.ಬಿ:890/06 ದಿ:13–03–2006
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ:ಅಪೀಲು:120/ಈವ:2006 ಓ.ಬಿ:73/ಈವ:2007 ದಿ:22–01–2007
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:25–08–2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)75/2008–09 ದಿನಾಂಕ:18–04–2009

ವನೆ:

ಶ್ರೀ ಕೆ.ಎಸ್. ಕಲ್ಲೇದೇವರು, ಪಿ.ಎಸ್.ಐ., ಕಮಲಪುರ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರು (ಇನ್ನು ಮುಂದೆ ದಾರರೆಂದು ಕರೆಯಲ್ಪಡುವ) ಮುಡಬಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯ ನಿರ್ಲಕ್ಷತೆ ಹಾಗೂ ಡತೆಯ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ರೋಪಣೆ:

"ನೀವು ಪಿ.ಎಸ್.ಐ. ಮುಡಬಿಯಲ್ಲಿ ಠಾಣಾಧಿಕಾರಿ ಅಂತಾ ಜವಾಬ್ದಾರಿಯುತ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರತಿಯೊಂದು ಈ ಕಾರ್ಯಾಲಯದ ವಿ.ಆರ್. ಅಥವಾ ಪಾಸ್‌ಪೋರ್ಟ್ ವೆರಿಫಿಕೇಶನ್ ಸಲುವಾಗಿ ನಿಮಗೆ ಕಳುಹಿಸಿ, ಖಚಿತ, ಸ್ಪಷ್ಟ ಅಭಿಪ್ರಾಯದ ವರದಿ ಕೊಡಲು ಸೂಚಿಸುತ್ತಿದ್ದು, ಈ ಸೂಚನೆ ಗಳನ್ವಯ ನೀವು ವಿಧಿಬದ್ಧವಾಗಿ ಸಂಬಂಧಿಸಿದ ಠಾಣೆಯ ದಾಖಲಾತಿ ರಿಜಿಸ್ಟರಗಳನ್ವಯ ಭೌತಿವಾಗಿ ಪರಿಶೀಲನೆ ಮಾಡಿ ವರದಿ ಸಲ್ಲಿಸುವ ನಿಮ್ಮ ಆದ್ಯ ಕರ್ತವ್ಯವಾಗಿದ್ದರೂ ಸಹ ಇದನ್ನು ಬದಿಗೊತ್ತಿ ಶ್ರೀ ಬಾಬು ತಂದೆ ಧರ್ಮಣ್ಣಾ ಸಾ:ಸುಂಟಾಣ ಇವರ ಮೇಲೆ ಮುಡಬಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂ:98–2000 ಕಲಂ 147, 148, 149, 323, 324, 342, 427, 501 ಹಾಗೂ ಅಪರಾಧ ಸಂಖ್ಯೆ:100–2000 ಕಲಂ 107 ದ.ಪ್ರ.ಸ. ಪ್ರಕರಣಗಳಲ್ಲಿ ಆರೋಪಿಯಾಗಿದ್ದರೂ ಸಹ ಇವರ ಪಾಸ್‌ಪೋರ್ಟ್ ವೆರಿಫಿಕೇಶನ್ ವರದಿಯಲ್ಲಿ ಪಾಸ್‌ಪೋರ್ಟ್ ಕೊಡಿಸಲು ಶಿಫಾರಸ್ ಮಾಡಿ, ಇದ್ದ ಸಂಗತಿ ಮುಚ್ಚಿ ಹಾಕಿ ಉದ್ದೇಶ ಪೂರ್ವಕವಾಗಿ

ಮೇಲಾಧಿಕಾರಿ ಯವರಿಗೆ ಸುಳ್ಳು ವರದಿ ಸಲ್ಲಿಸಿ, ಕರ್ತವ್ಯ ನಿರ್ಲಕ್ಷ್ಯ ಹಾಗೂ ಖಂಡಸೀಯ ದುರ್ನ
ಎಸಗಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾ ಜಿಲ್ಲಾ ಪೊಲೀಸ್ ಅಧಿಕಾರಿ, ಬೀದರ್, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 13-03-06ರ ಆದೇಶ "ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ವರ್ಷ ಕ ಮುಂದೂಡಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲ ದಿನಾಂಕ:22-01-07ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂ ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 303 ಪೊಸೇಅ 2008 ಬೆಂಗಳೂರು, ದಿನಾಂಕ: ೩೦ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ.ಎಸ್. ಕಲ್ಲೇದೇವರು, ಪಿ.ಎಸ್.ಐ., ಕಮಲಾ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1811 **ಟಿ.ಎಸ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗ

ವಿಷಯ: ಶ್ರೀ ಎಚ್.ಎನ್. ಮಹಾಬಳೇಶ್ವರಪ್ಪ, ಪೊಲೀಸ್ ಇನ್ಸ್‌ಪೆಕ್ಟರ್, ವಿದ್ಯಾನಗರ ಪೊಲೀಸ್ ಠಾಣೆ, ಹುಬ್ಬ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇ ಆದೇಶ ಸಂಖ್ಯೆ:ಇವಿ/9/ಈವ/2001 ಆ.ಪು:ಸಂ:86/ಈವ/2007/840 ದಿ:20-02-2002
2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:11-03-2008
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಸಂಖ್ಯೆ:ಸಿಬಿ(8)50/2008-09 ದಿ:17-03-09
4) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 33 ಸಿಎಸ್‌ಎಸ್ 20 ದಿನಾಂಕ:18-06-2009

ಪ್ರಸ್ತಾವನೆ:

ಶ್ರೀ ಎಚ್.ಎನ್. ಮಹಾಬಳೇಶ್ವರಪ್ಪ, ಪೊಲೀಸ್ ಇನ್ಸ್‌ಪೆಕ್ಟರ್, ವಿದ್ಯಾನಗರ ಪೊಲೀಸ್ ಠಾಣೆ, ಹುಬ್ಬಳ್ಳಿ, ಇವ ಗಂಗಾವತಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡು ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:

"ಶ್ರೀ ಚನ್ನಪ್ಪ ಹರಸೂರು, ಎ.ಪಿ.ಪಿ., ರವರ ವಿರುದ್ಧ ಸುಳ್ಳು ಆಪಾದನೆ ಮಾಡಿ ಮೇಲಾಧಿಕಾರಿಯವರಿಗೆ ತಪ್ಪು ಮಾಹಿತಿಯನ್ನು ನೀಡಿ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲ

ಾಂಕ:20-02-2002 ರ ಆದೇಶದಲ್ಲಿ ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಶಿಸ್ತು ಪ್ರಾಧಿಕಾರದ ದಂಡನೆಯನ್ನು ಗಶ: ಮಾರ್ಪಡಿಸುವ ಸಲುವಾಗಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿದ್ದು, ಆಯೋಗವು ್ಕಾರವು ಪ್ರಸ್ತಾಪಿಸಿರುವ ದಂಡನೆಯು ಲಘುವಾಗಿರುವುದರಿಂದ ಶಿಸ್ತು ಪ್ರಾಧಿಕಾರದ ದಂಡನೆಗೆ ಓದಲಾದ (5)ರ ಪತ್ರದಲ್ಲಿ ಮತಿ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 13 ಪೊಸಿಅ 2009 ಬೆಂಗಳೂರು, ದಿನಾಂಕ: 15ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಚ್.ಎನ್. ಮಹಾಬಳೇಶ್ವರಪ್ಪ, ಪೊಲೀಸ್ ಇನ್ಸ್‌ಪೆಕ್ಟರ್, ್ಯಾನಗರ ಪೊಲೀಸ್ ಠಾಣೆ, ಹುಬ್ಬಳ್ಳಿ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. 1812

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಕೆ. ರಾಜೇಂದ್ರ ಪ್ರಸಾದ, ವೃತ್ತ ನಿರೀಕ್ಷಕರು, ಬಾಲ್ಕಿ ಪೊಲೀಸ್ ಠಾಣೆ, ಬೀದರ್ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಮೈಸೂರು ನಗರ, ಇವರ ಆದೇಶ ಸಂಖ್ಯೆ: ಇವಿ:18:2000-01 ಓ.ಬಿ:257/2001-02 ದಿ:17-01-2002

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(8)12/ 2002-03 ದಿ:07-04-2004

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:24-11-2008

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)12/2002-03 ದಿ:06-05-09

ತಾವನೆ:

ಶ್ರೀ ಕೆ. ರಾಜೇಂದ್ರ ಪ್ರಸಾದ, ವೃತ್ತ ನಿರೀಕ್ಷಕರು, ಬಾಲ್ಕಿ ಪೊಲೀಸ್ ಠಾಣೆ, ಬೀದರ್ (ಇನ್ನು ಮುಂದೆ ್ಜಿದಾರರೆಂದು ಕರೆಯಲ್ಪಡುವ) ಇವರು ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ದರ್ಭದಲ್ಲಿ ಕರ್ತವ್ಯಲೋಪ, ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರನ್ನೊಳಗೊಂಡಂತೆ ಇತರೇ ಮೂವರು ್ಬಂದಿಗಳ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರ ಜೊತೆಗೆ 8 ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ೋಷರೋಪಣೆ:

1. "ದಿ:08-03-2001 ರಂದು ಕುವೆಂಪುನಗರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿಯಾದ ಕು:ವಿನೋದ ಎಂಬಾಕೆಯನ್ನು ವಿಚಾರಣೆಯ ನೆಪದಲ್ಲಿ ನಿಯಮಬಾಹಿರ ವಾಗಿ ಠಾಣಾ ಸಿಬ್ಬಂದಿ ಮಹಿಳಾ ಪೇದೆ 139 ಶ್ರೀಮತಿ ಲಕ್ಷ್ಮಮ್ಮ ರವರ ಮೂಲಕ ಪೊಲೀಸ್ ಠಾಣೆಗೆ ಕರೆತಂದು ಕರ್ತವ್ಯದಲ್ಲಿ ಲೋಪವನ್ನು ಎಸಗಿರುವ ಬಗ್ಗೆ."
2. "ದಿ:08-03-2001 ರಂದು ಕುವೆಂಪುನಗರ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಯಾದ ಕು:ವಿನೋದ ಎಂಬಾಕೆಯನ್ನು ವಿಚಾರಣೆಯ ನೆಪದಲ್ಲಿ ಠಾಣೆಗೆ ಕರೆತಂದು ಆಕೆಗೆ ತೀವ್ರ ತರದ ಮಾನಸಿಕ ಹಾಗೂ ದೈಹಿಕ ಕಿರುಕುಳವನ್ನು ನೀಡಿ ಕರ್ತವ್ಯದಲ್ಲಿ ತೀವ್ರ ದುರ್ನಡತೆ ಯನ್ನು ಪ್ರದರ್ಶಿಸಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಲೀಸ್ ಕಮೀಷನರ್, ಮೈಸೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 17-01-2002ರ

ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗೆ ದಕ್ಕೆಯಾಗುವಂತೆ ಎರಡು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 07-04-2004ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧ ಆರೋಪ ಸಾಬೀತಾಗಿದೆ, ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಸಮರ್ಥನೀಯ ಕಾರಣಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 385 ಪೊಸಿಅ 2008 ಬೆಂಗಳೂರು, ದಿನಾಂಕ: 10ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ರಾಜೇಂದ್ರ ಪ್ರಸಾದ, ವೃತ್ತ ನಿರೀಕ್ಷಕರು, ಬಾಲ್ಕಿ ಪೊಲೀಸ್ ಠಾಣೆ, ಬೀದರ್, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1816 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು).

ವಿಷಯ: ಶ್ರೀ ಎಚ್.ವಿ.ಕೃಷ್ಣಮೂರ್ತಿ, ಮಾಜಿ ಎ.ಪಿ.ಸಿ.-2585, ಸಿ.ಎ.ಆರ್. ಉತ್ತರ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ಸಿ.ಎ.ಆರ್. ಉತ್ತರ ಬೆಂಗಳೂರು, ಇವರ ಆದೇಶ ಸಂಖ್ಯೆ:3:ಡಿಇ:ಆರ್:06, 2004-05 ದಿನಾಂಕ: 20/28-01-2005
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಕಮೀಷನರ್, ಸಿ.ಎ.ಆರ್., ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ:01/ ಅಪೀಲು-2/2006 ದಿ:25-06-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:18-07-08
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)46/2008-09 ದಿ:05-01-09
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 08 ಸಿಎಸ್‌ಎಸ್ 09 ದಿನಾಂಕ:18-05-2009

ಪ್ರಸ್ತಾವನೆ:

ಶ್ರೀ ಎಚ್.ವಿ. ಕೃಷ್ಣಮೂರ್ತಿ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಸಿ.ಎ.ಆರ್. ಬೆಂಗಳೂರಿನಲ್ಲಿ ಎ.ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾದ ಹಿನ್ನೆಲೆಯಲ್ಲಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

> "ಶ್ರೀ.ಎಚ್.ವಿ.ಕೃಷ್ಣಮೂರ್ತಿ, ಎ.ಪಿ.ಸಿ.-2585, ಪಂಗಡ ಸಿ.ಎ.ಆರ್ ಉತ್ತರ, ಥಣಿಸಂದ್ರ, ಬೆಂಗಳೂರು, ಆದ ನೀವು ದಿ:19-02-2004 ರಿಂದ ಯಾವ ಪೂರ್ವಾನುಮತಿಯನ್ನು ಪಡೆಯದೆ, ಹಾಗೂ ಯಾವುದೇ ರಜೆ ಮಂಜೂರಾತಿ ಪಡೆಯದೆ, ಪೋನ್ ಮುಖಾಂತರ ವಾಗಲಿ, ಯಾವುದೇ ವಿಧದಲ್ಲಿಯಾಗಲಿ, ನಿಮ್ಮ ಗೈರುಹಾಜರಿಯ ಕಾರಣವನ್ನು ಕಛೇರಿಗೆ ತಿಳಿಸದೇ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾಗಿರುತ್ತೀರಿ ಹಾಗೂ ಗೈರುಹಾಜರಿಯಲ್ಲಿಯೇ ಮುಂದುವರಿದಿರುತ್ತೀರಿ, ನಿಮ್ಮ ಅಲ್ಪ ಸೇವಾವಧಿಗೆ ಸಂಬಂಧಿಸಿದ ಸೇವಾ ದಾಖಲೆಗಳನ್ನು ಪರಿಸೀಲಿಸಿದಾಗ ನೀವು ಕರ್ತವ್ಯದಿಂದ ಪದೇಪದೇ ಗೈರುಹಾಜರಾಗಿದ್ದು ಕಂಡುಬಂದಿದ್ದು

ಗೈರುಹಾಜರಿಯ ಹವ್ಯಾಸವನ್ನು ಬೆಳೆಸಿಕೊಂಡಿರುತ್ತೀರಿ. ಇದು ಶಿಸ್ತಿನ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನಿಮ್ಮ ಅಶಿಸ್ತು, ದುರ್ನಡತೆ ಹಾಗೂ ಬೇಜವಾಬ್ದಾರಿಯನ್ನು ತೋರಿಸುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ಸಿ.ಎ.ಆರ್. (ಉತ್ತರ) ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 20/28-01-05ರ ಆದೇಶದಲ್ಲಿ "ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ ದಿ:19-02-04 ರಿಂದ 28-01-05ರ ವರೆಗಿನ ಅನಧಿಕೃತ ಗೈರುಹಾಜರಾದ ಅವಧಿಯನ್ನು ವೇತನರಹಿತರಜೆ ಎಂದು ಪರಿಗಣಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಆಯುಕ್ತರು, ಸಿ.ಎ.ಆರ್., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ:25-06-08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧ ಹೊರಿಸಲಾದ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿದೆ. ಅರ್ಜಿದಾರರು ಸರ್ಕಾರದಲ್ಲಿ ಸಲ್ಲಿಸಿದ ಸೇವೆಯನ್ನು ಗಮನದಲ್ಲಿರಿಸಿ ಮಾನವೀಯ ದೃಷ್ಠಿಯಿಂದ ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಲು, ಸರ್ಕಾರವು ತೀರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 32 ಪೊಸಿಅ 2009 ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಚ್.ವಿ.ಕೃಷ್ಣಮೂರ್ತಿ, ಮಾಜಿ ಎ.ಪಿ.ಸಿ.-2585, ಸಿ.ಎ.ಆರ್. (ಉತ್ತರ) ಬೆಂಗಳೂರು, ಇವರಿಗೆ ಶಿಸ್ತುಪ್ರಾಧಿಕಾರವು ವಿಧಿಸಿದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಸದರಿ ದಿ:28-01-05 ರಿಂದಲೇ ಜಾರಿಗೆ ಬರುವಂತೆ ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಿದೆ. ಅನಧಿಕೃತವಾಗಿ ಗೈರುಹಾಜರಾದ ದಿ:19-02-04 ರಿಂದ 28-01-05ರ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1848 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಗುರುದತ್ತ, ಮಾಜಿ ಸಿಪಿಸಿ-683, ಗೋಗಿ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ, ಜಿಲ್ಲೆ, ಇವರ ಆದೇಶ ಸಂಖ್ಯೆ: ಡಿಇ/27/2007 DOB No:485: 2008 ದಿನಾಂಕ:05-05-2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ:ಅಪೀಲು 39/ಈವ/2008/1944 ಅ.ಪು.ಸಂ:451/ಈವ/2008 ದಿ:29-08-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:23-09-2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)82/2008-09 ದಿ:07-01-2009
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 07 ಸಿಎನ್ಎಸ್ 09 ದಿನಾಂಕ:18.05.2009

ಪ್ರಸ್ತಾವನೆ:

ಶ್ರೀ ಗುರುದತ್ತ, ಸಿಪಿಸಿ-683, ಗೋಗಿ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಅನಧಿಕೃತವಾಗಿ ಗೈರುಹಾಜರಾದ ಆರೋಪದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

"ನೀವು ಗೋಗಿ ಪೊಲೀಸ್ ಠಾಣೆಯಲ್ಲಿ 6ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ನಿಮ್ಮ ಕರ್ತವ್ಯದ ಅವಧಿಯಲ್ಲಿ ದಿನಾಂಕ:08-02-2007 ರಿಂದ 06-07-07ರ ವರೆಗೆ ಗೈರುಹಾಜರಿಯಲ್ಲಿದ್ದು, ದಿ:23-03-07 ರಂದು 30 ದಿವಸದೊಳಗಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಪಲಾಯನ ನೋಟಿಸ್ ಜಾರಿ ಮಾಡಿದರೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.

ಹೀಗೆ ಕರ್ತವ್ಯದಲ್ಲಿ ಅತೀವ ನಿಷ್ಕಾಳಜಿತನ ತೋರಿಸಿ ಗೈರು ಹಾಜರಾಗಿದ್ದು ನೀವು ಒಬ್ಬ ಶಿಸ್ತಿನ ಇಲಾಖೆಯ ಸಿಬ್ಬಂದಿಯಿದ್ದು ನಿಮ್ಮ ಮೇಲಾಧಿಕಾರಿಗಳಿಗೆ ಹೇಳದೆ ಕೇಳದೆ ಗೈರುಹಾಜರಾಗಿದ್ದೀರಿ ನಿಮಗೆ ಕರ್ತವ್ಯದ ಬಗ್ಗೆ ತಿಳುವಳಿಕೆ ಇದ್ದರೂ ಸಹ ಗೈರು ಹಾಜರಾಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:05-05-08ರ ಆದೇಶದಲ್ಲಿ ಅರ್ಜಿದಾರರರನ್ನು ಸೇವೆಯಿಂದ ವಜಾಗೊಳಿಸಿ ದಿ:09-02-07 ರಿಂದ 06-07-07ರ ವರೆಗಿನ ಅನಧಿಕೃತವಾಗಿ ಗೈರು ಹಾಜರಾದ ಅವಧಿಯನ್ನು 'ಸಂಬಳರಹಿತ ರಜೆ' ಎಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ:29-08-2008ರ ಆದೇಶದಲ್ಲಿ ಮೇಲ್ಮನವಿ ಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇಲಾಖಾ ವಿಚಾರಣೆಯಲ್ಲಿ ಆರೋಪವು ಸಾಬೀತಾಗಿದ್ದು, ಇವರು ಸೇವಾವಧಿಯನ್ನು ಗಣನೆಗೆ ತೆಗೆದುಕೊಂಡು ಮಾನವೀಯ ದೃಷ್ಟಿಯಿಂದ ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿ, ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 333 ಪೊಸಿಅ 2008 ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಗುರುದತ್ತ, ಮಾಜಿ ಸಿಪಿಸಿ-683, ಇವರಿಗೆ ಶಿಸ್ತುಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಸದರಿ ದಿ:05-05-08 ರಿಂದಲೇ ಜಾರಿಗೆ ಬರುವಂತೆ "ಕಡ್ಡಾಯ ನಿವೃತ್ತಿಗೊಳಿಸಿ" ಆದೇಶಿಸಿದೆ. ದಿ:09-02-07 ರಿಂದ 06-07-07ರ ವರೆಗಿನ ಅನಧಿಕೃತವಾಗಿ ಗೈರುಹಾಜರಾದ ಅವಧಿಯನ್ನು ಸಂಬಳರಹಿತ ರಜೆಯೆಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1849

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಬಿ.ಡಿ. ಪೂಜಾರಿ, ಮಾಜಿ ಸಿ.ಪಿ.ಸಿ., ಇಂಡಿ, ಪೊಲೀಸ್ ಠಾಣೆ, ಬಿಜಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಬಿಜಾಪುರ, ಇವರ ಆದೇಶ ಸಂಖ್ಯೆ:ಸಿಬ್ಬಂದಿ-3/ಪಿಆರ್-1/2007 ಆ.ಪು.ಸಂ:464/07 ದಿ:31-08-2007
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು:186:ಉವ:2007 ದಿ:09-05-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:15-09-2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು(2)79/2008-09 ದಿ:15-01-2009
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 14 ಸಿಎನ್‌ಎಸ್ 09 ದಿನಾಂಕ:18-05-2009

ಪ್ರಸ್ತಾವನೆ:

ಶ್ರೀ ಬಿ.ಡಿ.ಪೂಜಾರಿ, ಸಿ.ಪಿ.ಸಿ.-994, ಇವರು ಇಂಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು .ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾದ ಹಿನ್ನೆಲೆಯಲ್ಲಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

> "ನೀವು (ಸಿ.ಪಿ.ಸಿ.-994 ಶ್ರೀ.ಬಿ.ಡಿ.ಪೂಜಾರಿ) ಇಂಡಿ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ನೀವು ದಿ:23-06-06 ರಿಂದ ಮೇಲಾಧಿಕಾರಿಗಳಿಗೆ ತಿಳಿಸದೇ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರು ಉಳಿದಿದ್ದು, ಈ ಬಗ್ಗೆ ನಮಗೆ ಫಲಾಯನ ನೋಟೀಸು ಜ್ಯಾರಿಯಾದರೂ ಸಹ ಇನ್ನುವರೆಗೆ ಕರ್ತವ್ಯಕ್ಕೆ ಹಾಜರಾಗದೇ ಘೋರ ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಬಿಜಾಪುರ, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ:31-08-07ರ ಆದೇಶದಲ್ಲಿ ಅರ್ಜಿದಾರರರನ್ನು ಸೇವೆಯಿಂದ ವಜಗೊಳಿಸಿ, ಅನಧಿಕೃತವಾಗಿ ಗೈರುಹಾಜರಾದ ದಿ:23-06-06 ರಿಂದ 04-03-07ರ ವರೆಗಿನ ಅವಧಿಯನ್ನು ವೇತನರಹಿತ ರಜೆ ಎಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:09.05.08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರ ವಿರುದ್ಧದ ಆರೋಪವು ಸಾಬೀತಾಗಿದೆ ಆದರೆ ಅರ್ಜಿದಾರರು ಸರ್ಕಾರದಲ್ಲಿ ಸಲ್ಲಿಸಿದ ಸೇವೆಯನ್ನು ಗಮನದಲ್ಲಿರಿಸಿಕೊಂಡು ಮಾನವೀಯ ದೃಷ್ಟಿಯಿಂದ ಶಿಸ್ತುಪ್ರಾಧಿಕಾರದ ಆದೇಶವನ್ನು ಭಾಗಶ: ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 334 ಪೊಸಿಅ 2008 ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಿ.ಡಿ.ಪೂಜಾರಿ, ಮಾಜಿ ಸಿ.ಪಿ.ಸಿ. ಇಂಡಿ ಪೊಲೀಸ್ ಠಾಣೆ, ಇವರಿಗೆ ಶಿಸ್ತುಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಸದರಿ ದಿ:31-08-07 ರಿಂದಲೇ ಜಾರಿಗೆ ಬರುವಂತೆ ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಿದೆ. ಅರ್ಜಿದಾರರು ಅನಧಿಕೃತವಾಗಿ ಗೈರುಹಾಜರಾದ ದಿ:23-06-06 ರಿಂದ 04-03-07ರ ಅವಧಿಯನ್ನು 'ವೇತನರಹಿತ ರಜೆ' ಎಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1850 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಹನುಮಂತ, ಸಿ.ಪಿ.ಸಿ., ನೇತಾಜಿ ಪೊಲೀಸ್ ಠಾಣೆ, ರಾಯಚೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು, ಇವರ ಆದೇಶ ಸಂಖ್ಯೆ: ಸಿಬ್ಬಂದಿ (3)ಇ.ವಿ/38/2006 ಓಬಿ:226/2008 ದಿನಾಂಕ:07-03-2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ:ಅಪೀಲು/33/ಈವ/2008, ಆ.ಪು. ಸಂ:597/ ಈವ/08 ದಿನಾಂಕ:13.11.2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:27-01-09
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2) 114/2008-09 ದಿನಾಂಕ: 23-05-2009

ಪ್ರಸ್ತಾವನೆ:

ಶ್ರೀ ಹನುಮಂತ, ಸಿ.ಪಿ.ಸಿ., ನೇತಾಜಿ ಪೊಲೀಸ್ ಠಾಣೆ, ರಾಯಚೂರು, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರು ಮತ್ತು ಇನ್ನೋರ್ವ ಸಿಬ್ಬಂದಿಯ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರ ಜೊತೆಗೆ 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

1) "ದೇವದುರ್ಗ ತಾಲ್ಲೂಕ ಹಿರೇಕೂಡ್ಲಗಿ ಗ್ರಾಮದಲ್ಲಿ ಸರ್ವ ಶಿಕ್ಷಣ ಅಭಿಯಾನದಲ್ಲಿ ಶಿಕ್ಷಕಿಯಂತ ಕೆಲಸ ಮಾಡುತ್ತಿದ್ದ ಶ್ರೀಮತಿ ಮಲ್ಲಮ್ಮ ಸಾ: ಖಾನಾಪೂರ ಗ್ರಾಮ, ಇವರಿಗೆ ನೀವು ಸಿ.ಪಿ.ಸಿ.-80 ಗೋಪಾಲ, ಲೈಂಗಿಕ ಕಿರುಕುಳವನ್ನು ಕೊಟ್ಟುದ್ದರಿಂದ ಅವಳು ಜೀವನದಲ್ಲಿ ಜಿಗುಪ್ಸೆಗೊಂಡು ಕುಡಿಯುವ ನೀರಿನ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಘಟನೆಗೆ ನೀವೇ ಕಾರಣಕರ್ತರಾಗಿರುತ್ತೀರಿ.

2) ಶ್ರೀಮತಿ ಮಲ್ಲಮ್ಮ ಇವಳಿಗೆ ಲೈಂಗಿಕ ಕಿರುಕುಳ ಕೊಡಲು ನೀವು ಸಿಪಿಸಿ-13, ಹನುಮಂತ, ಸಿ.ಪಿ.ಸಿ.-80 ಗೋಪಾಲ, ರವರಿಗೆ ಪ್ರಚೋದನೆ ಮಾಡಿ ಸಹಕರಿಸಿ ಘೋರ ದುರ್ನಡತೆ ಪ್ರದರ್ಶಿಸಿದ್ದೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲವೆಂದು ಸಲ್ಲಿಸಿದ ವರದಿಯನ್ನು ಶಿಸ್ತುಪ್ರಾಧಿಕಾರವು ಒಪ್ಪದೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 07-03-2008ರ ಆದೇಶವಲ್ಲಿ ಅರ್ಜಿದಾರರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಮುಂಬರುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಲಾಗಿದೆ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಸೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ:13-11-2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 27 ಪೊಸಿಅ 2009 ಬೆಂಗಳೂರು, ದಿನಾಂಕ: 29ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹನುಮಂತ, ಸಿ.ಪಿ.ಸಿ., ನೇತಾಜಿ ಪೊಲೀಸ್ ಠಾಣೆ, ರಾಯಚೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1854

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಚ್.ಎಸ್. ಪರಮೇಶ್ವರ, ಪೊಲೀಸ್ ಇನ್ಸ್‌ಪೆಕ್ಟರ್, ಬಸವೇಶ್ವರ ನಗರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು(6)63/2006-07 ಓಬಿ:12/2008-09 ದಿನಾಂಕ: 03-05-2008.

2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ:30-06-08

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)16/2009-10 ದಿನಾಂಕ: 11-06-2009

ಪ್ರಸ್ತಾವನೆ:

ಶ್ರೀ ಎಚ್.ಎಸ್. ಪರಮೇಶ್ವರ, ಪೊಲೀಸ್ ಇನ್ಸ್‌ಪೆಕ್ಟರ್, ಬಸವೇಶ್ವರ ನಗರ ಪೊಲೀಸ್ ಠಾಣೆ, ಬೆಂಗಳೂರು. (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಸಿಂಧನೂರು ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್, ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಘೋರ ನಿರ್ಲಕ್ಷತೆ ಮತ್ತು ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿಯಲ್ಲಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

> "ಶ್ರೀ ಎಚ್.ಎಸ್. ಪರಮೇಶ್ವರಪ್ಪ, ಪಿ.ಐ., ಹೆಚ್ ಅಂಡ್ ಬಿ, ಸಿ.ಓ.ಡಿ., ಬೆಂಗಳೂರು ಆದ ನೀವು ಸಿಂಧನೂರು ನಗರ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಿಂಧನೂರು ಪೊಲೀಸ್ ಠಾಣೆಯ ಮೊ.ನಂ.107/2004 ಕಲಂ 457-380 ಐ.ಪಿ.ಸಿ. ಪ್ರಕರಣದ ತನಿಖೆಗೆ ಗಂಗಾವತಿ ತಾಲ್ಲೂಕು ವಡ್ಡರಹಟ್ಟಿ ಕ್ಯಾಂಪಿಗೆ ಹೋಗದೆ ದಿ: 21-09-2004 ರಂದು ಸಿಂಧನೂರು ಪೊಲೀಸ್ ಠಾಣೆಯಲ್ಲಿಯೇ ಕುಳಿತುಕೊಂಡು ಜಪ್ತಿ ಪಂಚನಾಮೆಯನ್ನು ಬರೆದು ಪಂಚರ ಸಹಿಯನ್ನು ಪಡೆದುಕೊಂಡು ನಿಮ್ಮ ಕರ್ತವ್ಯದಲ್ಲಿ ನಿರ್ಲಕ್ಷತೆಯನ್ನು ಪ್ರದರ್ಶಿಸಿರುತ್ತೀರಿ. ನೀವು ಪಡೆದ ಪಂಚರ ಹೇಳಿಕೆ ಮತ್ತು ಪೊಲೀಸರು ನೀಡಿದ ಹೇಳಿಕೆಗಳು ಒಂದಕ್ಕೊಂದು ಪೂರಕವಾಗುವುದಿಲ್ಲ ಹಾಗೂ ತಾಳೆಯಾಗುವುದಿಲ್ಲ ಈ ಎಲ್ಲಾ ನಿರ್ಲಕ್ಷತೆಯಿಂದಾಗಿ ಈ ಪ್ರಕರಣವು ನ್ಯಾಯಾಲಯದಲ್ಲಿ ಬಿಡುಗಡೆಯಾಗಲು ಕಾರಣವಾಗಿರುತ್ತದೆ. ಈ ರೀತಿಯಾಗಿ ನೀವು ನಿಮ್ಮ ಕರ್ತವ್ಯದಲ್ಲಿ ಘೋರ ನಿರ್ಲಕ್ಷತೆ ಮತ್ತು ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:03-05-2008ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ವರ್ಷದ ಅವಧಿಗೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 61 ಪೊಸಿಅ 2009 ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಚ್.ಎಸ್. ಪರಮೇಶ್ವರ, ಪೊಲೀಸ್ ಇನ್ಸ್‌ಪೆಕ್ಟರ್, ಬಸವೇಶ್ವರ ನಗರ ಪೊಲೀಸ್ ಠಾಣೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1855 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಟಿ.ಈ. ಸುರೇಶ್, ಮಾಜಿ ಪಿ.ಸಿ., ಕುಶಾಲನಗರ ಪೊಲೀಸ್ ಠಾಣೆ, ಕೊಡಗು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ, ಇವರ ಆದೇಶ ಸಂಖ್ಯೆ: ಡಿಇ/4/07-08 ಓ.ಬಿ:25/08-09 ದಿನಾಂಕ: 12-06-2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ. ಮೈಸೂರು, ಇವರ ಆದೇಶ ಸಂಖ್ಯೆ: ಅಪೀಲು/38/2008-09 ಓ.ಬಿ:40/2008-09 ದಿನಾಂಕ: 17-01-2009 ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 03-03-2009

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ

4) ಸಂಖ್ಯೆ:ಅಪೀಲು(2)2/2009-10 ದಿನಾಂಕ: 23-05-2009

ಪ್ರಸ್ತಾವನೆ:

ಶ್ರೀ ಟಿ.ಈ. ಸುರೇಶ್, ಇವರು ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಿ, ಅಶಿಸ್ತು ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

"ಶ್ರೀ ಟಿ.ಈ.ಸುರೇಶ್, ಸಿ.ಪಿ.ಸಿ-82, ಮಡಿಕೇರಿ ಪೊಲೀಸ್ ನಗರ ಠಾಣೆ, ಆದ ನೀವು ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿ:27-06-2007 ರಂದು ಠಾಣಾ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, ಗೈರುಹಾಜರಿ ಅವಧಿಯಲ್ಲಿ ಅನ್ಯ ಮಹಿಳೆಯರೊಂದಿಗೆ ಒಡನಾಟ ಇಟ್ಟುಕೊಂಡು, ನಿಮ್ಮ ಪತ್ನಿಯಾದ ಶ್ರೀಮತಿ ಕವಿತಾರೊಂದಿಗೆ ವಿನಾಕಾರಣ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿ ಪತ್ನಿ ಮತ್ತು ಮಕ್ಕಳಿಗೆ ಕೊಲೆ ಬೆದರಿಕೆ ಹಾಕಿರುವುದಾಗಿಯೂ ಈ ಘಟನೆಯಿಂದ ನಿಮ್ಮ ಪತ್ನಿ ಶ್ರೀಮತಿ ಕವಿತಾರವರು ಪ್ರಾಣಭಯದಿಂದ ಹಾಗೂ ಅಸಹಾಯಕತೆಯಿಂದ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ದಿ:03-08-2007 ರಂದು ನೀಡಿದ ದೂರಿನ ಮೇರೆಗೆ ನಿಮ್ಮ ವಿರುದ್ಧ ಮೊ.ಸಂ.106/2007 ಕಲಂ 498(ಎ) 506 ಐಪಿಸಿ ಮೇರೆಗೆ ಪ್ರಕರಣ ದಾಖಲಾಗಿರುವುದಾಗಿದೆ. ನೀವು ಶಿಸ್ತಿನ ಇಲಾಖೆಯಲ್ಲಿ ಜವಾಬ್ದಾರಿಯುತ ನೌಕರನಾಗಿದ್ದು, ಇಲಾಖೆಯ ನೀತಿ ನಿಯಮಗಳಿಗೆ ವಿರುದ್ಧವಾಗಿ ನಡೆದು ಕೊಂಡು, ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದಲ್ಲದೆ, ನಿಮ್ಮ ಪತ್ನಿಯೊಂದಿಗೆ ಅನುಚಿತವಾಗಿ ವರ್ತಿಸಿ, ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿ, ಕೊಲೆ ಬೆದರಿಕೆ ಹಾಕಿ, ನಿಮ್ಮ ವಿರುದ್ಧ ಕ್ರಿಮಿನಲ್ ಕೇಸು ದಾಖಲಾಗಲು ಕಾರಣಕರ್ತರಾಗಿ, ಇಲಾಖೆ ಬಗ್ಗೆ ಸಾರ್ವಜನಿಕರಲ್ಲಿ ಕೆಟ್ಟ ಅಭಿಪ್ರಾಯ ಬರುವಂತೆ ನಡೆದುಕೊಂಡು ಅಶಿಸ್ತು ಮತ್ತು ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ ಎಂಬುದು ನಿಮ್ಮ ಮೇಲಿನ ಆರೋಪವಾಗಿರುತ್ತದೆ. "

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 12-06-2008ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಿದ್ದಾರೆ, ಗೈರುಹಾಜರಾದ ಅವಧಿಯನ್ನು ವೇತನ ರಹಿತ ರಜೆಯೆಂದು ಹಾಗೂ ದಿನಾಂಕ: 07-08-2007 ರಿಂದ 26-10-2007ರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಸೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ:17-01-2009ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನಿಯ ಕಾರಣಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 64 ಪೊಸಿಅ 2009 ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಟಿ.ಈ. ಸುರೇಶ್, ಮಾಜಿ ಪಿ.ಸಿ., ಕುಶಾಲನಗರ ಪೊಲೀಸ್ ಠಾಣೆ, ಕೊಡಗು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1856

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಚ್. ಕೃಷ್ಣಶೆಟ್ಟಿ, ಸಿ.ಪಿ.ಸಿ.–633, ಶ್ರೀರಂಗಪಟ್ಟಣ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(2)ಡಿಇ/20/2005–06 ಓ.ಬಿ:186/07–08 ದಿ:12–09–2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಅಪೀಲು:31/2008–09 ಓ.ಬಿ:36/2008–09 ದಿ:03–12–2008

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:19–01–2009

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)112/2008–09 ದಿನಾಂಕ:08–05–2009

ಪ್ರಸ್ತಾವನೆ:-

ಶ್ರೀ ಎಚ್. ಕೃಷ್ಣಶೆಟ್ಟಿ, ಸಿ.ಪಿ.ಸಿ.–633, ಶ್ರೀರಂಗಪಟ್ಟಣ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಮದ್ದೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅಧಿಕಾರ ದುರುಪಯೋಗ ಹಾಗೂ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾದ ಕಾರಣಗಳಿಗಾಗಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

1. "ನಿಮಗೆ ದಿ:01–08–05 ರಂದು ಕ್ರಿಮಿನಲ್ ಪ್ರಕರಣ ಗಳಲ್ಲಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಪಡೆದುಕೊಂಡು ಬರುವ ಕರ್ತವ್ಯಕ್ಕೆ ನಿಯೋಜಿಸಿದ್ದು, ನೀವು ನಿಯೋಜಿಸಿದ ಸರ್ಕಾರಿ ಕೆಲಸ ಮಾಡದೆ ಅಂದು ರಾತ್ರಿ 12–30 ಗಂಟೆಯಲ್ಲಿ ನೀವು ಮತ್ತು ನಾಗರಾಜು ಎಂಬುವರ ಜೊತೆಗೂಡಿ ಮದ್ದೂರು ಕೈಗಾರಿಕಾ ಪ್ರದೇಶದಲ್ಲಿರುವ ನೀಲಂ ಗುಪ್ತರವರ ಗ್ರಾನೈಟ್ ಫ್ಯಾಕ್ಟರಿಯಲ್ಲಿ ಕಳ್ಳತನ ಮಾಡಲು ಕ್ವಾಲೀಸ್ ಕಾರ್ ನಂ. ಕೆ–02/ಪಿ–1975ರಲ್ಲಿ ಬಂದಾಗ ಫ್ಯಾಕ್ಟರಿಯ ಸೆಕ್ಯೂರಿಟಿ ಗಾರ್ಡ್ ಮತ್ತು ಸಿಬ್ಬಂದಿಗೆ ಸಿಕ್ಕಿ ಬಿದ್ದಾಗ ನೀವು ಪೊಲೀಸ್ ಎಂದು ಹೇಳಿಕೊಂಡು ಹಾಗೂ ನಾಗರಾಜು ಎಂಬುವನನ್ನು ಸಹ ಕಾನೂನಿನ ಪ್ರಕಾರ ಕ್ರಮಕೈಗೊಳ್ಳದೆ ಇರುವಂತೆ ಪಾರು ಮಾಡಲು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.
2. ನೀವು ಈ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿರುವ ಆರೋಪವಿದ್ದು, ದಿ:01–08–05ರ ಬೆಳಿಗ್ಗೆ 04–00 ಗಂಟೆಯಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 12–09–07ರ ಆದೇಶದಲ್ಲಿ "ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮೂರು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಿದ್ದಾರೆ. ದಿ:01–08–05 ರಂದ 16–11–05ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:03–12–2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇಲಾಖಾ ವಿಚಾರಣೆಯಲ್ಲಿ ಇವರ ವಿರುದ್ಧದ ಆರೋಪವು ಸಾಬೀತಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 24 ಪೊಸಿಅ 2009 ಬೆಂಗಳೂರು, ದಿನಾಂಕ: 7ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೃಷ್ಣಶೆಟ್ಟಿ, ಸಿ.ಪಿ.ಸಿ.–633, ಶ್ರೀರಂಗಪಟ್ಟಣ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1857

ಟಿ.ಎಸ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಸ್. ಮಹದೇವಯ್ಯ, ಸಿ.ಎಚ್.ಸಿ.–212, ಕೆ.ಎಂ. ದೊಡ್ಡಿ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(2)/ಪಿಆರ್/03/2008–09 ಓ.ಬಿ:69/2008–09 ದಿ:16–05–2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ: ಅಪೀಲು:22/2008–09 ಓ.ಬಿ:24/2008–09 ದಿ:26–09–2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:31–01–2009
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)117/2008–09 ದಿನಾಂಕ:08–05–2009

ಪ್ರಸ್ತಾವನೆ:

ಶ್ರೀ ಎಸ್.ಮಹದೇವಯ್ಯ, ಸಿ.ಎಚ್.ಸಿ.–212, ಕೆ.ಎಂ. ದೊಡ್ಡಿ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕೊಪ್ಪ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ, ಬೇಜವಾಬ್ದಾರಿತನ ಹಾಗೂ ಅಶಿಸ್ತು ಪ್ರದರ್ಶಿಸಿದ ಕಾರಣಗಳಿಗಾಗಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

"ನೀವು ಸಿ.ಎಚ್.ಸಿ.–212, ಆಗಿ ಕೊಪ್ಪ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿ:04–03–2008 ರಂದು ಕೊಪ್ಪ ಪೊಲೀಸ್ ಠಾಣೆಯ ಉಸ್ತುವಾರಿಯಲ್ಲಿದ್ದು ಡಿ. ಹೊಸಹಳ್ಳಿ ಗ್ರಾಮದ ಶ್ರೀಮತಿ ಸುಲೋಚನಾ ಕೋಂ ಪ್ರಕಾಶ ಎಂಬುವವರು ನೀಡಿದ ಪಿರ್ಯಾದನ್ನು ಎನ್.ಸಿ.ಆರ್.ನಂ. 42:08ರಲ್ಲಿ ದಾಖಲಿಸಿ ಕೊಂಡು ಸದರಿ ಅರ್ಜಿಯ ಬಗ್ಗೆ ಸ್ಥಳಕ್ಕೆ ಭೇಟಿನೀಡದೆ ಹಾಗೂ ಪ್ರತ್ಯಕ್ಷ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸದೆ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಎದುರು ಅರ್ಜಿದಾರರಾದ ಕೃಷ್ಣೇಗೌಡ, ಶೇಖರ ಮತ್ತು ಪ್ರಕಾಶ ರವರುಗಳಿಗೆ ಬೈಯ್ದು ಶೇಖರ ಎಂಬುವವರಿಗೆ ಹೊಡೆಯುವುದಾಗಿ ಬೆದರಿಸಿ, ಅರ್ಜಿದಾರಳಾದ ಶ್ರೀಮತಿ ಸುಲೋಚನಾ ರವರ ಕಾಲಿಗೆ ಬೀಳುವಂತೆ ಒತ್ತಾಯಪಡಿಸಿ ನೀವು ಎದುರು ಅರ್ಜಿದಾರರುಗಳಾದ ಕೃಷ್ಣೇಗೌಡ, ಶೇಖರ ಎಂಬುವವರಿಂದ ಖಾಲಿ ನೋಟೀಸ್‌ಗೆ ಸಹಿ ಹಾಕಿಸಿಕೊಂಡಿರುತ್ತೀರಿ. ಇದರಿಂದಾಗಿ ನೀವು ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ, ಬೇಜವಾಬ್ದಾರಿತನ ಹಾಗೂ ಅಶಿಸ್ತು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 16–05–08ರ ಆದೇಶದಲ್ಲಿ "ಅರ್ಜಿದಾರರಿಗೆ ತೀವ್ರವಾಗಿ ಎಚ್ಚರಿಕೆ ನೀಡಿ ದಿ:11–03–08 ರಿಂದ 24–03–08ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:26–09–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ಪಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ

ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 37 ಪೊಸಿಅ 2009 ಬೆಂಗಳೂರು, ದಿನಾಂಕ: 8ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಮಹದೇವಯ್ಯ, ಸಿ.ಎಚ್.ಸಿ.–212, ಕೆ.ಎಂ. ದೊಡ್ಡಿ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1858 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಂ. ಜಯಗೋಪಾಲ್, ಪಿ.ಐ., ಟಿ.ಟಿ.ಐ., ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: ಡಿಇ:(2)ಆರ್7/ಸಿಓಪಿ/5/07–08 ದಿನಾಂಕ: 28–12–2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(8) 104/2007–08 ದಿ:11–01–2009

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:09–02–2009

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)109/2008–09 ದಿ:15–05–2009

ಪ್ರಸ್ತಾವನೆ:

ಶ್ರೀ ಎಂ. ಜಯಗೋಪಾಲ್, ಪಿ.ಐ., ಟಿ.ಟಿ.ಐ., ಬೆಂಗಳೂರು, ಇವರು ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಲೋಪದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:

> "ಶ್ರೀ ಎಂ. ಜೈಗೋಪಾಲ್, ಪೊಲೀಸ್ ಇನ್ಸ್‌ಪೆಕ್ಟರ್, ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ನಗರ, ಆದ ನೀವು ಈ ಹಿಂದೆ ಶ್ರೀರಾಂಪುರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇಲ್ಲಿ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಶ್ರೀ ಗೋಪಿನಾಥ್ ರವರ ಫಿರ್ಯಾದಿನ ಮೇರೆಗೆ ಮೊ.ಸಂ.173/06 ಕಲಂ 341, 323, 324, 504, ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣವನ್ನು ದಾಖಲಾಗಿರುತ್ತದೆ. ಆ ಪ್ರಕರಣದಲ್ಲಿ ಆರೋಪಿ ಶ್ರೀಮತಿ ನಿರ್ಮಲ, ರವರನ್ನು ದಸ್ತಗಿರಿ ಮಾಡದೆ ಆರೋಪಿ ತಲೆಮರೆಸಿಕೊಂಡಿರುವುದಾಗಿ ತಿಳಿಸಿ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಿ. ಈ ಪ್ರಕರಣದಲ್ಲಿ ದೋಷಾರೋಪಣಾ ಪತ್ರವನ್ನು ಕೂಲಂಕುಷವಾಗಿ ಪರಿಶೀಲಿಸದೆ ತನಿಖಾಧಿಕಾರಿಯಾದ ಪಿ.ಎಸ್.ಐ., ಆದ ಶ್ರೀ ಸಿದ್ದರಾಜು, ರವರಿಗೆ ಸೂಕ್ತ ನಿರ್ದೇಶನ ನೀಡದೆ ನಿಮ್ಮ ಕರ್ತವ್ಯದಲ್ಲಿ ಲೋಪವೆಸಗಿರುವುದು ದೃಢಪಟ್ಟಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 28–12–2007ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಎರಡು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮುಂದೂಡುವ ದಂಡನೆಯನ್ನು ವಿಧಿಸಿರುತ್ತಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 11–07–09ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 47 ಪೊಸಿಅ 2009 ಬೆಂಗಳೂರು, ದಿನಾಂಕ: 10ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ. ಜಯಗೋಪಾಲ್, ಪಿ.ಐ., ಟಿ.ಟಿ.ಐ., ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1859 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎ. ಮಾರಪ್ಪ, ಪಿ.ಎಸ್.ಐ., ದೇವನಹಳ್ಳಿ, ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಸಿಬ್ಬಂದಿ/211/2003-04 ದಿ:29-09-2006
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು(6) 56/2006-07, ಓ.ಬಿ:20/2007-08 ದಿನಾಂಕ:16-06-2007
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:16-10-2007
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)85/2007-08 ದಿ:07-01-2008 & 01-04-2008
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 99 ಸಿಎನ್‌ಎಸ್ 2008 ದಿನಾಂಕ:15-06-2009

ಪ್ರಸ್ತಾವನೆ:

ಶ್ರೀ ಎ. ಮಾರಪ್ಪ, ಪಿ.ಎಸ್.ಐ., ದೇವನಹಳ್ಳಿ, ಪೊಲೀಸ್ ಠಾಣೆ, ಬೆಂಗಳೂರು ಇವರು ಹಾಸನ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷತೆ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇನ್ನುಳಿದ ಸಿಬ್ಬಂದಿಗಳೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ಮತ್ತು 8 ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

1) ಹಾಸನ ಸಂಚಾರಿ ಪೊಲೀಸ್ ಠಾಣೆಗೆ ನೀಡಲಾದ ಕ್ರೇನ್ (ಟೈಗರ್)ನ್ನು ಉಪಯೋಗಿಸಿ ಸಂಚಾರಿ ಠಾಣೆಗೆ ಎಳೆತಂದ ಹಾಗೂ ಪ್ರಕರಣಗಳಲ್ಲಿ ಒಳಗೊಂಡ ವಾಹನಗಳ ಮಾಲೀಕರುಗಳಿಂದ ಟೈಗರ್ ಛಾರ್ಜಸ್ ಎಂದು ಹಾಗೂ ದಂಡವೆಂದು ಲಕ್ಷಾಂತರ ಹಣವನ್ನು ವಸೂಲು ಮಾಡಿರುವುದು.
2) ಸದರಿ ವಾಹನಗಳ ಮಾಲೀಕರಿಂದ ಹಣ ವಸೂಲು ಮಾಡಲು ಇಲಾಖೆಯಿಂದ ಅಥವಾ ಸರ್ಕಾರದ ಅನುಮತಿಯಿಲ್ಲದೆ ಅನಧಿಕೃತವಾಗಿ ರಶೀತಿಗಳನ್ನು ಪ್ರಿಂಟ್‌ಮಾಡಿಸಿಕೊಂಡು ಅವ್ಯವಹಾರ ನಡೆಸಿರುವುದು.
3) ಈ ರೀತಿ ಅಕ್ರಮವಾಗಿ ವಸೂಲುಮಾಡಿದ ಲಕ್ಷಾಂತರ ರೂಪಾಯಿಗಳಿಗೆ ಸಮರ್ಪಕವಾಗಿ ಲೆಕ್ಕಪತ್ರ ನಿರ್ವಹಿಸದೆ ಮನಸ್ಸಿಗೆ ತೋಚಿದಂತೆ ಖರ್ಚುಮಾಡಿ ಆ ಮೂಲಕ ಸರ್ಕಾರಕ್ಕೆ ವಂಚನೆ, ಸದರಿ ಹಣದ ದುರುಪಯೋಗ, ಅಧಿಕಾರ ದುರುಪಯೋಗ, ಕರ್ತವ್ಯದಲ್ಲಿ ಬೇಜವಾಬ್ದಾರಿತನ, ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಕರ್ತವ್ಯಲೋಪವೆಸಗಿರುವ ಆರೋಪಗಳು.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ:29-09-06ರ ಆದೇಶದಲ್ಲಿ "ಅರ್ಜಿದಾರರ ವೇತನವನ್ನು ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹುದ್ದೆಯ ವೇತನದ ಕನಿಷ್ಠ ಹಂತಿಕ್ಕೆ ಇಳಿಸಿ, ಈ ಹಂತದಿಂದ ಹೊಸದಾಗಿ ವಾರ್ಷಿಕ ವೇತನ ಬಡ್ತಿಯನ್ನು ಗಳಿಸುವ ದಂಡನೆಯನ್ನು ವಿಧಿಸಿದ್ದಾರೆ. ದಿನಾಂಕ:25-11-2003 ರಿಂದ 26-02-2004ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ: 16-06-2007ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಶಿಸ್ತುಪ್ರಾಧಿಕಾರದ ದಂಡನಾದೇಶವು ಕರ್ನಾಟಕ ನಾಗರಿಕ ಸೇವಾನಿಯಮಾವಳಿಯ ನಿಯಮ 59(1)(ಬಿ) ಅನ್ವಯ ದೋಷಪೂರಿತವಾಗಿರುವುದನ್ನು ಗಮನಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಲು ತೀರ್ಮಾನಿಸಿ, ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 50 ಪೊಸಿಅ 2008 ಬೆಂಗಳೂರು, ದಿನಾಂಕ: 6ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ. ಮಾರಪ್ಪ, ಪಿ.ಎಸ್.ಐ., ದೇವನಹಳ್ಳಿ, ಪೊಲೀಸ್ ಠಾಣೆ, ಇವರಿಗೆ ಶಿಸ್ತುಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಈ ಕೆಳಕಂಡಂತೆ ಭಾಗಶ: ಮಾರ್ಪಡಿಸಿ, ಆದೇಶಿಸಿದೆ.

(i) ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ವೇತನ ರೂ.10,000/-ಗಳಿಗೆ ಎರಡು ವರ್ಷಗಳ ಕಾಲ ಸಂಚಿತ ಪರಿಣಾಮ ರಹಿತವಾಗಿ ನಿಗದಿಪಡಿಸುವುದು.

(ii) ಈ ಎರಡು ವರ್ಷಗಳ ದಂಡನಾ ಅವಧಿಯಲ್ಲಿ ಯಾವುದೇ ವಾರ್ಷಿಕ ವೇತನ ಬಡ್ತಿಯಾಗಲಿ ಅಥವಾ ಪದೋನ್ನತಿಯಾಗಲಿ ಪಡೆಯಲು ಅರ್ಹರಿರುವುದಿಲ್ಲ.

(iii) ದಂಡನಾವಧಿ ಎರಡು ವರ್ಷಗಳು ಪೂರ್ಣಗೊಂಡ ನಂತರ ಇವರ ವೇತನವನ್ನು ದಂಡನಾ ಅವಧಿಯ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನ ಹಾಗೂ ತಡೆಹಿಡಿಯಲಾಗಿದ್ದ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸೇರಿಸಿ ಕಾಲ್ಪನಿಕವಾಗಿ ಮರುನಿಗದಿಗೊಳಿಸುವುದು.

(iv) ದಿ:25-11-2003 ರಿಂದ 26-02-2004ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1860 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ಕಾರ್ಮಿಕ ಸಚಿವಾಲಯ

ವಿಷಯ: ಕಾರಾವಿ ನಿಗಮದಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿದ್ದ ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯ ಡಾ:ಪಿ.ಶಶಿಕಲಾ, ಕಿರಿಯ ತಜ್ಞರು ಇವರ ಸೇವೆಯನ್ನು ನಿಗಮದಲ್ಲಿ ವಿಲೀನಗೊಳಿಸುವ ಬಗ್ಗೆ.

ಓದಲಾಗಿದೆ: 1) ಮಾನ್ಯ ಕಾರ್ಮಿಕ ಸಚಿವರ ಟಿಪ್ಪಣಿ ಸಂಖ್ಯೆ.ಕಾಸ/1169/09, ದಿನಾಂಕ:21-07-2009.

2) ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ.ಎ-37(18)1/03.Med.IV, ದಿನಾಂಕ:03-06-2005.

3) ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ.ಎ-37(18)1/03OM(HQ) ದಿನಾಂಕ:20-12-2005.

ಪ್ರಸ್ತಾವನೆ:

ಕಾ.ರಾ.ವಿ. ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು ಇದನ್ನು ಮಾದರಿ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ.ಕಾಇ 157 ಎಲ್ಎಸ್ಐ 2001, ದಿನಾಂಕ:31-03-2003ರ ಮೂಲಕ ದಿನಾಂಕ:01-04-2003 ರಿಂದ ಜಾರಿಗೆ ಬರುವಂತೆ ಸದರಿ ಆಸ್ಪತ್ರೆ, ಸಿಬ್ಬಂದಿ, ಕಟ್ಟಡ, ಪೀಠೋಪಕರಣಗಳು ಮತ್ತು ವೈದ್ಯಕೀಯ ಉಪಕರಣಗಳೊಂದಿಗೆ

ಕಾರಾವಿ ನಿಗಮಕ್ಕೆ ಹಸ್ತಾಂತರಿಸಲಾಗಿತ್ತು. ಹಸ್ತಾಂತರಿಸಲಾದ ಸಿಬ್ಬಂದಿಯನ್ನು ವಿಲೀನತೆಯ ಆಯ್ಕೆಯೊಂದಿಗೆ ಮೊದಲಿಗೆ ಮೂರು ವರ್ಷಗಳ ಅವಧಿಗೆ ನಿಯೋಜನೆ ಮೇರೆಗೆ ನಿಗಮಕ್ಕೆ ನೀಡಲಾಗಿತ್ತು. ಈ ಸಿಬ್ಬಂದಿಯ ನಿಯೋಜನೆಯ ಅವಧಿಯು ದಿನಾಂಕ:31–03–2006ರಂದು ಮುಕ್ತಾಯಗೊಂಡಿರುತ್ತದೆ.

ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ನವದೆಹಲಿ ಇವರು ಮೇಲೆ ಓದಲಾದ (2) ಮತ್ತು (3)ರ ಪತ್ರಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಕಾರಾವಿ ನಿಗಮದ ಸೇವೆಯಲ್ಲಿ ವಿಲೀನಗೊಳಿಸಲು ಕೋರಿರುತ್ತಾರೆ. ಹಾಗೂ ವಿಲೀನತೆಗೆ ಸಂಬಂಧಿಸಿದಂತೆ ನಿಗಮವು ವಿಧಿಸುವ ನಿಬಂಧನೆ ಮತ್ತು ಷರತ್ತುಗಳನ್ನು ಕಳುಹಿಸಿರುತ್ತಾರೆ.

ಕಾರಾವಿ ನಿಗಮದಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯ ಯಾವ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ನಿಗಮದ ಸೇವೆಯಲ್ಲಿ ವಿಲೀನಗೊಳ್ಳಲು ಇಚ್ಛಿಸುತ್ತಾರೆಯೋ ಅಂತಹವರು ಇಚ್ಛಾ ಪತ್ರವನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಆ ಸಂದರ್ಭದಲ್ಲಿ ಡಾ:ಪಿ.ಶಶಿಕಲಾ, ಕಿರಿಯ ತಜ್ಞರು, ಕಾರಾವಿ ನಿಗಮದಲ್ಲಿ ನಿಯೋಜನೆಯ ಮೇಲೆ ಸೇವೆ ಸಲ್ಲಿಸುತ್ತಿದ್ದು ಕಾರಾವಿ ನಿಗಮದ ಸೇವೆಯಲ್ಲಿ ವಿಲೀನಗೊಳ್ಳಲು ಇಚ್ಛಾ ಪತ್ರವನ್ನು ಸಲ್ಲಿಸಿದ್ದರು.

ತದನಂತರ ಇವರು ಕಾರಾವಿ ನಿಗಮದ ಸೇವೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಒಂದು ವರ್ಷದ ಅವಧಿಗೆ CORNEA sub speciality fellow ಪದವಿ ತರಬೇತಿ ಪಡೆಯಲು Minto Regional Institute of Opthalmology ಇಲ್ಲಿಗೆ ಆಯ್ಕೆಗೊಂಡಿದ್ದ ಕಾರಣ ಇವರನ್ನು ನಿಯೋಜನೆಯಿಂದ ಹಿಂಪಡೆದು ಸರ್ಕಾರದ ಆದೇಶ ಸಂಖ್ಯೆ.ಕಾಇ 471 ಎಲ್‌ಎಸ್‌ಐ 2008, ದಿನಾಂಕ:09–01–2009ರ ಮೂಲಕ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅಪೆಂಡಿಕ್ಸ್–II A ಪ್ರಕಾರ ಉನ್ನತ ವ್ಯಾಸಂಗಕ್ಕಾಗಿ ದಿನಾಂಕ:01–01–2009 ರಿಂದ 31–12–2009ರ ವರೆಗೆ ನಿಯೋಜಿಸಲಾಗಿದೆ.

ಈ ವೈದ್ಯಾಧಿಕಾರಿಯವರನ್ನು ದಿನಾಂಕ:31–12–2009ರ ತನಕ ವ್ಯಾಸಂಗದ ಮೇಲೆ ನಿಯೋಜಿಸಿದ್ದ ಕಾರಣ ಕಾರಾವಿ ನಿಗಮದ ಸೇವೆಯಲ್ಲಿ ನಿಯೋಜನೆ ಮೇಲೆ ಇರುವವರನ್ನು ನಿಗಮದಲ್ಲಿ ವಿಲೀಗೊಳಿಸುವ ಸಂಬಂಧ ಮುಂದುವರಿಸಲಾದ ಕಡತ ಸಂಖ್ಯೆ.ಕಾಇ 395 ಎಲ್‌ಎಸ್‌ಐ 2006ರಲ್ಲಿ ಇವರ ಹೆಸರನ್ನು ಕೈಬಿಡಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಮಾನ್ಯ ಕಾರ್ಮಿಕ ಸಚಿವರ ಟಿಪ್ಪಣಿಯಲ್ಲಿ ಡಾ:ಪಿ.ಶಶಿಕಲಾ, ಕಿರಿಯ ತಜ್ಞರು, ಇವರು ಕಾ.ರಾ.ವಿ. ನಿಗಮದ ಸೇವೆಯಲ್ಲಿ ನಿಯೋಜನೆ ಮೇಲೆ ಇದ್ದು ಆ ಸಂಧರ್ಬದಲ್ಲಿ ವಿಲೀನತೆಗೆ ಇಚ್ಛಾ ಪತ್ರವನ್ನು ಸಲ್ಲಿಸಿರುವ ಕಾರಣ ಇವರ ಸೇವೆಯನ್ನು ಕಾರಾವಿ ನಿಗಮದ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಅಗತ್ಯ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಆ ಪ್ರಕಾರ ಪ್ರಸ್ತಾವನೆಯನ್ನು ಪರಿಶೀಲಿಸಿ ಇವರ ಸೇವೆಯನ್ನು ಕಾರಾವಿ ನಿಗಮದಲ್ಲಿ ವಿಲೀನಗೊಳಿಸಲು ಉದ್ದೇಶಿಸಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆಕಾಇ 286 ಎಲ್‌ಎಸ್‌ಐ 2009, ಬೆಂಗಳೂರು, ದಿನಾಂಕ: 7ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಡಾ:ಪಿ.ಶಶಿಕಲಾ, ಕಿರಿಯ ತಜ್ಞರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಸೇವೆಯನ್ನು ಕಾರ್ಮಿಕ ರಾಜ್ಯ ವಿಮಾ ನಿಗಮದ ಸೇವೆಯಲ್ಲಿ ವಿಲೀನಗೊಳಿಸಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಷರತ್ತು ಮತ್ತು ನಿಭಂಧನೆಗಳು

- ಕಾರಾವಿ ನಿಗಮದಲ್ಲಿ ವಿಲೀನಗೊಳ್ಳುವ ಸಿಬ್ಬಂದಿಗಳು ರಾಜ್ಯ ಸರ್ಕಾರಿ ಸೇವೆಗೆ ತಾಂತ್ರಿಕ ರಾಜೀನಾಮೆ ಸಲ್ಲಿಸತಕ್ಕದ್ದು.
- ವಿಲೀನಗೊಳ್ಳುವ ಸಿಬ್ಬಂದಿಗಳ ಲೆಕ್ಕದಲ್ಲಿರುವ ಗಳಿಕೆ ರಜೆಯ 240 ದಿನಗಳನ್ನು ನಗದೀಕರಣ ಗೊಳಿಸಲಾಗುವುದು ಹಾಗೂ ಉಳಿದ ರಜೆಗಳು ರದ್ದಾಗುವುದು.
- ಕಾರಾವಿ ನಿಗಮದಲ್ಲಿ ವಿಲೀನಗೊಳ್ಳುವ ಸಿಬ್ಬಂದಿಗಳ ರಾಜ್ಯ ಸರ್ಕಾರಿ ಸೇವೆಯನ್ನು ವಿಶ್ರಾಂತಿ ವೇತನದ ಸಲುವಾಗಿ ಅರ್ಹತಾದಾಯಕ ಸೇವೆಯೆಂದು ನಿಗಮವು ಪರಿಗಣಿಸ ತಕ್ಕದ್ದು ಹಾಗೂ ಹಳೆಯ ಪಿಂಚಣಿ ಸೌಲಭ್ಯ ಯೋಜನೆಯು ಅನ್ವಯಿಸತಕ್ಕದ್ದು.

  ವಿಶ್ರಾಂತಿ ವೇತನದ ಅಂಶದಾನವನ್ನು ರಾಜ್ಯ ಸರ್ಕಾರವು ನಿಗಮಕ್ಕೆ ವರ್ಗಾಯಿಸತಕ್ಕದ್ದು.
- ಸೇವಾ ಜೇಷ್ಠತೆಗೆ ಸಂಬಂಧಿಸಿದಂತೆ ಕಾರಾವಿ ನಿಗಮವು Institutional Seniority ಅನ್ನು ಪರಿಗಣಿಸುವುದು.
- ವಿಲೀನಗೊಳ್ಳುವ ವೈದ್ಯಾಧಿಕಾರಿಗಳು ಕಾರಾವಿ ಇಲಾಖೆಯಲ್ಲಿ ತಜ್ಞರ ಹುದ್ದೆಯಲ್ಲಿ ಇದ್ದರೂ ಸಹ ಕಾರಾವಿ ನಿಗಮದ ತಜ್ಞರ ಉಪ ವೃಂದದಲ್ಲಿ ವಿಲೀನಗೊಳ್ಳುವುದು.

- ವಿಲೀನಗೊಳ್ಳುವ ಸಿಬ್ಬಂದಿಯ ಗೃಹ ಖರೀದಿ/ನಿರ್ಮಾಣ ಮುಂಗಡ, ಮೋಟಾರ್ ಕಾರ್ ಮುಂಗಡ ಅಥವಾ ಇತರೆ ಯಾವುದೇ ಮುಂಗಡವನ್ನು ರಾಜ್ಯ ಸರ್ಕಾರದ ಸೇವೆಯಲ್ಲಿ ಇದ್ದಾಗ ಪಡೆದಿದ್ದಲ್ಲಿ, ಅದನ್ನು ವಿಲೀನಗೊಳ್ಳುವ ಮುಂಚೆ ಸಮಾಪನಗೊಳಿಸುವುದು ಅಥವಾ ರಾಜ್ಯ ಸರ್ಕಾರವು ಇಚ್ಛಿಸಿದಲ್ಲಿ ಉಳಿದ ಮುಂಗಡವನ್ನು ಬಡ್ಡಿ ಸಹಿತ ಕಾರಾವಿ ನಿಗಮವು ಕಡಿತಗೊಳಿಸಿ ರಾಜ್ಯ ಸರ್ಕಾರಕ್ಕೆ ಕಾಲಕಾಲಕ್ಕೆ ಪಾವತಿಸುವುದು.
- ಈ ವೈದ್ಯಾಧಿಕಾರಿಯವರು ಈ ಆದೇಶದ ಅನ್ವಯ ಕಾರಾವಿ ನಿಗಮದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಂದು ನಿಗಮದ ಸೇವೆಯಲ್ಲಿ ವಿಲೀನಗೊಳ್ಳುತ್ತಾರೆ.
- ಈ ವೈದ್ಯಾಧಿಕಾರಿಯವರು ನಿಗಮದ ಸೇವೆಯಲ್ಲಿ ವಿಲೀನಗೊಂಡ ತಕ್ಷಣವೇ ನಿಗಮದ ನೌಕರರಾಗುವ ಕಾರಣ ವಿಲೀನಗೊಂಡ ದಿನಾಂಕದಿಂದ ಉನ್ನತ ವ್ಯಾಸಂಗದ ಉಳಿದ ಅವಧಿಗೆ ವೇತನ ಭತ್ಯೆಗಳನ್ನು ಪಾವತಿ ಮಾಡಲು ರಾಜ್ಯ ಸರ್ಕಾರವು ಬದ್ಧವಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ

ಪಿ.ಆರ್. 1991 ಪೀಠಾಧಿಕಾರಿ,

ಕಾರ್ಮಿಕ ಇಲಾಖೆ. (ಕಾರಾವಿ ಯೋ (ವೈ) ಸೇವೆಗಳು)

ವಿಷಯ: ಕಾರಾವಿ ನಿಗಮದಲ್ಲಿ ಅನ್ಯ ಕರ್ತವ್ಯದ ಮೇಲೆ ಸೇವೆ ಸಲ್ಲಿಸುತ್ತಿದ್ದ ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯ ಡಾ:ಬಿ.ಎನ್.ಪದ್ಮಾವತಿ, ಹಿರಿಯ ತಜ್ಞರು ಮತ್ತು ಶ್ರೀ ದೊರೈರಾಜ್, ಫಾರ್ಮಾಸಿಸ್ಟ್ ಇವರುಗಳ ಸೇವೆಯನ್ನು ನಿಗಮದಲ್ಲಿ ವಿಲೀನಗೊಳಿಸುವ ಬಗ್ಗೆ.

ಓದಲಾಗಿದೆ: 1) ಮಾನ್ಯ ಕಾರ್ಮಿಕ ಸಚಿವರ ಟಿಪ್ಪಣಿ ಸಂಖ್ಯೆ.ಕಾಸ/642/09, ದಿನಾಂಕ:ಇಲ್ಲ

2) ಮಾನ್ಯ ಕಾರ್ಮಿಕ ಸಚಿವರ ಟಿಪ್ಪಣಿ ಸಂಖ್ಯೆ.ಕಾಸ/1067/09, ದಿನಾಂಕ:06-03-2009.

3) ಜಂಟಿ ನಿರ್ದೇಶಕರು, (ಆಡಳಿತ) ಕಾರಾವಿ ನಿಗಮದ ಮಾದರಿ ಆಸ್ಪತ್ರೆ ರಾಜಾಜಿನಗರ, ಬೆಂಗಳೂರು ಇವರು ನೀಡಿರುವ ಸೇವಾ ಪ್ರಮಾಣ ಪತ್ರ ಸಂಖ್ಯೆ.ಇಎಸ್ಐಸಿ/ ಎಂಹೆಚ್/ಜಿಆರ್.ಸಿ 66/2008-09, ದಿನಾಂಕ:23-10-2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ಹಾಗೂ (2)ರಲ್ಲಿನ ಮಾನ್ಯ ಕಾರ್ಮಿಕ ಸಚಿವರ ಟಿಪ್ಪಣಿಯಲ್ಲಿ ಕಾ.ರಾ.ವಿ. ನಿಗಮದ ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು ಇಲ್ಲಿ ಅನ್ಯ ಕರ್ತವ್ಯದ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಡಾ:ಬಿ.ಎನ್.ಪದ್ಮಾವತಿ, ಹಿರಿಯ ತಜ್ಞರು, ಮತ್ತು ಶ್ರೀ ದೊರೈರಾಜ್, ಫಾರ್ಮಾಸಿಸ್ಟ್ ಇವರ ಸೇವೆಯನ್ನು ಕಾರಾವಿ ನಿಗಮದ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿತ್ತು. ಡಾ:ಬಿ.ಎನ್.ಪದ್ಮಾವತಿ, ಹಿರಿಯ ತಜ್ಞರು, ಮತ್ತು ಶ್ರೀ ದೊರೈರಾಜ್, ಫಾರ್ಮಾಸಿಸ್ಟ್ ಇವರು ಕಾರಾವಿ ನಿಗಮದ ಸೇವೆಯಲ್ಲಿ ವಿಲೀನಗೊಳ್ಳಲು ಇಚ್ಛಾ ಪತ್ರವನ್ನು ಸಲ್ಲಿಸಿರುತ್ತಾರೆ.

ಕಾರಾವಿ ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು ಇದನ್ನು ಕಾರಾವಿ ನಿಗಮಕ್ಕೆ ಹಸ್ತಾಂತರಿಸಿದ ಸಂದರ್ಭದಲ್ಲಿ ಸದರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜನೆಯ ಮೇರೆಗೆ ನಿಗಮಕ್ಕೆ ಹಸ್ತಾಂತರಿಸಲಾಗಿತ್ತು. ಈ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯವರಲ್ಲಿ ಕಾರಾವಿ ನಿಗಮದ ಸೇವೆಯಲ್ಲಿ ವಿಲೀನಗೊಳ್ಳಲು ಇಚ್ಛಾ ಪತ್ರವನ್ನು ಸಲ್ಲಿಸಿದ್ದವರನ್ನು ವಿಲೀನಗೊಳಿಸುವ ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಿದಾಗ ಈ ಇಬ್ಬರ ಸೇವೆಯನ್ನೂ ವಿಲೀನಗೊಳಿಸಲು ಸಚಿವ ಸಂಪುಟದ ಅನುಮೋದನೆಯನ್ನು ಪಡೆಯಲಾಗಿದೆ. ಈ ಮೇಲಿನ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಕಾಇ 114 ಎಲ್ಎಸ್ಐ 2009, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಡಾ:ಬಿ.ಎನ್.ಪದ್ಮಾವತಿ, ಹಿರಿಯ ತಜ್ಞರು ಮತ್ತು ಶ್ರೀ ದೊರೈರಾಜ್, ಫಾರ್ಮಾಸಿಸ್ಟ್, ಇವರ ಸೇವೆಯನ್ನು ಕಾರ್ಮಿಕ ರಾಜ್ಯ ವಿಮಾ ನಿಗಮದ ಸೇವೆಯಲ್ಲಿ ವಿಲೀನಗೊಳಿಸಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಷರತ್ತು ಮತ್ತು ನಿಭಂಧನೆಗಳು

- ಕಾರಾವಿ ನಿಗಮದಲ್ಲಿ ವಿಲೀನಗೊಳ್ಳುವ ಸಿಬ್ಬಂದಿಗಳು ರಾಜ್ಯ ಸರ್ಕಾರಿ ಸೇವೆಗೆ ತಾಂತ್ರಿಕ ರಾಜೀನಾಮೆ ಸಲ್ಲಿಸತಕ್ಕದ್ದು.

- ವಿಲೀನಗೊಳ್ಳುವ ಸಿಬ್ಬಂದಿಗಳ ಲೆಕ್ಕದಲ್ಲಿರುವ ಗಳಿಕೆ ರಜೆಯ 240 ದಿನಗಳನ್ನು ನಗದೀಕರಣಗೊಳಿಸಲಾಗುವುದು ಹಾಗೂ ಉಳಿದ ರಜೆಗಳು ರದ್ದಾಗುವುದು.
- ಕಾರಾವಿ ನಿಗಮದಲ್ಲಿ ವಿಲೀನಗೊಳ್ಳುವ ಸಿಬ್ಬಂದಿಗಳ ರಾಜ್ಯ ಸರ್ಕಾರಿ ಸೇವೆಯನ್ನು ವಿಶ್ರಾಂತಿ ವೇತನದ ಸಲುವಾಗಿ ಅರ್ಹತಾದಾಯಕ ಸೇವೆಯೆಂದು ನಿಗಮವು ಪರಿಗಣಿಸ ತಕ್ಕದ್ದು ಹಾಗೂ ಹಳೆಯ ಪಿಂಚಣಿ ಸೌಲಭ್ಯ ಯೋಜನೆಯು ಅನ್ವಯಿಸತಕ್ಕದ್ದು. ವಿಶ್ರಾಂತಿ ವೇತನದ ಅಂಶದಾನವನ್ನು ರಾಜ್ಯ ಸರ್ಕಾರವು ನಿಗಮಕ್ಕೆ ವರ್ಗಾಯಿಸತಕ್ಕದ್ದು.
- ಸೇವಾ ಜೇಷ್ಠತೆಗೆ ಸಂಬಂಧಿಸಿದಂತೆ ಕಾರಾವಿ ನಿಗಮವು Institutional Seniority ಅನ್ನು ಪರಿಗಣಿಸುವುದು.
- ವಿಲೀನಗೊಳ್ಳುವ ವೈದ್ಯಾಧಿಕಾರಿಗಳು ಕಾರಾವಿ ಇಲಾಖೆಯಲ್ಲಿ ತಜ್ಞರ ಹುದ್ದೆಯಲ್ಲಿ ಇದ್ದರೂ ಸಹ ಕಾರಾವಿ ನಿಗಮದ ತಜ್ಞರ ಉಪ ವೃಂದದಲ್ಲಿ ವಿಲೀನಗೊಳ್ಳುವುದು.
- ವಿಲೀನಗೊಳ್ಳುವ ಸಿಬ್ಬಂದಿಯ ಗೃಹ ಖರೀದಿ/ನಿರ್ಮಾಣ ಮುಂಗಡ, ಮೋಟಾರ್ ಕಾರ್ ಮುಂಗಡ ಅಥವಾ ಇತರೆ ಯಾವುದೇ ಮುಂಗಡವನ್ನು ರಾಜ್ಯ ಸರ್ಕಾರದ ಸೇವೆಯಲ್ಲಿ ಇದ್ದಾಗ ಪಡೆದಿದ್ದಲ್ಲಿ, ಅದನ್ನು ವಿಲೀಸಗೊಳ್ಳುವ ಮುಂಚೆ ಸಮಾಪನಗೊಳಿಸುವುದು ಅಥವಾ ರಾಜ್ಯ ಸರ್ಕಾರವು ಇಚ್ಛಿಸಿದಲ್ಲಿ ಉಳಿದ ಮುಂಗಡವನ್ನು ಬಡ್ಡಿ ಸಹಿತ ಕಾರಾವಿ ನಿಗಮವು ಕಡಿತಗೊಳಿಸಿ ರಾಜ್ಯ ಸರ್ಕಾರಕ್ಕೆ ಕಾಲಕಾಲಕ್ಕೆ ಪಾವತಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ

ಪೀಠಾಧಿಕಾರಿ,

ಕಾರ್ಮಿಕ ಇಲಾಖೆ. (ಕಾರಾವಿ ಯೋ (ವೈ) ಸೇವೆಗಳು)

LABOUR SECRETARIAT

Sub: Absorption of Dr.B.N.Padmavathi, Senior Specialist and Dorairaj Pharmacist of the ESI S (M)Directorate in the ESI Corporataion who are working on O.O.D. basis in the ESI Corporation.

Read: 1) The Hon'ble Labour Minister's Note No.Kasa/642/09, dated:Nil.

2) The Hon'ble Labour Minister's Note No.Kasa/1067/09, dated:06-03-2009.

3) The service certificate issued by The Joint Director (Administration) ESIC Model Hospital, Rajajinagar, Bangalore, Vide No.ESIC/MH/GRC/66/2008-09, dated:23.10.2008.

Preamble:

In the note read at (1) and (2) above the Hon'ble Labour Minister has instructed to take action for absorption of the services of Dr.B.N.Padmavathi, Senior Specialist and Sri Dorairaj, Pharmacist the department of ESI Scheme (Medical)Services in the services of E.S.I.Corporation, who were working on other duty (O.O.D) at ESI Corporation.

At the time of handing over the ESI Hospital, Rajajinagar, Bangalore to E.S.I. Corporation, the Medical Officers and staff of the Hospital were also handed over to the E.S.I.Corporation. Approval of the Cabinet for absorption of these two officials has also obtained along with the proposal of absorption of the Medical Officers and staff of the department ESIS (M) Services whose services has been handed over to ESIC on deputation and who were opted for absorption. Hence the following orders:-

Govt. Order No. LD 114 LSI 2009, Bangalore, Dated: 3rd August 2009

In the circumstances explained in the preamble sanction is accorded to absorb the services of Dr.B.N.Padmavathi, Senior Specialst and Sri Dorairaj Pharmacist in to the services of Employees State Insurance Corporation with the following terms and conditions:-

Terms and Conditions

- The employees who will be absorbed in ESIC should give Technical resignation to their State Government Service.

- The E.L at the credit of these employees will be encashed for a maximum of 240 days and remaining leave will lapse.
- The ESIC should consider the State service of these employees for pension purpose and the old pension scheme should be considered. The State Government shall transfer the pension contribution to ESIC.
- Regarding fixation of seniority, the ESIC should consider the Institutional Seniority.
- Even though the Medical Officer proposed for absorption are in Specialist Cadre in ESI (M) Services, they should be absorbed in ESIC Specialist Sub Cadre.
- If the employees proposed for absorption have taken H.P.A/H.B.A advances, M.C.A etc., such advances should be cleared before absorption or if the State desires, the ESIC may take action to deduct the remaining advance along with interest and remit the same to State from time to time.

By order and in the name of the Governor of Karnataka,

GOVINDASWAMY

P.R. 2000

Desk Officer,

Labour Department. (ESIS (M) Services)

ಕಾರ್ಮಿಕ ಸಚಿವಾಲಯ

ವಿಷಯ: ಕಾರಾವಿ ನಿಗಮದಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಸಿಬ್ಬಂದಿಯನ್ನು ನಿಗಮದ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ.ಕಾಇ 157 ಎಲ್‌ಎಸ್‌ಐ 2001, ದಿನಾಂಕ:31–03–2003.
2) ಮೆಡಿಕಲ್ ಕಮೀಷನರ್, ಕಾರಾವಿ ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ.A-37(18)1/03-Med-IV, ದಿನಾಂಕ:03–06–2005.
3) ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ನವದೆಹಲಿ, ಇವರ ಪತ್ರ ಸಂಖ್ಯೆ.A-37(18)1/03-DM(HQ.) ದಿನಾಂಕ:20–12–2005.
4) ಮೆಡಿಕಲ್ ಸೂಪರಿಂಟೆಂಡೆಂಟ್, ಕಾರಾವಿ ನಿಗಮದ ಮಾದರಿ ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ.532-A-37(18)1/2006-07, ದಿನಾಂಕ:19–10–2006.
5) ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ.ಅಭಿವೃದ್ಧಿ/3/2003–04, ದಿನಾಂಕ:10–12–2007.
6) ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ.ಅಭಿವೃದ್ಧಿ/3/2008–09, ದಿನಾಂಕ:27–01–2009.

ಪ್ರಸ್ತಾವನೆ:

ಕಾ.ರಾ.ವಿ. ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು ಇದನ್ನು ಮಾದರಿ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ.ಕಾಇ 157 ಎಲ್‌ಎಸ್‌ಐ 2001, ದಿನಾಂಕ:31–03–2003ರ ಮೂಲಕ ದಿನಾಂಕ:01–04–2003 ರಿಂದ ಜಾರಿಗೆ ಬರುವಂತೆ ಸದರಿ ಆಸ್ಪತ್ರೆ, ಸಿಬ್ಬಂದಿ, ಕಟ್ಟಡ, ಪೀಠೋಪಕರಣಗಳು ಮತ್ತು ವೈದ್ಯಕೀಯ ಉಪಕರಣಗಳೊಂದಿಗೆ ಕಾರಾವಿ ನಿಗಮಕ್ಕೆ ಹಸ್ತಾಂತರಿಸಲಾಗಿತ್ತು. ಹಸ್ತಾಂತರಿಸಲಾದ ಸಿಬ್ಬಂದಿಯನ್ನು ವಿಲೀನತೆಯ ಆಯ್ಕೆಯೊಂದಿಗೆ ಮೊದಲಿಗೆ ಮೂರು ವರ್ಷಗಳ ಅವಧಿಗೆ ನಿಯೋಜನೆ ಮೇರೆಗೆ ನಿಗಮಕ್ಕೆ ನೀಡಲಾಗಿತ್ತು. ಈ ಸಿಬ್ಬಂದಿಯ ನಿಯೋಜನೆಯ ಅವಧಿಯು ದಿನಾಂಕ:31–03–2006ರಂದು ಮುಕ್ತಾಯಗೊಂಡಿರುತ್ತದೆ.

ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ನವದೆಹಲಿ ಇವರು ಮೇಲೆ ಓದಲಾದ (2) ಮತ್ತು (3)ರ ಪತ್ರಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಕಾರಾವಿ ನಿಗಮದ ಸೇವೆಯಲ್ಲಿ ವಿಲೀನಗೊಳಿಸಲು ಕೋರಿರುತ್ತಾರೆ. ಹಾಗೂ ವಿಲೀನತೆಗೆ ಸಂಬಂಧಿಸಿದಂತೆ ನಿಗಮವು ವಿಧಿಸುವ ನಿಬಂಧನೆ ಮತ್ತು ಷರತ್ತುಗಳನ್ನು ಕಳುಹಿಸಿರುತ್ತಾರೆ.

ಕಾರಾವಿ ನಿಗಮದಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯ ಸಿಬ್ಬಂದಿಯ ವಿಲೀನವು ದಿನಾಂಕ:01–01–2006ರಿಂದ ಪರಿಣಾಮಕಾರಿಯಾಗಿರುತ್ತದೆಂದು ಮೇಲೆ ಓದಲಾದ (4)ರ ಅಧಿಸೂಚನೆಯಲ್ಲಿ ಕಾರಾವಿ ನಿಗಮವು ತಿಳಿಸಿದೆ.

		b] Minor overhauls of vehicles (rule 55(40)(a) (3)(c) of MCE.	Full powers	Full powers	Full powers	Rs.15000/- for heavy vehicles and Rs.10000/- for light vehicles each time.

*** Note:** Existing item No.36, vide G.O.No. FD 937 FR 2003, Dated:21/11/2003 is merged with item No.22.

	24	c] Petty repairs including replacement of missing or worm out parts except tyres and tubes. (rule 55(40)(a) (3)(d) of MCE.	Full powers	Full powers	Full powers	Rs.6000/- for heavy vehicles and Rs.4000/- for light vehicles each time.

Sl. No.	Item No.	Subject	Director General and Inspector General of Police	DGP, ADGPs and IGPs having state jurisdiction	Other Heads of Department	District Level Officers
15	27	Purchase of sanitation and Hospital necessities	Rs.2.00 lakhs p.a.	Rs.1.00 lakh p.a.	Rs.30000/- p.a.	Rs.20000/- p.a.
16	29	To permit officers of the rank of PSI and above who travel by air in cases of exigencies.	NIL	NIL	NIL	NIL
17	33	To sanction expenditure on Mobile phones provided for official use to those officers, who have provided this facilities with prior Govt order (but excluding international calls)	Existing Powers may be continued.			
18	34	To sanction charge for : Barricading on important occasions like Dasara, Visit of VIPs, Mastabisheka etc.	Rs.5.00 lakhs in each case	Rs.2.00 lakhs in each case	Rs.1.00 lakh in each case	Rs.50000/- in each case
19	35	To sanction purchase of equipment and clothing for the office.	Rs.2.00 lakhs in each time subject to limit of Rs.20.00 lakhs p.a.	Rs.1.00 lakh each time subject to limit of Rs.10.00 lakhs p.a.	Rs.50000/- each time subject to limit of Rs.5.00 lakhs p.a.	Rs.25000/- each time subject to limit of Rs.2.00 lakhs p.a.
20	38	To purchase utensils etc.	Rs.50000/- each time limited to Rs.5.00 lakhs p.a.	Rs.30000/- each time limited to Rs.3.00 lakhs p.a.	Rs.20000/- each time limited to Rs.2.00 lakhs p.a.	Rs.10000/- each time limited to Rs.1.00 lakh p.a.
21	39	To meet expenditure towards conference/ committees etc.	Rs.1.00 lakh each time limited to Rs.5.00 lakhs p.a.	Rs.50000/- each time limited to Rs.3.00 lakhs p.a.	Rs.25000/- each time limited to Rs.2.00 lakhs p.a.	Rs.10000/- each time limited to Rs.1.00 lakh p.a.
22	40	To meet expenditure towards training materials and files.	Rs.50000/- each time limited to Rs.5.00 lakhs p.a.	Rs.40000/- each time limited to Rs.4.00 lakhs p.a.	Rs.20000/- each time limited to Rs.2.00 lakhs p.a.	Rs.10000/- each time limited to Rs.1.00 lakh p.a

Sl. No.	Item No.	Subject	Director General and Inspector General of Police	DGP, ADGPs and IGPs having state jurisdiction	Other Heads of Department	District Level Officers
23	41	To sanction charges for Scientific Tests like DNA, Narco analysis, brain mapping etc and to send materials /documents etc for expert opinion in criminal cases registered under IPC or other criminal enactments.	Rs.50000/- per case upto Rs.2.00 lakhs p.a.	Rs.25000/- per case upto Rs.1.00 lakh p.a.	Rs.20000/- per case upto Rs.1.00 lakh p.a.	Rs.10000/- per case upto Rs.50000/- p.a.
24	42	a) To sanction Hire charges of KSRTC and BMTC vehicles.	Full powers	Rs.1.00 lakh each time provided, the Police Dept. vehicles are not available.	Rs.50000/- each time provided Police Dept. vehicles are not available.	Rs.25000/- each time provided Police Dept. vehicles are not available.
		b) Hiring Private vehicles for Special Investigations.	Rs.2.00 lakhs each time	Rs.50000/- each time	Rs.30000/- each time	Rs.20000/- each time
		c) Transportation of un identified dead bodies/ injured persons in emergencies.	Full powers	Full powers	Full powers	Full powers
25	43	Purchase of animals like Horse and Dogs.	Upto Rs.1.00 lakh for each horse and Rs.10000/- for each dog	Upto 50000/- for each horse and Rs.5000/- for each dog	NIL	NIL
26	44	Payments to expenses towards Horse & Dogs.	Rs.2.00 lakhs p.a.	Rs.1.00 lakh p.a.	Rs.50000/- p.a.	Rs.30000/- p.a.
27	45	Passing out parade in Training Institutions.	Full powers	Rs.1.00 lakh per passing out parade	Rs.50000/- per passing out parade	Rs.30000/- per passing out parade
28	46	Flag day/Commemoration Day/Investiture ceremony / other official functions	Full powers	Rs.25000/- per each function	Rs.15000/- per each function	Rs.10000/- per each function
29	47	Photography / video / Audio records charges	Rs.50000/- each case	Rs. 25000/- in each case	Rs.10000/- in each case	Rs.5000/- in each case

Sl. No.	Item No.	Subject	Director General and Inspector General of Police	DGP, ADGPs and IGPs having state jurisdiction	Other Heads of Department	District Level Officers
30	50	To sanction charge for hire charges and petrol oil etc supplied to private vehicles engaged to the extent required for police arrangements during large festivals, tours of Governor and visits of other High personages, detection of crime L&O arrangements.	Rs.1.00 lakh each time upto Rs.10.00 lakhs p.a.	Rs.1.00 lakh each time upto Rs.5.00 lakhs p.a.	Rs.50000/- each time Upto Rs.3.00 lakhs p.a.	Rs.30000/- each time upto Rs.1.00 lakh p.a.
31	51	Hiring of special equipments such as Tents/Generators / Crane /Earth Moving Equipments / training equipment and lighting arrangements etc.	Rs.1.00 lakh each time upto Rs.5.00 lakhs p.a.	Rs.50000/- each time upto Rs.2.00 lakhs p.a.	Rs.25000/- each time upto Rs.1.00 lakh p.a.	Rs.10000/- each time upto Rs.50000/- p.a.
32	53	Paying honorarium to guest lectures / Training allowances	Full powers	Full powers	Rs.750/- per day per person	Rs.500/- per day per person
33	New Item No.1	a) Hiring Professionals for Police I.T. Projects and Detection of cases.	NIL	NIL	NIL	NIL
		b) Seeking experts opinion in forensic, medical, handwriting, explosives, software etc.	Rs.2.00 lakhs p.a.	Rs.1.00 lakh p.a.	Rs.50000/- p.a.	Rs.10000/- p.a.
34	New Item No. 2	Cleaning/Recovery charges/Materials.	Rs.2.00 lakhs p.a.	Rs.1.00 lakh p.a.	Rs.50000/- p.a.	Rs.25000/- p.a.

Sl. No.	Item No.	Subject	Director General and Inspector General of Police	DGP, ADGPs and IGPs having state jurisdiction	Other Heads of Department	District Level Officers
35	New Item No. 3	Purchase of crime related journals, law books, latest Supreme Court judgement etc.,	Rs.2.00 lakhs p.a.	Rs.1.00 lakh p.a.	Rs.50000/- p.a.	Rs.25000/- p.a.
36	New Item No. 4	Sanction in any emergencies in relation with immediate threat to internal security.	NIL	NIL	NIL	NIL
37	New Item No. 5	Administrative Sanction :- As per G.O.No. FD 1 TFP 2008 DATED: 16-5-2008 The secretaries to Government of Administrative Departments shall have powers to accord administrative approval for estimates of works and procurement of goods and services upto Rs.5.00 crores presuming the concurrence of Finance Department (subject to the provision of the KTPP Act).	NIL	NIL	NIL	NIL

NOTE: 1. All Powers are subject to budget provision.

2. All Powers to purchase are subject to following the KTPP Act.

G.R. SRINIVASA RAO

Under Secretary to Government[I/c],

Home Department [Police Expenditure]

P.R. 2018

ತೋಟಗಾರಿಕೆ ಸಚಿವಾಲಯ

ವಿಷಯ: ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯ ಹಾಗೂ ಅದರ ಅಧೀನದ ಕಾಲೇಜುಗಳಿಗೆ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: ವಿಶೇಷಾಧಿಕಾರಿ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯರವರ ಪತ್ರ ಸಂಖ್ಯೆ:SO/Post creation/Section/2009 ದಿ.22-04-2009

ಪ್ರಸ್ತಾವನೆ:

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 37 ಶಾಸನ 2007 ದಿ.22.11.2008ರ ಅಧ್ಯಾದೇಶದಂತೆ 2008-09ನೇ ಸಾಲಿನಲ್ಲಿ ತೋಟಗಾರಿಕೆ ವಿಶ್ವವಿದ್ಯಾನಿಲಯವನ್ನು ಬಾಗಲಕೋಟೆಯಲ್ಲಿ ಪ್ರಾರಂಭಿಸಲಾಗಿದೆ. ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯವು ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವುದರಿಂದ ಸದರಿ ವಿಶ್ವವಿದ್ಯಾನಿಲಯ ಹಾಗೂ ಅದರ ಅಧೀನದ ಐದು ಕಾಲೇಜುಗಳಾದ ಅರಬಾವಿ, ಮೂಡಿಗೆರೆ, ಕೋಲಾರ , ಬಾಗಲಕೋಟೆ ಹಾಗೂ ಬೀದರ್ ಇವುಗಳಿಗೆ ಬೋಧಕ/ಬೋಧಕೇತರ ಸಿಬ್ಬಂದಿಗಳ ಅವಶ್ಯಕತೆಯಿದ್ದು, ಮೂಡಿಗೆರೆ ಹಾಗೂ ಅರಬಾವಿ ತೋಟಗಾರಿಕೆ ಕಾಲೇಜುಗಳಿಗೆ ಈಗಾಗಲೇ ಮಂಜೂರಾಗಿರುವ ಹುದ್ದೆಗಳಲ್ಲಿ 43 ಹುದ್ದೆಗಳನ್ನು ಭರ್ತಿಗೆ ಅನುಮತಿ ನೀಡುವಂತೆ, ವಿಶ್ವವಿದ್ಯಾನಿಲಯ ಹಾಗೂ 5 ತೋಟಗಾರಿಕೆ ಕಾಲೇಜುಗಳಿಗೆ ICAR ನಾರ್ಮ್ಸ್ ಪ್ರಕಾರ ಒಟ್ಟು 359 ಬೋಧಕ ಹಾಗೂ 762 ಬೋಧಕೇತರ ಹುದ್ದೆಗಳನ್ನು ಸೃಜಿಸಬೇಕೆಂದು ಇದರಲ್ಲಿ ಪ್ರಸ್ತುತ 2009-10ನೇ ಸಾಲಿಗೆ 267ಬೋಧಕ ಹಾಗೂ 699 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವಂತೆ ವಿಶೇಷಾಧಿಕಾರಿಗಳು, ತೋಟಗಾರಿಕೆ ವಿಶ್ವವಿದ್ಯಾನಿಲಯ, ಬಾಗಲಕೋಟೆರವರು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಕೃತೋಇ 341 ತೋಸೇಪ 2008 ಬೆಂಗಳೂರು, ದಿನಾಂಕ: 9ನೇ ಜುಲೈ 2009

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಣೆಗಳ ಹಿನ್ನಲೆಯಲ್ಲಿ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯ ಹಾಗೂ ಅದರ ಅಧೀನದಲ್ಲಿ ಬರುವ ತೋಟಗಾರಿಕೆ ಕಾಲೇಜುಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಹುದ್ದೆಗಳನ್ನು ಸೃಷ್ಟಿಸಿ ಹಾಗೂ ಭರ್ತಿ ಮಾಡಲು ಸರ್ಕಾರವು ಮಂಜೂರಾತಿಯನ್ನು ನೀಡಿದೆ.

1) ಮೂಡಿಗೆರೆ ಹಾಗೂ ಅರೆಬಾವಿ ತೋಟಗಾರಿಕೆ ಕಾಲೇಜುಗಳಿಗೆ ಈಗಾಗಲೇ ಮಂಜೂರಾಗಿರುವ ಹುದ್ದೆಗಳ ಪೈಕಿ ಅನುಬಂಧ- 1ರಲ್ಲಿ ನಮೂದಿಸಿರುವ 43 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಅನುಮತಿಸಿದೆ.
2) ಬೀದರ್, ಬಾಗಲಕೋಟೆ ಹಾಗೂ ಕೋಲಾರದಲ್ಲಿ ಹೊಸದಾಗಿ ಆರಂಭವಾಗಿರುವ ಮೂರು ತೋಟಗಾರಿಕೆ ಕಾಲೇಜುಗಳಿಗೆ ಅನುಬಂಧ-2ರಲ್ಲಿ ನಮೂದಿಸಿರುವ 87ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿದೆ ಹಾಗೂ ಈ ಹುದ್ದೆಗಳನ್ನು ICAR ಮಾರ್ಗಸೂಚಿಯಂತೆ ಭರ್ತಿ ಮಾಡಲು ಸರ್ಕಾರವು ಅನುಮತಿಸಿದೆ.
3) ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯದ ಕಛೇರಿಗೆ ಅನುಬಂಧ-3ರಲ್ಲಿ ನಮೂದಿಸಿರುವ ಒಟ್ಟು 43 ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿದೆ ಹಾಗೂ ಈ ಹುದ್ದೆಗಳನ್ನು ICAR ಮಾರ್ಗಸೂಚಿಯಂತೆ ಭರ್ತಿ ಮಾಡಲು ಸರ್ಕಾರವು ಅನುಮತಿಸಿದೆ.
4) ಮಂಜೂರಾಗಿರುವ ತಾಂತ್ರಿಕ ಹುದ್ದೆಗಳು/ವಾಹನ ಚಾಲಕರು ಹಾಗೂ ಡಿ ದರ್ಜೆ ಹುದ್ದೆಗಳನ್ನು ಬಾಹ್ಯಮೂಲದಿಂದ ಮಾತ್ರವೇ ಭರ್ತಿಮಾಡಿಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:117 ವೆಚ್ಚ-4/2007 ದಿನಾಂಕ:04-07-2009ರ ಅನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ರಾಜು

ಸರ್ಕಾರದ ಅಧೀನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ:ಕೃತೋಇ 341 ತೋಸೇಪ 2008 ಬೆಂಗಳೂರು, ದಿನಾಂಕ:09-07-2009 ಕ್ಕೆ ಅನುಬಂಧ -1

ಮೂಡಿಗೆರೆ/ಅರಬಾವಿ ತೋಟಗಾರಿಕೆ ಕಾಲೇಜುಗಳಿಗೆ ಮಂಜೂರಾಗಿರುವ ಹುದ್ದೆಗಳನ್ನು ಭರ್ತಿ ಮಾಡುವ ವಿವರ

ಕ.ಸಂ.	ವೃಂದ	ವೇತನ ಶ್ರೇಣಿ	ಮೂಡಿಗೆರೆ	ಅರಬಾವಿ
1.	ಅಸಿಸ್ಟೆಂಟ್ ಪ್ರೊಫೆಸರ್	8000-200-13440	10	10
2.	ಅಸಿಸ್ಟೆಂಟ್ ಲೈಬ್ರರಿಯನ್	8000-200-13440	01	01

ಕ್ರ.ಸಂ.	ವೃಂದ	ವೇತನ ಶ್ರೇಣಿ	ಮೂಡಿಗೆರೆ	ಅರಬಾವಿ
3.	ಅಸಿಸ್ಟೆಂಟ್ ರಿಜಿಸ್ಟ್ರಾರ್	14050–350–25050	01	–
4.	ಅಸಿಸ್ಟೆಂಟ್ ಅಡ್ಮಿನಿಸ್ಟ್ರೇಷನ್ ಆಫೀಸರ್	14050–350–25050	01	01
5.	ಅಸಿಸ್ಟೆಂಟ್ ಕಂಪ್ಟ್ರೋಲರ್	14050–350–25050	01	01
6.	ಅಸಿಸ್ಟೆಂಟ್ ಕಮ್ ಕಂಪ್ಯೂಟರ್ ಆಪರೇಟರ್	8000–200–13440	04	04
7.	ವಾಹನ ಚಾಲಕರು (ಭಾರಿ ವಾಹನ)	7275–175–13350	01	01
8.	ವಾಹನ ಚಾಲಕರು (ಲಘು ವಾಹನ)	5800–100–10500	01	01
9.	ಮೆಸೆಂಜರ್ಸ್	4800–100–7275	01	01
10.	ವಾಚ್‌ಮನ್	4800–100–7275	01	01
	ಒಟ್ಟು..		**22**	**21**

ಎಸ್. ರಾಜು

ಸರ್ಕಾರದ ಅಧೀನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ:ಕೃತೋಇ 341 ತೋಸೇಪ 2008 ಬೆಂಗಳೂರು, ದಿನಾಂಕ:09–07–2009 ಕ್ಕೆ ಅನುಬಂಧ – 2

ಬೀದರ್/ಬಾಗಲಕೋಟೆ/ಕೋಲಾರ ತೋಟಗಾರಿಕೆ ಕಾಲೇಜುಗಳಿಗೆ ಸೃಜಿಸಲಾದ ಹುದ್ದೆಗಳ ವಿವರ

ಕ್ರ.ಸಂ.	ವೃಂದ	ವೇತನ ಶ್ರೇಣಿ	ಬೀದರ್	ಬಾಗಲಕೋಟೆ	ಕೋಲಾರ
1.	ಅಸಿಸ್ಟೆಂಟ್ ಪ್ರೊಫೆಸರ್	8000–200–13440	15	15	15
2.	ಅಸಿಸ್ಟೆಂಟ್ ಲೈಬ್ರರಿಯನ್	8000–200–13440	01	01	01
3.	ಅಸಿಸ್ಟೆಂಟ್ ರಿಜಿಸ್ಟ್ರಾರ್	14050–350–25050	01	01	01
4.	ಅಸಿಸ್ಟೆಂಟ್ ಅಡ್ಮಿನಿಸ್ಟ್ರೇಷನ್ ಆಫೀಸರ್	14050–350–25050	01	01	01
5.	ಅಸಿಸ್ಟೆಂಟ್ ಕಂಪ್ಟ್ರೋಲರ್	14050–350–25050	01	01	01
6.	ಅಸಿಸ್ಟೆಂಟ್ ಕಮ್ ಕಂಪ್ಯೂಟರ್ ಆಪರೇಟರ್	8000–200–13440	04	04	04
7.	ವಾಹನ ಚಾಲಕರು (ಭಾರಿ ವಾಹನ)	7275–175–13350	01	01	01
8.	ವಾಹನ ಚಾಲಕರು (ಲಘು ವಾಹನ)	5800–100–10500	01	01	01
9.	ಮೆಸೆಂಜರ್ಸ್	4800–100–7275	02	02	02
10.	ವಾಚ್‌ಮನ್	4800–100–7275	02	02	02
	ಒಟ್ಟು		**29**	**29**	**29**

ಎಸ್. ರಾಜು

ಸರ್ಕಾರದ ಅಧೀನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ:ಕೃತೋಇ 341 ತೋಸೇಪ 2008 ಬೆಂಗಳೂರು, ದಿನಾಂಕ:09–07–2009 ಕ್ಕೆ ಅನುಬಂಧ – 3

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯದ ಕಛೇರಿಗೆ ಸೃಜಿಸಲಾದ ಹುದ್ದೆಗಳ ವಿವರ

ಕ್ರ.ಸಂ.	ವೃಂದ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
1.	ಟೆಕ್ನಿಕಲ್ ಆಫೀಸರ್	12000–18300	04
2.	ಎಕ್ಸಿಕ್ಯೂಟಿವ್ ಇಂಜಿನಿಯರ್	18150–26925	01

ಕ್ರ.ಸಂ.	ವೃಂದ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
3.	ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್	14050–25050	01
4.	ಅಸಿಸ್ಟೆಂಟ್ ಇಂಜಿನಿಯರ್	11400–21600	02
5.	ಪರ್ಸನಲ್ ಸೆಕ್ರೆಟರಿ	11400–21600	01
6.	ಸ್ಟೆನೋಗ್ರಾಫರ್	10000–18150	01
7.	ಅಸಿಸ್ಟೆಂಟ್ ಕಂಪ್ಟ್ರೋಲರ್	14050–25050	02
8.	ಅಸಿಸ್ಟೆಂಟ್ ಅಡ್ಮಿನಿಸ್ಟ್ರೇಟಿವ್ ಆಫೀಸರ್	14050–25050	02
9.	ಅಸಿಸ್ಟೆಂಟ್ ರಿಜಿಸ್ಟ್ರಾರ್	14050–25050	02
10.	ಸೂಪರಿನಟೆಂಡೆಂಟ್, ಅಕೌಂಟ್ಸ್/ಜನರಲ್	11400–21600	02
11.	ಸೀನಿಯರ್ ಅಸಿಸ್ಟೆಂಟ್	10000–18150	06
12.	ಅಸಿಸ್ಟೆಂಟ್ ಕಮ್ ಕಂಪ್ಯೂಟರ್ ಆಪರೇಟರ್	10000–14800	10
13.	ವಾಹನ ಚಾಲಕರು (ಭಾರಿ ವಾಹನ)	7275–13350	02
14.	ವಾಹನ ಚಾಲಕರು(ಲಘು ವಾಹನ)	5800–10500	02
15.	ಮೆಸೆಂಜರ್/ವಾಚ್‌ಮನ್	4800–7275	05
	ಒಟ್ಟು		43

ಎಸ್. ರಾಜು

ಪಿ.ಆರ್. 1715 ಸರ್ಕಾರದ ಅಧೀನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಸೇವಾ ಸಂಸ್ಥೆ ರಾಯಚೂರು ರವರು ಜಿಲ್ಲಾ ಪಂಚಾಯತ್. ಬಳ್ಳಾರಿ ಇವರ ಸಹಯೋಗ ದೊಂದಿಗೆ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿರುವ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಎಆರ್‌ಟಿಜೆಎಸ್ ಸಂಸ್ಥೆಗೆ ನೀಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ/30/ಎಸ್ ಜೆವೈ/2007 ದಿನಾಂಕ:24–5–07.
2. ಕಾರ್ಯದರ್ಶಿಗಳು, ಸೇ.ವಾ.ಸಂಸ್ಥೆ ರಾಯಚೂರು ರವರ ಪತ್ರ ದಿನಾಂಕ:29–8–08 ರ ಸಂಖ್ಯೆ ಸೇವಾ–ರಾ/ATDC/ಹೂಹ/ ಆಡಳಿತ/2008
3. ನಿರ್ದೇಶಕರು, ARTJS, ಬೆಂಗಳೂರು ರವರ ಪತ್ರ ದಿನಾಂಕ:30–5–2009.

ಪ್ರಸ್ತಾವನೆ:

ಕೃಷಿ ನಂತರ ಹೆಚ್ಚಿನ ಉದ್ಯೋಗ ಒದಗಿಸುವ ಕ್ಷೇತ್ರ ಜವಳಿ ವಲಯವಾಗಿದ್ದು, ಸಿದ್ಧ ಉಡುಪು ಕೈಗಾರಿಕೆಗಳು ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತವಾಗಿದ್ದು, ಉಳಿದ ಜಿಲ್ಲೆಗಳಲ್ಲಿ ಸಿದ್ಧ ಉಡುಪು ತಯಾರಿಕೆಯಲ್ಲಿ ನುರಿತ ಕೆಲಸಗಾರರು ಸಿಗದ ಪ್ರಯುಕ್ತ, ಸಿದ್ಧ ಉಡುಪು ಘಟಕಗಳು ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿಸಲು ಹಾಗೂ ಎಸ್‌ಜಿಎಸ್‌ವೈ ಯೋಜನೆಯನ್ವಯ ಯುವಜನರಿಗೆ ಸ್ವಉದ್ಯೋಗ ಕಲ್ಪಿಸಿಕೊಡುವ ಉದ್ದೇಶದಿಂದ ಸರ್ಕಾರವು ಓದಲಾಗಿದೆ (1) ರ ಆದೇಶದಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನಲ್ಲಿ ಸೇವಾ ಸಂಸ್ಥೆ, ರಾಯಚೂರು ರವರಿಗೆ ಜಿಲ್ಲಾ ಪಂಚಾಯತಿಯ ಸಹಯೋಗದೊಂದಿಗೆ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಜೂನ್ 2007 ರೊಳಗಾಗಿ ಸ್ಥಾಪಿಸಲು ಕೆಲವು ಷರತ್ತು ವಿಧಿಸಿ ಆದೇಶ ನೀಡಲಾಗಿತ್ತು. ಅದರಂತೆ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿತ್ತು.

ಆದರೆ, ಸದರಿ ಕೇಂದ್ರ ಸ್ಥಾಪನೆ ಕುರಿತು ಓದಲಾಗಿದೆ (2) ರಲ್ಲಿ ಸೇವಾ ಸಂಸ್ಥೆಯ ಕಾರ್ಯದರ್ಶಿಗಳು ಅನಿವಾರ್ಯ ಕಾರಣಗಳಿಂದಾಗಿ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ನಿರ್ವಹಣೆ ಮಾಡಲು ಕಷ್ಟವಾಗಿರುವುದರಿಂದ ಓದಲಾಗಿದೆ (1) ರ ಮಂಜೂರಾತಿ ಆದೇಶವನ್ನು ರದ್ದುಪಡಿಸಬೇಕಾಗಿ ಕೋರಿರುತ್ತಾರೆ.

ಸದರಿ ಸೇವಾ ಸಂಸ್ಥೆಯವರು ಸರ್ಕಾರದ ಆದೇಶದಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸದ ಕಾರಣ ಎಸ್‌ಜಿಎಸ್‌ವೈ ಮೂಲಭೂತ ಸೌಕರ್ಯದಡಿ ನೀಡಿರುವ ಯಂತ್ರೋಪಕರಣ ಹಾಗೂ ಪೀಠೋಪಕರಣಗಳನ್ನು ಹಿಂದಕ್ಕೆ ಪಡೆದು ಜಿಲ್ಲಾ ಪಂಚಾಯತಿಯ ಸುಪರ್ದಿಗೆ ನೀಡಲು ತೀರ್ಮಾನಿಸಲಾಗಿದೆ. ಈಗಾಗಲೇ ಕೇಂದ್ರ ಆರಂಭಿಸಿರುವ ಕಾರಣ ಇಲ್ಲಿರುವ ಯಂತ್ರೋಪಕರಣ ಹಾಗೂ ಪೀಠೋಪಕರಣಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ. ಆದ್ದರಿಂದ ತರಬೇತಿ ಸಂಸ್ಥೆಯನ್ನು ಮುಂದುವರೆಸಲು, ನಿರ್ವಹಣೆಯನ್ನು ಬೇರೆ ಸಂಸ್ಥೆಗೆ ವಹಿಸಬೇಕಾಗಿದೆ.

ಈ ಮಧ್ಯೆ ಕರ್ನಾಟಕ ವೃತ್ತಿನಿರತ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ಸಂಸ್ಥೆಯು, ಗುರುತಿಸಲಾದ ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ (ARTJS) ಸಂಸ್ಥೆಯು ಜಿಲ್ಲಾ ಪಂಚಾಯತ್ ಸಹಯೋಗ ದೊಂದಿಗೆ ಮೇಲ್ಕಂಡ ತರಬೇತಿ ಕೇಂದ್ರವನ್ನು ನಡೆಸುವುದಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿದೆ. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಸೇವಾ ಸಂಸ್ಥೆ ರಾಯಚೂರು ರವರು ಜಿಲ್ಲಾ ಪಂಚಾಯತ್ ಬಳ್ಳಾರಿ ಸಹಯೋಗದೊಂದಿಗೆ (ದಿನಾಂಕ:24-05-2007 ರ ಆದೇಶದಂತೆ) ಸ್ಥಾಪಿಸಿದ್ದ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಹಿಂದಕ್ಕೆ ಪಡೆದು ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ (ARTJS) ಸಂಸ್ಥೆ, ಬೆಂಗಳೂರು ರವರಿಗೆ ಸದರಿ ಕೇಂದ್ರವನ್ನು ಮುಂದುವರಿಸಿಕೊಂಡು ಹೋಗಲು ಅನುಮತಿ ನೀಡಬೇಕಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 54 ಎಸ್‌ಜಿವೈ (ಇನ್‌ಪ್ರಾ) 2009, ಬೆಂಗಳೂರು, ದಿನಾಂಕ: 27ನೇ ಜುಲೈ 2009

ದಿನಾಂಕ: 24-05-2007 ರ ಸರ್ಕಾರದ ಆದೇಶದಂತೆ ಸೇವಾ ಸಂಸ್ಥೆ ರಾಯಚೂರು ಹಾಗೂ ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಸಹಯೋಗದೊಂದಿಗೆ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಸ್ಥಾಪಿಸಿದ್ದ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಹಿಂದಕ್ಕೆ ಪಡೆಯಲು ಹಾಗೂ ಸದರಿ ಕೇಂದ್ರವನ್ನು ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ ಸಂಸ್ಥೆ, (ARTJS) ಬೆಂಗಳೂರು ಮತ್ತು ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಸಹಯೋಗದೊಂದಿಗೆ ಕೆಳಕಂಡ ಷರತ್ತುಗಳನ್ವಯ ಮುಂದುವರಿಸಿ, ನಿರ್ವಹಿಸಲು ಮಂಜೂರಾತಿ ನೀಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಷರತ್ತುಗಳು:

1) ಸೇವಾ ಸಂಸ್ಥೆ, ರಾಯಚೂರು ಇವರ ಸಹಯೋಗದೊಂದಿಗೆ ಸ್ಥಾಪಿಸಲಾಗಿರುವ ಕೇಂದ್ರದಲ್ಲಿ ಎಸ್‌ಜಿಎಸ್‌ವೈ ಮೂಲಭೂತ ಸೌಕರ್ಯ ನಿಧಿಯಿಂದ ಖರೀದಿಸಿರುವ ಯಂತ್ರೋಪಕರಣ ಹಾಗೂ ಪೀಠೋಪಕರಣಗಳನ್ನು ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರು ಹಿಂದಕ್ಕೆ ಪಡೆದು ವಹಿಯಲ್ಲಿ ದಾಖಲಿಸುವುದು.

2) ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ ಸಂಸ್ಥೆ, (ARTJS) ಬೆಂಗಳೂರು ಇವರು ತರಬೇತಿ ಕೇಂದ್ರವನ್ನು ಆಗಸ್ಟ್ 2009 ರಲ್ಲಿ ಪ್ರಾರಂಭಿಸಲು ಅವಶ್ಯವಿರುವ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು.

3) ತರಬೇತಿ ಕೇಂದ್ರಕ್ಕೆ ಅಗತ್ಯವಿರುವ ಸಿಬ್ಬಂಧಿಯನ್ನು ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ ಸಂಸ್ಥೆಯವರೇ (ARTJS) ನೇಮಕಾತಿ ಮಾಡಿ ಆವರ್ತಕ ವೆಚ್ಚವನ್ನು (Recurring Expenditure) ಭರಿಸತಕ್ಕದ್ದು.

4) ಸಂಸ್ಥೆಗೆ ಬೇಕಾದ ಸಿಬ್ಬಂದಿಯನ್ನು ತಾಂತ್ರಿಕ ನೈಪುಣ್ಯತೆಯ ಅಧಾರದ ಮೇಲೆ ನೇಮಿಸುವ ಜವಾಬ್ದಾರಿ ಸ್ವಯಂ ಸೇವಾ ಸಂಸ್ಥೆಯದಾಗಿರುತ್ತದೆ. ಈ ಬಗ್ಗೆ ಜಿಲ್ಲಾ ಪಂಚಾಯತ್, ಬಳ್ಳಾರಿಯವರು ಸಲಹೆ ನೀಡ ಬಹುದಾಗಿದೆ.

5) ಈ ತರಬೇತಿ ಸಂಸ್ಥೆಯ ನಿರ್ವಹಣೆಗಾಗಿ ಯಾವುದೇ ಆವರ್ತಕ ವೆಚ್ಚವನ್ನು ನೀಡಲಾಗುವುದಿಲ್ಲ. ಎಸ್ ಜಿ ಎಸ್ ವೈ ಫಲಾನುಭವಿಗಳಿಗೆ ಎಸ್ ಜಿ ಎಸ್ ವೈ ತರಬೇತಿ ನಿಧಿಯಿಂದ ನೀಡುವ ತರಬೇತಿ ವೆಚ್ಚ/ಗೌರವಧನ ಮತ್ತು ಇತರೆ ಫಲಾನುಭವಿಗಳಿಗೆ ಆಯಾ ಇಲಾಖೆಯವರು ನೀಡುವ ಗೌರವ ಧನದಿಂದ ಮತ್ತು ತರಬೇತಿ ಸಂಸ್ಥೆಯು ನಡೆಸುವ ಪ್ರತ್ಯೇಕ ತರಬೇತಿಗಳಿಂದ ಪಡೆದ ಶಿಷ್ಯವೇತನ ಮತ್ತು ಗೌರವಧನದಲ್ಲಿ ತರಬೇತಿ ಸಂಸ್ಥೆಯ ನಿರ್ವಹಣಾ ವೆಚ್ಚವನ್ನು ಭರಿಸಬೇಕು. ತರಬೇತಿಯ ಗೌರವಧನಕ್ಕಿಂತ ಆವರ್ತಕ ವೆಚ್ಚ ಹೆಚ್ಚಾದಲ್ಲಿ ಉಳಿದ ವೆಚ್ಚವನ್ನು ಸಂಸ್ಥೆಯವರೇ ಭರಿಸಬೇಕು.

6) ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆಯಿಂದ ಈಗಿರುವ ತರಬೇತಿ ಸಂಸ್ಥೆಯ ಕಟ್ಟಡವು ಸರಿಯಿಲ್ಲದೆ ಇರುವುದರ ಬಗ್ಗೆ ವರದಿ ಬಂದಿದ್ದು, ಅದನ್ನು ತಾಲ್ಲೂಕು ಪಂಚಾಯತಿ ವಶದಲ್ಲಿರುವ ಇನ್ನೊಂದು ಕಟ್ಟಡಕ್ಕೆ ಸ್ಥಳಾಂತರಿಸಲು ಅನುಮೋದನೆ ನೀಡಿದೆ.

7) ಸೇವಾ ಸಂಸ್ಥೆ, ರಾಯಚೂರು ಇವರಿಂದ ಹಿಂದಕ್ಕೆ ಪಡೆದಿರುವ ಯಂತ್ರೋಪಕರಣ / ಪೀಠೋಪಕರಣವನ್ನು ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ ಸಂಸ್ಥೆಯವರ (ARTJS) ಸಹಯೋಗದೊಂದಿಗೆ ಸ್ಥಾಪಿತವಾಗುತ್ತಿರುವ ಕೇಂದ್ರಕ್ಕೆ ನೀಡಿ ಇದರ ಬಗ್ಗೆ ಜಿಲ್ಲಾ ಪಂಚಾಯತ್, ಬಳ್ಳಾರಿ ಮತ್ತು ARTJS ಸಂಸ್ಥೆಯವರು ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

8) ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಕನಿಷ್ಠ 10 ವರ್ಷ ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ (ARTJS) ಸಂಸ್ಥೆಯು ಕಡ್ಡಾಯವಾಗಿ ನಡೆಸಬೇಕು. ಸಂಸ್ಥೆಯವರು ಅನಿವಾರ್ಯ ಕಾರಣದಿಂದ ತರಬೇತಿ ಕೇಂದ್ರವನ್ನು ಸ್ಥಗಿತಗೊಳಿಸಿದರೆ ಯಂತ್ರೋಪಕರಣ/ಪೀಠೋಪಕರಣವನ್ನು ಹಿಂದಕ್ಕೆ ಪಡೆಯಲು/ಬೇರೆ ಕೇಂದ್ರಕ್ಕೆ ವರ್ಗಾಯಿಸುವ ಅಧಿಕಾರ ಜಿಲ್ಲಾ ಪಂಚಾಯತಿ, ಬಳ್ಳಾರಿಯವರದಾಗಿರುತ್ತದೆ.

9) ಕೇಂದ್ರ ಪಾರಂಭ ಆದ ನಂತರ "ಎಸ್‌ಜಿಎಸ್‌ವೈ ಯಡಿ ಜಿಲ್ಲಾ ಪಂಚಾಯತ್, ಬಳ್ಳಾರಿ ಮತ್ತು ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ (ARTJS) ಸಹಯೋಗದೊಂದಿಗೆ ಸ್ಥಾಪಿತವಾದ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರ'' ಇವರ ಎಂದು ನಾಮಫಲಕ ಹಾಕುವುದು.

10) ಈ ತರಬೇತಿ ಮತ್ತು ಉತ್ಪಾದನಾ ಕೇಂದ್ರವು ಅಪೆರೆಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್ (ATDC) ಬೆಂಗಳೂರು ಇವರು ಅಳವಡಿಸಿದ (1) ಪಠ್ಯಕ್ರಮ (2) ಯಂತ್ರೋಪಕರಣ (3) ತರಬೇತಿಯ ಗುಣಮಟ್ಟವನ್ನು ಬೆಂಚ್ ಮಾರ್ಕ್ ಆಗಿ ಇಟ್ಟುಕೊಂಡು ಈ ಮಾದರಿಯಲ್ಲಿ ತರಬೇತಿ ಕೇಂದ್ರವನ್ನು ನಡೆಸತಕ್ಕದ್ದು.

11) ಸದರಿ ತರಬೇತಿ ಮತ್ತು ಉತ್ಪಾದನಾ ಕೇಂದ್ರದಲ್ಲಿ ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಿ.ದೇವರಾಜ ಅರಸ್ ಅಭಿವೃದ್ಧಿ ನಿಗಮ, ಕೈಮಗ್ಗ ಮತ್ತು ಜವಳಿ ಇಲಾಖೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯ ಫಲಾನುಭವಿಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಫಲಾನುಭವಿಗಳು ಹಾಗೂ ಇತರೆ ಇಲಾಖೆಯ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸಂಬಂಧಪಟ್ಟ ಇಲಾಖೆ/ ನಿಗಮಗಳಲ್ಲಿ ಜಾರಿಯಲ್ಲಿರುವ ನಿಯಮಗಳಂತೆ ತರಬೇತಿ ನೀಡುವುದು. ಇತರೆ ಅಭ್ಯರ್ಥಿಗಳಿಗೆ ತರಬೇತಿ ನೀಡಲು ತರಬೇತಿ ಅವಧಿಯನ್ನು ಹಾಗೂ ತರಬೇತಿಯ course fee ಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಹಾಗೂ ARTJS ಸಂಸ್ಥೆ ನಿರ್ಧರಿಸುವುದು.

12) ಪ್ರತಿ ತಿಂಗಳು ಕನಿಷ್ಠ 30 ಅಭ್ಯರ್ಥಿಗಳಿಗೆ ತರಬೇತಿ ನೀಡುವುದು.

13) ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಮಿತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ರಚನೆ ಮಾಡಲಾಗಿದೆ. ಈ ಸಮಿತಿಯು ಪ್ರತಿ ತಿಂಗಳು ಪ್ರಗತಿ ಪರಿಶೀಲನಾ ಸಭೆ ನಡೆಸುವುದು.

14) ತರಬೇತಿ ಸಂಸ್ಥೆಯ ಆದಾಯ ಮತ್ತು ಖರ್ಚನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.

15) ಈ ಕೆಂದ್ರವು ಮುಖ್ಯ ಮಾತೃ ಕೇಂದ್ರವಾಗಿ ನಿರ್ವಹಿಸಿ ಜಿಲ್ಲೆಯಲ್ಲಿ ಉಪ ಉತ್ಪಾದನಾ ಕೇಂದ್ರಗಳನ್ನು (ancillary unit) ಜಿಲ್ಲೆಯಲ್ಲಿ ಸ್ಥಾಪಿಸಲು ಕ್ರಮವಹಿಸುವುದು.

ಮೇಲಿನ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ "ಅಪೆರೆಲ್ ರಿಟೈಲ್ ಟ್ರೈನಿಂಗ್ ಮತ್ತು ಜಾಬ್ ಸೆಲ್ಯೂಷನ್ (ARTJS) ಸಂಸ್ಥೆ ಬೆಂಗಳೂರು ರವರು ಜಿಲ್ಲಾ ಪಂಚಾಯತ್ ಬಳ್ಳಾರಿಯವರೊಂದಿಗೆ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರ''ದ ಬಗ್ಗೆ ಒಡಂಬಡಿಕೆ ಮಾಡಿಕೊಂಡು ಅದರ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಶಮ್ಲಾ ಇಕ್ಬಾಲ್

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ.

ಪಿ.ಆರ್. 1853

ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶಿಕ್ಷಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಡಿ 159 ಎಲ್‌ಐಬಿ 2009, ಬೆಂಗಳೂರು, ದಿನಾಂಕ: 31ನೇ ಆಗಸ್ಟ್ 2009

ಸರ್ಕಾರದ ಆದೇಶ ಸಂಖ್ಯೆ ಇಡಿ 308 ಎಲ್‌ಐಬಿ 2008, ದಿನಾಂಕ: 03.02.2009ರ ಕ್ರಮ ಸಂಖ್ಯೆ 2 ರಲ್ಲಿ ಮೂದಿಸಿದ "ಪ್ರೊ:ಕೆ.ಇ.ರಾಧಾಕೃಷ್ಣ, ನಂ.6, ಆರ್.ಇ.ಹೆಚ್.ಎಸ್. ಜೆ.ಸಿ.ನಗರ, ಮಹಾಲಕ್ಷ್ಮಿಪುರಂ, ಬೆಂಗಳೂರು-86" ಂಬುದರ ಬದಲಾಗಿ "ಡಾ: ಅಮರೇಶ್ ಯತಗಲ್, ಸಾಹಿತಿಗಳು, ಸಂಶೋಧಕರು, ಸರ್ಕಾರಿ ವಸತಿಗೃಹ ಸಂ.11, ಎನ್.ಜಿ.ಒ. ಾಲೋನಿ, ಲಿಂಗಸಗೂರು, ರಾಯಚೂರು ಜಿಲ್ಲೆ" ಎಂಬುದಾಗಿ ಬದಲಾಯಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

.ಆರ್. 2101

ಎಂ.ಎನ್. ಸೋಮಶೇಖರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಆಡಳಿತ)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ನೂತನವಾಗಿ ರಚಿಸಿರುವ ಜಿಲ್ಲೆಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ(ಅಂತರ್ಜಲ) ಕಛೇರಿಗಳನ್ನು ತೆರೆಯುವ ಕುರಿತು.

ಓದಲಾಗಿದೆ: 1. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ:ಗಭೂಇ/ಸಿಬ್ಬಂದಿ ಅ4/2008-09/141, ದಿನಾಂಕ:08-08-2008.

2. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ:ಗಭೂಇ/ಸಿಬ್ಬಂದಿ ಅ2/08-09/1181, ದಿ:18-07-09.

ಪ್ರಸ್ತಾವನೆ:

ರಾಜ್ಯದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ 6 ಜಿಲ್ಲೆಗಳಲ್ಲಿ ಹಿರಿಯ ಭೂವಿಜ್ಞಾನಿ (ಖನಿಜ) ಕಛೇರಿಗಳನ್ನು ತೆರೆಯಲು ಾಗೂ 8 ಜಿಲ್ಲೆಗಳಲ್ಲಿ ಅಂತರ್ಜಲ ಕಛೇರಿಗಳ ಸ್ಥಾಪನೆಗಾಗಿ (8 ಅಂತರ್ಜಲ + 6 ಖನಿಜ) ಒಟ್ಟು 160 ಹುದ್ದೆಗಳ ಸೃಜನೆ ಅವಶ್ಯಕತೆಯಿದ್ದು, ಈ ಪೈಕಿ 35 ಹುದ್ದೆಗಳನ್ನು redeployment ಮೂಲಕ ಹಾಗೂ 125 ಹುದ್ದೆಗಳ ಸೃಷ್ಟಿಸುವ ಮೂಲಕ ರ್ವಹಿಸಲು ಮೇಲೆ (1) ರಲ್ಲಿ ಓದಲಾದ ದಿ:08-08-08 ರ ಪತ್ರದಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಪ್ರಸ್ತಾಪಿಸಿದ್ದರ ಮೇರೆಗೆ, ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿ, ಆ ಇಲಾಖೆಯು ನ್ನ ದಿ:10-07-09 ರ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 776 ವೆಚ್ಚ-1/09 ರಲ್ಲಿ ಒಟ್ಟು 26 ಹುದ್ದೆಗಳನ್ನು ಸೃಷ್ಟಿಸಲು ಹಾಗೂ ತೃತೀಯ ದರ್ಜೆ ಸಹಾಯಕ, ಬೆರಳಚ್ಚುಗಾರ, ವಾಹನಚಾಲಕ ಮತ್ತು ಗ್ರೂಪ್-ಡಿ ಹುದ್ದೆಗಳನ್ನು ಸೃಷ್ಟಿಸದೇ ಸೇವೆಯನ್ನು ಮಾತ್ರವೇ ಬಾಹ್ಯಮೂಲಗಳಿಂದ ಪಡೆದುಕೊಳ್ಳಲು ಸಹಮತಿ ನೀಡಿತ್ತು. ಅಂತೆಯೇ, ಈ ಕುರಿತು ಪರಿಷ್ಕೃತ ಪ್ರಸ್ತಾವನೆಯನ್ನು ಲ್ಲಿಸುವಂತೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರನ್ನು ಕೋರಲಾಗಿ, ಮೇಲೆ (2) ರಲ್ಲಿ ಓದಲಾದ :18-07-09 ರ ಪತ್ರದಲ್ಲಿ ಈ ಕೆಳಕಂಡಂತೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ:-

ಅ) ಹೊಸ ಜಿಲ್ಲಾ ಕಛೇರಿಗಳ ಸ್ಥಾಪನೆ:- ಉಡುಪಿ, ದಾವಣಗೆರೆ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ತಲಾ 4 ರಂತೆ ಒಟ್ಟು 16 ಹುದ್ದೆಗಳನ್ನು ಆರ್ಥಿಕ ಇಲಾಖೆಯು ಅನುಮೋದಿಸಿರುವಂತೆ ಸೃಷ್ಟಿಸುವುದು. 4 ಜಿಲ್ಲಾ ಮಟ್ಟದ ಕಛೇರಿಗಳಿಗೆ ತಲಾ ಒಂದೊಂದರಂತೆ ದ್ವಿತೀಯ ದರ್ಜೆ ಸಹಾಯಕ, ಬೆರಳಚ್ಚುಗಾರ, ವಾಹನಚಾಲಕ ಮತ್ತು ಗ್ರೂಪ್-ಡಿ ಹುದ್ದೆಗಳನ್ನು ಸೃಷ್ಟಿಸದೇ ಸೇವೆಯನ್ನು ಮಾತ್ರವೇ ಬಾಹ್ಯಮೂಲಗಳಿಂದ ಪಡೆದುಕೊಳ್ಳುವುದು. ಈ 4 ಕಛೇರಿಗಳಿಗೆ ತಲಾ 1 ಹಿರಿಯ ಭೂವಿಜ್ಞಾನಿ ಹುದ್ದೆಯನ್ನು redeployment ಮೂಲಕ ಭರ್ತಿ ಮಾಡಿ, ಜಿಲ್ಲಾಮಟ್ಟದ 4 ಕಛೇರಿಗಳನ್ನು (ಖನಿಜ ಮತ್ತು ಅಂತರ್ಜಲ ಸೇರಿದಂತೆ) ರೂ.54.40 ಲಕ್ಷಗಳ ಅಂದಾಜು ವೆಚ್ಚದಲ್ಲಿ (ಪ್ರತಿ ಜಿಲ್ಲಾ ಕಛೇರಿಗೆ ವೇತನಕ್ಕಾಗಿ ರೂ.7.80 ಲಕ್ಷ ಹಾಗೂ ವೇತನೇತರಕ್ಕಾಗಿ ರೂ.5.80 ಲಕ್ಷ = 13.60 ಲಕ್ಷ X4 ಜಿಲ್ಲೆಗಳು = ರೂ. 54.40 ಲಕ್ಷಗಳ ಅಂದಾಜು ವೆಚ್ಚದಲ್ಲಿ) ಸ್ಥಾಪಿಸಿ ನಿರ್ವಹಿಸುವುದು.

ಆ) ಜಿಲ್ಲಾ ಕಛೇರಿಗಳನ್ನು ಬಲಪಡಿಸುವಿಕೆ :- ರಾಮನಗರ, ಚಾಮರಾಜನಗರ, ಬಾಗಲಕೋಟೆ (ಇಳಕಲ್) ಮತ್ತು ಕೊಪ್ಪಳದ ಜಿಲ್ಲಾ ಕಛೇರಿಗಳನ್ನು, ತಲಾ ಒಂದೊಂದು ಭೂವಿಜ್ಞಾನಿ ಹುದ್ದೆಯನ್ನು ಹಾಗೂ ಬಾಗಲಕೋಟೆ ಮತ್ತು ಕೊಪ್ಪಳದ ಜಿಲ್ಲಾ ಕಛೇರಿಗಳಿಗೆ ತಲಾ ಒಂದೊಂದು ಸಹಾಯಕ ಅಭಿಯಂತರ ಹುದ್ದೆಗಳನ್ನು ಹಾಗೂ ಚಾಮರಾಜನಗರ ಕಛೇರಿಯಲ್ಲಿ ಒಂದು ಕಿರಿಯ ಅಭಿಯಂತರ ಹುದ್ದೆಯನ್ನು ಹೊಸದಾಗಿ ಸೃಷ್ಟಿಸಿ (ಒಟ್ಟು 7 ಹುದ್ದೆಗಳು), ಈ ನಾಲ್ಕೂ ಕಛೇರಿಗಳಿಗೆ ತಲಾ ಒಂದೊಂದು ವಾಹನ ಚಾಲಕನ ಸೇವೆಯನ್ನು ಬಾಹ್ಯ ಮೂಲದಿಂದ ಪಡೆದು ಬಲಪಡಿಸುವುದು. ಅಲ್ಲದೇ, ಈ ಕಛೇರಿಗಳಿಗೆ ವೇತನ ವೆಚ್ಚಕ್ಕಾಗಿ ರಾಮನಗರಕ್ಕೆ ರೂ.1.96 ಲಕ್ಷ,

ಚಾಮರಾಜನಗರ ಕ್ಕೆ ರೂ.3 ಲಕ್ಷ, ಬಾಗಲಕೋಟೆಗೆ ರೂ.3.30 ಲಕ್ಷ ಹಾಗೂ ಕೊಪ್ಪಳಕ್ಕೆ 3.25 ಲಕ್ಷ ಹೀಗೆ ಒಟ್ಟು 11.51 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ವಹಿಸುವುದು.

ಇ) ಹಾಲಿಯಿರುವ ಅಂತರ್ಜಲ ಕಛೇರಿಗಳನ್ನು ಬಲಪಡಿಸುವುದು :- ರಾಯಚೂರು ಮತ್ತು ಬೀದರ್ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿನ 2 ಅಂತರ್ಜಲ ಕಛೇರಿಗಳನ್ನು ಬಲಪಡಿಸಲು ಉದ್ದೇಶಿಸಿದ್ದು, ರಾಯಚೂರು ಕಛೇರಿಗೆ 1-ಭೂವಿಜ್ಞಾನಿ, 1-ಕಿರಿಯ ಅಭಿಯಂತರ ಹುದ್ದೆಗಳನ್ನು ಹಾಗೂ ಬೀದರ್ ಕಛೇರಿಗೆ 1-ಭೂವಿಜ್ಞಾನಿ ಹುದ್ದೆಯನ್ನು ಹೊಸದಾಗಿ ಸೃಷ್ಟಿಸಿ, ವೇತನ ವೆಚ್ಚಕ್ಕಾಗಿ ರಾಯಚೂರು ಕಛೇರಿಗೆ ರೂ.2.50 ಲಕ್ಷ ಹಾಗೂ ಬೀದರ್ ಕಛೇರಿಗೆ 1.32 ಲಕ್ಷ ರೂ. ಗಳ ಅಂದಾಜು ವೆಚ್ಚವನ್ನು ಭರಿಸುವುದು.

ಈ)

i) ಆರ್ಥಿಕ ಇಲಾಖೆಯು ಅನುಮೋದಿಸಿರುವಂತೆ ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಹುದ್ದೆಗಳು . . . 26

ii) ಬಾಹ್ಯಮೂಲಗಳಿಂದ ಸೇವೆಯನ್ನು ಪಡೆಯಬೇಕಾಗಿರುವವರ ಸಂಖ್ಯೆ (ಯಾವುದೇ ಹುದ್ದೆಗಳ ಸೃಜನೆಯಿಲ್ಲದೇ) . . . 24

iii) Redeployment ಮೂಲಕ . . . 4

iv) ವೇತನ ವೆಚ್ಚಕ್ಕಾಗಿ (ಲಕ್ಷಗಳಲ್ಲಿ) . . . ರೂ. 46.53

v) ವೇತನೇತರ ವೆಚ್ಚಗಳಿಗಾಗಿ . . . ರೂ. 23.20

vi) ಲೆಕ್ಕಶೀರ್ಷಿಕೆ – 2853-02-001-0-01 ಯೋಜನೇತರ

ಮೇಲಿನಂತೆ, ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಸಲ್ಲಿಸಿದ್ದ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ ಸಂಖ್ಯೆ: ಸಿಐ 76 ಎಂಜಿಎಸ್ 2008, ಬೆಂಗಳೂರು, ದಿನಾಂಕ: 18ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಉಡುಪಿ, ದಾವಣಗೆರೆ, ಹಾವೇರಿ ಮತ್ತು ಗದಗ ಜಿಲ್ಲಾ ಕೇಂದ್ರಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಜಿಲ್ಲಾ ಮಟ್ಟದ ಖನಿಜ ಕಛೇರಿಗಳನ್ನು ಸ್ಥಾಪಿಸಿ, ಇದರೊಂದಿಗೆ ಅಂತರ್ಜಲದ ಕಾರ್ಯವನ್ನೂ ಸಹ ನಿರ್ವಹಿಸಲು ಹಾಗೂ ರಾಮನಗರ, ಚಾಮರಾಜನಗರ, ಬಾಗಲಕೋಟೆ (ಇಳಕಲ್) ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಖನಿಜ ಕಛೇರಿಗಳನ್ನು ಬಲಪಡಿಸಿ, ಅಂತರ್ಜಲ ಕಾರ್ಯಚಟುವಟಿಕೆಗಳನ್ನೂ ಸಹ ನಿರ್ವಹಿಸಲು ಮತ್ತು ರಾಯಚೂರು ಹಾಗೂ ಬೀದರ್ ಜಿಲ್ಲೆಗಳಲ್ಲಿನ ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತರ್ಜಲ ವಿಭಾಗಗಳನ್ನು ಬಲಪಡಿಸಲು ಅನುಬಂಧದಲ್ಲಿನಂತೆ ಒಟ್ಟು 26 ಹುದ್ದೆಗಳನ್ನು ಸೃಷ್ಟಿಸಲು, 4 ಹಿರಿಯ ಭೂವಿಜ್ಞಾನಿ ಹುದ್ದೆಗಳನ್ನು redeployment ಮೂಲಕ ಭರ್ತಿ ಮಾಡಲು ಹಾಗೂ 4-ದ್ವಿತೀಯ ದರ್ಜೆ ಸಹಾಯಕ, 4-ಬೆರಳಚ್ಚುಗಾರ, 8-ವಾಹನಚಾಲಕ ಮತ್ತು 8-ಗ್ರೂಪ್-ಡಿ ಗಳ ಸೇವೆಯನ್ನು ಯಾವುದೇ ಹುದ್ದೆಗಳನ್ನು ಸೃಷ್ಟಿಸದೇ, ಸೇವೆಯನ್ನು ಮಾತ್ರವೇ ಬಾಹ್ಯಮೂಲಗಳಿಂದ ಪಡೆದುಕೊಂಡು ನಿರ್ವಹಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಮಂಜೂರಾತಿ ನೀಡಿದೆ:-

ಅ) ದ್ವಿತೀಯ ದರ್ಜೆ ಸಹಾಯಕ, ಬೆರಳಚ್ಚುಗಾರ, ವಾಹನಚಾಲಕ, ಗ್ರೂಪ್-ಡಿ ಹುದ್ದೆಗಳನ್ನು ಸೃಷ್ಟಿಸುವಂತಿಲ್ಲ. ನಿಯಮಾನುಸಾರ ಸೇವೆಯನ್ನು ಮಾತ್ರವೇ ಬಾಹ್ಯಮೂಲಗಳಿಂದ ಪಡೆದುಕೊಳ್ಳತಕ್ಕದ್ದು.

ಆ) ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಹುದ್ದೆಗಳು, redeployment ಮೂಲಕ ತುಂಬಬೇಕಾದ ಹುದ್ದೆಗಳು ಹಾಗೂ ಬಾಹ್ಯಮೂಲಗಳಿಂದ ಪಡೆದುಕೊಳ್ಳಬಹುದಾದ ಸೇವೆಯ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ಪ್ರಸ್ತಾವನೆಗಾಗಿ ತಗಲುವ ವೆಚ್ಚ ಇತ್ಯಾದಿಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ 2009-10ನೇ ಸಾಲಿಗಾಗಿ ಒದಗಿಸಲ್ಪಟ್ಟಿರುವ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿ:10-07-09 ಹಾಗೂ 13-08-09 ರಂದು ಅನಧಿಕೃತ ಟಿಪ್ಪಣಿ ಸಂಖ್ಯೆ:FD 776 Exp-1/2009 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಪಿ. ರಾಮಕೃಷ್ಣ

ಪೀಠಾಧಿಕಾರಿ(ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

I -F11 -★

ಸರ್ಕಾರಿ ಆದೇಶ ಸಂಖ್ಯೆ:ಸಿಐ 76 ಎಂಜಿಎಸ್ 2008, ದಿನಾಂಕ:18–08–2009 ರ ಅನುಬಂಧ

ಕ್ರ.ಸಂ.	ಹುದ್ದೆಯ ವಿವರ	ಹೊಸಕಛೇರಿಗಳ ಸ್ಥಾಪನೆ				ಖನಿಜ ಕಛೇರಿಗಳನ್ನು ಬಲಪಡಿಸುವುದು				ಅಂತರ್ಜಲ ವಿಭಾಗಗಳನ್ನು ಬಲಪಡಿಸುವುದು		ಒಟ್ಟು
		ಉಡುಪಿ	ದಾವಣಗೆರೆ	ಹಾವೇರಿ	ಗದಗ	ರಾಮನಗರ	ಚಾಮರಾಜ–ನಗರ	ಬಾಗಲಕೋಟೆ (ಇಳಕಲ್)	ಕೊಪ್ಪಳ	ರಾಯಚೂರು	ಬೀದರ್	
	I. ಆರ್ಥಿಕ ಇಲಾಖೆಯು ಅನುಮೋದಿಸಿರುವಂತೆ ಸೃಷ್ಟಿಸಿರುವ ಹೊಸ ಹುದ್ದೆಗಳು											
1.	ಭೂವಿಜ್ಞಾನಿ	2	2	2	2	1	1	1	1	1	1	14
2.	ಸಹಾಯಕ ಇಂಜಿನಿಯರ್							1	1			02
3.	ಕಿರಿಯ ಇಂಜಿನಿಯರ್	1	1	1	1		1			1		06
4.	ಅಧೀಕ್ಷಕರು	1	1	1	1							04
	(i) ಒಟ್ಟು	**4**	**4**	**4**	**4**	**1**	**2**	**2**	**2**	**2**	**1**	**26**
	II. ಬಾಹ್ಯಮೂಲದಿಂದ ಸೇವೆಯನ್ನು ಪಡೆಯುವಿಕೆ (ಯಾವುದೇ ಹುದ್ದೆಗಳನ್ನು ಸೃಷ್ಟಿಸದೇ)											
5.	ದ್ವಿ.ದ.ಸ.	1	1	1	1							04
6.	ಬೆರಳಚ್ಚುಗಾರರು / ಡಾಟಾ ಎಂಟ್ರಿ ಆಪರೇಟರ್	1	1	1	1							04
7.	ವಾಹನಚಾಲಕ	1	1	1	1	1	1	1	1			08
8.	ಗ್ರೂಪ್ –ಡಿ	2	2	2	2							08
	(ii) ಒಟ್ಟು	**5**	**5**	**5**	**5**	**1**	**1**	**1**	**1**			**24**
	III. Redeployment ಮೂಲಕ											
9.	ಹಿರಿಯ ಭೂವಿಜ್ಞಾನಿ	1	1	1	1							04

ಎ.ಪಿ. ರಾಮಕೃಷ್ಣ
ಪೀಠಾಧಿಕಾರಿ(ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್. 1966

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯ ರಾಜ್ಯ ಪರಿಷತ್ತು ಮತ್ತು ಕಾರ್ಯಕಾರಿ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ವಿಯಇ 92 ವಿತ್ರಮ 2003(II) ದಿನಾಂಕ:28/09/2004.

2) ಪತ್ರ ಸಂಖ್ಯೆ:ಡಿಎಸ್‌ಟಿ 170 ಎಸ್ ಟಿ ಎಸ್ 2007, ದಿನಾಂಕ:09/01/2008.

3) ದಿನಾಂಕ:20/11/2008 ರಂದು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯ ಕಾರ್ಯಕಾರಿ ಸಮಿತಿಯ ತಿರ್ಮಾನ.

4) ಸರ್ಕಾರಿ ಆದೇಶ ಸಂಖ್ಯೆ: ವಿ ಯ ಇ 14 ವಿತ್ರಮ 2008 (1), ದಿನಾಂಕ:01.08.2009.

ಪ್ರಸ್ತಾವನೆ:

ಓದಲಾದ (1)ರ ಸರ್ಕಾರಿ ಆದೇಶದಲ್ಲಿ ದಿನಾಂಕ:28/09/2004 ರಿಂದ ಮೂರು ವರ್ಷದ ಅವಧಿಗೆ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯ ನಿಯಮಗಳು ಮತ್ತು ನಿಬಂಧನೆಗಳ ಮೇರೆಗೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯನ್ನು ಹಾಗೂ ಅದರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ:27/09/2007ಕ್ಕೆ ಮೂರು ವರ್ಷಗಳ ಅವಧಿಯು ಅಂತ್ಯಗೊಂಡಿರುವುದರಿಂದ ಮೇಲೆ ಓದಲಾದ (2)ರ ಪತ್ರದಲ್ಲಿ ಮಂಡಳಿಯ ರಾಜ್ಯ ಪರಿಷತ್ ಮತ್ತು ಕಾರ್ಯಕಾರಿ ಸಮಿತಿಯನ್ನು ಪುನರ್ ರಚಿಸುವವರೆಗೆ ರಾಜ್ಯ ಸಮಿತಿ ಸಭೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಸಬಹುದೆಂದು ಮತ್ತು ಕಾರ್ಯಕಾರಿ ಸಮಿತಿಯ ಸಭೆಗಳನ್ನು ನಿರ್ದೇಶಕರು ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು. ಇವರ ಅಧ್ಯಕ್ಷತೆಯಲ್ಲಿ ನಡೆಸಿ ಅಧಿಕಾರೇತರ ಸದಸ್ಯರ ಗೈರು ಹಾಜರಿಯಲ್ಲಿ ತಿರ್ಮಾನವನ್ನು ಕೈಗೊಳ್ಳಬಹುದೆಂದು ತಿಳಿಸಲಾಗಿದೆ. ಮೇಲೆ ಓದಲಾದ (3)ರ ನಡವಳಿಯಲ್ಲಿ ಸದರಿ ಆಡಳಿತ ಮಂಡಳಿ ಮತ್ತು ಅದರ ಕಾರ್ಯಕಾರಿ ಸಮಿತಿಯನ್ನು ಮೂರು ವರ್ಷಗಳ ಅವಧಿಗೆ ಪುನರ್ ರಚಿಸುವಂತೆ ತಿರ್ಮಾನಿಸಲಾಗಿದೆ.

ಮೇಲೆ (4) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರ ವಿದ್ಯಾಮಂಡಳಿಯ ಕಾರ್ಯದರ್ಶಿಯ ಹುದ್ದೆಗೆ ಪ್ರೊ.ಎಂ.ಎಸ್.ಮೋಹನ್‌ಕುಮಾರ್ Department of Civil Engineering, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿ ಆದೇಶಿಸಿದೆ.

ರಾಜ್ಯದಲ್ಲಿ ರಾಷ್ಟ್ರಪತಿಯ ಆಡಳಿತ ಜಾರಿಯಲ್ಲಿದ್ದು, ಸಕಾಲದಲ್ಲಿ ರಾಜ್ಯ ಪರಿಷತ್ ಸಮಿತಿ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರನ್ನು ನೇಮಕ ಮಾಡಲಾಗಲಿಲ್ಲ. ಈಗ ರಾಜ್ಯದಲ್ಲಿ ಸರ್ಕಾರ ರಚನೆಯಾಗಿರುವ ಹಿನ್ನಲೆಯಲ್ಲಿ ಮಂಡಳಿಯ ರಾಜ್ಯ ಪರಿಷತ್ತು ಮತ್ತು ಕಾರ್ಯಕಾರಿ ಸಮಿತಿಯನ್ನು ಪುನರ್ ರಚಿಸುವ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಸಮಗ್ರವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 14 ವಿತ್ರಮ 2008, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯ ಮೆಮೋರಂಡಮ್ ಆಫ್ ಅಸೋಸಿಯೇಷನ್ ಮತ್ತು ರೂಲ್ಸ್ ಆಂಡ್ ರೆಗ್ಯುಲೇಷನ್ ಮೆಮೋರೆಂಡಂ ಆಫ್ ಅಸೋಸಿಯೇಷನ್ ಪ್ರಕಾರ ರಾಜ್ಯ ಪರಿಷತ್ತು ಮತ್ತು ಕಾರ್ಯಕಾರಿ ಸಮಿತಿಯ ಅವಧಿಯು ಮೂರು ವರ್ಷಗಳಾಗಿದ್ದು, ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಮುಂದಿನ ಮೂರು ವರ್ಷಗಳ ಅವಧಿಗೆ ಜಾರಿಯಲ್ಲಿರುವಂತೆ ಕನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯ ರಾಜ್ಯ ಪರಿಷತ್ ಮತ್ತು ಅದರ ಕಾರ್ಯಕಾರಿ ಸಮಿತಿಯನ್ನು ಕ್ರಮವಾಗಿ ಅನುಬಂಧ-1 ಮತ್ತು ಅನುಬಂಧ-2 ರಲ್ಲಿರುವಂತೆ ಪುನರ್ ರಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಬೋರಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

Annexure - I (ಅನುಬಂಧ-1)

Annexure to G.O.No.ವಿಯಇ 14 ವಿತ್ರಮ 2008 (II) ದಿನಾಂಕ: 01.08.2009

Karnataka State Council for Science & Technology (KSCST)

Members of Governing Council

01.	Hon'ble Chief Minister Government of Karnataka Vidhana Soudha, Bangalore – 560 001.	President

02.	Hon'ble Minister for Finance Vidhana Soudha, Bangalore – 560 001.	Vice-President
03.	The Director Indian Institute of Science Bangalore – 560 012.	Vice-President
04.	Hon'ble Minister for Science & Technology Government of Karnataka Vidhana Soudha, Bangalore – 560 001.	Vice-President
05.	Hon'ble Minister for Higher Education Government of Karnataka Vidhana Soudha, Bangalore – 560 001.	Member
06.	Hon'ble Minister for Health & Family Welfare Government of Karnataka Vidhana Soudha, Bangalore – 560 001.	Member
07.	Hon'ble Minister for Agriculture & Animal Husbandry Government of Karnataka Vidhana Soudha, Bangalore – 560 001.	Member
08.	Hon'ble Minister for Energy Government of Karnataka Vidhana Soudha, Bangalore – 560 001.	Member
09.	Secretary or his nominee Dept. of Science & Technology Government of India Technology Bhavan New Mehrauli Road, New Delhi – 110 016.	Member
10.	The Vice-Chancellor Women's university Bijapur.	Member
11.	The Vice-Chancellor Mysore University Manasagangothri Mysore – 570 005.	Member
12.	The Vice-Chancellor Bangalore university Jnanabharathi, Bangalore.	Member
13.	The Vice-Chancellor Gulbarga University Gulbarga.	Member
14.	The Vice-Chancellor University of Agricultural Sciences Bangalore.	Member
15.	The Vice-Chancellor University of Agricultural Sciences Dharwad.	Member
16.	The Chief Secretary to Government Government of Karnataka Vidhana Soudha, Bangalore – 560 001.	Member

17.	The Additional Chief Secretary and Development Commissioner Government of Karnataka Vidhana Soudha, Bangalore – 560 001.	Member
18.	The Principal Secretary Finance Department Government of Karnataka Vidhana Soudha, Bangalore – 560 001.	Member
19.	The Principal Secretary Department of Planning Government of Karnataka M.S.Building, Bangalore – 560 001.	Member
20.	The Principal Secretary Dept. of Information Technology, Biotechnology & Science and Technology Government of Karnataka M.S.Building, Bangalore – 560 001.	Member
21.	The Principal Secretary Dept. of Rural Development & Panchayat Raj Government of Karnataka M.S.Building, Bangalore – 560 001.	Member
22.	The Principal Secretary Dept. of Higher Education Government of Karnataka M.S.Building, Bangalore – 560 001.	Member
23.	The Principal Secretary Dept. of Forest, Ecology & Environment Government of Karnataka M.S.Building, Bangalore – 560 001.	Member
24.	The Chairman Indian Space Research Organisation Antariksh Bhavan, New BEL Road Bangalore – 560 094.	Member
25.	The Director Central Food Technological Research Institute Mysore – 570 013.	Member
26.	The Director Indian Institute of Management Bannerghatta Road Bangalore – 560 076.	Member
27.	The Director Institute for Social & Economic Change Nagarbhavi Post, Bangalore – 560 072.	Member

28.	The Chairman Centre for Sustainable Development (formerly ASTRA) Indian Institute of Science Bangalore – 560 012.	Member
29.	The Director National Institute of Advanced Studies Indian Institute of Science Bangalore – 560 012.	Member
30.	The Director National Aerospace Laboratories Bangalore – 560 017.	Member
31.	The Director National Institute of Technology – Karnataka Surathkal, Srinivasanagar Dakshina Kannada District.	Member
32.	The Director Indian Institute of Information Technology ITPL Tower, Whitefield, Bangalore – 560 066.	Member
33.	The Vice Chancellor Visvesvaraya Technological University KLE Hospital Compound Shivabasavanagar, Belgaum – 590 010.	Member
34.	The Vice Chancellor Rajiv Gandhi University of Health Sciences - Karnataka 4th T Block, Jayanagar, Bangalore – 560 041.	Member
35.	The Director Raman Research Institute Sir C.V.Raman Avenue, Bangalore – 560 012.	Member
36.	The Director Karnataka State Remote Sensing Application Centre (KSRSAC) M.S.Building, Bangalore.	Member
37.	The Director Ashoka Trust for Research in Ecology No.659, 5th A Main, Hebbal Bangalore – 560 094.	Member
38.	The Chairman Karnataka State Pollution Control Board No.49, Parisara Bhavan Church Street, Bangalore – 560 001.	Member
39.	Dr.Arcot Ramachandran No.3, Crescent Road Bangalore – 560 001.	Member

40.	Prof.B.N.Raghunandan Chairman Dept.of Aerospace Engineering Indian Institute of Science Bangalore – 560 012.	Member
41.	Prof.J Srinivasan Dean, Division of Mechanical Sciences Indian Institute of Science Bangalore – 560 012.	Member
42.	Prof.M.S.Mohankumar Dept.of Civil Engineering Indian Institute of Science, Bangalore – 560 012.	Member-Secretary

ಕೆ. ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

Annexure - II (ಅನುಬಂಧ–2)

Annexure to G.O.No.ವಿಯಇ 14 ವಿತ್ರಮ 2008 (II) ದಿನಾಂಕ: 01.08.2009

Karnataka State Council for Science & Technology (KSCST)

Members of Executive Committee

01.	The Director Indian Institute of Science, Bangaloe – 560 012.	Chairman
02.	Secretary or his nominee Dept. of Science & Technology Government of India Technology Bhavan New Mehrauli Road, New Delhi – 110 016.	Member
03.	Chief Secretary Government of Karnataka Vidhana Soudha, Bangalore – 560 001.	Member
04.	The Additional Chief Secretary and Development Commissioner Government of Karnataka Vidhana Soudha, Bangalore – 560 001.	Member
05.	The Principal Secretary Dept.of Planning Government of Karnataka M.S.Building, Bangalore – 560 001.	Member
06.	The Principal Secretary Dept.of Information Technology, Biotechnology and Science & Technology Government of Karnataka M.S.Building, Bangalore – 560 001.	Member
07.	Vice Chancellor Visvesvaraya Technological University Belgaum.	Member

08.	The Vice Chancellor Bangalore University Jnanabharathi, Bangalore.	Member
09.	The Vice Chancellor University of Agricultural Sciences Dharwad.	Member
10.	Director Ashoka Trust for Research in Ecology No.659,5th A Main, Hebbal Bangalore – 560 024.	Member
11.	Dr.Arcot Ramachandran No.3, Crescent Road Bangalore – 560 001.	Member
12.	Prof. J.Srinivasan Dean, Division of Mechanical Sciences Indian Institute of Science, Bangalore – 560 012.	Member
13.	Prof.B.N.Raghunandan Chairman Dept.of Aerospace Engineering Indian Institute of Science, Bangalore – 560 012.	Member
14.	Prof.M.S.Mohankumar Dept.of Civil Engineering Indian Institute of Science, Bangalore – 560 012.	Member-Secretary

ಕೆ. ಬೋರಲಿಂಗಯ್ಯ

ಪಿ.ಆರ್. 1836 ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ತಿದ್ದೋಲೆ

ಸಂ. ಕಸಂವಾಪ್ರ 85 ಕಸನಿ 2009, ಬೆಂಗಳೂರು, ದಿನಾಂಕ: 31ನೇ ಜುಲೈ 2009

ಸರ್ಕಾರದ ಅಧಿಸೂಚನೆ ಸಂಖ್ಯೆ ಕಸಂವಾಪ್ರ 85 ಕಸನಿ 2009 ದಿನಾಂಕ: 30.07.2009ರ ಭಾಗ–1ರಲ್ಲಿನ "ಅಲ್ಲಿಯವರೆಗೆ ನಿಯೋಜನೆ ಮೇರೆಗೆ ನೇಮಿಸಲಾಗಿದೆ" ಎಂಬುದನ್ನು "ಅಲ್ಲಿಯವರೆಗೆ ಅವರ ಸ್ವಂತ ವೇತನ ಮತ್ತು ದರ್ಜೆಯ ಮೇಲೆ ನಿಯೋಜಿಸಲಾಗಿದೆ" ಎಂದು ದಿನಾಂಕ: 30.07.2009 ರಿಂದಲೇ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಭರ್ಮರಾಜಪ್ಪ

ಪಿ.ಆರ್. 1870 ಸರ್ಕಾರದ ಅಧಿನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ತಿದ್ದುಪಡಿ ಆದೇಶ

ಸಂಖ್ಯೆ: ಕಸಂವಾಪ್ರ 38 ಸ್ತ್ರೀಮರ 2009, ಬೆಂಗಳೂರು, ದಿನಾಂಕ: 4ನೇ ಆಗಸ್ಟ್ 2009

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 38 ಸ್ತ್ರೀಮರ 2009ರ ದಿನಾಂಕ: 27.06.2009ನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಭರ್ಮರಾಜಪ್ಪ

ಪಿ.ಆರ್. 1871 ಸರ್ಕಾರದ ಅಧಿನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ತಿದ್ದುಪಡಿ ಆದೇಶ

ಸಂಖ್ಯೆ : ಕಸಂವಾಪ್ರ 63 ಸ್ವೀಮರ 2009, ಬೆಂಗಳೂರು, ದಿನಾಂಕ: 4ನೇ ಆಗಸ್ಟ್ 2009

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 63 ಸ್ವೀಮರ 2009ರ ದಿನಾಂಕ: 23.06.2009ನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಕೆ. ಭರ್ಮರಾಜಪ್ಪ
ಸರ್ಕಾರದ ಅಧಿನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ.ಆರ್. 1872

ತಿದ್ದುಪಡಿ ಆದೇಶ

ಸಂ. ಕಸಂವಾಪ್ರ 21 ಸ್ವೀಮರ 2009, ದಿನಾಂಕ: 30ನೇ ಜುಲೈ 2009

ದಿನಾಂಕ: 27.06.2009ರ ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 21 ಸ್ವೀಮರ 2009ರ ಸರ್ಕಾರದ ಆದೇಶದ ಕಂಡಿಕೆ (2) ರಲ್ಲಿ ನಮೂದಿಸಿರುವ **ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಡಿಎಸ್ ವೈ 2008, ದಿ: 10.10.2008**ರ ಬದಲಿಗೆ ಈ ಕೆಳಗಿನಂತೆ ಓದಿಕೊಳ್ಳತಕ್ಕದ್ದು.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಡಿಎಸ್ ವೈ 2008, ದಿ: 18.05.2009

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಕೆ. ಭರ್ಮರಾಜಪ್ಪ
ಸರ್ಕಾರದ ಅಧಿನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ.ಆರ್. 1873

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: 2009–10ನೇ ಸಾಲಿನಲ್ಲಿ ರಾಜ್ಯ ಆಯುಷ್ ಇಲಾಖೆಯ ಅಡಿಯಲ್ಲಿ ಬರುವ ಖಾಸಗಿ ಆಯುರ್ವೇದ, ಹೋಮಿಯೋಪತಿ, ಯುನಾನಿ, ಯೋಗ ಮತ್ತು ನ್ಯಾಚುರೋಪತಿ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ/ಸ್ನಾತಕ ಪೂರ್ವ ಕೋರ್ಸುಗಳ ಪ್ರವೇಶ ನೀತಿಯಲ್ಲಿ ಸೀಟುಗಳ ಹಂಚಿಕೆ ಮತ್ತು ಪ್ರವೇಶ/ಬೋಧನಾ ಶುಲ್ಕವನ್ನು ನಿಗದಿಗೊಳಿಸುವ ಬಗ್ಗೆ.

ಓದಲಾಗಿದೆ: (1) ಸರ್ಕಾರಿ ಆದೇಶ ಸಂಖ್ಯೆ : ಆಕುಕ 27 ಪಿಟಿಡಿ 2008, ದಿನಾಂಕ : 14.05.2008.
(2) ಆಯುಷ್ ನಿರ್ದೇಶಕರ ಪತ್ರ ಸಂಖ್ಯೆ : ಆಯುಷ್:59/ಅಭಿವೃದ್ಧಿ (2)/08–09 ದಿನಾಂಕ 18.05.09

ಪ್ರಸ್ತಾವನೆ:

ಮೇಲೆ ಓದಲಾದ ಕ್ರ ಸಂ. (1) ರಲ್ಲಿನ ಸರ್ಕಾರದ ಆದೇಶದಲ್ಲಿ ಆಯುಷ್ ಇಲಾಖೆಯ ಅಡಿಯಲ್ಲಿ ಕೋರ್ಸುಗಳ ಬಗ್ಗೆ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಆಯುಷ್ ಮಹಾವಿದ್ಯಾಲಯಗಳಲ್ಲಿ ಸೀಟು ನಿಗದಿಗೊಳಿಸಿ ಆದೇಶ ಹೊರಡಿಸಿದೆ.

ಮೇಲೆ ಓದಲಾದ ಕ್ರ. ಸಂ. (2) ರಲ್ಲಿ ನಿರ್ದೇಶಕರು, ಆಯುಷ್ ಇಲಾಖೆರವರ ಪತ್ರದಲ್ಲಿ 2008–09ನೇ ಸಾಲಿನಲ್ಲಿ ಖಾಸಗಿ ಆಯುಷ್ ವೈದ್ಯಕೀಯ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಡೆಸಿದ ಸಭೆಯ ನಡವಳಿಗಳಲ್ಲಿ ತೀರ್ಮಾನಿಸಿ, ಪದವಿ ಕೋರ್ಸಿಗೆ ಶೇಕಡ 20:80 ಹಾಗೂ ಸ್ನಾತಕೋತ್ತರ ಪದವಿಗೆ ಶೇಕಡ 25:75 ಸೀಟು ಹಂಚಿಕೆ /ಬೋಧನಾ ಶುಲ್ಕವನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದ್ದು, 2008–09ನೇ ಸಾಲಿನಲ್ಲಿ ನಿಗದಿಪಡಿಸಿದ ರೀತಿಯಲ್ಲಿಯೇ ಪ್ರಸ್ತುತ ಇರುವ ಸೀಟು ಹಂಚಿಕೆಯನ್ನು/ಬೋಧನಾ ಶುಲ್ಕವನ್ನು 2009–10ನೇ ಸಾಲಿಗೂ ಮುಂದುವರೆಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 142 ಪಿಟಿಡಿ 2009, ಬೆಂಗಳೂರು, ದಿನಾಂಕ: 23ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ 2009–10ನೇ ಸಾಲಿನಲ್ಲಿ ಆಯುಷ್ ಇಲಾಖೆ ಅಡಿಯಲ್ಲಿ ಬರುವ ರಾಜ್ಯದ ಖಾಸಗಿ ಆಯುರ್ವೇದ, ಹೋಮಿಯೋಪತಿ, ಯುನಾನಿ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು ಸ್ನಾತಕಪೂರ್ವ ಕೋರ್ಸುಗಳ ಪ್ರವೇಶ ಪರೀಕ್ಷೆ ಸೀಟುಗಳ ಹಂಚಿಕೆ ಮತ್ತು ಬೋಧನಾ ಶುಲ್ಕವನ್ನು ನಿಗದಿಗೊಳಿಸುವ ಬಗ್ಗೆ ಈ ಕೆಳಗಿನಂತೆ ಕ್ರಮ ತೆಗೆದುಕೊಳ್ಳಲು ಸರ್ಕಾರವು ಆದೇಶಿಸಿದೆ.

1. ಸ್ನಾತಕ ಪೂರ್ವ ಕೋರ್ಸುಗಳಿಗೆ ಸಂಬಂಧಪಟ್ಟಂತೆ, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಮತ್ತು ಅನುದಾನರಹಿತ ಕಾಲೇಜುಗಳಲ್ಲಿ BAMS, BHMS, BUMS, BNYS ಕೋರ್ಸುಗಳಿಗೆ ಸಂಬಂಧಪಟ್ಟಂತೆ ಸೀಟುಗಳ ಹಂಚಿಕೆ ಮತ್ತು ಆಯ್ಕೆಯನ್ನು ಈ ಕೆಳಗಿನಂತೆ ಮುಂದುವರೆಸಲು ಆದೇಶಿಸಿದೆ.

ಸೀಟುಗಳ ಹಂಚಿಕೆ	ಸರ್ಕಾರಿ ಸೀಟುಗಳು	ಆಡಳಿತ ಮಂಡಳಿಯ ಸೀಟುಗಳು
(1) ಅನುದಾನಿತ ಕಾಲೇಜುಗಳಿಗೆ	80% (CET ಮೂಲಕ)	20% (ಮೆರಿಟ್ ಮೂಲಕ)
(2) ಅನುದಾನರಹಿತ ಕಾಲೇಜುಗಳಿಗೆ	20% (CET ಮೂಲಕ)	80% (ಮೆರಿಟ್ ಮೂಲಕ)

2. ಸ್ನಾತಕ ಪೂರ್ವ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನಂತೆ ಶುಲ್ಕವನ್ನು ಪ್ರತಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಲು ಆದೇಶಿಸಿದೆ.

ಅ) ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ	ರೂ. 15,000.00 (ಹದಿನೈದು ಸಾವಿರಗಳು ಮಾತ್ರ) (ಈ ಮೊತ್ತದಲ್ಲಿ ರೂ. 4,410 (ನಾಲ್ಕು ಸಾವಿರದ ನಾಲ್ಕು ನೂರ ಹತ್ತು ಮಾತ್ರ) ರೂ. ಗಳನ್ನು ಅಭಿವೃದ್ಧಿ ಶುಲ್ಕವೆಂದು ಪರಿಗಣಿಸುವುದು)
ಆ) ಅನುದಾನರಹಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ	ರೂ. 25,000.00 (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ–
(3) ಆಡಳಿತ ಮಂಡಳಿಯ ಸೀಟುಗಳಿಗೆ	ರೂ. 1,00000.00 (ಒಂದು ಲಕ್ಷದವರೆಗೆ)

3. ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನಂತೆ ಸೀಟುಗಳ ಹಂಚಿಕೆಯನ್ನು ಯಥಾವತ್ತಾಗಿ ಮುಂದುವರೆಸಲಾಗಿದೆ.

ಸೀಟುಗಳ ಹಂಚಿಕೆ	ಸರ್ಕಾರಿ ಸೀಟುಗಳು	ಆಡಳಿತ ಮಂಡಳಿಯ ಸೀಟುಗಳು
(1) ಅನುದಾನಿತ, ಅನುದಾನರಹಿತ ಕಾಲೇಜುಗಳಲ್ಲಿ	25% (PGET ಮೂಲಕ)	75% (CCIM/CCH) ಮಾರ್ಗ ಸೂಚಿಯ ಪ್ರಕಾರ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡುವುದು

4. ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳಿಂದ ಈ ಕೆಳಗಿನಂತೆ ಶುಲ್ಕವನ್ನು ವಸೂಲಿ ಮಾಡಲು ಆದೇಶಿಸಲಾಗಿದೆ.

ಶುಲ್ಕ :	
(1) ಅನುದಾನಿತ, ಅನುದಾನರಹಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ	ರೂ. 50,000/– ಗಳು –1 ವರ್ಷಕ್ಕೆ (ಐವತ್ತು ಸಾವಿರ)
(2) ಅನುದಾನಿತ, ಅನುದಾನರಹಿತ ಕಾಲೇಜು ಆಡಳಿತ ಮಂಡಳಿಯ ಸೀಟುಗಳಿಗೆ	ರೂ. 2.00 ಲಕ್ಷಗಳು –1 ವರ್ಷಕ್ಕೆ (ಎರಡು ಲಕ್ಷಗಳು) (ಮೇಲ್ಮಿತಿ)

5. ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ಇಲ್ಲಿ ಕೇಂದ್ರ ಸರ್ಕಾರವು ಪಂಚಕರ್ಮ ವಿಭಾಗದಲ್ಲಿ ಮಂಜೂರು ಮಾಡಿರುವ ಸೀಟುಗಳಿಗೆ ಹಾಗೂ ಮೈಸೂರಿನಲ್ಲಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯುರ್ವೇದ ಸಿದ್ಧಾಂತ ವಿಷಯದಲ್ಲಿ ಕೇಂದ್ರ ಸರ್ಕಾರವು ಮಂಜೂರು ಮಾಡಿರುವ ಸೀಟುಗಳಿಗೆ ಕೇಂದ್ರ ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಸಹಾಯಧನ ನೀಡಿರುವುದರಿಂದ ಶೇಕಡಾ 50% ರಷ್ಟು ಸೀಟುಗಳನ್ನು ಕರ್ನಾಟಕೇತರ ಅಭ್ಯರ್ಥಿಗಳಿಗೆ ಮೀಸಲಿಡಲು ಸೂಚಿಸಿದೆ.

6. ಸರ್ಕಾರಿ ಆಯುರ್ವೇದ ಕಾಲೇಜುಗಳಲ್ಲಿ ಸ್ನಾತಕೋತ್ತರ ಮತ್ತು ಸ್ನಾತಕ ಪೂರ್ವ ಕೋರ್ಸುಗಳಿಗೆ ಸಂಬಂಧಪಟ್ಟಂತೆ, ಸೀಟುಗಳ ಹಂಚಿಕೆ, ಪ್ರವೇಶದ ಆಯ್ಕೆ ಹಾಗೂ ಶುಲ್ಕವನ್ನು ಕಳೆದ ಸಾಲಿನಂತೆ ಹಾಗೂ ಜಾರಿಯಲ್ಲಿರುವ ನಿಯಮದಂತೆ ಯಥಾವತ್ತಾಗಿ ಮುಂದುವರೆಸಲಾಗಿದೆ.

7. ಈ ಸೀಟುಗಳಿಗೆ ಅಖಿಲ ಭಾರತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲು ಸೂಚಿಸಲಾಗಿದೆ.

8. ಮೇಲಿನ ಕೋರ್ಸುಗಳಲ್ಲಿ ಉಳಿದ ಶೇಕಡಾ 50% ರಷ್ಟು ಸೀಟುಗಳು ಹಾಗೂ ಸ್ನಾತಕೋತ್ತರ ಇತರೆ ಎಲ್ಲಾ ಕೋರ್ಸಿನ ಸೀಟುಗಳನ್ನು ಕರ್ನಾಟಕದಲ್ಲಿ ಜನಿಸಿ ಮತ್ತು ಕರ್ನಾಟಕದಲ್ಲಿರುವ ಯಾವುದೇ ವಿಶ್ವವಿದ್ಯಾಲಯದಲ್ಲಿ ಪದವಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಮೀಸಲಿಡಲು ತೀರ್ಮಾನಿಸಲಾಯಿತು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಮಹಾಲಕ್ಷ್ಮಮ್ಮ

ಪಿ.ಆರ್. 1359

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ವಿಷಯ: ಆಯುಷ್ ಪದ್ಧತಿಗಳನ್ನು ಮುಖ್ಯವಾಹಿನಿಗೆ ತರುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಆಯುಷ್, ಬೆಂಗಳರು, ಇವರ ಏಕ ಕಡತಗಳು.

1. ಕಡತ ಸಂಖ್ಯೆ: ಆಯುಷ್/20/ಐಇಸಿ(3) 2009–10
2. ಕಡತ ಸಂಖ್ಯೆ: ಆಯುಷ್/12/ಐಇಸಿ(3) 2009–10

ಪ್ರಸ್ತಾವನೆ:

ಉಲ್ಲೇಖಿತ ಪ್ರಸ್ತಾಪನೆಯಲ್ಲಿ ನಿರ್ದೇಶಕರು, ಆಯುಷ್ ನಿರ್ದೇಶನಾಲಯ ಇವರು ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 30.03.2009 ರಂದು ನಡೆದ NRHM (ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ) ಪಿ.ಐ.ಪಿ. 2009-10ರ ಮತ್ತು ಆಡಳಿತ/ಅಭಿವೃದ್ಧಿ ಪರಾಮರ್ಶೆ ಸಭೆಯ ನಡವಳಿಯನ್ನು ಉಲ್ಲೇಖಿಸಿ, ಜಿಲ್ಲಾ ಆಯುಷ್ ಅಧಿಕಾರಿಗಳನ್ನು ಜಿಲ್ಲೆಗೆ ಸಂಬಂಧಿಸಿದಂತೆ ಆಯುಷ್ ಇಲಾಖೆಯ ಕಾರ್ಯಕ್ರಮ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಲು ಹಾಗೂ ಅವರುಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಅಧೀನದಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಅಲ್ಲದೆ, ಜಿಲ್ಲಾ ಆಯುಷ್ ಅಧಿಕಾರಿಗಳ ರಜಾ ಮಂಜೂರಾತಿ ಅಧಿಕಾರವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ನೀಡುವಂತೆ ಕೋರಿರುತ್ತಾರೆ. ಹಾಗೂ ಸಮರ್ಪಕವಾಗಿ ಕೆಲಸ ನಿರ್ವಹಿಸದಿರುವ ಆಯುಷ್ ಚಿಕಿತ್ಸಾಲಯಗಳು/ಆಸ್ಪತ್ರೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಸ್ಥೆಗಳೊಂದಿಗೆ ಕೋಲೊಕೇಟ್ (Co-locate) ಮಾಡುವುದು ಮುಖ್ಯವಾಹಿನಿಯ ಒಂದು ಮುಖ್ಯ ಅಂಶವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಆಯುಷ್ ಪದ್ಧತಿಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯಕ್ರಮವನ್ನು ಆದ್ಯತೆ ಮೇರೆಗೆ ಹಮ್ಮಿಕೊಂಡಿದ್ದು, ಜಿಲ್ಲಾ ಆಯುಷ್ ಅಧಿಕಾರಿಗಳು ಪ್ರತ್ಯೇಕವಾಗಿ ಕರ್ತವ್ಯ ನಿರ್ವಹಿಸದೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೊಂದಿಗೆ ಸಮನ್ವಯಿಸಿ ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವುದು ಸಮರ್ಪಕವಾಗಿದೆಯೆಂದು ಭಾವಿಸಲಾಗಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 199 ಪಿಐಎಂ 2009, ಬೆಂಗಳೂರು, ದಿನಾಂಕ: 23ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಯುಷ್ ಇಲಾಖೆಯ ಎಲ್ಲಾ ಜಿಲ್ಲಾ ಆಯುಷ್ ಅಧಿಕಾರಿಗಳು ಆಯಾ ಜಿಲ್ಲೆಗೆ ಸಂಬಂಧಿಸಿದಂತೆ, ಆಯುಷ್ ಇಲಾಖಾ ಕಾರ್ಯಕ್ರಮ ಅಧಿಕಾರಿಗಳಾಗಿ ಮತ್ತು ಅವರುಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೊಂದಿಗೆ ಸಮನ್ವಯಿಸಿ ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವುದು.

ಆಯುಷ್ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಎಲ್ಲಾ ಪತ್ರ ವ್ಯವಹಾರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮುಖಾಂತರ ಮತ್ತು ಅವರ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.

ಜಿಲ್ಲಾ ಆಯುಷ್ ಅಧಿಕಾರಿಗಳ ರಜಾ ಮಂಜೂರಾತಿ ಮಾಡಲು ಮತ್ತು ಜಿಲ್ಲಾ ಆಯುಷ್ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಸೂಕ್ತ ಬದಲಿ ವ್ಯವಸ್ಥೆಯನ್ನು ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಮಹಾಲಕ್ಷ್ಮಮ್ಮ

ಪಿ.ಆರ್. 1365 ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ವಿಷಯ: ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಶ್ರೀ ಜಯದೇವ ಕಾರ್ಡಿಯಾಲಜಿ ಸಂಸ್ಥೆಯ ಹಾಗೂ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಶಾಖೆಗಳನ್ನು ತೆರೆಯುವ ಬಗ್ಗೆ.

ಓದಲಾಗಿದೆ: 1) 2009-10ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ಆಯವ್ಯಯದ ಭಾಷಣ

2) ನಿರ್ದೇಶಕರು, ಶ್ರೀ ಜಯದೇವ ಕಾರ್ಡಿಯಾಲಜಿ ಸಂಸ್ಥೆಯ ಪತ್ರ ಸಂಖ್ಯೆ: ಎಸ್‌ಜೆಐಸಿ:ಸಿಬ್ಬಂದಿ(1):286: 2008-09 ದಿನಾಂಕ: 04.03.2009

3) ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಇವರ ಪತ್ರ ಸಂಖ್ಯೆ:ಪಿಇಆರ್/ಸಿಎಬಿ-(ii)/ಡಿ-2-138/2009 ದಿನಾಂಕ: 19.02.2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರ. ಸಂ. (1) ರಲ್ಲಿ ಮಾನ್ಯ ಮುಖ್ಯಮಂತ್ರಿಗಳು 2009-10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಶ್ರೀ ಜಯದೇವ ಕಾರ್ಡಿಯಾಲಜಿ ಸಂಸ್ಥೆಯ ಹಾಗೂ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಶಾಖೆಗಳನ್ನು ತೆರೆಯಲು ರೂ. 10.00 ಕೋಟಿಗಳನ್ನು ಈ ಉದ್ದೇಶಕ್ಕಾಗಿ ಒದಗಿಸಲಾಗುವುದೆಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (2) ಮತ್ತು (3) ರಲ್ಲಿ ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಹಾಗೂ ಶ್ರೀ ಜಯದೇವ ಕಾರ್ಡಿಯಾಲಜಿ ಸಂಸ್ಥೆ ಇವರು ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಸದರಿ ಆಸ್ಪತ್ರೆಗಳ ಶಾಖೆಗಳನ್ನು ತೆರೆಯಲು ರೂ. 10.00 ಕೋಟಿ ಅನುದಾನವನ್ನು ಒದಗಿಸಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಶಾಖೆಯನ್ನು ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತೆರೆಯಲು ಪ್ರಸಕ್ತ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2210-05-105-1-06-101 - ಯೋಜನೆ ಅಡಿ ರೂ. 270.00 ಲಕ್ಷದಷ್ಟು ಹೆಚ್ಚುವರಿ ಅನುದಾನವನ್ನು ಹಾಗೂ ಶ್ರೀ ಜಯದೇವ ಕಾರ್ಡಿಯಾಲಜಿ ಚಿಕಿತ್ಸಾ ಕೇಂದ್ರ ತೆರೆಯಲು ಪ್ರಸಕ್ತ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2210-05-105-1-12-101 - ಯೋಜನೆ ಅಡಿಯಲ್ಲಿ 1150-00 ಲಕ್ಷಗಳನ್ನು ಒದಗಿಸಿದೆ. ಇದು ಸದರಿ ಸಂಸ್ಥೆಗೆ ನೀಡುವ ವಾಡಿಕೆ ಅನುದಾನಕ್ಕಿಂತ 200-00 ಲಕ್ಷ ಹೆಚ್ಚಿಗೆ ಇರುತ್ತದೆ. ಆದಕಾರಣ ಹೆಚ್ಚುವರಿ ಅನುದಾನ ಕೋರುವ ಮುನ್ನ ಈ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ತೀರ್ಮಾನಿಸಿ ಸದರಿ ಶಾಖೆಗಳನ್ನು ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತೆರೆಯಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 108 ಪಿಟಿಡಿ 2009, ಬೆಂಗಳೂರು, ದಿನಾಂಕ: 27ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ ಶಾಖೆಯನ್ನು ಮತ್ತು ಕಿದ್ವಾಯಿ ಸ್ಮಾರಕ ಗ್ರಂಥಿಯ ಶಾಖೆಯನ್ನು ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತೆರೆಯಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ ಹಾಗೂ ಈ ಶಾಖೆಗಳನ್ನು ತೆರೆಯಲು ಬೇಕಾಗುವ ಅನುದಾನವನ್ನು ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ 2009-10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-05-105-1-12-101-ಯೋಜನೆ ಅಡಿಯಲ್ಲಿ ಒದಗಿಸಿರುವ ಅನುದಾನದಡಿ ಹಾಗೂ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಲೆಕ್ಕಶೀರ್ಷಿಕೆ 2210-05-105-1-06-101-ಯೋಜನೆ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ:605: ವೆಚ್ಚ: 5-2009 ದಿನಾಂಕ: 6.5.2009 ಹಾಗೂ ಆಇ:658: ವೆಚ್ಚ-5-2009 ದಿನಾಂಕ : 26.05.2009ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಮಹಾಲಕ್ಷ್ಮಮ್ಮ

ಪಿ.ಆರ್. 1412 ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ವಿಷಯ: 2009-10ನೇ ಸಾಲಿನ ಲೆಕ್ಕಶೀರ್ಷಿಕೆ - 2210 (ಯೋಜನೇತರ) ಅಡಿಯಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಆಕುಕ 188 ಪಿಟಿಡಿ 2009, ದಿನಾಂಕ: 29.05.2009.

2. ಸರ್ಕಾರದ ಆದೇಶ ಸಂಖ್ಯೆ: ಆಇ 6 ಬಿಆರ್ಎಸ್ 2009, ದಿನಾಂಕ: 30.05.2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಅದೇಶದಲ್ಲಿ 2009-10ನೇ ಸಾಲಿನಲ್ಲಿ ಹೃದಯ ಸಂಜೀವಿನಿ ಯೋಜನೆ ಅಡಿಯಲ್ಲಿ 2000 ಬಡ ಹೃದ್ರೋಗಿಗಳಿಗೆ (BPL) ಉಚಿತವಾಗಿ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆ, ಬೆಂಗಳೂರು, ಇಲ್ಲಿ ಹೃದಯ ಚಿಕಿತ್ಸೆ ನೀಡಲು ಸರ್ಕಾರವು ಲೆಕ್ಕ ಶೀರ್ಷಿಕೆ 2210 ರ ಅಡಿ ರೂ. 4.00 ಕೋಟಿ ಗಳನ್ನು ಈ ಆರ್ಥಿಕ ವರ್ಷದಲ್ಲಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಅನುಮತಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಸರ್ಕಾರದ ಆದೇಶದಲ್ಲಿ ಹೃದಯ ಸಂಜೀವಿನಿ ಯೋಜನೆ ಅಡಿಯಲ್ಲಿ 2000 ಬಡ ಹೃದ್ರೋಗಿಗಳಿಗೆ (BPL) ಉಚಿತವಾಗಿ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆ, ಬೆಂಗಳೂರು, ಇಲ್ಲಿ ಹೃದಯ ಚಿಕಿತ್ಸೆ ನೀಡಲು ಲೆಕ್ಕ ಶೀರ್ಷಿಕೆ 2210-05-105-1-12-101 (ಯೋಜನೇತರ) ಅಡಿಯಲ್ಲಿ ರೂ. 400.00 ಲಕ್ಷಗಳನ್ನು ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿ ಇದೇ ಆರ್ಥಿಕ ವರ್ಷದಲ್ಲಿನ ಗ್ರಾಂಟ್ ನಂ. 22 ರಡಿಯಲ್ಲಿನ ಪೂರಕ ಅಂದಾಜಿನಲ್ಲಿ ಸಕ್ರಮಗೊಳಿಸಲಾಗುವುದೆಂದು ಆದೇಶಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 188 ಪಿಟಿಡಿ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹೃದಯ ಸಂಜೀವಿನಿ ಯೋಜನೆ ಅಡಿಯಲ್ಲಿ 2000 ಬಡ ಹೃದ್ರೋಗಿಗಳಿಗೆ (BPL) ಉಚಿತವಾಗಿ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆ, ಬೆಂಗಳೂರು, ಇಲ್ಲಿ ಹೃದಯ ಚಿಕಿತ್ಸೆ ನೀಡಲು ಲೆಕ್ಕ ಶೀರ್ಷಿಕೆ 2210-05-105-1-12-101 (ಯೋಜನೇತರ) ಅಡಿಯಲ್ಲಿ ರೂ. 400.00 ಲಕ್ಷಗಳನ್ನು (ನಾಲ್ಕು ನೂರು ಲಕ್ಷಗಳು ಮಾತ್ರ) ಹೆಚ್ಚುವರಿ ಅನುದಾನವಾಗಿ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಹೆಚ್ಚುವರಿ ಅನುದಾನವನ್ನು ಪ್ರಸ್ತುತ ಆರ್ಥಿಕ ವರ್ಷದ ಪೂರಕ ಅಂದಾಜಿನಲ್ಲಿ (ಅನುದಾನ ಸಂಖ್ಯೆ-22) ಸಕ್ರಮಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ತತ್ಸಂಬಂಧಿತ ಸಹಾಯಾನುದಾನದ ಬಿಲ್ಲುಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಪರ ಕಾರ್ಯದರ್ಶಿ (ವೈದ್ಯಕೀಯ ಶಿಕ್ಷಣ) ಯವರು ಮೇಲು ರುಜು ಮಾಡಲು ಅಧಿಕೃತಗೊಳಿಸಲಾಗಿದೆ. ಸದರಿ ಬಿಲ್ಲಿನ ನಗದೀಕರಣಕ್ಕಾಗಿ ಸಂಬಂಧಿಸಿದ ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಗೆ ಮೇಲೆ ರುಜುವಿನೊಂದಿಗೆ ಪಡೆಯತಕ್ಕದ್ದು.

1958ರ ಕರ್ನಾಟಕ ಆರ್ಥಿಕ ಸಂಹಿತೆಯ 161 ಅನುಚ್ಛೇದದಡಿ ಯಾವ ಉದ್ದೇಶಕ್ಕಾಗಿ ಮೇಲ್ಕಂಡ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿ ಅದರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ, ಮಹಾಲೇಖಪಾಲರಿಗೆ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ತ್ವರಿತವಾಗಿ ಸಲ್ಲಿಸತಕ್ಕದ್ದು 342 (11)ನೇ (x) ಅನುಚ್ಛೇದದಡಿ ರೀ ಕನ್ಸಲೇಷನ್ ಪ್ರಮಾಣ ಪತ್ರವನ್ನು ಮಹಾಲೇಖಪಾಲರ ಕಛೇರಿಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಮಹಾಲಕ್ಷ್ಮಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್. 1461

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂ. ಒಇ153 ಪೊಪೆಸೆ 2009, ಬೆಂಗಳೂರು, ದಿನಾಂಕ: 29ನೇ ಜುಲೈ 2009

ಸರ್ಕಾರಿ ಅಧಿಸೂಚನೆ ಸಂಖ್ಯೆ: ಲೋಇ 174 ಸೇಎಸು 2009, ದಿನಾಂಕ: 13.07.2009ರಲ್ಲಿ ಲೋಕೋಪಯೋಗಿ ಇಲಾಖೆಯ ಶ್ರೀ ಎಂ.ಜಿ ಕೃಷ್ಣಮೂರ್ತಿ, ಕಾರ್ಯಪಾಲಕ ಇಂಜಿನಿಯರ್, ಇವರನ್ನು ಒಳಾಡಳಿತ ಇಲಾಖೆಯ ವಶಕ್ಕೆ ನೀಡಿದ್ದು, ಸದರಿ ಕಾರ್ಯಪಾಲಕ ಇಂಜಿನಿಯರ್ ಅವರನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಯಮಿತಕ್ಕೆ ಮರು ಸ್ಥಳನಿಯುಕ್ತಿಗೊಳಿಸಿ ನೇಮಕ ಮಾಡಲಾಗಿದೆ. ಈ ನಿಯೋಜನೆಗೆ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 19 ಎಸ್‌ಆರ್‌ಎಸ್ 1988, ದಿನಾಂಕ: 25.05.1988ರ ಪ್ರಕಾರ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಅದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೋಲೀಸ್ ಸೇವೆಗಳು)

ಪಿ.ಆರ್. 1874

ಕಂದಾಯ ಸಚಿವಾಲಯ

ವಿಷಯ: ರಾಜ್ಯದ ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಡಿ ಕಾರ್ಯನಿರ್ವಹಿಸಲು ಮಂಜೂರಾಗಿದ್ದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಮತ್ತು ರೆವಿನ್ಯೂ ಆಡಿಟರ್ಸ್ ಹುದ್ದೆಗಳನ್ನು ದಿನಾಂಕ: 01.04.2009 ರಿಂದ 31.03.2010ರ ವರೆಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ. ಕಂಇ 17 ಎಲ್‌ಆರ್‌ಇ 88 (ಭಾಗ–2) ದಿ: 14.05.1993.
2. ಸರ್ಕಾರದ ಆದೇಶ ಸಂ: ಕಂಇ 68 ಎಲ್‌ಆರ್‌ಎ 2001, ದಿ: 22.10.2001.
3. ಸರ್ಕಾರದ ಆದೇಶ ಸಂ: ಕಂಇ 85 ಎಲ್‌ಆರ್‌ಎ 2002, ದಿ: 07.09.2002.
4. ಸರ್ಕಾರದ ಆದೇಶ ಸಂ: ಕಂಇ 50 ಎಲ್‌ಆರ್‌ಎ 2003, ದಿ: 16.12.2003.
5. ಸರ್ಕಾರದ ಆದೇಶ ಸಂ: ಕಂಇ 131 ಎಲ್‌ಆರ್‌ಎ 2004, ದಿ: 15.01.2005.
6. ಸರ್ಕಾರದ ಆದೇಶ ಸಂ: ಕಂಇ 79 ಎಲ್‌ಆರ್‌ಎ 2005, ದಿ: 01.07.2005.
7. ಸರ್ಕಾರದ ಆದೇಶ ಸಂ: ಕಂಇ 15 ಎಲ್‌ಆರ್‌ಎ 2006, ದಿ: 19.10.2006.
8. ಸರ್ಕಾರದ ಆದೇಶ ಸಂ: ಕಂಇ 13 ಎಲ್‌ಆರ್‌ಎಂ 2007, ದಿ: 24.11.2007.
9. ಸರ್ಕಾರದ ಆದೇಶ ಸಂ: ಕಂಇ 36 ಎಲ್‌ಆರ್‌ಎಂ 2008, ದಿ: 05.08.2008.

ಪ್ರಸ್ತಾವನೆ:

ಮೇಲಿನ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಡಿ ಕಾರ್ಯನಿರ್ವಹಿಸಲು ತಾತ್ಕಾಲಿಕ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಮತ್ತು ರೆವಿನ್ಯೂ ಆಡಿಟರ್ಸ್ ಹುದ್ದೆಗಳನ್ನು ಸೃಜಿಸಲಾಗಿದ್ದು, ಈ ಹುದ್ದೆಗಳನ್ನು ಕಾಲಕಾಲಕ್ಕೆ ಮುಂದುವರೆಸಲಾಗುತ್ತಿದೆ. ಅಂತಿಮಾಗಿ ಕಳೆದ ಸಾಲಿನಲ್ಲಿ ಕ್ರಮ ಸಂಖ್ಯೆ (9) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ ಹುದ್ದೆಗಳನ್ನು (147 ಹುದ್ದೆಗಳು) ದಿನಾಂಕ: 01.04.2008 ರಿಂದ 31.03.2009ರ ವರೆಗೆ ಒಂದು ವರ್ಷದ ಕಾಲಾವಧಿಗೆ ಮುಂದುವರೆಸಲಾಗಿದೆ.

ಪ್ರಸ್ತುತ 2009-10ನೇ ಸಾಲಿನಲ್ಲಿ ಭೂ ಸುಧಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 142 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಹಾಗೂ ರೆವಿನ್ಯೂ ಆಡಿಟರ್ಸ್ 05 ಹುದ್ದೆಗಳನ್ನು ಮುಂದುವರೆಸಲು ಆಯವ್ಯಯದ ಅಪೆಂಡಿಕ್ಸ್ "ಬಿ" ನಲ್ಲಿ ಅವಕಾಶ ಕಲ್ಪಿಸಲಾಗಿದೆ. ರಾಜ್ಯದ ಕೆಲವು ಜಿಲ್ಲಾಧಿಕಾರಿಗಳು ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಡಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಪ್ರಥಮ ದರ್ಜೆ ಸಹಾಯಕ ಹುದ್ದೆಗಳು ಹಾಗೂ ರೆವಿನ್ಯೂ ಆಡಿಟರ್ಸ್ ಹುದ್ದೆಗಳು ಅಗತ್ಯವಾಗಿರುವುದರಿಂದ ಮತ್ತೊಂದು ವರ್ಷ ಮುಂದುವರೆಸುವಂತೆ ಕೋರಿದ್ದು, ಪ್ರಾದೇಶಿಕ ಆಯುಕ್ತರ/ ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಪ್ರಥಮ ದರ್ಜೆ ಸಹಾಯಕ ಹುದ್ದೆಗಳು ಹಾಗೂ ರೆವಿನ್ಯೂ ಆಡಿಟರ್ಸ್ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮುಂದುವರೆಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತದೆ.

ಸರ್ಕಾರದ ಆದೇಶ ಸಂ: ಕಂಇ 08 ಎಲ್‌ಆರ್‌ಎಸ್ 2009, ಬೆಂಗಳೂರು, ದಿನಾಂಕ: 18ನೇ ಜುಲೈ 2009

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 465 ಎಸ್‌ಸಿಇ 2009, ಬೆಂಗಳೂರು, ದಿನಾಂಕ: 29ನೇ ಆಗಸ್ಟ್, 2009.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 166 ಎಸ್‌ಎಫ್‌ಪಿ 2009 ದಿನಾಂಕ:19.8.2009ರಲ್ಲಿ ಶ್ರೀ ಜಿ. ಸತೀಶ್ ಭಾ.ಅ.ಸೇ (ಕೆಎನ್-87) ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಜನರಲ್ ಮ್ಯಾನೇಜರ್ ಇವರ ಸೇವೆಯನ್ನು ಇಂಧನ ಇಲಾಖೆಯಿಂದ ಹಿಂದಕ್ಕೆ ಪಡೆದು ಜಲಾನಯನ ಅಭಿವೃದ್ಧಿ ಇಲಾಖೆಗೆ ವರ್ಗಾಯಿಸಿರುವುದರಿಂದ ಸದರಿ ಅಧಿಕಾರಿಯವರನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

ಶ್ರೀ ಜಿ. ಸತೀಶ್, ಭಾ.ಆ.ಸೇ., ಇವರ ವರ್ಗಾವಣೆಯಿಂದ ತೆರವಾದ ಪ್ರಧಾನ ವ್ಯವಸ್ಥಾಪಕರ ಹುದ್ದೆಯಲ್ಲಿ ಶ್ರೀ ಬಿ. ರಮೇಶ್, ವಿಶೇಷಾಧಿಕಾರಿ, ಕ್ರೆಡಲ್ ಇವರನ್ನು ಮುಂದಿನ ಆದೇಶದವರೆಗೆ ಅಧಿಕ ಪ್ರಭಾರದಲ್ಲಿ ಇಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1233 **ಎಸ್.ಜಿ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಾರಿಇ 158 ಸಾಇಸೇ 2009, ಬೆಂಗಳೂರು, ದಿನಾಂಕ: 25ನೇ ಆಗಸ್ಟ್, 2009.

ಸಾರಿಗೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಹಿರಿಯ ಮೋಟಾರು ವಾಹನ ನಿರೀಕ್ಷಕರುಗಳಿಗೆ ವೇತನ ಶ್ರೇಣಿ 11400-300-12300-350-14400-400-16800-450-19500-525-21600ರ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯ ಹುದ್ದೆಯಲ್ಲಿ ಬಡ್ತಿ ನೀಡಿ, ಅವರುಗಳ ಮುಂದೆ ಸೂಚಿಸಿರುವ ಸ್ಥಳಗಳಿಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿದೆ.

ಕ್ರ.ಸಂ.	ಅಧಿಕಾರಿ ಹೆಸರು	ಬಡ್ತಿ ನೀಡಿ ನೇಮಿಸಿರುವ ಸ್ಥಳ
1	ಶ್ರೀ ಎಸ್. ನಾಗರಾಜ್	ರಾಯಲ್ಪಾಡು ತನಿಖಾ ಠಾಣೆಯಲ್ಲಿ ಖಾಲಿ ಇರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹುದ್ದೆಗೆ
2	ಶ್ರೀ ಸಿದ್ದೂರ	ಗುಂಡ್ಲುಪೇಟೆ ತನಿಖಾ ಠಾಣೆಯಲ್ಲಿ ಖಾಲಿ ಇರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹುದ್ದೆಗೆ

3	ಶ್ರೀ ಬಿ. ಶೇಖರಪ್ಪ	ಚಿತ್ರದುರ್ಗ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಖಾಲಿ ಇರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹುದ್ದೆಗೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1234

ಎಂ.ಆರ್. ಚಂದ್ರಶೇಖರಾರಾಧ್ಯ
ಪೀಠಾಧಿಕಾರಿ
ಸಾರಿಗೆ ಇಲಾಖೆ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಲಾ 67 ಎಲ್ಎಜಿ 2009, ಬೆಂಗಳೂರು, ದಿನಾಂಕ: 22ನೇ ಆಗಸ್ಟ್, 2009.

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977 ರ ನಿಯಮಗಳ ಅನ್ವಯ ಸರ್ಕಾರದ ಆದೇಶ ಸಂಖ್ಯೆ:ಲಾ 36 ಎಲ್ ಎಜಿ 2006, ದಿನಾಂಕ:28.8.2006ರಲ್ಲಿ ಜಿಲ್ಲಾಧಿಕಾರಿ, ಬೆಂಗಳೂರು (ನಗರ), ಇವರ ಕಛೇರಿಯಲ್ಲಿ ಸೃಜಿಸಲಾದ ಕಾನೂನು ಕೋಶಕ್ಕೆ ವಿಶೇಷ ಸರ್ಕಾರಿ ವಕೀಲರನ್ನಾಗಿ ನೇಮಿಸಲಾದ ಈ ಕೆಳಕಂಡ ವಕೀಲರುಗಳ ನೇಮಕಾತಿ ಅವಧಿಯನ್ನು ದಿನಾಂಕ: 30.12.2008ರಿಂದ ದಿನಾಂಕ: 30.12.2009ರವರೆಗೆ ಮುಂದುವರೆಸಲಾಗಿದೆ.

ಕ್ರ.ಸಂ.	ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ
1	ಟಿ.ಎನ್. ರಘಪತಿ, ವಕೀಲರು, ನಂ. 7, ಸ್ವಸ್ಥಿಕ್ ಕಾಂಪ್ಲೆಕ್ಸ್, ಶೇಷಾದ್ರಿಪುರಂ, ಬೆಂಗಳೂರು–560020
2	ಚಿತ್ತಪ್ಪ,. ವಕೀಲರು ನಂ. 11, ಜೀವನ್ ಬಿಲ್ಡಿಂಗ್, ಕುಮಾರಪಾರ್ಕ್ ಈಸ್ಟ್, ಬೆಂಗಳೂರು–560001.
3	ಜಿ. ಕೃಷ್ಣಮೂರ್ತಿ, ವಕೀಲರು, ನಂ. 205, 2ನೇ ಫ್ಲೋರ್, ಅಹುಜಾ ಚೇಂಬರ್ಸ್, ನಂ. 1, ಕುಮಾರಕೃಪ ರಸ್ತೆ, ಬೆಂಗಳೂರು–560001.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1235

ಇ. ಶಿವಾನಂದ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಆರ್ಥಿಕ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಆಇ 114 ಇಪಿಎಸ್ 2009, ಬೆಂಗಳೂರು, ದಿನಾಂಕ: 31ನೇ ಆಗಸ್ಟ್, 2009.

ಕರ್ನಾಟಕ ರಾಜ್ಯ ಅಬಕಾರಿ ಇಲಾಖೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಪ್ರೊಬೇಷನರಿ ಅಬಕಾರಿ ಉಪ ಅಧೀಕ್ಷಕರಾಗಿ ಆಯ್ಕೆಗೊಂಡು ನಿಗಧಿಪಡಿಸಿರುವ ತರಬೇತಿಗಳನ್ನು ಪೂರೈಸಿರುವ ಈ ಕೆಳಕಂಡ ಅಬಕಾರಿ ಉಪ ಅಧೀಕ್ಷಕರುಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗೆ ತೈನಾತಿಸಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕ್ರ.ಸಂ.	ಸ್ಥಳ ನಿರೀಕ್ಷಣೆಯಲ್ಲಿರುವ ಅಧಿಕಾರಿಗಳು	ಸ್ಥಳ ನಿಯುಕ್ತಿಗೊಳಿಸಿ ನೇಮಿಸಲಾದ ಸ್ಥಳ
1	ಶ್ರೀಮತಿ ಶೈಲಜ ಎ.ಕೋಟೆ. ಅಬಕಾರಿ ಉಪ ಅಧೀಕ್ಷಕರು, ಸ್ಥಳ ನಿರೀಕ್ಷಣೆಯಲ್ಲಿ	ಶ್ರೀ ಎ. ರವಿಶಂಕರ್, ಅಬಕಾರಿ ಉಪ ಅಧೀಕ್ಷಕರು , ಕೆ.ಆರ್.ಪುರಂ ಉಪ ವಿಭಾಗ, ಬೆಂಗಳೂರು ಇವರ ಜಾಗದಲ್ಲಿ
2	ಶ್ರೀ ಮೊಸಸ್ ಸ್ಯಾಮ್ಯುಯೆಲ್ ಅಬಕಾರಿ ಉಪ ಅಧೀಕ್ಷಕರು,. ಸ್ಥಳ ನಿರೀಕ್ಷಣೆಯಲ್ಲಿ	ಅಬಕಾರಿ ಉಪ ಆಯುಕ್ತರ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ವಿಭಾಗ, ಮಂಡ್ಯ ಖಾಲಿ ಇರುವ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ

ರಾಜ್ಯ ಅಬಕಾರಿ ಸೇವೆಗೆ ಸೇರಿದ ಈ ಕೆಳಕಂಡ ಅಬಕಾರಿ ಉಪ ಅಧೀಕ್ಷಕರುಗಳನ್ನು ಸಾರ್ವಜನಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದೆ.

1	ಶ್ರೀ ಎ. ರವಿಶಂಕರ್ ಅಬಕಾರಿ ಉಪ ಅಧೀಕ್ಷಕರು, ಕೆ.ಆರ್.ಪುರಂ ಉಪ ವಿಭಾಗ, ಬೆಂಗಳೂರು	ಶ್ರೀ ಸೈಯದ್ ಅಬ್ದುಲ್ ಹಾದಿ, ಅಬಕಾರಿ ಉಪ ಅಧೀಕ್ಷಕರು , ಯಶವಂತಪುರ ಉಪ ವಿಭಾಗ, ಬೆಂಗಳೂರು ಇವರ ಜಾಗದಲ್ಲಿ

2	ಶ್ರೀ ಸೈಯದ್ ಅಬ್ದುಲ್ ಹಾದಿ, ಅಬಕಾರಿ ಉಪ ಅಧೀಕ್ಷಕರು, ಯಶವಂತಪುರ ಉಪ ವಿಭಾಗ, ಬೆಂಗಳೂರು	ರಾಜ್ಯ ಅಬಕಾರಿ ವಿಚಕ್ಷಣ ದಳ, ಇಲ್ಲಿ ಖಾಲಿ ಇರುವ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1236

ಬಿ.ಎನ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಅಬಕಾರಿ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 161 ಎಲ್‌ಎಜಿ 2008, ಬೆಂಗಳೂರು, ದಿನಾಂಕ: 22ನೇ ಆಗಸ್ಟ್, 2009.

ಶ್ರೀ ಆರ್. ಉದಯಶಂಕರ್, ಜಿಲ್ಲಾ ಸರ್ಕಾರಿ ವಕೀಲರು, ಚಿತ್ರದುರ್ಗ, ಇವರನ್ನು ಈ ಹುದ್ದೆಯಿಂದ ತಕ್ಷಣದಿಂದಲೇ ವಿಮುಕ್ತಿಗೊಳಿಸಿ ತೆರವಾದ ಸದರಿ ಹುದ್ದೆಯ ಅಧಿಕಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ (1977) ನಿಯಮ 26(2)ರ ಮೇರೆಗೆ ಶ್ರೀ ಕೆ. ಪ್ರೇಮನಾಥ ರೆಡ್ಡಿ, ಇವರನ್ನು ಚಿತ್ರದುರ್ಗ ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1237

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

PERSONNEL AND ADMINISTRATIVE REFORMS SECRETARIAT

NOTIFICATION

No. DPAR 390 SAS 2009, Bangalore, Dated: 28th August, 2009

The Deputy Commissioner, Udupi District, Udupi is placed in additional charge of the post of Chief Executive Officer, Zilla Panchayat, Udupi with immediate effect and until further orders.

By Order and in the name of the Governor of Karnataka,

ASHOK P. ATRE

P.R. 1238

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 323 ಸಅಸೇ 2009, ಬೆಂಗಳೂರು, ದಿನಾಂಕ: 31ನೇ ಆಗಸ್ಟ್, 2009.

ಶ್ರೀ ಜಿ. ನಾಗರಾಜು, ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆರ್ಥಿಕ ಆಯೋಗ ಕೋಶ), ಕರ್ನಾಟಕ ಸರ್ಕಾರ ಸಚಿವಾಲಯ ಸೇವೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 285(1)(ಬಿ)ರ ಅನ್ವಯ ದಿನಾಂಕ:31.8.2009ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1239

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-2)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 141 SFP 2008, Bangalore, Dated: 11th June, 2009

Dr. Virender Singh, IFS (KN 87), Conservator of Forests, Kodagu Circle, Madikeri is transferred with immediate effect and posted until further orders as Conservator of Forests, Research, Bellary vice Sri G.S. Yadav, IFS transferred.

Sri G.S. Yadav, IFS (KN 90) Conservator of Forests, Research, Bellary is transferred with immediate effect and posted until further orders as Conservator of Forests, Kodagu Circle, Madikeri vice Dr. Virendra Singh, IFS, transferred.

Sri S. Shekar, IFS (KN 90), Conservator of Forests, Shimoga Circle, Shimoga is transferred with immediate effect and posted until further orders as Conservator of Forests, Chamarajanagara Circle, Chamarajanagara vice Sri Nagaraja, IFS, transferred.

Dr. R. Raju, IFS (KN 92) Deputy Conservator of Forests, Project Tiger, Wildlife Division, Bandipura is transferred with immediate effect and posted until further orders as Deputy Conservator of Forests, Forest Mobile Squad, Belgaum in the existing vacancy.

Sri H.S.S. Murthy, IFS (KN 92) Deputy Conservator of Forests, Honnavara Division, Honnavara is transferred with immediate effect and posted until further orders as Deputy Conservator of Forests, Bangalore Rural Division, Bangalore vice Sri K.D. Udupudi, IFS transferred.

Sri Santosh Kumar, IFS (KN 94) Deputy Conservator of Forests, Forest Mobile Squad, Shimoga is transferred with immediate effect and posted until further orders as Deputy Conservator of Forests, Wildlife Division Madikeri vice Sri Anil Kumar Ratan, IFS transferred.

Sri. K.H. Nagaraj, IFS (KN 95) Deputy Conservator of Forests, Kolar Division, Kolar is transferred with immediate effect and posted until further orders as Deputy Conservator of Forests, Madikeri Division, Madikeri vice Sri B.B. Mallesha, IFS transferred.

Sri V. Vijay Mohan Raj, IFS (KN 95), Deputy Conservator of Forests, Sirsi Division ,Sirsi is transferred with immediate effect and posted until further orders as Deputy Conservator of Forests, Project Tiger, Wildlife Division, Bandipura vice Dr. R. Raju, IFS, transferred.

Sri Ashok B. Basarkod, IFS (KN 95) Deputy Conservator of Forests, Bijapur Division, Bijapur is transferred with immediate effect and posted until further orders as Deputy Conservator of Forests, Yellapura Division, Yellapura vice Sri H.C. Kantharaju, IFS transferred.

Sri Anil Kumar Ratan, IFS (KN 96) Deputy Conservator of Forests, Wildlife Division, Madikeri is transferred with immediate effect and posted until further orders as Deputy Conservator of Forests, Kolar Division, Kolar vice Sri K.H. Nagaraj, IFS transferred.

Smt. V. Geethanjali, IFS (KN 96) Deputy Conservator of Forests, Cauvery Wildlife Division, Kanakapura is transferred with immediate effect and posted until further orders as Deputy Conservator of Forests Ramanagar Division Ramanagara in the existing vacancy.

Sri Manoj Kumar, IFS (KN 97) Deputy Conservator of Forests, Wildlife Division, Dandeli is transferred with immediate effect and posted until further orders as Deputy Conservator of Forests, Sirsi Division, Sirsi vice Sri V. Vijay Mohan Raj, IFS, transferred.

Sri Ashwini Kumar Singh, IFS (KN 97) Deputy Conservator of Forests, Kudremukha Wildlife Division Karkala is transferred with immediate effect and posted until further orders as Deputy Conservator of Forests, Cauvery Wildlife Division, Kanakapura vice Smt. V. Geethanjali, IFS transferred.

Sri Vipin Singh, IFS (KN 98) Deputy Conservator of Forests & Director, E-Governance, Bangalore is transferred with immediate effect and posted until further orders as Deputy Conservator of Forests, Bidar, Division, Bidar in the existing vacancy.

Smt Vanashri Vipin Singh IFS (KN 98) Deputy Conservator of Forests, Bannerghatta National Park, Bangalore is transferred with immediate effect and posted until further orders as Deputy Conservator of Forests & District Project Co-ordinator, Jalasamvardhana Yojana Sangha, Bidar in the existing vacancy.

Sri K.D. Udupudi, IFS (KN 99) Deputy Conservator of Forests, Bangalore Rural Division, Bangalore is transferred with immediate effect and posted until; further orders as Deputy Conservator of Forests, Honnavara Division, Honnavara vice Sri H.S.S.Murthy, IFS, transferred.

Sri H.C. Kantharaju, IFS (KN 99) Deputy Conservator of Forests, Yellapura Division Yellapura is transferred with immediate effect and posted until further orders as Deputy Conservator of Forests, JBIC, Bangalore in the existing vacancy.

Sri B.B. Mallesha, IFS (KN 2001) Deputy Conservator of Forests, Madikeri Division, Madikeri is transferred with immediate effect and posted until further orders as Deputy Conservator of Forests, Haliyal Division, Haliyal in the vacancy caused due to the retirement of Sri B. Chikkappaiah, IFS.

Sri R. Ravishankar, IFS (KN 2003) Deputy Conservator of Forests, Zilla Panchayat, Tumkur is transferred with immediate effect and his services are placed at the disposal of Urban Development Department until further orders for being posted as Environmental Officer, Bangalore Metro Rail Corporation Limited Bangalore in the existing vacancy.

Dr. Sunil Panwar. IFS (KN 2005) Senior Assistant Conservator of Forests. Metikuppe Wildlife Sub-Division, Antharasanthe is transferred with immediate effect and posted until further orders as Deputy Conservator of Forests. Wildlife Division, Dandeli vice Sri Manoj Kumar, IFS transferred.

Sri K.T. Hanumanthappa, IFS (KN 2005) Senior Assistant Conservator of Forests, Moodigere Sub-Division, Moodigere is transferred with immediate effect and posted until further orders as Deputy Conservator of Forests. Forest Mobile Squad, Sirsi in the existing vacancy.

Sri N. Devaraj, IFS Deputy Conservator of Forests & Scientific Officer, Forest Ecology & Environment Department, Bangalore is transferred with immediate effect and posted until further orders as Deputy Conservator of Forests, Bangalore Urban Division, Bangalore in the existing vacancy.

Sri Prakash S. Netalkar, IFS, Deputy Conservator of Forests, Social Forestry Division, Udupi is transferred with immediate effect and posted until further orders as Deputy Conservator of Forests, Kudremukha Wildlife Division, Karkala vice Sri Ashwini Kumar Singh, IFS transferred.

By Order and in the name of the Governor of Karnataka,

ASHOK P. ATRE

P.R. 737

Under Secretary to Government,

Department of Personnel and Administrative Reforms (Services-IV)

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೭, ೨೦೦೯ (ಭಾದ್ರಪದ ೨೬, ಶಕ ವರ್ಷ ೧೯೩೧)	ಸಂಚಿಕೆ ೩೮

ಭಾಗ-೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

IN THE COURT OF THE 2ND TRAFFIC CHIEF METROPALITAN MAGISTRATE, BANGALORE CITY

Date:22nd August, 2009

It is hereby notified for the information of the public that the under mentioned Two Wheeler and Four Wheeler which is in the custody of City Market Police station, Bangalore City. has unclaimed shall be confiscated to the Government and disposed to have is not claimed by the owner with proof of ownership with in three month from the date of the publication of the notification.

1. City Market Police Station C.Misc No.14/2009 P.F. No.08/2009

Sl. No.	Type of Vehicle Regn. No.	Engine No.	Chassis No.	Colour
1.	Bajaj Pulsar 150 KA-02-EJ-1668	DHGBKC07533	DHVBKC07570	Black
2.	Bajaj Pulsar 150 KA-51-E-3009	DHGBME-46932	DHVBMF48141	Black
3.	TVS Victor KA-04-EJ-4250	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Blue
4.	TVS Victor KA-02-EP-7017	OF4NG41054199	DM625DF4441N53545	Silver
5.	Yamaha Entessor KA-02-EG-396	5VS010733	02JSVS010P33	Meron
6.	TVS Scooty KA-01-S-9224	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Green
7.	Kawasaki Bajaj KA-02-EJ-4268	DPMBKC80866	DFFBKC24614	Meron
8.	Kinetic Honda ZX KA-04-J-416	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Green
9.	RX Yamaha KA-01-J-5152	ILI416281	ILI416281-C-94	Black
10.	Kinetic Honda CHK-4980	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Blue

Sl. No.	Type of Vehicle Regn. No.	Engine No.	Chassis No.	Colour
11.	Kinetic Honda KA-03-J-5875	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Blue
12.	Honda Activa KA-03-EN-2695	JF08E0472399	ME4JF085E48460234	Silver
13.	Hero Honda CBZ KA-04-R-6431	00C40M00283	0034SC00489	Blue
14.	Yamaha KA-03-EK-4162	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Meron
15.	TVS Scooty KA-05-X-4804	K98GM17838	K98CF176459	Black
16.	Suzuki Samurai KA-16-H-4411	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
17.	TVS Scooty KA-01-L-6322	KA97CM104988	K97CF103484	Orange
18.	ನೊಂದಣಿ ಇಲ್ಲ ಟಿ.ವಿ.ಎಸ್. ಎಕ್ಸ್‌ಎಲ್. ಸೂಪರ್	ಸ್ಪಷ್ಟವಾಗಿರುವುದಿಲ್ಲ	MD6214D6031LO8033	Black
19.	Bajaj Chetak CAT-6885	ಸ್ಪಷ್ಟವಾಗಿರುವುದಿಲ್ಲ	ತುಕ್ಕು ಹಿಡಿದಿದೆ.	Cement
20.	Kinetic Honda AP-11A-8025	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Cement
21.	Suzuki Samurai KA-04-L-564	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Red
22.	Bajaj Chetak CKS-2184	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Cement
23.	Bajaj Chetak CKP-2357	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Cement
24.	Suzuki Samurai KA-03-F-7861	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
25.	Suzuki Samurai KA-03-W-7553	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
26.	Bajaj Scooter KA-20-H-3127	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Blue
27.	TVS XL Super KA-09-EB-7212	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
28.	Kinetic Zing KA-05-EL-5813	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Meron
29.	Suzuki Samurai KA-02-EL-3104	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
30.	Suzuki Samurai KA-04-A-18	7510M515010	7510F47230	Black
31.	Yamaha KA-04-EA-6195	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
32.	Yamaha Reg No. Not Known	LI277663	LI277663	Black
33.	Kinetic Honda KA-04-H-2575	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
34.	Kinetic Honda KA-01-R-3047	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Black
35.	Bajaj Chetak Scooter CKO-6436	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Green
36.	TVS Scooty KA-04-Q-9350	K954M024645	K95GF023970	Blue
37.	LML Scooter KA-04-H-9311	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Green
38.	Yamaha KA-03-7722	ILI354569	ILI354569	Black
39.	Bajaj Saffire KA-05-EF-7524	CFGBHA22045	ಸ್ಪಷ್ಟವಾಗಿರುವುದಿಲ್ಲ	Blue

2. City Market Police Station N.C.No.02/2009 P.F.No.15/2009

Sl. No.	Type of Vehicle Regn. No.	Engine No.	Chassis No.	Colour
1.	Thavera Car Reg.No. KA-13-MB-3724	ಸ್ಪಷ್ಟವಾಗಿರುವುದಿಲ್ಲ	MA6AB6G765HOO9223	Red
2.	TATA Indica Car. Reg. No. KA-12-M-6022	475DIOBXZP08310	600141BX2P10765	Light Golden

3. City Market Police Station C.Misc No.22/2009 P.F. No.18/2009

Sl. No.	Type of Vehicle Regn. No.	Engine No.	Chassis No.	Colour
1.	Bajaj Chetak Scooter KA-05-H-5203	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	Cement Colour
2.	Bajaj Chetak Scooter KA-02-Q-6978	06C95JJ36416	06C95331023	Cement Colour
3.	Bajaj Chetak Scooter KA-04-X-1875	ಇಂಜಿನ್ ತುಕ್ಕು ಹಿಡಿದಿದೆ.	06FBFC24361	Cement Colour
4.	Bajaj Chetak Scooter MER-705	ಇಂಜಿನ್ ತುಕ್ಕು ಹಿಡಿದಿದೆ.	ತುಕ್ಕು ಹಿಡಿದಿದೆ.	Cement Colour
5.	TVS-XL-KA-05-X-934	ಇಂಜಿನ್ ತುಕ್ಕು ಹಿಡಿದಿದೆ.	ತುಕ್ಕು ಹಿಡಿದಿದೆ.	Green Colour
6.	Kinetic Honda KA-05-X-1324	ಇಂಜಿನ್ ತುಕ್ಕು ಹಿಡಿದಿದೆ.	ಇಂಜಿನ್ ತುಕ್ಕು ಹಿಡಿದಿದೆ.	Black Colour
7.	Bajaj Pulsar T.N-20. K-6662	DHGBKA74805	DHVBKA74834	Black Colour
8.	Suzuki Samurai KA-05-EA-7368	7508M580880	7508F53735	Black Colour
9.	TVS Champ T.N.01-Q-7183	ತುಕ್ಕು ಹಿಡಿದಿದೆ.	ತುಕ್ಕು ಹಿಡಿದಿದೆ.	Black Colour
10.	Bajaj M-80 MJH-4200	ಸ್ಪಷ್ಟವಾಗಿರುವುದಿಲ್ಲ	ಸ್ಪಷ್ಟವಾಗಿರುವುದಿಲ್ಲ	White

Metropolitan Magistrate,
PR-834 Traffic Court-II, Nrupathunga Road, Bangalore-1.

FORM NO.155

MEMBERS VOLUNTARY WINDING UP

Name of Company: Mangalore Power Company (in Liquidation)

NOTICE CONVENING FINAL MEETING

Notice is hereby given in pursuance of Section 497 of the Companies Act, 1956 that a General Meeting of the Members of above named Company will be held at its registered office at 408, 4th Floor, Barton Centre, M.G. Road, Bangalore-560001 on the 25th day of September 2009 at 12.30 P.M. for the purpose of having an account laid before them showing the manner in which the winding up has been conducted and the property of the Company disposed off and of hearing any explanation that may be given by the Liquidator and also of determining by a Special Resolution of the Company the manner in which the books, accounts and documents of the Company and of the Liquidator shall be disposed off.
Dated this 25th day of August, 2009.

Kamal Preet Sahni
Liquidator
Mangalore Power Company (in Voluntary Liquidation)

ನಮೂನೆ ಸಂಖ್ಯೆ-155

ಸ್ವತಃ ಸದಸ್ಯರಿಂದ ಅಂತ್ಯಗೊಳಿಸುವಿಕೆ

ಸಂಸ್ಥೆಯ ಹೆಸರು: ಮಂಗಳೂರು ಪವರ್ ಕಂಪನಿ (ಮುಚ್ಚುವ ಸ್ಥಿತಿಯಲ್ಲಿ)

ಸಂಸ್ಥೆಯ ಅಂತಿಮ ಸಭೆ ನಡೆಸುವ ಕುರಿತು ತಿಳುವಳಿಕೆ ಪತ್ರ.

ಕಂಪನಿ ಕಾಯ್ದೆ 1956ರ ಪ್ರಕರಣ 497ರ ಅಡಿಯಲ್ಲಿ ಈ ಮೂಲಕ ತಿಳುವಳಿಕೆ ನೀಡುವುದೇನೆಂದರೆ ಮೇಲಿ ಸಂಸ್ಥೆಯ ಸರ್ವ ಸದಸ್ಯರ ಸಭೆಯು ದಿನಾಂಕ:25ನೇ ಸೆಪ್ಟೆಂಬರ್ ಮಾಹೆ 2009 ರಂದು ಅಪರಾಹ್ನ 12-30 ಗಂಟೆ ಸಂಸ್ಥೆಯ ನೊಂದಾಯಿತ ಕಛೇರಿ ಸಂಖ್ಯೆ 408, 4ನೇ ಮಹಡಿ ಬಾರ್ಟನ್ ಸೆಂಟರ್ ಮಹಾತ್ಮಗಾಂಧಿ ರಸ್ತೆ, ಬೆಂಗಳೂರು- ಎಂಬಲ್ಲಿ ಸಂಸ್ಥೆಯ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸಿ ಮತ್ತು ಸಂಸ್ಥೆಯನ್ನು ಯಾವ ರೀತಿ ಮುಚ್ಚಲಾಗುತ್ತಿದೆ ಎಂದು ಮತ್ತು ಸಂಸ್ಥೆಯ ಆಸ್ತಿ-ಪಾಸ್ತಿಗಳನ್ನು ಯಾವ ಕ್ರಮದಲ್ಲಿ ವಿಲೇವಾರಿ ಮಾಡಲಾಯಿತು ಎಂದೂ ಮತ್ತು ವಿಲೇವಾರಿ ಮಾಡಿದ ಅಧಿಕಾರಿಯವರ ವಿವರಣೆಯೇನಾದರೂ ಇದ್ದಲ್ಲಿ ಆಲಿಸಲು ಮತ್ತು ಸಭೆಯ ನಡವಳಿಕೆಗಳನ್ನು ವಿಶೇಷವಾದ ಸಭಾಪಟ್ಟಿಯ ಮೂಲಕ ದಾಖಲಿಸಲು ಮತ್ತು ಸಂಸ್ಥೆಯ ಲೆಕ್ಕಪತ್ರಗಳನ್ನು ಅಂತಿಮವಾಗಿ ವಿಲೇವಾರಿ ಮಾಡಿರುವುದನ್ನು ಸಭೆಯಲ್ಲಿ ಚರ್ಚಿಸಲು ಕರೆಯಲಾಗಿದೆ.

ದಿನಾಂಕ:25ನೇ ಆಗಸ್ಟ್ 2009

ಕಮಲ್ ಪ್ರೀತ್ ಸಹಾನಿ

ವಿಲೇವಾರಿ ಅಧಿಕಾರಿ (ಲಿಕ್ವಿಡೇಟರ್)

ಮಂಗಳೂರು ಪವರ್ ಕಂಪನಿ, (ಸ್ವಇಚ್ಛಾ ವಿಲೇವಾರಿ)

ಪಿಡಿ-52

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/180/ಡಿಟಿಸಿಆರ್/2008-09, ದಿನಾಂಕ:15ನೇ ಜುಲೈ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	ಆರೋಪಿ:
ಪೊಲೀಸ್ ಉಪ ನಿರೀಕ್ಷಕರು,	ಶ್ರೀ ಮೋಹನ್ ದಾಸ್ ಶೆಟ್ಟಿ, ಐಕು ಮನೆ,
ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ.	(ಪರಾರಿಯಾಗಿರುತ್ತಾನೆ)

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ಖಚಿತ ವರ್ತಮಾನದ ಮೇರೆ ದಿನಾಂಕ:25.07.2008ರಂದು ಬೆಳಗ್ಗಿನ ಜಾವ 5-30ಕ್ಕೆ ರಸ್ತೆಕಾವಲು ನಡೆಸಿದ ಸಂದರ್ಭದಲ್ಲಿ ಮಂಗಳೂರು ತಾಲೂಕು ಅರೆಕ ಗ್ರಾಮದ ನ್ಯೂಪಡ್ಪು ಜಂಕ್ಷನ್‌ನಿಂದಾಗಿ ಕುತ್ತಾರ್ ಮೂಲಕ ಗ್ರಾಮ ಚಾವಡಿ ಕಡೆಗೆ ಮೋಹನ್‌ದಾಸ್ ಶೆಟ್ಟಿ, ಐಕುಮನೆ ಎಂಬವರು ನಂಬರ್ ಪ್ಲೇಟು ಇಲ್ಲದ ಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಹೇರಿಸಿಕೊಂಡು ಸಾಗಾಟ ಮಾಡುತ್ತಿದ್ದಾರೆ ಎಂಬ ಮಾಹಿತಿಯಂತೆ ಬೆಳಿಗ್ಗೆ 6-00 ಗಂಟೆ ಸಮಯಕ್ಕೆ ನಂಬರ್ ಪ್ಲೇಟು ಇಲ್ಲದ ಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನ ಎಲಿಯಾರ್ ಪದವು ಕಡೆಯಿಂದ ಬರುತ್ತಿರುವುದನ್ನು ಕಂಡು ಸಂಶಯಗೊಂಡು, ಸದ್ರಿ ವಾಹನವನ್ನು ನಿಲ್ಲಿಸಲು ಕೈಸನ್ನೆ ಮಾಡಿದಾಗ ವಾಹನದ ಚಾಲಕನು ತಪ್ಪಿಸಿಕೊಳ್ಳುವ ಸಲುವಾಗಿ ವಾಹನವನ್ನು ನಿಲ್ಲಿಸದೇ ವೇಗವಾಗಿ ಗ್ರಾಮ ಚಾವಡಿ ಕಡೆಗೆ ಚಲಾಯಿಸಿದಾಗ ಸಿಬ್ಬಂಧಿ ಸಮೇತ ಪಂಚರೊಂದಿಗೆ ಸದ್ರಿ ವಾಹನವನ್ನು ಬೆನ್ನಟ್ಟಿಕೊಂಡು ಹೋಗಲಾಗಿ ವಾಹನದ ಚಾಲಕನು ಸದ್ರಿ ವಾಹನವನ್ನು ಒಂದು ದೊಡ್ಡ ಮರಕ್ಕೆ ಡಿಕ್ಕಿಹೊಡೆದು ವಾಹನದ ಮುಂಭಾಗವನ್ನು ಜಖಂಗೊಳಿಸಿ ಸದ್ರಿ ವಾಹನದಿಂದ ಇಳಿದು ಓಡಿಹೋಗಿದ್ದು, ಆತನನ್ನು ಹಿಡಿಯಲು ಬೆನ್ನಟ್ಟಿದ್ದರೂ ಸಿಗದೇ ಪರಾರಿಯಾಗಿರುತ್ತಾನೆ. ನಂತರ ವಾಹನವನ್ನು ಪರಿಶೀಲಿಸಲಾಗಿ ವಾಹನದ ಹಿಂಬದಿಯ ಸೀಟಿನಲ್ಲಿ 35 ಲೀಟರು ಗಾತ್ರದ 5 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 175.000 ಲೀಟರು ಮದ್ಯಸಾರವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 13(1)(ಎ)(ಎಫ್) ರ ಪ್ರಕಾರ ಅಪರಾಧ ಹಾಗೂ ಕಲಂ 32, 34 ಮತ್ತು 43(1)(2) ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ಮದ್ಯಸಾರ ಹಾಗೂ ಸಾಗಾಣಿಕೆಗೆ ಬಳಸಿದ ನಂಬರ್ ಪ್ಲೇಟು ಅಳವಡಿಸದೇ ಇರುವ ವಾಹನ ಸ್ಕಾರ್ಪಿಯೋ ಜೀಪನ್ನು ಪಂಚರ ಸಮಕ್ಷಮ ಇಲಾಖಾ ವಶಕ್ಕೆ ತೆಗೆದುಕೊಂಡು, ಜಪ್ತುಪಡಿಸಿದ ಮದ್ಯಸಾರದ ಮಾದರಿಗಳನ್ನು ತಯಾರಿಸಿ, ಸ್ಥಳದಲ್ಲಿಯೇ ಮಹಜರು ಜರುಗಿಸಿ ಪರಾರಿಯಾದ ಆರೋಪಿ ಮೋಹನ್‌ದಾಸ್ ಶೆಟ್ಟಿ, ಐಕುಮನೆ ಇವರ ವಿರುದ್ಧ ತಕ್ಷೀರು ಸಂಖ್ಯೆ:95/2008, ದಿನಾಂಕ:25.07.2008 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಜಪ್ತು ಪಡಿಸಿಕೊಂಡ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ ಅನ್ವಯ ಮುಟ್ಟುಗೋಲು ಹಾಕಿಕೊಳ್ಳುವರೇ ಮುಂದಿನ ಕ್ರಮ ಜರುಗಿಸಲು ಅಬಕಾರಿ ನಿರೀಕ್ಷಕರು

ಂಗಳೂರು ದಕ್ಷಿಣ ವಲಯ-II ಇವರಿಗೆ ಹಸ್ತಾಂತರಿಸಲು ಪ್ರಾಧಿಕಾರದ ದಿನಾಂಕ:02.08.2008ರ ಆದೇಶದಂತೆ ನುಮತಿಯನ್ನು ಪಡೆದು ವಶಪಡಿಸಿಕೊಂಡ ವಾಹನ ಹಾಗೂ ಮದ್ಯಸಾರವನ್ನು ಅಬಕಾರಿ ನಿರೀಕ್ಷಕರು, ದಕ್ಷಿಣ ವಲಯ-II ವರಿಗೆ ಹಸ್ತಾಂತರಿಸಿರುತ್ತಾರೆ.

ಜಪ್ತು ಪಡಿಸಿಕೊಂಡ ಸೊತ್ತುಗಳು

1) ನೊಂದಾಣಿ ಸಂಖ್ಯಾ ಫಲಕ ಅಳವಡಿಸದೇ ಇರುವ ಕಪ್ಪು ಬಣ್ಣದ ವಾಹನ ಸ್ಕಾರ್ಪಿಯೋ ಜೀಪು (ಇಂಜಿನ್ ಸಂ: B574G43364 VSR No: MAITZ2BSL > 2G88389)

2) 35 ಲೀ ಗಾತ್ರದ 5 ಬಿಳಿಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಸುಮಾರು 175 ಲೀ ಮದ್ಯಸಾರ

ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನಕ್ಕೆ ಅಪರಾಧ ಸಂದರ್ಭದಲ್ಲಿ ನೊಂದಾಣಿ ಸಂಖ್ಯಾ ಫಲಕ (ನಂಬರ್ ಪ್ಲೇಟು) ಳವಡಿಸದೇ ಇದ್ದು, ಪ್ರಕರಣ ಸಂದರ್ಭದಲ್ಲಿ ಪ್ರಕರಣ ಪತ್ತೆಹಚ್ಚಿದ ಅಧಿಕಾರಿಗಳು ವಾಹನದ ಇಂಜಿನ್ ನಂಬರನ್ನು ರಿಶೀಲಿಸಿದ್ದು, ಸದ್ರಿ ಇಂಜಿನ್ ನಂಬರ್ B574G43364 VSR No:MAITZ2BSL>2G88389 ಆಗಿದ್ದು, ಸದ್ರಿ ನಂಬರಿನ ಧಾರದ ಮೇಲೆ ಪ್ರಕರಣದ ತನಿಖಾಧಿಕಾರಿಗಳು ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಣ್ಣೂರು ಇವರಿಂದ ಪಡೆಯಲಾಗಿದ್ದು,ಸದ್ರಿ ವರದಿಯ ಪ್ರಕಾರ ವಾಹನದ ನೊಂದಾಣಿ ಸಂ:KL-13R-7800 ಎಂಬುದಾಗಿ ುತ್ತು Sri.Sudhakaran.K, Ramunni, Lal Vihar, TK 1/292, Parakkandy, Kannur ಇವರು ದಿ:23-8-2007ರಿಂದ ಾಹನದ ಮಾಲೀಕರಾಗಿರುವುದಾಗಿ ದೃಡೀಕರಿಸಿ ವರದಿ ನೀಡಿರುತ್ತಾರೆ. ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ೊಂದಣಿ ಮಾಲೀಕರಾದ Mr.Sudhakaran.K, Ramunni, Lal Vihar TK 1/292, Parakkandy, Kannur ಇವರಿಗೆ ್ರಾಧಿಕಾರದಿಂದ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಕಾರಣ ಕೇಳಿ ನೋಟಿಸನ್ನು ದಿನಾಂಕ:15.06.2009 ಂದು ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ನೋಟಿಸು ದಿನಾಂಕ:19.06.2009ರಂದು ಜ್ಯಾರಿಯಾಗಿದ್ದು ಈ ಗ್ಗೆ ಅಂಚೆ ಸ್ವೀಕೃತಿ ಪತ್ರ ಪ್ರಾಧಿಕಾರದಲ್ಲಿ ದಿನಾಂಕ:22.06.2009ರಂದು ಸ್ವೀಕೃತವಾಗಿರುತ್ತದೆ. ಆದರೆ ಸದ್ರಿಯವರಿಂದ ಯಾವುದೇ ಸಮಂಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಪ್ರಕರಣ ಪತ್ತೆಹಚ್ಚಿದ ಪೊಲೀಸ್ ಉಪ ನಿರೀಕ್ಷಕರು ಜಪ್ತಾದ ಮದ್ಯಸಾರದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಳಪಡಿಸಿ, ಕರ್ನಾಟಕ ಸರ್ಕಾರದ ಸಹಾಯಕ ರಸಾಯನ ವಿಶ್ಲೇಷಕರು, ಮಂಗಳೂರು ವಲಯ ಇವರು ನೀಡಿದ ವಿಶ್ಲೇಷಣಾ ರದಿ ಸಂ:ಇ-423-5 ದಿನಾಂಕ:12.09.2008ರಲ್ಲಿ ಮಾದರಿಗಳಲ್ಲಿ ಮದ್ಯಸಾರದ ಪ್ರಮಾಣ 94.0% ಇರುವುದಾಗಿ ಹಾಗೂ ುದ್ಯಸಾರವನ್ನು ಮಾದಕ ಪಾನೀಯಗಳ ತಯಾರಿಕೆಗೆ ಮತ್ತು ಇತರ ಕೈಗಾರಿಕಾ ಉಪಯೋಗಕ್ಕೆ ಬಳಸಬಹುದಾಗಿದೆ ಎಂದು ೃಢೀಕರಣ ಪತ್ರ ನೀಡಿರುತ್ತಾರೆ. ಸದ್ರಿ ವಿಶ್ಲೇಷಣಾ ವರದಿ ಮತ್ತು ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ, ಪ್ರಕರಣದ ನಿಖಾಧಿಕಾರಿಗಳಾದ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2 ರವರ ತನಿಖಾ ವರದಿ ಸಂ: ಇಎಕ್ಸ್‌ಇ:ಎಂಎಸ್‌ಅರ್-2:38:2008-09, ದಿನಾಂಕ:17.11.08ರ ವರದಿಯಲ್ಲಿ, ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ವಾಹನದ ಮಾಲೀಕತ್ವ ಕೋರಿ ಯಾರೂ ಬೇಡಿಕೆ ಸಲ್ಲಿಸದೇ ಇರುವುದರಿಂದ ಸದ್ರಿ ವಾಹನ ಮತ್ತು ಮದ್ಯಸಾರವನ್ನು ಸರ್ಕಾರಕ್ಕೆ ುಟ್ಟುಗೋಲು ಹಾಕಿಕೊಂಡು ಆದೇಶ ನೀಡಲು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಪ್ರಾಧಿಕಾರದ ಆದೇಶ ಸಂ: ಎಸ್‌ಡಿಕೆ/ 80/ ಡಿಟಿಸಿಆರ್/2008-09, ದಿನಾಂಕ:15.01.2009ರಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳ ಪೈಕಿ ಸ್ಕಾರ್ಪಿಯೋ ಾಹನ ಇದರ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ, ಉಳಿದ 175ಲೀ ಮದ್ಯಸಾರ (ಮಾದರಿಗಳನ್ನು ಹೊರತುಪಡಿಸಿ) ರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ರಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಅಬಕಾರಿ ಉಪ ಧೀಕ್ಷಕರು, ಮಂಗಳೂರು ಉಪ ವಿಭಾಗ-1 ಇವರ ಸಮಕ್ಷಮ ನಾಶಪಡಿಸಲು ಆದೇಶಿಸಲಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಸ್ಕಾರ್ಪಿಯೋ ಇದಕ್ಕೆ ನೊಂದಾಣಿ ಫಲಕ ಸಂಖ್ಯೆ ಅಳವಡಿಸದೇ ಇದ್ದ ಮೇರೆಗೆ, ಸದ್ರಿ ವಾಹನದ ಇಂಜಿನ್ ನಂಬರ್ ಆಧಾರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಜಿಲ್ಲೆ ಇವರಿಂದ ಡೆಯಲಾದ ಬಿ ರಿಜಿಸ್ಟ್ರಾರ್ ವರದಿಯ ಪ್ರಕಾರ ವಾಹನದ ನೊಂದಣಿ ಸಂ: KL-13R-7800 ಎಂದು ತಿಳಿದು ಬಂದ ಮೇರೆಗೆ ಸದ್ರಿ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ನೊಂದಣಿ ಮಾಲೀಕರಿಗೆ ಪ್ರಾಧಿಕಾರದಿಂದ ದಿನಾಂಕ:15.06.2009ರಂದು ೀಡಲಾದ ಕಾರಣ ಕೇಳಿ ನೋಟಿಸಿಗೆ ವಾಹನದ ಮಾಲೀಕರಿಂದ ಯಾವುದೇ ಪ್ರತಿಕ್ರಿಯೆ ಲಭ್ಯವಿರುವುದಿಲ್ಲ.

ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 1 ವರ್ಷ ಅವಧಿ ಕಳೆದಿದ್ದರೂ ವಾಹನದ ಮಾಲೀಕರಾಗಲೀ ಮಾಲೀಕರ ಪರ ವಾರಸ್ಸುದಾರರಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಾಧಾರಗಳನ್ನು ಸಾಬೀತುಪಡಿಸಲು ುಂದೆ ಬಂದಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ಸಿ ರ

ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:25.07.2008 ರಂದು ನೊಂದಾಣಿ ಸಂಖ್ಯಾ ಫಲಕ ಅಳವಡಿಸದೇ ಇರುವ, ಇಂಜಿನ್ ನಂಬರ್ B574G43364 VSR No:MAITZ2BSL>2G88389 ಎಂದು ನಮೂದಿಸಿರುವ ಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನವನ್ನು ಅಕ್ರಮವಾಗಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಆರೋಪಿ ಮದ್ಯಸಾರವನ್ನು ಸಾಗಾಣಿಕೆ ಮಾಡುವುದಕ್ಕೆ ಬಳಸಿರುವುದನ್ನು ಪತ್ತೆಹಚ್ಚಿ, ಸದ್ರಿ ವಾಹನ ಮತ್ತು ಅಕ್ರಮ ಮದ್ಯಸಾರವನ್ನು ಸ್ಥಳ ಮಹಜರು ಮುಖೇನಾ ಸ್ವಾದೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯ ಪ್ರಕಾರ ಮದ್ಯಸಾರ ಎಂದು ದೃಢಪಟ್ಟಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಈ ಪ್ರಾದಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಭಿಸಿ ಅಭಿಯೋಗದ ಪರ ಪ್ರಕರಣ ದಾಖಲು ಪಡಿಸಿಕೊಂಡ ಒರ್ವ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಯ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗದೇ ಇದ್ದುದರಿಂದ ಪ್ರತಿರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷಾಧಾರಗಳಿಂದ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:25.07.2008ರಂದು ಸಂಖ್ಯಾ ಫಲಕ ಅಳವಡಿಸದೇ ಇರುವ ಸ್ಕಾರ್ಪಿಯೋ ಜೀಪು ಇದರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ 175.000 ಲೀಟರು ಮದ್ಯಸಾರವನ್ನು ಸಾಗಾಣಿಕೆ ಮಾಡಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯಸಾರ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಶ್ರೀ ಎ.ಸೈಪುಲ್ಲಾ, ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ ಇವರು ದಿನಾಂಕ:08.07.2009ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ಪಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ದಿನಾಂಕ:04.04.2008ರಿಂದ 18.09.2008ರವರೆಗೆ ನಾನು ಕೋಣಾಜೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ:25.07.2008ರಂದು ಬೆಳಗ್ಗಿನ ಜಾವ 4–40 ಗಂಟೆಗೆ ಕುತ್ತಾರು ನ್ಯೂಪಡ್ಪು ಕಡೆಯಿಂದ ಗ್ರಾಮ ಚಾವಡಿ ರಸ್ತೆಯಲ್ಲಿ ಸ್ಪಿರಿಟ್ ಸಾಗಾಣಿ ಬಗ್ಗೆ ಖಚಿತ ವರ್ತಮಾನದ ಮೇರೆಗೆ 2 ಜನ ಪಂಚರನ್ನು ಕರೆಸಿಕೊಂಡು ಸಿಬ್ಬಂಧಿಯೊಂದಿಗೆ ಠಾಣೆಯಿಂದ ಹೊರಟು 5–30 ಗಂಟೆಗೆ ಕೋಣಾಜೆ ಸುಣ್ಣಕೋಡಿ ಎಂಬಲ್ಲಿ ಸದ್ರಿ ವಾಹನದ ಬರುವಿಕೆಗೆ ಕಾಯುತ್ತಿದ್ದಾಗ ಬೆಳಿಗ್ಗೆ 6–00 ಗಂಟೆ ಸಮಯಕ್ಕೆ ಒಂದು ನಂಬರ್ ಪ್ಲೇಟು ಇಲ್ಲದ ಸ್ಕಾರ್ಪಿಯೋ ವಾಹನ ನ್ಯೂಪಡ್ಪು ಕಡೆಯಿಂದ ಗ್ರಾಮಚಾವಡಿ ಕಡೆ ಬಂದಾಗ ನಿಲ್ಲಿಸಲು ಸೂಚನೆ ಕೊಟ್ಟಾಗ ನಿಲ್ಲಿಸದೇ ವೇಗವಾಗಿ ಹೋದಾಗ ನಾವು ನಮ್ಮ ಜೀಪಿನಲ್ಲಿ 1 ಕಿ.ಮಿ ದೂರ ಅದನ್ನು ತಡೆಯಲು ಹಿಂಬಾಲಿಸಿದಾಗ ಸದ್ರಿ ಸ್ಕಾರ್ಪಿಯೋ ವಾಹನ ರಸ್ತೆಬದಿ ನಿಂತಿತ್ತು. ಅದರಲ್ಲಿ ಮೋಹನದಾಸ ಶೆಟ್ಟಿ ಎಂಬವನು ಜಿಗಿದು ಓಡಲು ಪ್ರಯತ್ನಿಸಿದಾಗ ನಾವು ಹಿಂಬಾಲಿಸಿದರೂ ಸಿಗಲಿಲ್ಲ. ಕಾಡು ಪ್ರದೇಶದಲ್ಲಿ ಆತನು ಓಡಿ ಹೋದನು. ನಂತರ ವಾಹನ ತಪಾಸಣೆ ಮಾಡಲಾಗಿ ವಾಹನದ ಹಿಂಬದಿ ಸೀಟಿನ ಇರುವ ಕಡೆ 5 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಸ್ಪಿರಿಟ್ ತುಂಬಿದ್ದು ಕಂಡು ಬಂತು. ಸದ್ರಿ ಸ್ಪಿರಿಟನ್ನು ವಾಹನವನ್ನು ಪಂಚರ ಸಮಕ್ಷಮ ಮಹಜರು ತಯಾರಿಸಿ ಅದರಲ್ಲಿ ಮಾದರಿಗಾಗಿ ಪ್ರತಿಯೊಂದು 750 ಎಂಎಲ್‌ನ ಬಾಟಲಿಗಳಲ್ಲಿ 5 ಕ್ಯಾನುಗಳಿಂದ ಒಂದೊಂದು ಬಾಟಲಿಗಳನ್ನು ಮಾದರಿಗಾಗಿ ತೆಗೆದು ಬಾಟಲಿ ಮುಚ್ಚಳಗಳಿಗೂ ಕ್ಯಾನುಗಳಿಗೂ ಬಟ್ಟೆಯಿಂದ ಕಟ್ಟಿ ಇಲಾಖಾ ಸೀಲಿನಿಂದ ಸೀಲು ಮಾಡಲಾಯಿತು. ಸದ್ರಿ ಬಾಟಿಗಳಿಗೆ ಎ.ಬಿ.ಸಿ.ಡಿ.ಇ ಎಂದು ಗುರುತು ಮಾಡಲಾಯಿತು. ಕ್ಯಾನುಗಳಿಗೆ ಕ.ಸಂ:1 ರಿಂದ 5ರವರೆಗೆ ಸಂಖ್ಯಾ ಗುರುತು ನೀಡಲಾಯಿತು. ವಾಹನದ ಇಂಜಿನ್ ನಂಬರ್ ,ಚಾಸಿಸ್ ನಂಬರಿನ ಪರಿಶೀಲನೆ ಮಾಡಿ ಮಹಜರಿನಲ್ಲಿ ನಮೂದಿಸಿಕೊಂಡು ಸ್ಥಳ ಮಹಜರು ಬೆಳಿಗ್ಗೆ 6–30 ರಿಂದ 7–30 ರವರೆಗೆ ಮುಕ್ತಾಯಗೊಳಿಸಿರುತ್ತೇನೆ. ನಂತರ ಸದ್ರಿ ವಾಹನ ಹಾಗೂ ಸ್ಪಿರಿಟ್ ಕ್ಯಾನುಗಳನ್ನು ನನ್ನ ಠಾಣೆಗೆ ಒಯ್ದು ಸರ್ಕಾರದ ಪರ ನಾನು ಫಿರ್ಯಾದುದಾರನಾಗಿ ಠಾಣಾ ಕ್ರೈಂ ಸಂ:95/2008ರಂತೆ ಪ್ರಕರಣ ದಾಖಲಿಸಿರುತ್ತೇನೆ. ನಂತರ ಪಂಚ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುತ್ತೇನೆ. ಈ ಪ್ರಕರಣದ ಪ್ರ.ಮಾ.ವ ಮಹಜರು, ಸೊತ್ತು, ಜಪ್ತು ವರದಿಯನ್ನು ಘನ ನ್ಯಾಯಾಲಯಕ್ಕೂ ಅದೇ ದಿನ ಒಪ್ಪಿಸಿರುತ್ತೇನೆ.

ದಿನಾಂಕ:26.07.2008ರಂದು ತನಿಖೆಯನ್ನು ಮುಂದುವರಿಸಿ ಸದ್ರಿ ಪ್ರಕರಣದಲ್ಲಿ ಅಮಾನತು ಪಡಿಸಿದ ವಾಹನ ಮತ್ತು ಸ್ಪಿರಿಟ್ ಸೊತ್ತುಗಳನ್ನು ಮುಟ್ಟುಗೋಲಿನ ಬಗ್ಗೆ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2 ಇವರಿಗೆ ಹಸ್ತಾಂತರಿಸಲು ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ಇವರ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿ ಕೋರಿರುತ್ತೇನೆ. ದಿನಾಂಕ:04.08.2008ರಂದು ಸದ್ರಿ ಪ್ರಕರಣದಲ್ಲಿ ಮಾದರಿಗಾಗಿ ತೆಗೆದ ಬಾಟಲಿಗಳನ್ನು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ಕಛೇರಿಗೆ ಕಳುಹಿಸಿಕೊಟ್ಟಿರುತ್ತೇನೆ. ಮಹಜರನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1 ಎಂದು, ಪ್ರ.ಮಾ.ವ ವನ್ನು ನಿಶಾನೆ-2 ಎಂದು, ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ಈ ನ್ಯಾಯಾಲಯಕ್ಕೆ ಮುಟ್ಟುಗೋಲು ನಡವಳಿ ಬಗ್ಗೆ ಸಲ್ಲಿಸಿದ ವರದಿ ನಿಶಾನೆ ಪಿ-3 ಎಂದು, ಸಾಕ್ಷಿ ಸಹಿಯನ್ನು ನಿಶಾನೆ ಪಿ-3ಎ ಎಂದು ಗುರುತಿಸಲಾಯಿತು. ವಾಹನದಿಂದ ಇಳಿದು ಹೋದ ವ್ಯಕ್ತಿ ಮೋಹನದಾಸ ಶೆಟ್ಟಿ, ಐಕುಮನೆ ಎಂಬುದಾಗಿ ನಮ್ಮ ಸಿಬ್ಬಂದಿಗಳು ತಿಳಿಸಿರುತ್ತಾರೆ. ದಿನಾಂಕ:08.09.2008ರಂದು ವಾಹನ ಅಪಘಾತವಾದ ಬಗ್ಗೆ ಮೋಟಾರು ವಾಹನ ಇಲಾಖೆಯಿಂದ ವರದಿ ಪಡೆದುಕೊಂಡಿರುತ್ತೇನೆ. ಸದ್ರಿ ನಾವು ವಶಪಡಿಸಿಕೊಂಡ ಸಂದರ್ಭ ಈ ವಾಹನ ಅಪಘಾತಕ್ಕೆ ಒಳಪಟ್ಟು ವಾಹನ ಚಾಲಕರು ಯಾರೂ ಇಲ್ಲದ ಸ್ಥಿತಿಯಲ್ಲಿ ವಶಪಡಿಸಲಾಗಿದ್ದು ದಿನಾಂಕ:08.09.2008 ರಂದು ಸದ್ರಿ ವಾಹನದ ಅಪಘಾತದಿಂದ ಆದ ಬಗ್ಗೆ ಪರಿಶೀಲನಾ ಹಾಗೂ ಸಾರಿಗೆ ಅಧಿಕಾರಿಗಳ ವರದಿಯನ್ನು ಪಡೆದಿರುತ್ತೇನೆ, ದಿನಾಂಕ:12.09.2008ಕ್ಕೆ ಪ್ರಾದೇಶಿಕ ಸಾರಿಗೆ ನಿರೀಕ್ಷಕರು ತಪಾಸಣಾ ವರದಿಯನ್ನು ನೀಡಿದ್ದು,ಅದರ ಪ್ರತಿಯನ್ನು ಈ ದಿವಸ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ವಾಹನವನ್ನು ನೋಡಿದರೇ ಗುರುತಿಸುತ್ತೇನೆ. ವಾಹನವನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಸದ್ರಿ ದಿನಾಂಕ:12.09.2008ರ ಮೋಟಾರು ವಾಹನ ಅಪಘಾತದ ಪ್ರತಿಯನ್ನು ಈ ದಿವಸ ಪ್ರಾಧಿಕಾರಕ್ಕೆ ಹಾಜರುಪಡಿಸಿ ಅದನ್ನು ನೋಡುತ್ತಿದ್ದು, ಸದ್ರಿ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಸದ್ರಿ ವರದಿಯ ಆಧಾರದಲ್ಲಿ ವಶಪಡಿಸಿದ ವಾಹನವು ನೊಂದಾವಣಿ ಆಗಿಲ್ಲ ಎಂದು ಕಂಡು ಬರುತ್ತದೆ. ನಂತರ ದಿನಾಂಕ:18.09.2008ರಂದು ಪ್ರಕರಣದ ಮುಂದಿನ ತನಿಖೆಯನ್ನು ಸೊತ್ತುಗಳೊಂದಿಗೆ ಪಿ.ಎಸ್.ಐ ಶ್ರೀ.ಲೋಹರ್ ಇವರಿಗೆ ಒಪ್ಪಿಸಿರುತ್ತೇನೆ.

ಪಾಟೀ ಸವಾಲು: ಈ ವಾಹನಕ್ಕೆ ವಾರಸುದಾರರು ಯಾರೂ ಮುಂದೆ ಬಂದು ತಮ್ಮದೆಂದು ಬೇಡಿಕೆ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಈ ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿನಾಂಕ:25.07.2008ರಂದು ಜಪ್ತು ಸಂದರ್ಭದಲ್ಲಿ ನೊಂದಾಣಿ ಸಂಖ್ಯಾ ಫಲಕ ಅಳವಡಿಸದೇ ಇದ್ದ ಹಾಗೂ ತದನಂತರದಲ್ಲಿ ಬಿ ಎಕ್ಸ್‌ಟ್ರಾಕ್ಟ್ ವರದಿಯಂತೆ KL-13R-7800 ಎಂಬ ನೊಂದಾಣಿ ಸಂಖ್ಯೆ ಇರುವ ಸ್ಕಾರ್ಪಿಯೋ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣ ಸಂದರ್ಭದಲ್ಲಿ ವಾಹನಕ್ಕೆ ನೊಂದಾಣಿ ಪ್ಲೇಟು ಅಳವಡಿಸದೇ ಇದ್ದ ಪ್ರಯುಕ್ತ ವಾಹನದ ಇಂಜಿನ್ ಸಂಖ್ಯೆ ಅಧಾರದ ಮೇಲೆ ವಾಹನದ ನೊಂದಾಣಿ ಸಂಖ್ಯೆಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕಣ್ಣೂರು ಇವರಿಂದ ಪಡೆದ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ KL-13R-7800 ಎಂದು ನೊಂದಾಣಿ ನಮೂದಿಸಿರುವ ವಾಹನದ ಮಾಲೀಕರಿಗೆ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ಪ್ರಕಾರ ನೀಡಲಾದ ಕಾರಣ ಕೇಳಿ ನೋಟಿಸಿಗೆ ಸದ್ರಿಯವರಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗದೇ ಇರುವುದು ಹಾಗೂ ಅರೋಪಿತ ವ್ಯಕ್ತಿ ಕೂಡಾ ಜಪ್ತಾದ ಸೊತ್ತುಗಳ ಬಗ್ಗೆ ತನ್ನ ಮಾಲೀಕತ್ವದ ಕೋರಿ ಪುರಾವೆಗಳನ್ನು ಒದಗಿಸಿ ತನ್ನ ನಿರಪಾರಾಧಿತ್ವವನ್ನು ಸಾಬೀತು ಪಡಿಸಲು ವಿಫಲರಾಗಿರುವುದನ್ನು ಗಮನಿಸಿದಾಗ ಆರೋಪಿತ ವ್ಯಕ್ತಿಯು ಉದ್ದೇಶ ಪೂರ್ವಕವಾಗಿ ಸದ್ರಿ ವಾಹನವನ್ನು, ನೊಂದಾಣಿ ಸಂಖ್ಯಾ ಫಲಕವನ್ನು ಅಳವಡಿಸದೇ ತನ್ನ ತಿಳುವಳಿಕೆಯಿಂದಲೇ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಮಾಡಿರುವುದು ಕಂಡುಬರುತ್ತದೆ. ನಂತರದಲ್ಲಿ ಜಪ್ತು ವಾಹನ ಮತ್ತು ಸೊತ್ತುಗಳನ್ನು ತನ್ನ ಸುಪರ್ದಿಗೆ ಪಡೆದುಕೊಳ್ಳಲು ಮತ್ತು ತಕ್ಷೀರನ್ನು ನಡೆಸಲು ಯಾರೊಬ್ಬರೂ ಪ್ರಯತ್ನ ಪಡದೇ ಇರುವುದರಿಂದ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಸದ್ರಿ ವಾಹನವನ್ನು ಬಳಸಿರುವುದು ಅನುಮಾನಕ್ಕೆ ಎಡೆಯಿಲ್ಲದಂತೆ ಸಾಬೀತಾಗಿರುವುದರಿಂದ, ಪ್ರಕರಣ ಸಂದರ್ಭದಲ್ಲಿ ನೊಂದಾಣಿ ಪ್ಲೇಟು ಅಳವಡಿಸದೇ ಇರುವ ಹಾಗೂ ತದನಂತರದಲ್ಲಿ ತನಿಖೆಯಿಂದ KL-13-R-7800 ಎಂದು ನೊಂದಾಣಿ ಸಂಖ್ಯೆ ದೃಢೀಕೃತವಾಗಿರುವ ಹಾಗೂ ಇಂಜಿನ್ ಸಂಖ್ಯೆ:B574G43364 VSR No:MAITZ2BSL>2G88389 ಎಂದು ನಮೂದಿಸಿರುವ ಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತ ಹಾಗೂ ಯೋಗ್ಯವೆಂದು ತೀರ್ಮಾನ ತೆಗೆದುಕೊಂಡು ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ ಇವರ ಕ್ರೈಂ ಸಂ:95/2008, ದಿನಾಂಕ:25.07.2008ರಲ್ಲಿ ಜಪ್ತು ಸಂದರ್ಭದಲ್ಲಿ ನೊಂದಣಿ

ಸಂಖ್ಯೆ ಅಳವಡಿಸದೇ ಇರುವ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಾಹನದ ಇಂಜಿನ್ ಸಂ:B574G43364 VSR No:MAITZ2BSL> 2G88389 ಇದರ ಆಧಾರದ ಮೇಲೆ ಪಡೆಯಲಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿಸಿರುವ ನೊಂದಣಿ ಸಂ: KL-13-R-7800 ಸ್ಕಾರ್ಪಿಯೋ ವಾಹನವನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:15.07.2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-I: ಶ್ರೀ ಎ. ಸೈಮಲ್ಲಾ
ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ-I	: ಮಹಜರು ಪ್ರತಿ
ನಿಶಾನೆ ಪಿ-Iಎ	: ಅದರ ಮೇಲಿನ ಸಹಿ
ನಿಶಾನೆ ಪಿ-2	: ಪ್ರಥಮ ವರ್ತಮಾನ ವರದಿ
ನಿಶಾನೆ ಪಿ-2ಎ	: ಅದರ ಮೇಲಿನ ಸಹಿ
ನಿಶಾನೆ ಪಿ-3	: ನ್ಯಾಯಾಲಯಕ್ಕೆ ಮುಟ್ಟುಗೋಲು ನಡವಳಿ ಬಗ್ಗೆ ಸಲ್ಲಿಸಿದ ವರದಿ
ನಿಶಾನೆ ಪಿ-3ಎ	: ಅದರ ಮೇಲಿನ ಸಹಿ
ನಿಶಾನೆ ಪಿ-4	: ಮೋಟಾರ್ ವಾಹನ ಅಪಘಾತ ವರದಿಯ ಪ್ರತಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:
ಅರ್ಜಿದಾರರ ಹೇಳಿಕೆ : - ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು : - ಯಾವುದು ಇಲ್ಲ-

ನೂರ್ ಮಹ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.736

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/225/ಡಿಟಿಸಿಆರ್/2008-09, ದಿನಾಂಕ:22ನೇ ಜುಲೈ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ಉಪ ನಿರೀಕ್ಷಕರು (1),
ಮಂಗಳೂರು ಉತ್ತರ ವಲಯ-1, ಮಂಗಳೂರು.

ಆರೋಪಿಗಳು:

1) ಜಯಕರ ಆರ್. ಶೆಟ್ಟಿ, ಬಿನ್ ರಾಮಣ್ಣ ಶೆಟ್ಟಿ,
2) ಜ್ಞಾನಜ್ಯೋತಿ ನಿಲಯ, ಜ್ಯೋತಿನಗರ, ಕುಂಜತ್ ಬೈಲ್ ಗ್ರಾಮ ಮತ್ತು ಅಂಚೆ, ಮಂಗಳೂರು ತಾಲೂಕು,
(ವಾಹನದ ಮಾಲೀಕ)
2) ಅರುಣ್ ಡಿಸೋಜ, ಬಿನ್ ಪ್ರಾನ್ಸಿಸ್ ಡಿಸೋಜ,
ಜ್ಯೋತಿ ನಗರ, ಪಂಜಿಮೊಗರು,
ಮಂಗಳೂರು ತಾಲ್ಲೂಕು. (ತಲೆ ಮರೆಸಿಕೊಂಡಿರುತ್ತಾನೆ)

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು(1),ಮಂಗಳೂರು ಉತ್ತರ ವಲಯ-1 ಇವರು ದಿನಾಂಕ:25.01.2009 ರಂದು ಮಂಗಳೂರು ತಾಲ್ಲೂಕು ಕುಂಜತ್ತ್‌ಬೈಲ್ ಗ್ರಾಮದ ಮರಕಡ ಜಂಕ್ಷನ್ ಬಳಿ ಗಸ್ತು ನಡೆಸುತ್ತಿರುವ ಸಂದರ್ಭದಲ್ಲಿ ಮರವೂರು ಕಡೆಯಿಂದ ಕಾವೂರು ಕಡೆಗೆ ಒಂದು ಗೂಡ್ಸ್ ಟೆಂಪೋ ಬರುವುದನ್ನು ಗಮನಿಸಿ, ಅದನ್ನು ನಿಲ್ಲಿಸಲು ಸೂಚಿಸಿದಾಗ ವಾಹನದ ಚಾಲಕನು ವಾಹನವನ್ನು ಮರಕಡ ಜಂಕ್ಷನ್ ಬಳಿ ನಿಲ್ಲಿಸಿ ತಕ್ಷಣ ಚಾಲಕ ಮತ್ತು ವಾಹನದಲ್ಲಿದ್ದ ಇನ್ನೊಬ್ಬ ವ್ಯಕ್ತಿಯು ಓಡಲು ಪ್ರಯತ್ನಿಸಿದ್ದಾಗ ಸಿಬ್ಬಂದಿಗಳು ಚಾಲಕನನ್ನು ಹಿಡಿಯಲು ಸಫಲರಾಗಿ ಇನ್ನೊರ್ವ ವ್ಯಕ್ತಿಯು ತಲೆಮರೆಸಿಕೊಂಡಿರುತ್ತಾನೆ. ನಂತರ ಹಿಡಿಯಲ್ಪಟ್ಟ ವ್ಯಕ್ತಿಯ ಸಮ್ಮುಖದಲ್ಲಿ ವಾಹನವನ್ನು ತಪಾಸಣೆ ಮಾಡಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಲು ಕಾಲಾವಕಾಶವಿಲ್ಲದೇ ಇರುವ ಕಾರಣ ಸ್ಥಳದಲ್ಲಿಯೇ ಸರ್ಚ್ ಮೆಮೋ ತಯಾರಿಸಿ ವಾಹನವನ್ನು ಶೋಧಿಸಿದಾಗ, ವಾಹನದ ಹಿಂಬದಿಯ ಭಾಗದಲ್ಲಿ 35 ಲೀಟರು ಸಾಮರ್ಥ್ಯದ 8 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಸುಮಾರು 280 ಲೀಟರು ಕಳ್ಳಭಟ್ಟಿ ಸಾರಾಯಿಯನ್ನು ಪತ್ತೆ ಹಚ್ಚಿ, ಇದು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟವೆಂಬುದಾಗಿ ಖಚಿತಪಡಿಸಿಕೊಂಡು,ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965ರ ಕಲಂ 11, 13 ಮತ್ತು 14ರ ಪ್ರಕಾರ ಅಪರಾಧ ಹಾಗೂ ಕಲಂ 32, 34 ಮತ್ತು 38(ಎ)ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ವಾಹನ ಮತ್ತು 280.000 ಲೀಟರು ಕಳ್ಳಭಟ್ಟಿ ಸಾರಾಯಿಯನ್ನು ಜಪ್ತುಮಾಡಿ, ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ, ವಾಹನದಲ್ಲಿದ್ದ ಬಂಧಿತ ಆರೋಪಿಯಾದ ಬಿ.ಜಯಕರ ಶೆಟ್ಟಿ, ಬಿನ್ ರಾಮಣ್ಣ ಶೆಟ್ಟಿ, ಜ್ಞಾನಜ್ಯೋತಿ ನಿಲಯ, ಜ್ಯೋತಿ ನಗರ, ಕುಂಜತ್ತ್‌ಬೈಲ್ ಗ್ರಾಮ ಮತ್ತು ಅಂಚೆ, ಮಂಗಳೂರು ತಾಲ್ಲೂಕು ಮತ್ತು ಸದ್ರಿ ವ್ಯಕ್ತಿಯು ನೀಡಿದ ಮಾಹಿತಿಯಂತೆ ಓಡಿಹೋದ ವಾಹನದ ಚಾಲಕ ಇನ್ನೊರ್ವ ವ್ಯಕ್ತಿ ಅರುಣ್ ಡಿಸೋಜ,ಬಿನ್: ಪ್ರಾನ್ಸಿಸ್ ಡಿಸೋಜ, ಜ್ಯೋತಿ ನಗರ, ಪಂಜಿ ಮೊಗರು, ಮಂಗಳೂರು ತಾಲೂಕು ಇವರುಗಳ ವಿರುದ್ಧ ತಕ್ಷೀರು ಸಂಖ್ಯೆ: 28/08-09, ದಿನಾಂಕ:25.01.2009 ರಂದು ಮೊಕದ್ದಮೆಯನ್ನು ದಾಖಲಿಸಿ ಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸದ್ರಿ ಸೊತ್ತುಗಳನ್ನು ಅಂತಿಮ ವರದಿ ಸಲ್ಲಿಸುವ ತನಕ ಅವರ ಸ್ವಾಧೀನದಲ್ಲಿಟ್ಟುಕೊಳ್ಳಲು ಪ್ರಾಧಿಕಾರದಲ್ಲಿ ಅನುಮತಿ ಕೋರಿದ ಮೇರೆಗೆ ಪ್ರಾಧಿಕಾರದ ದಿನಾಂಕ:07.02.2009ರ ಆದೇಶದಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ.

ಸೊತ್ತುಗಳ ವಿವರ

1) ಬಜಾಜ್ ನಿರ್ಮಿತ ತ್ರಿವೀಲ್ಡರ್ ಗೂಡ್ಸ್ ಟೆಂಪೋನೊಂದಣಿಸಂ:KA-19-B-6315

2) 35 ಲೀಟರು ಗಾತ್ರದ 8 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 280.000 ಲೀಟರು ಕಳ್ಳಭಟ್ಟಿ ಸಾರಾಯಿ.

(ಸದ್ರಿ ಪ್ರತಿ ಕ್ಯಾನಿನಿಂದ ತಲಾ ಒಂದೊಂದರಂತೆ 750 ಎಂ.ಎಲ್. ನ 8 ಬಾಟಲಿಗಳಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆಯಲಾಗಿದೆ)

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ನಿರ್ಮಿತ ತ್ರಿ ವೀಲ್ಡರ್ ಗೂಡ್ಸ್ ಟೆಂಪೋ ನೊಂದಣಿ ಸಂ: KA-19-B-6315 ಇದರ ನೊಂದಾಣಿ ಮಾಲೀಕರೆಂದು ಹೇಳಿಕೊಂಡ ಶ್ರೀ ಜಯಕರ ಆರ್.ಶೆಟ್ಟಿ, ಬಿನ್:ರಾಮಣ್ಣ ಶೆಟ್ಟಿ, ವಾಸ:ಜ್ಞಾನ ಜ್ಯೋತಿ, ಜ್ಯೋತಿನಗರ, ಕುಂಜತ್ತ್‌ಬೈಲ್ ಅಂಚೆ, ಬಜಪೆ ರಸ್ತೆ, ಕಾವೂರು,ಮಂಗಳೂರು ಇವರ ದಿನಾಂಕ:06.03.2009 ರಂದು ತಮ್ಮ ವಕೀಲರ ಮೂಲಕ ಅರ್ಜಿಯನ್ನು ಸಲ್ಲಿಸಿ, ಸದ್ರಿ ವಾಹನ ಚಾಲನೆಗೆ ಶ್ರೀ ಜಾನ್ ಡಿಸೋಜ ಎಂಬವರನ್ನು ಚಾಲಕರನ್ನಾಗಿ ನಿಯಮಿಸಿ ಸಾರ್ವಜನಿಕರಿಗೆ ಬಾಡಿಗೆಗೆ ಇಡಲಾದ ವಾಹನವಾಗಿದ್ದು, ಸದ್ರಿ ವಾಹನವನ್ನು ಅಕ್ರಮ ಸೊತ್ತು ಸಾಗಾಟಕ್ಕೆ ಬಳಸಲಾಗಿರುವುದಿಲ್ಲ, ಹಾಗೂ ಹೊರಿಸಲಾದ ಅಪರಾಧವು ಸಮಂಜಸವಲ್ಲವೆಂದು ತಿಳಿಸಿ, ಜೀವನಾಧಾರವಾದ ಸದ್ರಿ ವಾಹನವನ್ನು ಮಧ್ಯಂತರ ಬಿಡುಗಡೆ ಮಾಡಿಕೊಡಬೇಕಾಗಿ ಪ್ರಾಧಿಕಾರದೊಂದಿಗೆ ವಿನಂತಿಸಿಕೊಂಡಿರುತ್ತಾರೆ. ಸದ್ರಿ ಅರ್ಜಿಯ ಬಗ್ಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಪ್ರಕರಣದ ತನಿಖಾದಿಕಾರಿಗಳಿಗೆ ದಿನಾಂಕ:09.03.2009ರಲ್ಲಿ ಜ್ಞಾಪನ ಪತ್ರ ನೀಡಲಾಗಿದ್ದು, ಸದ್ರಿ ಪತ್ರಕ್ಕೆ ಪ್ರಕರಣದ ತನಿಖಾಧಿಕಾರಿಗಳಾದ ಅಬಕಾರಿ ಉಪ ನಿರೀಕ್ಷಕರು(1) ಮಂಗಳೂರು ಉತ್ತರ ವಲಯ-1 ರವರು ದಿನಾಂಕ:01.04.2009ರಂದು ವಿವರಣೆಗಳನ್ನು ನೀಡಿ ವಾಹನವನ್ನು ಮಾಲೀಕರಿಗೆ ಮಧ್ಯಂತರ ಬಿಡುಗಡೆಗೊಳಿಸಬಾರದೆಂದು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಜಪ್ತಾದ ವಾಹನ ಬಜಾಜ್ ನಿರ್ಮಿತ ತ್ರಿವೀಲ್ಡರ್ ಗೂಡ್ಸ್ ಟೆಂಪೋ ನೊಂದಣಿ ಸಂ: KA-19-B-6315 ಇದರ ಬಿ ರಿಜಿಸ್ಟಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ತನಿಖಾದಿಕಾರಿಗಳು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ.ಜಿಲ್ಲೆ ಇಲ್ಲಿಂದ ಪಡೆದು ಪ್ರಾದಿಕಾರಕ್ಕೆ ಸಲ್ಲಿಸಿದ್ದು, ಸದ್ರಿ ವರದಿಯ ಪ್ರಕಾರ ಶ್ರೀ ಜಯಕರ ಶೆಟ್ಟಿ, ಬಿನ್ ರಾಮಣ್ಣ ಶೆಟ್ಟಿ, ಧ್ಯಾನ ಜ್ಯೋತಿ, ಜ್ಯೋತಿ ನಗರ, ಕುಂಜತ್ತ್ ಬೈಲ್ ಅಂಚೆ, ಬಜಪೆ ರಸ್ತೆ, ಕಾವೂರು, ಮಂಗಳೂರು ಇವರು ದಿನಾಂಕ:09.11.2006ರಿಂದ ಅನ್ವಯವಾಗುವಂತೆ ವಾಹನದ ಮಾಲೀಕರಾಗಿರುವುದಾಗಿ ಹಾಗೂ ಮೆ:ಮಹೀಂದ್ರ ಅಂಡ್ ಮಹೀಂದ್ರ ಪೈನಾನ್ಸ್ ಸರ್ವಿಸ್ ಲಿಮಿಟೆಡ್, ಬೆಂಗಳೂರು ಇವರು ವಾಹನದ ಹೆಚ್.ಪಿ.ಎ. ದಾರರಾಗಿರುವುದಾಗಿ ತಿಳಿದು ಬಂದಿರುತ್ತದೆ. ವಾಹನದ ಮಾಲೀಕರಿಗೆ ಮತ್ತು ಹೆಚ್.ಪಿ.ಎ ದಾರರಿಗೆ ದಿನಾಂಕ:08.04.2009ರಂದು ಪ್ರಾದಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸುಗಳನ್ನು ನೀಡಿದ್ದು, ಸದ್ರಿ ನೋಟಿಸು ವಾಹನದ ಮಾಲೀಕರಿಗೆ

ದಿನಾಂಕ:16.04.2009ರಂದು ಹಾಗೂ ಹೆಚ್.ಪಿ.ಎದಾರರಿಗೆ ದಿನಾಂಕ:18.04.2009ರಂದು ಜ್ಯಾರಿಯಾಗಿದ್ದು, ಈ ಬಗ್ಗೆ ಅಂಚೆ ಸ್ವೀಕೃತ ಪತ್ರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ. ಹಾಗೂ ವಾಹನದ ಮಾಲೀಕರು ಸದ್ರಿ ಕಾರಣ ಕೇಳಿ ನೋಟಿಸಿಗೆ ದಿನಾಂಕ:12.05.2009ರಂದು ನೀಡಿದ ತಮ್ಮ ಸಮಜಾಯಿಷಿ ಉತ್ತರದಲ್ಲಿ ಪ್ರಕರಣಕ್ಕೂ ತನ್ನ ವಾಹನಕ್ಕೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿ ವಾಹನವನ್ನು ಮದ್ಯಂತರ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಹಾಗೂ ಹೆಚ್.ಪಿ. ದಾರರು ದಿನಾಂಕ:28.04.2009ರಂದು ನೀಡಿದ ಉತ್ತರದಲ್ಲಿ ವಾಹನದ ಮಾಲೀಕರಾದ ಜಯಕರ ಶೆಟ್ಟಿ ಹಾಗೂ ತಮ್ಮ ಕಂಪೆನಿಯ ನಡುವೆ ಸದ್ರಿ ವಾಹನದ ಬಗ್ಗೆ ರೂ.1,20,000/– ಮೊತ್ತಕ್ಕೆ ಸಾಲಪಾವತಿ ವಹಿವಾಟು ಒಪ್ಪಂದ ಮಾಡಿಕೊಳ್ಳಲಾಗಿದ್ದು ಸದ್ರಿಯವರಿಂದ ರೂ.70,000/– ಪಾವತಿಗೆ ಬಾಕಿ ಉಳಿದಿದ್ದು, ಸದ್ರಿ ವಾಹನದ ಮಧ್ಯಂತರ ಬಿಡುಗಡೆ ಪಡೆಯಲು ಅರ್ಹರಾಗಿದ್ದು, ವಾಹನದ ಮದ್ಯಂತರ ಬಿಡುಗಡೆಗೆ ಅನುವು ಮಾಡಿ ಕೊಡಬೇಕಾಗಿ ಕೋರಿರುತ್ತಾರೆ.

ವಾಹನದ ಮಾಲೀಕರು ಮದ್ಯಂತರ ಬಿಡುಗಡೆಗಾಗಿ ಸಲ್ಲಿಸಿದ್ದ ಅರ್ಜಿಯ ಬಗ್ಗೆ ತನಿಖಾಧಿಕಾರಿಗಳು ಸಲ್ಲಿಸಿದ್ದ ಸ್ಪಷ್ಟ ಆಕ್ಷೇಪಣೆಗಳನ್ನು ಪರಿಶೀಲಿಸಿ ಹಾಗೂ ವಾಹನದ ನೊಂದಣಿ ಮಾಲೀಕರೇ ಪ್ರಕರಣದಲ್ಲಿ ಒಂದನೇ ಆರೋಪಿಯಾಗಿ ಗುರುತಿಸಲ್ಪಟ್ಟಿರುವುದರಿಂದ ಹಾಗೂ ವಾಹನವನ್ನು ಮಾನವ ಜೀವಕ್ಕ ಹಾನಿಯಾಗುವಂತಹ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಟಕ್ಕೆ ಬಳಸಿಕೊಂಡಿರುವುದರಿಂದ ಇದು ಘೋರ ಅಪರಾಧವಾಗಿದ್ದು, ವಾಹನವನ್ನು ಮದ್ಯಂತರ ಬಿಡುಗಡೆಗೊಳಿಸಿದ್ದಲ್ಲಿ ಮತ್ತೆ ಇಂತಹ ಅಕ್ರಮ ದಂಧೆಗೆ ಸದ್ರಿ ವಾಹನವನ್ನು ಬಳಸಿಕೊಳ್ಳುವ ಸಾಧ್ಯತೆಯಿರುವುದರಿಂದ ವಾಹನದ ಮದ್ಯಂತರ ಬಿಡುಗಡೆ ಪ್ರಕ್ರಿಯೆಯನ್ನು ಕೈಬಿಟ್ಟು ಮುಟ್ಟುಗೋಲು ನಡವಳಿಯನ್ನು ನಡೆಸುವುದು ಅವಶ್ಯಕವೆಂದು ಪ್ರಾಧಿಕಾರವು ಮನಗಂಡಿರುತ್ತದೆ.

ಪ್ರಕರಣದಲ್ಲಿ ಜಪ್ತಾದ ಕಳ್ಳಭಟ್ಟಿ ಸಾರಾಯಿಯ ಮಾದರಿಗಳನ್ನು ಪ್ರಕರಣದ ತನಿಖಾಧಿಕಾರಿಗಳು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ವಿಶ್ಲೇಷಣಾ ವರದಿಯ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸದ್ರಿ ರಾಸಾಯನಿಕ ಪರೀಕ್ಷಾ ಫಲಿತಾಂಶದ ವರದಿಯಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯಲ್ಲಿ ಮದ್ಯಸಾರದ ಪ್ರಮಾಣ 26.0% ಇರುವುದಾಗಿ ದೃಢೀಕರಣ ನೀಡಿರುತ್ತಾರೆ. ಸದ್ರಿ ಕಳ್ಳಭಟ್ಟಿ ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ವಲಯ–I ಇವರು ದಿನಾಂಕ:16.05.2009ರಂದು ಶಿಫಾರಸ್ಸು ಮಾಡಿ ವರದಿ ಸಲ್ಲಿಸಿರುತ್ತಾರೆ. ಆ ಪ್ರಕಾರ ಪ್ರಕರಣದಲ್ಲಿ ಜಪ್ತಾದ ಸೊತ್ತುಗಳ ಪೈಕಿ ವಾಹನವನ್ನು ಹೊರುತುಪಡಿಸಿ, ಉಳಿದ 280.000 ಲೀಟರು ಕಳ್ಳಭಟ್ಟಿ ಸಾರಾಯಿ (ಮಾದರಿಗಳನ್ನು ಹೊರತು ಪಡಿಸಿ)ಯನ್ನು ಪ್ರಾಧಿಕಾರದ ದಿನಾಂಕ:25.05.2009ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಮೇಲಿನ ವಿದ್ಯಾಮಾನಗಳನ್ನು ಅವಲೋಕಿಸಿ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಅತೀ ಶೀಘ್ರದಲ್ಲಿ ನಡೆಸುವರೇ ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ ಸರ್ಕಾರದ ಪರ ಸಾಕ್ಷಿಧಾರರನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಯನ್ನು ಹಾಗೂ ಪ್ರತಿರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1) ಮೊದಲನೇ ವಿವಾದಾಂಶ: ದಿನಾಂಕ:25.01.2009ರಂದು ಬಜಾಜ್ ನಿರ್ಮಿತ ತ್ರೀ ವೀಲ್ಹರ್ ಗೂಡ್ಸ್ ಟೆಂಪೋ ನೊಂದಣಿ ಸಂಖ್ಯೆ: KA-19-B-6315 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿ ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಪ್ರಾಸಿಕ್ಯೂಶನ್ ಪರ ಪ್ರಕರಣದ ಪಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ ವಿನೋದ್‌ಕುಮಾರ್, ಅಬಕಾರಿ ಉಪನಿರೀಕ್ಷಕರು, ಮಂಗಳೂರು ಉತ್ತರ ವಲಯ–I ರವರು ದಿನಾಂಕ:08.07.2009ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ. ರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ಕಳೆದ ನಾಲ್ಕು ವರ್ಷ ಗಳಿಂದ ಅಬಕಾರಿ ಉಪ ನಿರೀಕ್ಷಕನಾಗಿ ಮಂಗಳೂರು ಉತ್ತರ ವಲಯ–1ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ:25.01.2009 ರಂದು

ಕುಂಜತ್ತಬೈಲು ಗ್ರಾಮದ ಮರಕಡ ಎಂಬಲ್ಲಿ ಕರ್ತವ್ಯ ನಿರತ ವೇಳೆ ಬೆಳಿಗ್ಗೆ ಸುಮಾರು 5-25 ಗಂಟೆ ಸಮಯದಲ್ಲಿ ಮರಕಡ ರಸ್ತೆಯಿಂದ ಕಾವೂರು ಕಡೆ ಗೂಡ್ಸ್ ಟೆಂಪೋ ಬರುತ್ತಿದ್ದದನ್ನು ತಡೆದು ನಿಲ್ಲಿಸಿದಾಗ ಆ ಟೆಂಪೊ ತುಂಬಾ ದೂರ ಹೋಗಿ ನಿಂತಿತು. ನಾವು ಸದ್ರಿ ವಾಹನವನ್ನು ಹಿಂಬಾಲಿಸಿ ನಿಲ್ಲಿಸಿದಾಗ ಅದರಲ್ಲಿದ್ದ ಚಾಲಕ ಹಾಗೂ ಇನ್ನೊಬ್ಬ ವ್ಯಕ್ತಿ ಓಡಲು ಯತ್ನಿಸಿದಾಗ ಅವರನ್ನು ನಾವು ಹಿಡಿಯಲು ಪ್ರಯತ್ನಿಸಿದಾಗ ಓರ್ವ ವ್ಯಕ್ತಿಯು ಸಿಕ್ಕಿದ್ದು, ಸದ್ರಿ ವ್ಯಕ್ತಿಯನ್ನು ವಾಹನದ ಪಕ್ಕ ಕರೆದುಕೊಂಡು ಬಂದು ಆ ವಾಹನದಲ್ಲಿ ಏನಿದೆ ಎಂದು ಕೇಳಿದಾಗ ಆತನು ಅನುಮಾನಾಸ್ಪದ ರೀತಿಯಲ್ಲಿ ವರ್ತಿಸಿ, ಅದರಲ್ಲಿ ಕಳ್ಳಭಟ್ಟಿ ಸಾರಾಯಿ ಇದೆ ಎಂದು ತಿಳಿಸಿದ. ನಂತರ ಪಂಚರನ್ನಾಗಿ ಮಾಡಲು ಪಕ್ಕದಲ್ಲಿ ಯಾರೂ ಇಲ್ಲದ ಕಾರಣ ಸಿಬ್ಬಂದಿಗಳ ಸಮಕ್ಷಮದಲ್ಲಿ, ನ್ಯಾಯಾಲಯದಿಂದ ವಾರೆಂಟನ್ನು ಪಡೆಯಲು ಸಮಯಾವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ಸರ್ಚ್ ಮೆಮೊವನ್ನು ತಯಾರಿಸಿ, ವಾಹನವನ್ನು ಪರಿಶೀಲಿಸಲಾಗಿ ವಾಹನದ ಹಿಂಬದಿಯಲ್ಲಿ 35 ಲೀಟರ್ ನ 8 ಕ್ಯಾನುಗಳಲ್ಲಿ ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂತು. ಸಗ್ರಿ ವ್ಯಕ್ತಿಯಲ್ಲಿ ಓಡಿ ಹೋದ ವ್ಯಕ್ತಿಯ ಹೆಸರು ಕೇಳಿದಾಗ ಆತನು ಅರುಣ್ ಡಿಸೋಜಾ ಎಂದು ತಿಳಿಸಿದನು. ನಂತರ ಸದ್ರಿ ವ್ಯಕ್ತಿಯ ಹೆಸರನ್ನು ಕೇಳಲಾಗಿ ತನ್ನ ಹೆಸರು ಜಯಕರ ಶೆಟ್ಟಿ ಬಿನ್ ರಾಮಣ್ಣ ಶೆಟ್ಟಿ ,ಜ್ಯೋತಿ ನಗರ ಎಂದು ತಿಳಿಸಿದನು. ಸದ್ರಿ ವಾಹನದ ನೊಂದಣಿ ಸಂಖ್ಯೆ: KA19-B-6315 ಆಗಿದ್ದು, ಸದ್ರಿ ವಾಹನದಲ್ಲಿದ್ದ 8 ಕ್ಯಾನುಗಳಲ್ಲಿದ್ದ ಪ್ರತಿಯೊಂದು ಕ್ಯಾನಿನಿಂದ 750 ಎಂ.ಎಲ್ ನಂತೆ 8 ಬಾಟಲಿಗಳಲ್ಲಿ ಮಾದರಿ ತೆಗೆಯಲಾಯಿತು. ಸದ್ರಿ 8 ಬಾಟಲಿಗಳಿಗೆ ಬಟ್ಟೆ ದಾರವನ್ನು ಕಟ್ಟಿ, ಇಲಾಖಾ ಸೀಲಿನಿಂದ ಸೀಲು ಮಾಡಿ, ಆರೋಪಿಗಳ ಹೆಸರಿರುವ ಗುರುತು ಚೀಟಿ ಅಂಟಿಸಿ, ಮಾದರಿ ಸೀಲನ್ನು ಸ್ಥಳದಲ್ಲೇ ತಯಾರಿಸಲಾಯಿತು. ಚೆಕ್ ಬಂದಿಯನ್ನು ನಮೂದಿಸಲಾಗಿ ದಕ್ಷಿಣಕ್ಕೆ ಕಾವೂರಿಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಕುಂಜತ್ತ ಬೈಲಿಗೆ ಹೋಗುವ ರಸ್ತೆಯಿದ್ದು, ಪೂರ್ವಕ್ಕೆ ಕಾಡು ಮತ್ತು ಉತ್ತರಕ್ಕೆ ಮರಕಡಕ್ಕೆ ಹೋಗುವ ರಸ್ತೆ ಇರುತ್ತದೆ. ನಂತರ ಸದ್ರಿ ವ್ಯಕ್ತಿಯನ್ನು ದಸ್ತಗಿರಿ ಮಾಡಿ ಹಾಗೂ ಸದ್ರಿ ಗೂಡ್ಸ್ ಟೆಂಪೊದಲ್ಲಿರುವ ಕಳ್ಳಭಟ್ಟಿ ಸಾರಾಯಿ ಹಾಗೂ ಗೂಡ್ಸ್ ಟೆಂಪೊವನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಕಚೇರಿಗೆ ತರಲಾಯಿತು. ನಂತರ ಕಚೇರಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ, ಆರೋಪಿ ಸಮೇತ ನ್ಯಾಯಾಲಯಕ್ಕೆ ಹಸ್ತಾಂತರಿಸಲಾಯಿತು. ಮುಂದಿನ ತನಿಖೆ ನಡೆಸಲಾಗಿ, ಸದರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯಿಂದ ತೆಗೆದ 750 ಎಂ.ಎಲ್‌ನ 8 ಬಾಟಲಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ದಿನಾಂಕ:18.02.2009 ರಂದು ಶ್ರೀ ಎಂ. ಉಮೇಶ್, ಅಬಕಾರಿ ರಕ್ಷಕ ಎಂಬವರಲ್ಲಿ ಕಳುಹಿಸಿಕೊಡಲಾಯಿತು. ರಾಸಾಯನಿಕ ವಿಶ್ಲೇಷಣಾ ವರದಿಯನ್ನು ದಿನಾಂಕ:07.03.2009 ರಂದು ಪಡೆಯಲಾಗಿರುತ್ತದೆ. ಈ ಪ್ರಕರಣದಲ್ಲಿ ತಯಾರಿಸಿದ ಮಹಜರನ್ನು ನಿಶಾನೆ ಪಿ-1 ಎಂದು,ಅದರ ಮೇಲಿನ ಸಹಿಯನ್ನು ನಿಶಾನೆ ಪಿ-1 ಎ ಎಂದು ಹಾಗೂ ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-2 ಎಂದು,ಸಾಕ್ಷಿಯ ಸಹಿಯನ್ನು ನಿಶಾನೆ ಪಿ-2 ಎ ಎಂದು ಗುರುತಿಸ ಲಾಯಿತು. ರಾಸಾಯನಿಕ ತಜ್ಞರ ವರದಿಯನ್ನು ನಿಶಾನೆ ಪಿ-3 ಎಂದು ,ಬಿ.ಎಕ್ಸ್‌ಟ್ರಾಕ್ಟ್ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಈ ನ್ಯಾಯಾಲಯದ ಮುಂದೆ ಮುಟ್ಟುಗೋಲು ಕ್ರಮದ ವರದಿಯನ್ನು ನಿಶಾನೆ ಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-5 ಎ ಎಂದು ಗುರುತಿಸಲಾಯಿತು. ವಾಹನವನ್ನು ನಾನು ನೋಡಿದಲ್ಲಿ ಗುರುತಿಸುತ್ತೇನೆ. ವಾಹನವನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು.

ಅಭಿಯೋಗದ ಪರ ಸಾಕ್ಷಿದಾರರನ್ನು ರಕ್ಷಣಾ ಪರ ವಕೀಲರಾದ ಶ್ರೀ ಕಾರ್ತಿಕ್ ಆರ್.ಉಡುಪ ಇವರು ಪಾಟೀ ಸವಾಲು ನಡೆಸಲಾಗಿ ಸಾಕ್ಷಿದಾರರು ಪಾಟೀ ಸವಾಲಿಗೆ ಉತ್ತರಿಸುತ್ತಾ : ಆ ದಿವಸ ರಾತ್ರಿ 9-30 ಗಂಟೆಗೆ ಕಚೇರಿಯಿಂದ ಹೊರಟಿರುತ್ತೇನೆ. ಮರಕಡ ಜಂಕ್ಷನ್ ಕಚೇರಿಯಿಂದ ಸುಮಾರು 3 ಕಿ.ಮೀ ದೂರವಿರುತ್ತದೆ. ಇದೇ ಸ್ಥಳ ಕಾವೂರು ಜಂಕ್ಷನ್‌ಗೆ ಸಾಧಾರಣ ಮುಕ್ಕಾಲು ಕಿ.ಮೀ ದೂರ ವಿರಬಹುದು. ಮರಕಡ ಜಂಕ್ಷನ್‌ನ ಬಳಿ ಬಾರ್ ಹಾಗೂ ಪೆಟ್ರೋಲ್ ಪಂಪ್ ಹಾಗೂ ಇತರೆ ವಾಣಿಜ್ಯ ಸಂಸ್ಥೆಗಳಿರುತ್ತವೆ. ಮಂಗಳೂರಿನಿಂದ ಬಜ್ಪೆ ವಿಮಾನ ನಿಲ್ದಾಣಕ್ಕೂ ಮತ್ತು ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದ ದಾರಿ ಹಾದು ಹೋಗುತ್ತದೆ. ಸದ್ರಿ ರಸ್ತೆಯಲ್ಲಿ ಭಾರೀ ವಾಹನ ಸಂಚಾರವಿರುತ್ತದೆ. ನಾವು ಮರಕಡ ಜಂಕ್ಷನ್‌ನಲ್ಲಿ ಸಾಧಾರಣ ಮುಕ್ಕಾಲು ಗಂಟೆಯಿಂದ ಒಂದು ಗಂಟೆಯವರೆಗೆ ಇದ್ದೆವು. ಸದ್ರಿ ಮರಕಡ ಜಂಕ್ಷನ್‌ಗೆ ಬೆಳಗ್ಗಿನ ಜಾವ 5-30 ಗಂಟೆಗೆ ತಲುಪಿರುತ್ತೇವೆ. ಸದರಿ ಸ್ಥಳಕ್ಕೆ ಮುಟ್ಟಿದಾಗ ಸುಮಾರು 4-5 ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ. ಕಾವೂರು ಜಂಕ್ಷನ್‌ನಲ್ಲಿ 2 ವಾಹನ ಮತ್ತು ಅದರಿಂದ ಹಿಂದಿನ ಅರ್ಧ ಕಿ.ಮೀ ದೂರದಲ್ಲಿ 3 ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ. ಜಪ್ತು ಪಡಿಸಿದ ವಾಹನದ ತಪಾಸಣೆ ಪೂರ್ವದಲ್ಲಿ ಸದ್ರಿ 2 ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ. ಜಪ್ತು ಪಡಿಸಿದ ವಾಹನ ತಪಾಸಣೆಗೆ ಅರ್ಧ ಗಂಟೆ ಪೂರ್ವದಲ್ಲಿ ಇತರೆ ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ. ಸ್ಥಳ ಮಹಜರನ್ನು ಇಲಾಖಾ ಅಬಕಾರಿ ರಕ್ಷಕ ಸುರೇಂದ್ರ ಇವರಿಂದ ಬರೆಸಲಾಗಿರುತ್ತದೆ. ಆ ದಿವಸ ಇತರೆ ವಾಹನಗಳನ್ನು ತಪಾಸಣೆ ಮಾಡಿದ ಬಗ್ಗೆ ದಾಖಲೆ ನನ್ನಲ್ಲಿ ಇರುತ್ತದೆ. ತಪಾಸಣೆ ಮಾಡಲಾದ ಜಪ್ತು ಮಾಡಿರುವ ವಾಹನವನ್ನು ಸುಮಾರು 10. ಮೀಟರ್ ದೂರದಲ್ಲಿ ಕಂಡಿರುತ್ತೇನೆ. ಸದ್ರಿ ಜಪ್ತು ವಾಹನವನ್ನು ನಿಲ್ಲಿಸಲು ನಾವು ಹೋಗುತ್ತಿದ್ದ ಸರ್ಕಾರಿ ವಾಹನದ ಚಾಲಕನು ಸನ್ನೆ ಮಾಡಿರುತ್ತಾನೆ. ಸದ್ರಿ ವಾಹನವನ್ನು ಅಟ್ಟಿಸಿ ಹಿಂಬಾಲಿಸಿರುವುದಿಲ್ಲ. ವಾಹನದಿಂದ ಓಡಿ ಹೋಗಲು ಪ್ರಯತ್ನಿಸಿದ ವ್ಯಕ್ತಿಯನ್ನು 50 ಮೀಟರ್ ವರೆಗೆ ಓಡಿ ಹಿಡಿದಿರುತ್ತೇನೆ . ವಾಹನದಿಂದ ಇಬ್ಬರು ವ್ಯಕ್ತಿಗಳು ಜಿಗಿದು ಓಡಿ ಹೋಗಿದ್ದು ಓರ್ವ ವ್ಯಕ್ತಿಯು ಕುಂಜತ್ತಬೈಲ್ ಕಡೆಗೆ ಓಡಿ ಹೋಗಿರುತ್ತಾನೆ. ವಾಹನ ಜಪ್ತು ಸಂದರ್ಭದಲ್ಲಿ ತಯಾರಿಸಿದ ಮಹಜರಿಗೆ ಆ ಪರಿಸರದಲ್ಲಿ ತಿರುಗಾಡುತ್ತಿದ್ದ ಜನರ

ಸಹಿ ಪಡೆಯಲು ಪ್ರಯತ್ನಿಸಿರುತ್ತೇನೆ. ಈ ಸಂದರ್ಭ ಸುಮಾರು 2-3 ವಾಹನಗಳನ್ನು ನಿಲ್ಲಿಸಿ, ಮಹಜರಿಗೆ ಸಾಕ್ಷಿಗಳನ್ನಾಗಿ ಬರಲು ಹೇಳಿರುತ್ತೇನೆ. ಆದರೆ ಆ ವಾಹನಗಳ ನೊಂದಣಿ ಸಂಖ್ಯೆ ಅಥವಾ ವ್ಯಕ್ತಿಗಳ ಮಾಹಿತಿ ಪಡೆದಿರುವುದಿಲ್ಲ. ವಾಹನ ಮಾಲೀಕರು ಅಪರಾಧ ಸಂದರ್ಭದಲ್ಲಿ ವಾಹನದಲ್ಲಿ ಇದ್ದಿಲ್ಲ ಎಂದರೆ ಸರಿಯಲ್ಲ. ಜಪ್ತುಪಡಿಸಿರುವ ಕಳ್ಳಭಟ್ಟಿ ಸೊತ್ತುಗಳಿಗೂ ಆರ್.ಸಿ ಮಾಲೀಕರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರ್.ಸಿ. ಮಾಲೀಕರಲ್ಲಿ ವಶಪಡಿಸಿಕೊಂಡಿರುವ ಕಳ್ಳಭಟ್ಟಿ ಸಾರಾಯಿ ಯಾರಿಗೆ ಸೇರಿದ್ದು ಎಂಬ ಬಗ್ಗೆ ಕೇಳಲಾಗಿ ಅವರು ಸದ್ರಿ ಸೊತ್ತು ಅರುಣ್ ಡಿಸೋಜಾ ಎಂಬವರಿಗೆ ಸೇರಿದ್ದು ಎಂದು ತಿಳಿಸಿರುತ್ತಾರೆ. ಸದ್ರಿ ಅಕ್ರಮ ಸಾರಾಯಿಯನ್ನು ಮರಕಡ ಸೇತುವೆಯಿಂದ ಕುಂಜತ್ತಬೈಲ್ ಕಡೆಗೆ ಸಾಗಿಸಲು ಉದ್ದೇಶಿಸಿರುವುದಾಗಿ ತಿಳಿಸಿರುತ್ತಾರೆ. ಆರ್.ಸಿ. ಮಾಲೀಕರ ಮನೆಗೂ ಮರಕಡ ಜಂಕ್ಷನಿಗೂ ಇರುವ ದೂರ ನನಗೆ ತಿಳಿದಿರುವುದಿಲ್ಲ. ಆರ್.ಸಿ. ಮಾಲೀಕರಿಗೆ ಫೋನ್ ಮೂಲಕ ಕರೆ ಮಾಡಿ ಬರಲು ತಿಳಿಸಿದ್ದೆ ಎಂದರೆ ಸರಿಯಲ್ಲ. ನನಗೆ ಮತ್ತು ಆರ್.ಸಿ ಮಾಲೀಕರ ಮಧ್ಯೆ ಮಾತಿನ ಚಕಮಕಿಯಿಂದಾಗಿ ಅವರ ವಿರುದ್ಧ ಈ ಕೇಸು ಮಾಡಲಾಗಿದೆ ಎಂದರೆ ಸರಿಯಲ್ಲ ಎಂದು ಸಾಕ್ಷಿದಾರರು ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ರಕ್ಷಣಾ ಸಾಕ್ಷಿ ವಿಚಾರಣೆ:

ಪ್ರಕರಣದಲ್ಲಿ ಜಪ್ತಾದ ವಾಹನದ ಆರ್.ಸಿ ಮಾಲೀಕರಾದ ಶ್ರೀ.ಜಯಕರ ಶೆಟ್ಟಿ ಇವರು ದಿನಾಂಕ:15.07.2009ರಂದು ತಮ್ಮ ರಕ್ಷಣಾ ಸಾಕ್ಷಿಯನ್ನು ನೀಡುತ್ತಾ ಈ ಪ್ರಕರಣದಲ್ಲಿ ವಾಹನದ ಮಧ್ಯಂತರ ಬಿಡುಗಡೆ ಕೋರಿ ಅರ್ಜಿ ಸಲ್ಲಿಸಿರುತ್ತೇನೆ, ವಾಹನವು ಬಜಾಜ್ ತ್ರೀ ವೀಲ್ಹರ್ ಗೂಡ್ಸ್ ಟೆಂಪೋ ಆಗಿದ್ದು ಇದರ ನೊಂದಣಿ ಸಂ:KA-19-B-6315 ಆಗಿರುತ್ತದೆ. ಇದನ್ನು ಜಾನ್ ಡಿಸೋಜಾ ಎಂಬವರು ಚಾಲನೆ ಮಾಡುತ್ತಿದ್ದು ಸದರಿಯವರಿಗೆ ದಿನಕ್ಕೆ ರೂ.300ರಂತೆ ಬಾಡಿಗೆಗೆ ನೀಡಿರುತ್ತೇನೆ. ದಿನಾಂಕ:24.01.2009 ರಂದು ಸಂಜೆ 7-00 ಗಂಟೆಗೆ ಟೆಂಪೋ ಮನೆಗೆ ಬಂದಿರಲಿಲ್ಲ. ಈ ವಿಷಯದ ಬಗ್ಗೆ ಜಾನ್ ಡಿಸೋಜನಿಗೆ ನಾನು ಫೋನು ಮಾಡಿ ವಿಚಾರಿಸಿದಾಗ ಬೆಳಿಗ್ಗೆ 7-00 ಘಂಟೆಗೆ ಒಂದು ಬಾಡಿಗೆ ಇದೆ ಅದನ್ನು ಮುಗಿಸಿ ಮನೆಗೆ ಬರುತ್ತೇನೆ ಎಂದು ಹೇಳಿದ್ದರು. ಆದರೆ ದಿನಾಂಕ:25.01.2009 ರಂದು ಬೆಳಿಗ್ಗೆ 6-00 ಗಂಟೆಗೆ ನನಗೆ ಅಬಕಾರಿ ಇಲಾಖೆಯವರಿಂದ ಕುಂಜತ್ತಬೈಲಿಗೆ ಕೂಡಲೇ ಬರಬೇಕೆಂದು ಕರೆ ಬಂತು. ನಾನು ಕೂಡಲೇ ಆ ಸ್ಥಳಕ್ಕೆ ಹೋಗಿರುತ್ತೇನೆ. ಕುಂಜತ್ತಬೈಲಿಗೆ ತಲುಪುವಾಗ ಸಮಯ 7-25 ಘಂಟೆ ಆಗಿತ್ತು. ಆ ಸಮಯದಲ್ಲಿ ನನ್ನ ಗಾಡಿಯನ್ನು ಜಪ್ತು ಮಾಡಿರುತ್ತೇವೆ ಎಂದು ಹೇಳಿದರು. ನಾನು ಕಾರಣ ಕೇಳಿದೆ. ಅದಕ್ಕೆ ಸದರಿ ವಾಹನದಲ್ಲಿ ಸಾರಾಯಿ ತೊಟ್ಟೆಗಳನ್ನು ಕೊಂಡು ಹೋಗುತ್ತಿದ್ದರು ಎಂದು ಹೇಳಿ ಅದಕ್ಕಾಗಿ ವಾಹನವನ್ನು ಜಪ್ತು ಮಾಡಿದ್ದೇವೆ ಎಂದು ಹೇಳಿದರು. ನಾನು ಅವರಲ್ಲಿ ತುಂಬಾ ವಿನಂತಿಯಿಂದ ಗಾಡಿಯನ್ನು ಜಪ್ತು ಮಾಡಬೇಡಿ ಎಂದು ಬೇಡಿಕೊಂಡೆನು. ಅದಕ್ಕೆ ಅವರು ಒಪ್ಪಲಿಲ್ಲ. ಆಗ ನನಗೂ ಅವರಿಗೂ ಮಾತಿನ ಚಕಮಕಿ ನಡೆಯಿತು. ಆಗ ಅವರು ನನಗೆ ನಿನ್ನನ್ನು ಸುಲಭದಲ್ಲಿ ಬಿಡುವುದಿಲ್ಲ. ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿ ನನ್ನನ್ನು ಟೆಂಪೊ ಸಮೇತ ಬಂಧಿಸಿದರು. ನಾನು ಆ ಟೆಂಪೊ ನೋಡಿದಾಗ ಟೆಂಪೊದಲ್ಲಿ ಸಾರಾಯಿ ಇರಲಿಲ್ಲ. ಇಲ್ಲಿಯವರೆಗೆ ನನ್ನ ಮೇಲೆ ಯಾವುದೇ ಅಬಕಾರಿ ಪ್ರಕರಣ ದಾಖಲಾಗಿರುವುದಿಲ್ಲ. ನನ್ನ ಗಾಡಿ ಈ ಹಿಂದೆ ಎಂದೂ ಅಬಕಾರಿ ಪ್ರಕರಣಗಳಲ್ಲಿ ಜಪ್ತಾಗಿರುವುದಿಲ್ಲ. ನಾನು ನನ್ನ ಟೆಂಪೊವನ್ನು ಗೂಡ್ಸ್ ಬಾಡಿಗೆಗಾಗಿ ಉಪಯೋಗಿಸುತ್ತಿದ್ದೆ. ನನ್ನ ಮೇಲಿನ ಮೊಕದ್ದಮೆಯನ್ನು ರದ್ದುಗೊಳಿಸಿ ನನ್ನ ವಾಹನವನ್ನು ನನಗೆ ಬಿಡುಗಡೆಗೊಳಿಸಿ ಕೊಡಬೇಕೆಂದು ಮಾನ್ಯ ನ್ಯಾಯಾಲಯದಲ್ಲಿ ಬೇಡಿಕೊಳ್ಳುತ್ತೇನೆ.

ರಕ್ಷಣಾ ಸಾಕ್ಷಿದಾರರನ್ನು ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ನಡೆಸಲಾಗಿ ರಕ್ಷಣಾ ಸಾಕ್ಷಿದಾರರು ಸಾಕ್ಷಿ ನುಡಿಯುತ್ತಾ ಜಾನ್ ಡಿಸೋಜ ರನ್ನು ನಾನು ಟೆಂಪೊ ಡ್ರೈವರಾಗಿ ನೇಮಿಸಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ನಮ್ಮ ಟೆಂಪೊ ಡ್ರೈವರ್ ಜಾನ್ ಡಿಸೋಜಾ ಈಗಲೂ ಇರುತ್ತಾರೆ. 2006 ನವೆಂಬರಿನಲ್ಲಿ ನಾನು ಟೆಂಪೊವನ್ನು ಖರೀದಿಸಿರುತ್ತೇನೆ. ನಾನು ಕೆಂಪು ಕಲ್ಲು ಮತ್ತು ಹೊಗೆಯನ್ನು ಕಮೀಷನ್ ಮೇಲೆ ಮಾರಾಟ ಮಾಡುತ್ತೇನೆ. ಸದರಿ ವ್ಯಾಪಾರದಿಂದ ನನಗೆ ತಿಂಗಳಿಗೆ ರೂ. 2,000/- ಸರಾಸರಿ ಆದಾಯ ಬರುತ್ತದೆ. ನನಗೆ ಟೆಂಪೊದಿಂದ ಪ್ರತಿ ದಿನ ರೂ. 300/- ಜಾನ್ ಡಿಸೋಜಾ ಕೊಡುತ್ತಿದ್ದ. ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ನನ್ನ ಎರಡು ಮಕ್ಕಳು ಇರುತ್ತೇವೆ. ನನಗೆ ಯಾವುದೇ ಕೃಷಿ ಭೂಮಿ ಇರುವುದಿಲ್ಲ. ನನ್ನ ಮಕ್ಕಳು 6ನೇ ಮತ್ತು 4ನೇ ತರಗತಿಗಳಲ್ಲಿ ಕಲಿಯುತ್ತಿದ್ದಾರೆ. ನಾನು ಮಹೀಂದ್ರ ಫೈನಾನ್ಸಿನಿಂದ ಲೋನ್ ತೆಗೆದಿದ್ದು, ಪ್ರತಿ ತಿಂಗಳು ರೂ. 4,157/- ಕಂತು ಕಟ್ಟುತ್ತಿದ್ದೇನೆ. ಹೊಗೆ ವ್ಯಾಪಾರ ಮತ್ತು ಟೆಂಪೊ ಬಾಡಿಗೆಯಿಂದ ಬರುವ ಆದಾಯ ನನ್ನ ಖರ್ಚಿಗೆ ಸಾಕಾಗುತ್ತಿತ್ತು ಎಂದರೆ ಸರಿ. ಜಾನ್ ಡಿಸೋಜಾನನ್ನು ನನ್ನ ಟೆಂಪೊಗೆ ಚಾಲಕನನ್ನಾಗಿ ನೇಮಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜೀವನಕ್ಕೆ ನನ್ನ ಗಳಿಕೆ ಸಾಲದೇ ಇರುವುದರಿಂದ ನಾನು ಅಕ್ರಮ ಸಾರಾಯಿ ಸಾಗಾಟದಲ್ಲಿ ತೊಡಗಿರುತ್ತೇನೆ ಎಂದರೆ ಸರಿಯಲ್ಲ ಎಂದು ಸರ್ಕಾರಿ ಅಭಿಯೋಜಕರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:25.01.2009 ರಂದು ತ್ರಿವೀಲ್ಹರ್ ವಾಹನ ನೊಂದಣಿ ಸಂ:KA-19-B-6315 ಗೂಡ್ಸ್ ಟೆಂಪೋ ಇದರಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಟ ಮಾಡುತ್ತಿದ್ದುದನ್ನು ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ವಲಯ-I ರವರು ಪತ್ತೆಹಚ್ಚಿ, ಪ.ಮಾ.ವ ಸಂ:28/ 08-09, ದಿನಾಂಕ:25.01.2009ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು, ಅಕ್ರಮ ಕಳ್ಳಭಟ್ಟಿ ಸಾಗಾಣಿಕೆಗೆ ಬಳಸಲಾದ ತ್ರಿಚಕ್ರ ವಾಹನ ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ

ಜಪ್ತು ಮಾಡಲ್ಪಟ್ಟಿರುವ ಮಾದರಿಗಳು ರಾಸಾಯನಿಕ ತಜ್ಞರ ವರದಿಯಂತೆ ಕಳ್ಳಭಟ್ಟಿಯೆಂದು ದೃಢಪಟ್ಟಿರುವುದರಿಂದ, ಕರ್ನಾಟಕ ಅಬಕಾರಿ ಕಾಯಿದೆ ಕಲಂ 11,13,14 ರ ಪ್ರಕಾರ ಅಪರಾಧ ಹಾಗೂ 32,34 ಮತ್ತು 38(ಎ) ರ ಪ್ರಕಾರ ಶಿಕ್ಷಾರ್ಹ ಅಪರಾಧ ಎಸಗಿರುವುದರಿಂದ ಹಾಗೂ ವಾಹನದ ಮಾಲೀಕರೇ ಪ್ರಕರಣದ ಮುಖ್ಯ ಅರೋಪಿತ ವ್ಯಕ್ತಿಯಾಗಿರುವುದರಿಂದ ಮತ್ತು ಅವರನ್ನು ಅಪರಾಧ ಸ್ಥಳದಲ್ಲಿಯೇ ದಸ್ತಗಿರಿ ಮಾಡಲಾಗಿರುವುದರಿಂದ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಸ್ಪಷ್ಟವಾಗಿ ಸಾಭೀತಾಗಿರುವುದಾಗಿ ಈ ಪ್ರಾಧಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ಒಂದನೇ ಅಂಶಕ್ಕೆ ಗುಣಾತ್ಮಕವಾಗಿ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ತ್ರಿವೀಲ್ಹರ್ ವಾಹನ ನೊಂದಣಿ ಸಂ: KA-19-B-6315 ಗೂಡ್ಸ್ ಟೆಂಪೋ ಇದರ ಮಾಲೀಕನೆಂದು ಹೇಳಿಕೊಂಡ ಶ್ರೀ.ಜಯಕರ ಶೆಟ್ಟಿ ಎಂಬವರು ತನ್ನ ವಕೀಲರ ಮೂಲಕ ವಾಹನದ ಮಧ್ಯಂತರ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಸದ್ರಿ ಅರ್ಜಿಯ ಪರಿಶೀಲನೆ ನಡೆಸಿ ಹಾಗೂ ಸದ್ರಿ ಅರ್ಜಿಯ ಬಗ್ಗೆ ಪ್ರಕರಣದ ತನಿಖಾಧಿಕಾರಿಗಳಿಂದ ಅಕ್ಷೇಪಣೆಗಳನ್ನು ಕೇಳಲಾಗಿ, ವಾಹನದ ಮಾಲೀಕರೇ ಪ್ರಕರಣದಲ್ಲಿ ಮುಖ್ಯ ಅರೋಪಿತ ವ್ಯಕ್ತಿಯಾಗಿದ್ದು, ವಾಹನವನ್ನು ಮಧ್ಯಂತರ ಬಿಡುಗಡೆ ಮಾಡಿದ್ದಲ್ಲಿ ವಾಹನವನ್ನು ಮತ್ತೆ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಉಪಯೋಗಿಸಿಕೊಳ್ಳುವ ಸಾಧ್ಯತೆಯಿರುವುದೆಂದು ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಅಕ್ಷೇಪಣೆಗಳನ್ನು ಸಲ್ಲಿಸಿರುವುದರಿಂದ ವಾಹನದ ಮಾಲೀಕರು ಮಧ್ಯಂತರ ಬಿಡುಗಡೆಗೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ತಟಸ್ಥಗೊಳಿಸಿ ವಾಹನದ ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸ ಲಾಗಿರುತ್ತದೆ. ಮುಟ್ಟುಗೋಲು ನಡವಳಿ ವಿಚಾರಣೆ ಸಂದರ್ಭದಲ್ಲಿ ಪಿರ್ಯಾದುದಾರರ ಹೇಳಿಕೆಯನ್ನು ಸವಿಸ್ತರವಾಗಿ ಪರಿಶೀಲಿಸಿ ಹಾಗೂ ರಕ್ಷಣಾ ಪರ ಸಾಕ್ಷ್ಯ ನೀಡಿದ ವಾಹನದ ಮಾಲೀಕರು ತನ್ನ ತ್ರಿಚಕ್ರ ವಾಹನವನ್ನು ಜಾನ್ ಡಿಸೋಜ ಎಂಬ ಇನ್ನೊಬ್ಬ ವ್ಯಕ್ತಿಯನ್ನು ಚಾಲಕನ್ನನಾಗಿ ನೇಮಿಸಿ ಬಾಡಿಗೆಗೆ ನೀಡಿರುವುದಾಗಿ ಹಾಗೂ ಸದ್ರಿ ಅಪರಾಧಕ್ಕೂ, ತನಗೂ ಯಾವುದೇ ಸಂಬಂಧವಿಲ್ಲವೆಂದು ತನ್ನ ರಕ್ಷಣಾ ಸಾಕ್ಷಿಯಲ್ಲಿ ತಿಳಿಸಿರುವುದಾದರೂ, ತನ್ನ ವಾಹನಕ್ಕೆ ಚಾಲಕನನ್ನು ನೇಮಿಸುವ ಸಂದರ್ಭದಲ್ಲಿ ಯಾವುದೇ ದಾಖಲೆಗಳನ್ನು ತಯಾರಿಸಿರುವುದಿಲ್ಲ ಹಾಗೂ ವಾಹನವನ್ನು ಯಾವುದೇ ಅಕ್ರಮ ಚಟುವಟಿಕೆಗಳಿಗೆ ಬಳಸಬಾರದೆಂಬ ಮುಂಜಾಗ್ರತಾ ಸೂಚನೆಗಳನ್ನು ನೀಡಿರುವ ಬಗ್ಗೆ ಯಾವುದೇ ಪುರಾವೆಗಳನ್ನು ಒದಗಿಸಿರುವುದಿಲ್ಲ. ಹಾಗೂ ತನ್ನ ಹೇಳಿಕೆಗಳಲ್ಲಿ ಸತ್ಯಾಂಶವಿರುವುದನ್ನು ಸಾಭೀತುಪಡಿಸಲು ಪುರಾವೆಗಳನ್ನು ಒದಗಿಸಿರುವುದಿಲ್ಲ. ಅಲ್ಲದೇ ಪ್ರಕರಣದಲ್ಲಿ ವಾಹನದ ಆರ್.ಸಿ.ಮಾಲೀಕನೇ ಮುಖ್ಯ ಅರೋಪಿತ ವ್ಯಕ್ತಿಯಾಗಿ ಬಂಧಿತನಾಗಿರುವುದರಿಂದ ಸೂಕ್ಷವಾಗಿ ಪ್ರಾಧಿಕಾರವು ಮನಗಂಡು ವಾಹನದ ಮಾಲೀಕರೇ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ತನ್ನ ವಾಹನವನ್ನು ಉದ್ದೇಶಪೂರ್ವಕವಾಗಿ ಬಳಸಿಕೊಂಡು ಪ್ರಕರಣದಲ್ಲಿ ಸಿಲುಕಿಕೊಂಡ ನಂತರದಲ್ಲಿ ತನ್ನ ಅಪರಾಧವನ್ನು ಮರೆಮಾಚುವ ದೃಷ್ಟಿಯಿಂದ ರಕ್ಷಣಾ ಹೇಳಿಕೆಯನ್ನು ನೀಡಲು ಮುಂದಾಗಿರುವುದನ್ನು ಮನಗಂಡು ವಾಹನದಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ಮಾಡಿರುವುದು ಸಾಭೀತಾಗಿರುವುದಾಗಿ ಅಭಿಪ್ರಾಯಪಡಲಾಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅಬಕಾರಿ ಉಪ ನಿರೀಕ್ಷಕರು(1) ಮಂಗಳೂರು ಉತ್ತರ ವಲಯ-1 ಇವರು ವಶಪಡಿಸಿಕೊಂಡ ವಾಹನ ತ್ರಿಚಕ್ರ ವಾಹನ ನೊಂದಣಿ ಸಂ: KA-19-B-6315 ಗೂಡ್ಸ್ ಟೆಂಪೋವನ್ನು ವಶಪಡಿಸಿಕೊಂಡು ಸುಮಾರು 5 ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ಈ ಪ್ರಾಧಿಕಾರದಲ್ಲಿ ನಡೆಸಲಾದ ಸಾಕ್ಷಿ ವಿಚಾರಣೆಯಿಂದ ವಾಹನದಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆ ಮಾಡಿರುವುದು ಸಾಭೀತಾಗಿರುವುದರಿಂದ ತ್ರಿಚಕ್ರ ವಾಹನ ನೊಂದಣಿ ಸಂ: KA-19-B-6315 ಟೆಂಪೋವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43 ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ವಲಯ-1 ಇವರ ಪ್ರ.ಮಾ.ವ ಸಂ:28/2008-09, ದಿನಾಂಕ:25.01.2009 ರಲ್ಲಿ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿದ ತ್ರಿಚಕ ವಾಹನ ನೊಂದಣಿ ಸಂ:KA-19-B-6315 ಗೂಡ್ಸ್ ಟೆಂಪೋ (ಚಾಸೀಸ್ ಸಂಖ್ಯೆ: T700001 39A06 ಮತ್ತು ಇಂಜಿನ್ ಸಂಖ್ಯೆ:D51000341) ಗೂಡ್ಸ್ ಟೆಂಪೋವನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಎ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:22.07.2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹ್ಮಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ–I: ಶ್ರೀ ವಿನೋದ್ ಕುಮಾರ್, ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ–I, ಮಂಗಳೂರು.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ–I	: ಮಹಜರು ಪತಿ
ನಿಶಾನೆ ಪಿ–Iಎ	: ಅದರ ಮೇಲಿನ ಸಹಿ
ನಿಶಾನೆ ಪಿ–2	: ಪ್ರಥಮ ವರ್ತಮಾನ ವರದಿ
ನಿಶಾನೆ ಪಿ–2ಎ	: ಅದರ ಮೇಲಿನ ಸಹಿ
ನಿಶಾನೆ ಪಿ–3	: ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–4	: ಬಿ ಎಕ್ಸ್‌ಟ್ರಾಕ್ಟ್ ವರದಿ
ನಿಶಾನೆ ಪಿ–5	: ತನಿಖಾ ವರದಿ
ನಿಶಾನೆ ಪಿ–5ಎ	: ಅದರ ಮೇಲಿನ ಸಹಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:

ರಕ್ಷಣಾ ಸಾಕ್ಷಿದಾರರು: ಜಯಕರ ಆರ್. ಶೆಟ್ಟಿ ಬಿನ್ ರಾಮಣ್ಣ ಶೆಟ್ಟಿ, ಜ್ಯೋತಿನಗರ, ಕುಂಜತ್ತಬೈಲ್, ಮಂಗಳೂರು ತಾಲ್ಲೂಕು.

ಅರ್ಜಿದಾರರ ಹೇಳಿಕೆ: – ಯಾವುದು ಇಲ್ಲ –

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು: – ಯಾವುದು ಇಲ್ಲ–

ನೂರ್ ಮಹ್ಮದ್ ಹುಸೇನ್

ಪಿ.ಆರ್.737

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/362/ಡಿಟಿಸಿಆರ್/2008–09, ದಿನಾಂಕ:17ನೇ ಜುಲೈ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ಉಪ ನಿರೀಕ್ಷಕರು,
ಮಂಗಳೂರು ಉಪ ವಿಭಾಗ–1, ಮಂಗಳೂರು.

ಆರೋಪಿ:

ಮ್ಯಾಕ್ಸಿಯಂ ಡಿ.ಸಿಲ್ವಾ.ಬಿನ್:ಲೂಯಿಸ್ ಡಿಸಿಲ್ವಾ, ಮನೆ ಸಂ:4/1 ಬೈತುರ್ಲಿ, ಕುಡುಪು ಗಾಮ, ಮಂಗಳೂರು ತಾಲ್ಲೂಕು, ದ.ಕ ಜಿಲ್ಲೆ.

ವಾಹನ ಮಾಲೀಕರು:

ಶ್ರೀ ನಜೀರ್ ಅಹಮ್ಮದ್, ಬಿನ್ ಅಬೂಬಕ್ಕರ್, ಮನೆ ಸಂ:10–24/10/52 /ಸಿ, ಬಂದರು, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪವಿಭಾಗ–1, ಮಂಗಳೂರು ಇವರು ಸಿಬ್ಬಂದಿಯವರೊಂದಿಗೆ ಮಂಗಳೂರು ತಾಲ್ಲೂಕು ಕುಡುಪು ಗ್ರಾಮದ ಬೈತುರ್ಲಿ ಎಂಬಲ್ಲಿರುವ ಮ್ಯಾಕ್ಸಿಯಂ ಡಿಸಿಲ್ವಾ ಎಂಬವರ ಮನೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿಯ ಮೇರೆಗೆ ಸದ್ರಿ ಮನೆಗೆ ದಾಳಿ ನಡೆಸಿದಾಗ ಮನೆಯ ಎದುರು ಅಂಗಳದಲ್ಲಿ ನಿಲ್ಲಿಸಲಾಗಿದ್ದ KA-21-E-8107 ನಂಬರ್‌ದ ಸ್ಕೂಟರ್‌ನಿಂದ ಒಬ್ಬ ವ್ಯಕ್ತಿಯು ಒಂದು ನೈಲಾನ್ ಚೀಲದ ಕಟ್ಟನ್ನು ತೆಗೆದು ಮನೆಯ ಒಳಗೆ ಓಡಿ ಹೋಗುವುದನ್ನು ಗಮನಿಸಿ, ಅನುಮಾನಗೊಂಡು, ಮನೆಯ ಒಳಗೆ ಓಡಿ ಹೋದ ವ್ಯಕ್ತಿಯನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಮ್ಯಾಕ್ಸಿಯಂ ಡಿಸಿಲ್ವಾ.ಬಿನ್:ಲೂಯಿಸ್ ಡಿಸಿಲ್ವಾ, ಮನೆ ಸಂ.4/1 ಬೈತುರ್ಲಿ, ಕುಡುಪುಗ್ರಾಮ, ಮಂಗಳೂರು ತಾಲೂಕು,ದ.ಕ ಜಿಲ್ಲೆ ಎಂದು ತಿಳಿಸಿದನು. ನಂತರ ಮಾಹಿತಿಯಂತೆ ಮನೆಯನ್ನು ಶೋಧಿಸಲು ತೀರ್ಮಾನಿಸಿ, ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದೇ ಇರುವ ಕಾರಣ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 54 ರಲ್ಲಿ ದತ್ತವಾದ ಅಧಿಕಾರದ ಪ್ರಕಾರ ಸರ್ಚ್ ವಾರೆಂಟನ್ನು ತಯಾರಿಸಿ,

ಮನೆಯನ್ನು ಶೋಧಿಸಿದಾಗ ಈ ಕೆಳಕಂಡಂತೆ ಅಕ್ರಮ ಮದ್ಯ ಮತ್ತು ಬಿಯರ್ ದಾಸ್ತಾನು ಇರುವುದನ್ನು ಪತ್ತೆ ಹಚ್ಚಿ, ಸದ್ರಿ ಮದ್ಯ ಮತ್ತು ಬೀರನ್ನು ಹೊಂದಿರಲು ಯಾವುದಾದರೂ ದಾಖಲೆಗಳು ಇದೆಯೋ ಎಂದು ಆ ವ್ಯಕ್ತಿಯನ್ನು ವಿಚಾರಿಸಲಾಗಿ ಅದು ಯಾವುದೂ ಇಲ್ಲವೆಂದು ಆತನು ತಿಳಿಸಿದ್ದು, ಹಾಗೂ ಸದ್ರಿ ಮದ್ಯ/ಬೀರನ್ನು ಚುನಾವಣಾ ಸಮಯದ ಮದ್ಯ ಮುಕ್ತ ದಿನಗಳ ಸಂದರ್ಭಗಳಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಹೊಂದಿರುವುದಾಗಿ ಸದ್ರಿ ವ್ಯಕ್ತಿಯು ತಿಳಿಸಿದನು. ಇದು ಅಬಕಾರಿ ಕಾಯಿದೆ ಯಂತೆ ಅಪರಾದವೆಂದು ತಿಳಿಸಿ, ಸ್ಕೂಟರ್ ಮತ್ತು 41.250 ಲೀ ನಕಲಿ ಮದ್ಯ ಮತ್ತು 24.660 ಲೀಟರು ಭಾ.ತ.ಮ ಹಾಗೂ 10.560 ಲೀಟರು ಬಿಯರನ್ನು ಇಲಾಖಾ ಪಶಕ್ಕೆ ತೆಗೆದುಕೊಂಡು ಆತನನ್ನು ದಸ್ತಗಿರಿ ಮಾಡಿ, ನಂತರ ಸ್ಕೂಟರಿನಲ್ಲಿ ದೊರೆತ ಮದ್ಯದಿಂದ 28 ಬಾಟಲಿಗಳು ಹಾಗೂ ಮನೆಯ ಒಳಗಡೆ ದೊರೆತ ಮದ್ಯ ಹಾಗೂ ಬಿಯರಿನಿಂದ ತಲಾ ಬ್ರಾಂಡುವಾರು ಮತ್ತು ಗಾತ್ರವಾರು ಒಂದೊಂದು ಬಾಟಲಿಗಳಂತೆ ಒಟ್ಟು 14 ಬಾಟಲಿಗಳನ್ನು ಈ ರೀತಿಯಾಗಿ ಒಟ್ಟು 44 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಇಲಾಖಾ ಸೀಲ್‌ನಿಂದ ಸೀಲ್ ಮಾಡಿ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 13, ಮತ್ತು 14 ರಂತೆ ಅಪರಾಧವಾಗಿದ್ದು, ಕಲಂ 32 ಮತ್ತು 38(ಎ) ರಂತೆ ಶಿಕ್ಷಾರ್ಹವಾಗಿರುವುದರಿಂದ, ದಸ್ತಗಿರಿಯಾದ ಆರೋಪಿಯ ವಿರುದ್ದ ತಕ್ಷೀರು ಸಂ:3/2009–10 ದಿನಾಂಕ:25.04.2009 ರಂತೆ ಪ್ರಕರಣವನ್ನು ನೋಂದಾಯಿಸಿ ಪ್ರಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಮತ್ತು ಅರೋಪಿಯನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಒಪ್ಪಿಸಿರುತ್ತಾರೆ.

ಜಪ್ತುಪಡಿಸಿಕೊಂಡ ಸೊತ್ತುಗಳು

1) ಸ್ಕೂಟರ್ ನೊಂದಣಿ ಸಂ:KA-21-E-8107
2) ನಾದಾನ್ ವಿಸ್ಕಿ ಎಂದು ಲೇಬಲ್ ಹಚ್ಚಿದ 750 ಮಿ.ಲಿಯ 35 ಬಾಟಲಿಗಳು
3) ಸ್ಮಾಲ್ ಷೀಟರ್ ಎಂದು ಲೇಬಲ್ ಹಚ್ಚಿದ 750 ಮಿ.ಲಿಯ 20 ಬಾಟಲಿಗಳು
4) ಗೋಲ್ಕೊಂಡಾ ರೂಬಿ ವೈನ್ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 15 ಬಾಟಲಿಗಳು
5) ಆಫೀಸರ್ಸ್ ಚಾಯ್ಸ್ ಎಂದು ಲೇಬಲ್ ಹಚ್ಚಿದ180 ಮಿ.ಲಿಯ 18 ಬಾಟಲಿಗಳು
6) ವಿಂಡ್ಸರ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 22 ಬಾಟಲಿಗಳು
7) ಪ್ರೆಸ್ಟೀಜ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 8 ಬಾಟಲಿಗಳು
8) ಬಾಸ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 12ಬಾಟಲಿಗಳು
9) ಒರಿಜಿನಲ್ ಚಾಯ್ಸ್ ವಿಸ್ಕಿ ಎಂದು ಲೇಬಲ್ ಹಚ್ಚಿದ 90 ಮಿ.ಲಿಯ 20 ಬಾಟಲಿಗಳು
10) ಓಲ್ಡ್ ಮಾಂಕ್ ರಮ್ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 7 ಬಾಟಲಿಗಳು
11) ಬ್ಯಾಗ್ ಪೈಪರ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 5 ಪ್ಯಾಕೆಟ್‌ಗಳು
12) ಡಿ.ಎಸ್.ಪಿ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 4 ಪ್ಯಾಕೆಟ್‌ಗಳು
13) ಹೋಡೇಸ್ ಎಕ್ಸ್ ರಮ್ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 8 ಬಾಟಲಿಗಳು
14) ಮೈಸೂರ್ ಲ್ಯಾನ್ಸರ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 28 ಬಾಟಲಿಗಳು
15) ಯು.ಬಿ ಬಿಯರ್ ಎಂದು ಲೇಬಲ್ ಹಚ್ಚಿದ 330 ಮಿ.ಲಿಯ 14 ಬಾಟಲಿಗಳು
16) ಕಿಂಗ್ ಫಿಷರ್ ಬಿಯರ್ ಎಂದು ಲೇಬಲ್ ಹಚ್ಚಿದ 330 ಮಿ.ಲಿಯ 18 ಬಾಟಲಿಗಳು

ಪ್ರಕರಣದ ತನಿಖೆಯನ್ನು ಮುಂದುವರಿಸಿ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗ–1, ಮಂಗಳೂರು ಇವರು ಜಪ್ತುಪಡಿಸಿಕೊಂಡ ಮದ್ಯ ಮತ್ತು ಬಿಯರಿನ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ,ಸಹಾಯಕ ರಾಸಾಯನಿಕ ವಿಶ್ಲೇಷಕರು,ಮಂಗಳೂರು ವಿಭಾಗ ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂ:ಇ–213–42, ದಿನಾಂಕ:19.06.2009ರ ಪ್ರತಿಯನ್ನು ದಿನಾಂಕ:23.06.2009ರ ವರದಿಯೊಂದಿಗೆ ಲಗತ್ತಿಸಿ ಪ್ರಾಧಿಕಾರಕ್ಕೆ ಕಳುಹಿಸಿಕೊಡುತ್ತಾ ಸದ್ರಿ ಜಪ್ತಾದ ಮದ್ಯದಲ್ಲಿ ಮದ್ಯಸಾರದ ಪ್ರಮಾಣ 15.5% ದಿಂದ 42.0% ದ ವರೆಗೆ ಇರುವುದಾಗಿ ಹಾಗೂ ಬಿಯರಿನಲ್ಲಿ ಮದ್ಯಸಾರದ ಪ್ರಮಾಣ 4.75% ಇರುವುದಾಗಿ ರಾಸಾಯನಿಕ ವಿಶ್ಲೇಷಕರು ದೃಡೀಕರಿಸಿ ಪತ್ರ ನೀಡಿರುತ್ತಾರೆ ಎಂದು ತಿಳಿಸಿ ಸದ್ರಿ ಮದ್ಯ ಹಾಗೂ ಬೀರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗ–1, ಮಂಗಳೂರು ಇವರು ಜಪ್ತುಪಡಿಸಿದ ವಾಹನ ಸಂಖ್ಯೆ: KA-21-E-8107 ರ ಸ್ಕೂಟರಿನ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ಪಡೆದು ದಿನಾಂಕ:06.06.2009 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸಾರಿಗೆ ಅಧಿಕಾರಿಗಳು ಸಲ್ಲಿಸಿದ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಸಂಖ್ಯೆ: KA-21-E-8107 ಬಜಾಜ್ ಆಟೋ ಲಿಮಿಟೆಡ್ ಕಂಪೆನಿಯಲ್ಲಿ ನಿರ್ಮಿತವಾಗಿದ್ದು, ಇದರ ಚಾಸೀಸ್ ನಂ: 06F BED 94126 ಮತ್ತು ಇಂಜಿನ್ ನಂ: 35 MBED 43538 ಆಗಿರುತ್ತದೆ.

ಇದರ ನೋಂದಣಿ ಮಾಲೀಕರಾದ ಶ್ರೀ ನಜೀರ್ ಅಹಮ್ಮದ್, ಬಿನ್: ಅಬೂಬಕ್ಕರ್, ಮನೆ ಸಂ:10-24/10/52/ಸಿ, ಬಂದರು, ಮಂಗಳೂರು ನಗರ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ನೀಡಿರುವ ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಶ್ರೀ ನಜೀರ್ ಅಹಮ್ಮದ್, ಬಿನ್ ಅಬೂಬಕ್ಕರ್, ಮನೆ ಸಂ:10-24/10/52/ಸಿ, ಬಂದರು, ಮಂಗಳೂರು ನಗರ ಇವರಿಗೆ ಮತ್ತು ಪ್ರಕರಣದ ಆರೋಪಿ ಮ್ಯಾಕ್ಸಿಯಂ ಡಿಸಿಲ್ವಾ ಇವರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸನ್ನು ದಿನಾಂಕ:08.06.2009 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸು ವಾಹನದ ಮಾಲೀಕರಿಗೆ ದಿನಾಂಕ:16.06.2009 ರಂದು ಜಾರಿಯಾಗಿದ್ದು, ಸದ್ರಿಯವರು ದಿನಾಂಕ:18.06.2009 ರಂದು ಈ ಪ್ರಾದಿಕಾರಕ್ಕೆ ಉತ್ತರವನ್ನು ಸಲ್ಲಿಸುತ್ತಾ ಸದ್ರಿ ವಾಹನ ಸ್ಕೂಟರ್ ಸಂ: KA-21-E-8107ನ್ನು ಸುಮಾರು 6 ತಿಂಗಳ ಹಿಂದೆಯೇ ಪ್ರಕರಣದ ಆರೋಪಿತ ವ್ಯಕ್ತಿಯಾಗಿರುವ ಮ್ಯಾಕ್ಸಿಯಂ ಡಿಸಿಲ್ವಾ, ಬಿನ್ ಲೂಯಿಸ್ ಡಿಸಿಲ್ವಾ ಇವರಿಗೆ ರೂ.2,500/- ಮೌಲ್ಯಕ್ಕೆ ಮಾರಾಟ ಮಾಡಿ ನೊಂದಣಿ ವರ್ಗಾವಣೆ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳಿಗೆ ಸಹಿ ಮಾಡಿ ನೀಡಿರುತ್ತೇನೆ. ಕಾರಣ ಸದ್ರಿ ವಾಹನಕ್ಕೂ ನನಗೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿ, ವಾಹನದ ಮೇಲೆ ಕಾನೂನು ಕ್ರಮ ಕೈಗೊಳ್ಳುವರೇ ತನ್ನಿಂದ ಅಭ್ಯಂತರವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಆರೋಪಿತ ವ್ಯಕ್ತಿಗೆ ಸದ್ರಿ ನೋಟಿಸು ದಿನಾಂಕ:20.06.2009ರಂದು ಜ್ಯಾರಿಯಾಗಿದ್ದು, ಸದರಿ ನೋಟೀಸಿಗೆ ಅವರಿಂದ ಯಾವುದೇ ಉತ್ತರ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗ-1, ಮಂಗಳೂರು ಇವರ ತನಿಖಾ ವರದಿ ಸಂಖ್ಯೆ:ಎಂಎಸ್ ಡಿ-1 :ಎಸ್ಐಇ:ಸಿಆರ್ಎಂ:3:2009-10 ದಿನಾಂಕ:27.06.2009 ರ ತನಿಖಾ ವರದಿಯಲ್ಲಿ ಪ್ರಕರಣದಲ್ಲಿ ಜಪ್ತಾದ ವಾಹನದ ಬಿಡುಗಡೆಗಾಗಿ ಯಾವೊಬ್ಬರು ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ಜಪ್ತು ಪಡಿಸಲಾದ ವಾಹನ, ಮದ್ಯ ಹಾಗೂ ಬೀರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ಮತ್ತು ವಾಹನ ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಈ ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:25.04.2009 ರಂದು ಸ್ಕೂಟರ್ ಸಂ: KA-21-E-8107ನ್ನು ಅಕ್ರಮವಾಗಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಆರೋಪಿಯು ಮದ್ಯ ಮತ್ತು ಬೀರ್ ಸಾಗಾಣಿಕೆ ಮಾಡುವುದಕ್ಕೆ ಬಳಸಿರುವುದನ್ನು ಪತ್ತೆ ಹಚ್ಚಿ, ಸದ್ರಿ ವಾಹನವನ್ನು ಮತ್ತು ಅಕ್ರಮ ಸೊತ್ತುಗಳನ್ನು ಸ್ಥಳ ಮಹಜರು ಮುಖೇನ ಸ್ವಾಧೀನಪಡಿಸಿದ್ದು ಹಾಗೂ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯ ಮತ್ತು ಬೀರ್ ಎಂದು ದೃಢಪಟ್ಟಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ ಅಭಿಯೋಗದ ಪರ ಪ್ರಕರಣ ದಾಖಲು ಮಾಡಿರುವ ಒರ್ವ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಯ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗದೇ ಇದ್ದುದರಿಂದ ಪ್ರತಿರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಗದ ಪರ ಸಲ್ಲಿಸಿರುವ ಸಾಕ್ಷಾಧಾರಗಳಿಂದ ಈಕೆಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:25.04.2009 ರಂದು KA-21-E-8107 ಸ್ಕೂಟರ್ ಇದನ್ನು ಅಕ್ರಮವಾಗಿ ನಕಲಿ ಮದ್ಯ, ಭಾ.ತ.ಮದ್ಯ ಮತ್ತು ಬಿಯರನ್ನು ಸಾಗಾಣಿಕೆ ಮಾಡಲು ಬಳಸಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನದ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ನಕಲಿ ಮದ್ಯ ,ಭಾ.ತ. ಮದ್ಯ ಮತ್ತು ಬಿಯರ್ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:

ಶ್ರೀ ಕೆ. ಮೋಹನ್ ರಾವ್, ಅಉ.ನಿ ಮಂಗಳೂರು ಉಪ ವಿಭಾಗ-1 ಇವರು ದಿನಾಂಕ:15.07.2009ರಂದು ಸಾಕ್ಷ ನೀಡುತ್ತಾ ತಾನು ಮಂಗಳೂರು ಉಪ ವಿಭಾಗ-1 ರಲ್ಲಿ ಎಪ್ರಿಲ್-2008 ರಿಂದ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ:25.04.2009ರಂದು ಮಂಗಳೂರು ತಾಲೂಕು ಕುಡುಪು ಗ್ರಾಮದ ಬೈತುರ್ಲಿ ಎಂಬಲ್ಲಿರುವ ಮ್ಯಾಕಿಯಂ ಡಿಸಿಲ್ವಾ ಎಂಬವರು ಮನೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ದೊರೆತ ಖಚಿತ ವರ್ತಮಾನದ ಮೇರೆಗೆ ಸಿಬ್ಬಂಧಿಯವರೊಂದಿಗೆ ಸರ್ಕಾರಿ ವಾಹನ ಸಂ:KA-19G-298ರಲ್ಲಿ ಸದ್ರಿ ಕುಲಶೇಖರದಿಂದ ಕುಡುಪಿಗೆ ಹೋಗುಫ ಮುಖ್ಯ ರಸ್ತೆಯ ಬೈರ್ತುಲಿ ಎಂಬಲ್ಲಿ ಮಾಹಿತಿ ಇರುವ ಮನೆಯ ಎದುರು ಭಾಗದಲ್ಲಿ ವಾಹನವನ್ನು ನಿಲ್ಲಿಸಿ ಸದ್ರಿ ಮನೆಯ ಅಂಗಳಕ್ಕೆ ಹೋದಾಗ ಅಂಗಳದಲ್ಲಿ ಒಂದು ಸ್ಕೂಟರ್ ನಿಂತಿದ್ದು, ಅದರ ಪಕ್ಕದಲ್ಲಿ ಓರ್ವ ವ್ಯಕ್ತಿಯು ಸ್ಕೂಟರಿನಿಂದ ನೈಲಾನ್ ಚೀಲದ ಕಟ್ಟನ್ನು ತೆಗೆದುಕೊಂಡು ಮನೆಯ ಒಳಗೆ ಓಡಿಹೋದನು. ಸಂಶಯಗೊಂಡು ನಾವುಗಳು ಮನೆಯ ಎದುರಿಗೆ ಮನೆಯಲ್ಲಿ ಯಾರಿದ್ದಾರೆ ಎಂದು ಕರೆದಾಗ ಆ ವ್ಯಕ್ತಿಯು ಬಾಗಿಲು ತೆಗೆದು ಹೊರಗೆ ಬಂದನು. ವ್ಯಕ್ತಿಯ ಹೆಸರು ವಿಳಾಸ ವಿಚಾರಿಸಿದಾಗ ಮ್ಯಾಕಿಯಂ ಡಿಸಿಲ್ವಾ ಬಿನ್ ಲೂಯಿಸ್ ಡಿಸಿಲ್ವಾ, ಪ್ರಾಯ: 48 ವರ್ಷ, ಬೈರ್ತುಲಿ ಮನೆ ಸಂ:1-4/1ರ ನಿವಾಸಿಯೆಂದು ತಿಳಿಸಿದನು. ನಾವುಗಳು ಬಂದ ವಿಚಾರವನ್ನು ಆತನಿಗೆ ತಿಳಿಸಿ ಅತನ ಮನೆ ಮತ್ತು ಸ್ಕೂಟರನ್ನು ಶೋಧಿಸಬೇಕೆಂದು ತಿಳಿಸಿದೆವು. ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆಯಲು ಸಮಯಾವಕಾಶವಿಲ್ಲದೇ ಇರುವ ಕಾರಣ ಕಾ.ಕಾಯಿದೆ 1965ರ ಕಲಂ 54ರಲ್ಲಿ ದತ್ತವಾದ ಅಧಿಕಾರದ ಪ್ರಕಾರ ಶೋಧನಾ ಸಮುಚಿತ ದಾಖಲೆಯನ್ನು ಮಾಡಿ ಹಾಜರಿದ್ದ ಅರೋಪಿಯ ಸಮಕ್ಷಮದಲ್ಲಿ ಸದ್ರಿ ಮನೆಯ ಅಂಗಳದಲ್ಲಿದ್ದ ಸ್ಕೂಟರನ್ನು ಶೋಧಿಸಲಾಗಿ ಸ್ಕೂಟರಿನ ಎದುರು ಬದಿಯಲ್ಲಿ ಕಾಲು ಇಡುವ ಜಾಗದ ಮೇಲಿದ್ದ ಬಾಕ್ಸ್‌ನ್ನು ತೆರೆದು ನೋಡಿದಾಗ ಅದರಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮೈಸೂರು ಲ್ಯಾನ್ಸರ್ ವಿಸ್ಕಿ ಎಂಬ ಲೇಬಲ್ ಹಚ್ಚಿರುವ 180 ಮಿಲಿಯ 28 ಬಾಟಲಿಗಳು ಇರುವುದು ಕಂಡು ಬಂದವು. ಈ ರೀತಿ ಮದ್ಯ ಹೊಂದಲು ಯಾವುದೇ ರಹದಾರಿ ಪತ್ರವಿದೆಯೇ ಎಂದು ಆತನನ್ನು ವಿಚಾರಿಸಲಾಗಿ ಅದು ಯಾವುದು ಇಲ್ಲವೆಂದು ತಿಳಿಸಿದನು. ಹಾಗೂ ಮನೆಯ ಒಳಗೂ ಸ್ವಲ್ಪ ಮದ್ಯದ ಬಾಟಲಿಗಳು ಇರುವುದಾಗಿ ತಿಳಿಸಿದನು. ಆ ಪ್ರಕಾರ ಮನೆಯ ಒಳಗೆ ಪ್ರವೇಶಿಸಲಾಗಿ ಮನೆಯ ಹಾಲ್‌ನ ಮೂಲೆಯಲ್ಲಿ ಗೋಣಿಚೀಲ ಮುಚ್ಚಿದ ಸ್ಥಿತಿಯಲ್ಲಿ ಕೆಲವು ಪ್ಲಾಸ್ಟಿಕ್ ಚೀಲದ ಕಟ್ಟುಗಳಿದ್ದು ಅವುಗಳನ್ನು ಪರಿಶೀಲಿಸಲಾಗಿ ಈಕೆಳಕಂಡಂತೆ ಮದ್ಯದ ಬಾಟಲಿಗಳು ಇರುವುದು ಕಂಡುಬಂತು.

1) ನಾದಾನ್ ವಿಸ್ಕಿ ಎಂದು ಲೇಬಲ್ ಹಚ್ಚಿದ 750 ಮಿ.ಲಿಯ 35 ಬಾಟಲಿಗಳು
2) ಸ್ಮಾಲ್ ಷೀಟರ್ ಎಂದು ಲೇಬಲ್ ಹಚ್ಚಿದ 750 ಮಿ.ಲಿಯ 20 ಬಾಟಲಿಗಳು
3) ಗೋಲ್ಕೊಂಡಾ ರೂಬಿ ವೈನ್ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 15 ಬಾಟಲಿಗಳು
4) ಆಫೀಸರ್ಸ್ ಚಾಯ್ಸ್ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 18 ಬಾಟಲಿಗಳು
5) ವಿಂಡ್ಸರ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 22 ಬಾಟಲಿಗಳು
6) ಪ್ರೆಸ್ಟೀಜ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 8 ಬಾಟಲಿಗಳು
7) ಬಾಸ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 12 ಬಾಟಲಿಗಳು
8) ಒರಿಜಿನಲ್ ಚಾಯ್ಸ್ ವಿಸ್ಕಿ ಎಂದು ಲೇಬಲ್ ಹಚ್ಚಿದ 90 ಮಿ.ಲಿಯ 20 ಬಾಟಲಿಗಳು
9) ಓಲ್ಡ್ ಮಾಂಕ್ ರಮ್ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 7 ಬಾಟಲಿಗಳು
10) ಬ್ಯಾಗ್ ಪೈಪರ್ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 5 ಪ್ಯಾಕೆಟ್‌ಗಳು
11) ಡಿ.ಎಸ್.ಪಿ ವಿಸ್ಕಿ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 4 ಪ್ಯಾಕೆಟ್‌ಗಳು
12) ಖೋಡೇಸ್ ಎಕ್ಸ್ ರಮ್ ಎಂದು ಲೇಬಲ್ ಹಚ್ಚಿದ 180 ಮಿ.ಲಿಯ 8 ಬಾಟಲಿಗಳು
13) ಯು.ಬಿ ಬಿಯರ್ ಎಂದು ಲೇಬಲ್ ಹಚ್ಚಿದ 330 ಮಿ.ಲಿಯ 14 ಬಾಟಲಿಗಳು
14) ಕಿಂಗ್ ಫಿಷರ್ ಬಿಯರ್ ಎಂದು ಲೇಬಲ್ ಹಚ್ಚಿದ 330 ಮಿ.ಲಿಯ 18 ಬಾಟಲಿಗಳು

ಮೇಲಿನ ಮದ್ಯಗಳಲ್ಲಿ ಐದು ಕಟ್ಟುಗಳು ಮನೆಯಲ್ಲಿದ್ದವು, ಸ್ಥಳೀಯ ಸಾಕ್ಷಿಗಳಿಗಾಗಿ ಅಕ್ಕ ಪಕ್ಕದವರನ್ನು ವಿಚಾರಿಸಲಾಗಿ ಯಾರೂ ಮುಂದೆ ಬಾರದ ಕಾರಣ ಹಾಜರಿದ್ದ ಇಲಾಖಾ ಸಿಬ್ಬಂಧಿಗಳನ್ನೇ ಪಂಚರನ್ನಾಗಿರಿಸಿಕೊಂಡು ಸ್ಥಳ ಮಹಜರು ನಡೆಸಿ ಅಂಗಳದಲ್ಲಿದ್ದ ಸ್ಕೂಟರನ್ನು ಪರಿಶೀಲಿಸಲಾಗಿ ಅದು ನೀಲಿ ಬಣ್ಣದ ಬಜಾಜ್ ಚೇತಕ್ ಸ್ಕೂಟರಾಗಿದ್ದು, ನೊಂದಣಿ ಸಂ:KA-21-E-8107 ಆಗಿದ್ದು, ಸ್ಕೂಟರಿನಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ. ಹಾಗೂ ಸ್ಕೂಟರಿನಲ್ಲಿ ದೊರೆತ ಮೈಸೂರು ಲ್ಯಾನ್ಸರ್ ವಿಸ್ಕಿಯ 180 ಮಿಲಿಯ 28 ಬಾಟಲಿಗಳನ್ನು ರಾಸಯನಿಕ ಪರೀಕ್ಷೆಗಾಗಿ ತೆಗೆದು ಬಟ್ಟೆ ದಾರ ಕಟ್ಟಿ ಇಲಾಖಾ ಸೀಲು ಮಾಡಲಾಯಿತು. ನಂತರ ಮನೆಯ ಒಳಗಿದ್ದ ಮದ್ಯ ಹಾಗೂ ಬಿಯರಿನಿಂದ ತಲಾ ಒಂದೊಂದರಂತೆ 16 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದು ಇಲಾಖಾ ಸೀಲು ಮಾಡಲಾಯಿತು. ಮಾದರಿ ಮೊಹರನ್ನು ತಯಾರಿಸಿ ಮೇಲೆ ತಿಳಿಸಿದ

ವಿಳಾಸದಂತೆ ಆರೋಪಿಯ ಹೆಸರನ್ನು ಗುರುತು ಚೀಟಿ ತಯಾರಿಸಿ ಎಲ್ಲಾ ಮಾದರಿ ಸೀಸೆಗಳಿಗೆ ಮತ್ತು ಮದ್ಯದ ಕಟ್ಟುಗಳಿಗೆ ಅಂಟಿಸಲಾಯಿತು. ನಂತರ ಮದ್ಯವನ್ನು ಎಲ್ಲಿಂದ ಯಾತಕ್ಕಾಗಿ ತಂದೆ ಎಂದು ವ್ಯಕ್ತಿ ಯನ್ನು ವಿಚಾರಿಸಲಾಗಿ ಚುನಾವಣಾ ಸಂದರ್ಭದಲ್ಲಿ ಎಲ್ಲಾ ಮದ್ಯದ ಅಂಗಡಿಗಳನ್ನು ಮುಚ್ಚಿರುವುದರಿಂದ ಸದ್ರಿ ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತಂದಿಟ್ಟಿರುವುದಾಗಿ ತಿಳಿಸಿದನು. ಗೋವಾ ರಾಜ್ಯದಿಂದ ಮದ್ಯವನ್ನು ತಾನೇ ತಂದಿರುವುದಾಗಿ ತಿಳಿಸಿದನು. ಸದ್ರಿ ಸ್ಕೂಟರ್ ತನ್ನ ಗೆಳೆಯನದ್ದಾಗಿದ್ದು ಮದ್ಯ ಸಾಗಾಣಿಕೆ ಮಾಡಲು ಅದನ್ನು ಉಪಯೋಗಿಸುತ್ತಿದ್ದೆನು ಎಂದು ತಿಳಿಸಿದನು. ಮಹಜರಿನ ಆದಾರದಲ್ಲಿ ದೊರೆತ ಸೊತ್ತುಗಳನ್ನು ವಶಪಡಿಸಿಕೊಂಡು ಅರೋಪಿಗಳನ್ನು ದಸ್ತಗಿರಿ ಮಾಡಲಾಯಿತು.ಮಹಜರು ಪ್ರತಿಯನ್ನು ನೋಡಿ ಅದನ್ನು ನಿಶಾನೆ ಪಿ-1 ಎಂದೂ ಅದರ ಮೇಲಿನ ಸಹಿಯನ್ನು ನಿಶಾನೆ ಪಿ-1 ಎ ಎಂದೂ ಗುರುತಿಸಲಾಯಿತು. ನಂತರ ಕಛೇರಿಗೆ ಬಂದು ಕ್ರೈಂ ಸಂ:3/2009-10ರಂತೆ ಮೊಕದ್ದಮೆ ದಾಖಲಿಸಿಕೊಂಡು ಅರೋಪಿಯನ್ನು ಮತ್ತು ದಾಖಲೆಗಳನ್ನು ಮಾನ್ಯ ಜೆ.ಎಂ.ಎಫ್.ಸಿ. 3ನೇ ನ್ಯಾಯಾಲಯ, ಮಂಗಳೂರು ಇವರ ಮುಂದೆ ಹಾಜರುಪಡಿಸಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಜಿಲ್ಲಾ ಕಾರಗೃಹಕ್ಕೆ ಹಸ್ತಾಂತರಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದ ಪ್ರಥಮ ಮಾಹಿತಿ ವರದಿಯನ್ನು ನೋಡಿ ನಿಶಾನೆ ಪಿ-2 ಎಂದೂ,ಅದರ ಮೇಲಿನ ಸಹಿಯನ್ನು ನಿಶಾನೆ ಪಿ-2ಎ ಎಂದೂ ಗುರುತಿಸಲಾಯಿತು. ಪ್ರಕರಣದ ತನಿಖೆಯನ್ನು ಕೈಗೊಂಡು ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿಯನ್ನು ಕೋರಿ ಪ್ರಾ.ಸಾ.ಅ ಮಂಗಳೂರು ಇವರಿಗೆ ಪತ್ರ ಬರೆದು ದಿನಾಂಕ:03.02.2009ರಂದು ಬಿ ಎಕ್ಸ್ ಟ್ರಾಕ್ಟ್ ವರದಿ ಪಡೆಯಲಾಯಿತು. ಸದ್ರಿ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ಶ್ರೀ ನಜೀರ್ ಅಹ್ಮದ್ ಬಿನ್:ಅಬುಬ್ಬಕರ್, ಹೌಸ್ ನಂ:10-24/10/52/C ಬಂದರು ಮಂಗಳೂರು ಇವರು ವಾಹನದ ಮಾಲಿಕರೆಂದು ತಿಳಿದುಬಂತು. ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಅದನ್ನು ನೋಡಿ ನಿಶಾನೆ ಪಿ-3 ಎಂದೂ ಗುರುತಿಸಲಾಯಿತು. ಮದ್ಯದ ಮಾದರಿಗಳನ್ನು ಜರ್ನಾಧನ ಅಬಕಾರಿ ರಕ್ಷಕ ಇವರ ಮುಖಾಂತರ ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಲ್ಲಿಗೆ ಕಳುಹಿಸಿ ದಿನಾಂಕ:22.06.2009 ರಂದು ರಸಾಯನಿಕ ವಿಶ್ಲೇಷಣಾ ವರದಿ ಮತ್ತು ಮಾದರಿ ಸೀಸೆಯನ್ನು ಪಡೆಯಲಾಯಿತು. ಸದ್ರಿ ಮಾದರಿ ವರದಿಯಲ್ಲಿ ಮಾದರಿಗಳಲ್ಲಿ ಮದ್ಯಸಾರದ ಅಂಶ ಇರುವುದು ಕಂಡು ಬಂದಿರುತ್ತದೆ. ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರತಿಯನ್ನು ಪ್ರಾಧಿಕಾರಕ್ಕೆ ಹಾಜರುಪಡಿಸಿ ಅದನ್ನು ನೋಡಿ ನಿಶಾನೆ ಪಿ-4 ಎಂದು ಗುರುತಿಸಲಾಯಿತು. ನಂತರ ತನಿಖೆ ಮುಂದುವರಿಸಿ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ಪ್ರಕಾರ ನಮೂದಿಸಿರುವ ವಾಹನದ ಮಾಲೀಕರಾದ ಶ್ರೀ ನಜೀರ್ ಅಹ್ಮದ್ ಬಿನ್ ಅಬುಬ್ಬಕರ್, ಹೌಸ್ ನಂ:10-24/10/52/C ಬಂದರು ಮಂಗಳೂರು ಇವರನ್ನು ಖುದ್ದಾಗಿ ಸಂಪರ್ಕಿಸಿ ಅಪರಾಧ ದಾಖಲಾಗಿರುವ ಬಗ್ಗೆ ವಿಚಾರಿಸಿದಾಗ ಸದ್ರಿ ಸ್ಕೂಟರನ್ನು ಮ್ಯಾಕಿಯಂ ಡಿಸಿಲ್ವಾ ಎಂಬವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದ್ರಿ ಮ್ಯಾಕಿಯಂ ಡಿಸಿಲ್ವಾ ಎಂಬವರು ಪ್ರಕರಣದಲ್ಲಿ ಮುಖ್ಯ ಆರೋಪಿಯಾಗಿದ್ದು ಆರೋಪಿತ ವ್ಯಕ್ತಿಯು ಉದ್ದೇಶಿತ ಪೂರ್ವಕವಾಗಿ ಸದ್ರಿ ವಾಹನವನ್ನು ಅಕ್ರಮ ಸಾಗಾಟಕ್ಕೆ ಬಳಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಮೇಲಿನ ಎಲ್ಲಾ ಕಾರಣಗಳನ್ನು ಗಮನಿಸಿ ಪ್ರಕರಣದಲ್ಲಿ ಜಪ್ತಾದ ವಾಹನ ಸಮೇತ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಪಾರಸ್ಸು ಮಾಡಿ ಪ್ರಸ್ತಾವನೆಯನ್ನು ದಿನಾಂಕ:27.06.2009 ರಂದು ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿ ನಿಶಾನೆ ಪಿ-5 ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲೀ, ಮಾಲೀಕರ ಪರ ವಕೀಲರಾಗಲೀ ಪ್ರಾಧಿಕಾರದ ಮುಂದೆ ಹಾಜರಾಗದೆ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗುತ್ತದೆ.

ಈ ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಹಾಗೂ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಅಕ್ರಮ ಸೊತ್ತುಗಳು ಮದ್ಯ ಮತ್ತು ಬಿಯರ್ ಎಂದು ರಸಾಯನಿಕ ವಿಶ್ಲೇಷಕರು ನೀಡಿದ ವರದಿಯಿಂದ ತಿಳಿದು ಬಂದಿದ್ದು ಹಾಗೂ ಸದ್ರಿ ಸೊತ್ತುಗಳನ್ನು ಸಾಗಾಟ ಮಾಡಿದ ಬಗ್ಗೆ ಯಾವುದೇ ರಹದಾರಿ ಪತ್ರವಿಲ್ಲದೇ ಇರುವುದರಿಂದ ವಾಹನ ನೊಂದಣಿ ಸಂ:KA-21-E-8107 ಸ್ಕೂಟರ್ ವಾಹನದಲ್ಲಿ ಅಕ್ರಮವಾಗಿ ಮದ್ಯ ಮತ್ತು ಬಿಯರ್ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣತ್ಮಾಕವಾಗಿ ಪರಿಗಣಿಸಲಾಗಿದೆ.

ಸದರಿ ವಾಹನವನ್ನು ವಶಪಡಿಸಿಕೊಂಡು ಸುಮಾರು 2 ತಿಂಗಳಿಗಿಂತಲೂ ಹೆಚ್ಚು ಸಮಯ ಕಳೆದರೂ ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿ ಅಥವಾ ವಾಹನದ ಆರ್.ಸಿ. ಮಾಲೀಕರು ವಾಹನಕ್ಕೆ ಸಂಬಂಧಿಸಿ ವಾಹನದ ಮಾಲೀಕತ್ವವನ್ನು ಕೋರಿ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ವಾಹನದ ಮಾಲಿಕತ್ವವನ್ನು ತಿಳಿದುಕೊಳ್ಳುವರೇ ಏಕೈಕ ಮಾರ್ಗವಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದು, ಸದ್ರಿ ಬಿ.ವರದಿಯಲ್ಲಿ ನಮೂದಿಸಿದ ನೊಂದಣಿ ಮಾಲೀಕರಿಗೆ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ಸದ್ರಿ ನೊಂದಣೀ ಮಾಲೀಕರು ತನ್ನ ವಾಹನವನ್ನು ಸುಮಾರು 6 ತಿಂಗಳ ಮೊದಲೇ ಪ್ರಕರಣದ ಮುಖ್ಯ ಆರೋಪಿತ ವ್ಯಕ್ತಿಗೆ ಮಾರಾಟ ಮಾಡಿರುವುದಾಗಿ ತಿಳಿಸಿ, ಸದ್ರಿ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವರೇ ತನ್ನಿಂದ ಯಾವುದೇ

ಅಭ್ಯಂತರವಿಲ್ಲವೆಂದು ತಿಳಿಸಿರುವುದನ್ನು ಗಮನಿಸಿದಾಗ ಪ್ರಕರಣದ ಆರೋಪಿತ ವ್ಯಕ್ತಿಯು ಸದ್ರಿ ವಾಹನವನ್ನು ಪಡೆದುಕೊಂಡು ತನ್ನ ತಿಳುವಳಿಕೆಯಿಂದಲೇ ಅಕ್ರಮ ಮದ್ಯ ಹಾಗೂ ಬೀರ್ ಸಾಗಾಣಿಕೆಗೆ ಬಳಸಿರುವುದು ಕಂಡು ಬರುತ್ತದೆ.

ಅಲ್ಲದೆ ವಾಹನ ಮತ್ತು ಜಪ್ತು ಪಡಿಸಲಾದ ಇತರ ಸೊತ್ತುಗಳನ್ನು ತನ್ನ ಸುಪರ್ದಿಗೆ ಪಡೆಯಲು ಮತ್ತು ತಕ್ಷೀರನ್ನು ನಡೆಸಲು ಯಾರೊಬ್ಬರೂ ಉತ್ಸುಕರಿಲ್ಲದಿರುವುದನ್ನು ಪ್ರಾಧಿಕಾರವು ಮನಗಂಡು ಅಕ್ರಮ ಮದ್ಯ ಹಾಗೂ ಬೀರ್ ಸಾಗಾಣಿಕೆಗೆ ಬಳಸಿದ ಸ್ಕೂಟರ್ ಸಂ:KA-21-E-8107 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತ ಹಾಗೂ ಯೋಗ್ಯವೆಂದು ತೀರ್ಮಾನಿಸಿ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಾಲಂ 43(ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗ-1, ಮಂಗಳೂರು ಇವರ ತಕ್ಷೀರು ಸಂಖ್ಯೆ: 3/2009-10 ದಿನಾಂಕ:25.04.2009 ರಲ್ಲಿ ಜಪ್ತುಪಡಿಸಿದ ವಾಹನ ಸ್ಕೂಟರ್ ಸಂ:KA-21-E-8107 (ಚಾಸೀಸ್ ನಂ:06FBED94126 ಮತ್ತು ಇಂಜಿನ್ ಸಂ: 35MBED43538) ನ್ನು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43ಸಿ ಯಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:17.07.2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-I: ಶ್ರೀ ಕೆ.ಮೋಹನ್ ರಾವ್,
ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗ-1, ಮಂಗಳೂರು.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ-I	: ಮಹಜರು ಪತಿ
ನಿಶಾನೆ ಪಿ-Iಎ	: ಅದರ ಮೇಲಿನ ಸಹಿ
ನಿಶಾನೆ ಪಿ-2	: ಪ್ರಥಮ ವರ್ತಮಾನ ವರದಿ
ನಿಶಾನೆ ಪಿ-2ಎ	: ಅದರ ಮೇಲಿನ ಸಹಿ
ನಿಶಾನೆ ಪಿ-3	: ಬಿ ಎಕ್ಸ್‌ಟ್ರಾಕ್ಟ್ ವರದಿ
ನಿಶಾನೆ ಪಿ-4	:ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ-5	: ತನಿಖಾ ವರದಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:

ಅರ್ಜಿದಾರರ ಹೇಳಿಕೆ - ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು : - ಯಾವುದು ಇಲ್ಲ-

ನೂರ್ ಮಹ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.735

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ:ಎಸ್‌ಡಿಕೆ/385/ಡಿಟಿಸಿಆರ್/2008-09, ದಿನಾಂಕ:17ನೇ ಜುಲೈ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	ಆರೋಪಿ:
ಅಬಕಾರಿ ಉಪ ನಿರೀಕ್ಷಕರು (2), ಮಂಗಳೂರು ಉಪ ವಿಭಾಗ-2, ಮಂಗಳೂರು.	ನೌಷಾದ್,ಬಿನ್:ದಿ:ಮ್ಯೊದು,ಪೆರ್ಮುದೆ ಮನೆ, ಪಯ್ಯಳಿಕೆ ಗ್ರಾಮ, ಕಾಸರಗೋಡು ಜಿಲ್ಲೆ, ಕೇರಳ ರಾಜ್ಯ. ಮತ್ತು ಇತರ 4 ಆರೋಪಿಗಳು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು(2),ಮಂಗಳೂರು ದಕ್ಷಿಣ ವಲಯ-2, ಮಂಗಳೂರು ಇವರು ದಿನಾಂಕ:14.05.2009 ರಂದು ಪಂಚರು ಮತ್ತು ಸಿಬ್ಬಂದಿಯವರೊಂದಿಗೆ ಮಂಗಳೂರು ತಾಲ್ಲೂಕು ಬೆಳ್ಮ ಗ್ರಾಮದ ನಾಟೆಕಲ್ ಸರ್ಕಲ್ ಬಳಿ ಮಂಗಳೂರು ಹಾಗೂ ಕೊಣಾಜೆ ಬದಿಯಿಂದ ಮಂಜನಾಡಿ ಮೂಲಕ ಕೇರಳ ಕಡೆಗೆ ಹೋಗುವ ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಸಂದರ್ಭ ಸುಮಾರು ಸಾಯಂಕಾಲ 6-30 ಗಂಟೆ ಸಮಯದಲ್ಲಿ ಮಂಗಳೂರು ಕಡೆಯಿಂದ ಭಾರವಾದ ವಸ್ತುಗಳನ್ನು ಹೇರಿಕೊಂಡು ಚಾಲಕ ಮಾತ್ರ ಇರುವ ಒಂದು ಬಿಳಿ ಬಣ್ಣದ ಮಾರುತಿ ಆಲ್ಟೋ ಕಾರು ಬರುವುದು ಕಂಡು ಬಂದು, ತಪಾಸಣೆ ಮಾಡುವ ಉದ್ದೇಶಕ್ಕಾಗಿ ಅದನ್ನು ನಿಲ್ಲಿಸಲು ಸನ್ನೆ ಮಾಡಿದಾಗ ಚಾಲಕನು ವಾಹನವನ್ನು ನಿಲ್ಲಿಸದೇ ತಪ್ಪಿಸಿಕೊಳ್ಳುವ ಸಲುವಾಗಿ ಮಂಜನಾಡಿ ರಸ್ತೆ ಮೂಲಕ ಓಡಿಸಿದಾಗ ತಕ್ಷಣ ಅನುಮಾನಗೊಂಡು, ಸದ್ರಿ ವಾಹನವನ್ನು ಬೆನ್ನಟ್ಟಿ ನಾಟೆಕಲ್ ಸರ್ಕಲ್‌ನಿಂದ ಎರಡು ಫರ್ಲಾಂಗ್ ದೂರದಲ್ಲಿ ತಡೆದು ನಿಲ್ಲಿಸಿ ನೋಡಲಾಗಿ ಅದು KL-19N-7269 ಸಂಖ್ಯಾ ಫಲಕವನ್ನು ಹೊಂದಿದ್ದ ಮಾರುತಿ ಕಂಪೆನಿಯ ಆಲ್ಟೋ ಕಾರು ಆಗಿದ್ದು, ಕಾರಿನಲ್ಲಿದ್ದ ಚಾಲಕನನ್ನು ಕೇಳಗಿಳಿಸಿ ವಿಚಾರಿಸಲಾಗಿ ಕಾರಿನಲ್ಲಿ ಸಾರಾಯಿ ಸ್ಯಾಚೆಟುಗಳು ಇರುವುದಾಗಿ, ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಮೋಹನ,ಎಲಿಯಾರ್ ಪದವು ಹಾಗೂ ಬ್ರಿಜೇಶ್, ಚೆಂಬುಗುಡ್ಡೆ ಎಂಬವರು ಕಾರಿಗೆ ಲೋಡ್ ಮಾಡಿರುವುದಾಗಿಯೂ, ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಪ್ರವೀಣ, ಮೀಯಪದವು ಮತ್ತು ಜಯರಾಮ, ಕುಂಜತ್ತೂರು ಇವರ ಪರವಾಗಿ ಮೀಯಪದವು ಎಂಬಲ್ಲಿಗೆ ಯಾವುದೇ ರಹದಾರಿ ಇಲ್ಲದೇ ಕೊಂಡು ಹೋಗುವುದಾಗಿ ತಿಳಿಸಿದನು. ನಂತರ ಹೀಗೆ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸುವುದು ಕಾನೂನು ಬಾಹಿರ ಎಂದು ಆತನಿಗೆ ತಿಳಿಸಿ, ಸದ್ರಿ ಕಾರನ್ನು ಶೋಧನೆ ನಡೆಸುವರೇ ಶೋಧನಾ ವಾರೆಂಟ್‌ನ್ನು ಮಾನ್ಯ ನ್ಯಾಯಾಲಯದಿಂದ ಪಡೆಯಲು ಸಮಯಾವಕಾಶ ಇಲ್ಲದೇ ಇರುವ ಕಾರಣ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 54 ರಲ್ಲಿ ದತ್ತವಾದ ಅಧಿಕಾರದ ಪ್ರಕಾರ ಸರ್ಚ್ ವಾರೆಂಟನ್ನು ತಯಾರಿಸಿ, ಕಾರಿನ ಶೋಧನೆ ನಡೆಸಲಾಗಿ ಕಾರಿನ ಚಾಲಕನ ಸೀಟಿನ ಹಿಂಬದಿಯಲ್ಲಿ 14 ಬಿಳಿ ನೈಲಾನ್ ಚೀಲದ ಕಟ್ಟುಗಳಲ್ಲಿ ಒಟ್ಟು 7000 ಸಾರಾಯಿ ಸ್ಯಾಚೆಟ್‌ಗಳು ಇರುವುದನ್ನು ಪತ್ತೆಹಚ್ಚಿ ಇದು ಅಬಕಾರಿ ಕಾಯಿದೆಯಂತೆ ಅಪರಾಧವೆಂದು ತಿಳಿಸಿ, ಮಾರುತಿ ಆಲ್ಟೋ ಕಾರ್ ಸಂ:KA-19N-7269 ಮತ್ತು 7000 ಸಾರಾಯಿ ಸ್ಯಾಚೆಟ್‌ಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಚಾಲಕನಾದ ನೌಷಾದ್, ಬಿನ್ ದಿ:ಮ್ಯೊದು, ಪೆರ್ಮುದೆ ಮನೆ, ಪಯ್ಯಳಿಕೆ ಗ್ರಾಮ, ಕಾಸರಗೋಡು ಜಿಲ್ಲೆ, ಕೇರಳ ರಾಜ್ಯ ಆತನನ್ನು ದಸ್ತಗಿರಿ ಮಾಡಿ, ನಂತರ ಕಾರಿನಲ್ಲಿ ದೊರೆತ ಸಾರಾಯಿಯ ಪ್ರತಿ ಚೀಲದಿಂದ ತಲಾ 10ರ ಒಂದು ಕಟ್ಟಿನಂತೆ ಒಟ್ಟು 14 ಕಟ್ಟುಗಳನ್ನು ತಯಾರಿಸಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಇಲಾಖಾ ಸೀಲ್‌ನಿಂದ ಸೀಲ್ ಮಾಡಿ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, ಮತ್ತು 13 ರಂತೆ ಅಪರಾಧವಾಗಿದ್ದು, ಕಲಂ 32 ಮತ್ತು 38(ಎ) ರಂತೆ ಶಿಕ್ಷಾರ್ಹವಾಗಿರುವುದರಿಂದ, ದಸ್ತಗಿರಿಯಾದ ಆರೋಪಿಯ ವಿರುದ್ಧ ತಕ್ಷೀರು ಸಂ:3/2009-10 ದಿನಾಂಕ:14.05.2009 ರಂತೆ ಪ್ರಕರಣವನ್ನು ನೋಂದಾಯಿಸಿ ಪ್ರಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಒಪ್ಪಿಸಿ, ಅರೋಪಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿ ನಂತರ ಪ್ರಕರಣದ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಜಪ್ತುಪಡಿಸಿಕೊಂಡ ಸೊತ್ತುಗಳು:

1) ಮಾರುತಿ ಆಲ್ಟೋ ಕಾರು ನೊಂದಣಿ ಸಂಖ್ಯೆ: KA-19N-7269

2) 14 ಬಿಳಿ ನೈಲಾನ್ ಚೀಲಗಳಲ್ಲಿ ಮೈಸೂರು ಶುಗರ್ ಕಂಪೆನಿ ಎಂದು ನಮೂದಿಸಿದ 100 ಮಿಲಿಯ ತಲಾ 500 ಸ್ಯಾಚೆಟ್‌ಗಳಂತೆ ಒಟ್ಟು 7000 ಸಾರಾಯಿ ಸ್ಯಾಚೆಟ್‌ಗಳು.

ಪ್ರಕರಣದ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(2), ಮಂಗಳೂರು ದಕ್ಷಿಣ ವಲಯ-2, ಮಂಗಳೂರು ಇವರು ಜಪ್ತುಪಡಿಸಿಕೊಂಡ ವಾಹನ ಸಂಖ್ಯೆ:KA-19N-7269 ರ ಕಾರಿನ 'ಬಿ' ಎಕ್ಸ್‌ಟ್ರಾಕ್ಟ್ ವರದಿಯನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ಪಡೆದು ದಿನಾಂಕ:21.05.2009 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಸ್ವೀಕರಿಸಲಾದ ಬಿ.ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ವಾಹನದ ಚಾಸಿಸ್ ನಂ.MA3EYD81

S0014113351 ಮತ್ತು ಇಂಜಿನ್ ಸಂ:F8DN4026788ರಂತೆ ಇದ್ದು, ಜಪ್ತುಪಡಿಸಿದ ವಾಹನದ ಚಾಸಿಸ್ ಸಂ: MA3EYD81500-326063B4 ಮತ್ತು ಇಂಜಿನ್ ಸಂ:RL6C705151 ಆಗಿದ್ದು, ಜಪ್ತು ಪಡಿಸಿದ ವಾಹನಕ್ಕೂ 'ಬಿ' ಎಕ್ಸ್‌ಟ್ರಾಕ್ಟ್ ವರದಿಗೂ ಒಂದಕ್ಕೊಂದು ತಾಳೆ ಕಂಡುಬಂದಿರುವುದಿಲ್ಲ. ಆದಾಗ್ಯೂ 'ಬಿ' ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿಸಿರುವ ವಾಹನದ ಮಾಲೀಕರಾದ ಡಾ:ಉದಯ್‌ಕುಮಾರ್, ಬಿನ್ ಆರ್.ಬಿ. ಯರಾಗಳ್ಳಿ, ಎ ಆರ್-14, ಕೆ.ಆರ್.ಇ.ಸಿ ಕ್ಯಾಂಪಸ್ ಶ್ರೀನಿವಾಸ ನಗರ ಅಂಚೆ, ಸುರತ್ಕಲ್, ಮಂಗಳೂರು ಇವರಿಗೆ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳುವ ನೋಟೀಸನ್ನು ದಿನಾಂಕ:22.06.2009 ರಂದು ನೊಂದಣಿ ಅಂಚೆ ಮೂಲಕ ಹಾಗೂ ಪ್ರಕರಣದ ತನಿಖಾಧಿಕಾರಿಗಳ ಮೂಲಕ ಜಾರಿ ಮಾಡಲು ನೀಡಲಾಗಿದ್ದು, ಸದ್ರಿ ನೋಟೀಸಿಗೆ ಡಾ.ಉದಯ್ ಕುಮಾರ್. ಆರ್.ವೈ, B.Tech, M.Tech, Ph.D., Professor and Head, Dept. of Electrical & Electronics Engineering ,N.I.T.K, Surathkal, Mangalore ಇವರು ದಿನಾಂಕ:24.06.2009 ರಂದು ಪ್ರಾಧಿಕಾರಕ್ಕೆ ಲಿಖಿತ ಉತ್ತರ ನೀಡಿ ನೊಂದಣಿ ಸಂಖ್ಯೆ: KA-19N-7269 ಇರುವ ಮಾರುತಿ ಕಂಪೆನಿಯ ಆಲ್ಟೋ ಕಾರು ಈಗಲೂ ನನ್ನ ಸ್ವಾಧೀನದಲ್ಲಿದ್ದು, ಸದ್ರಿ ಕಾರು ಯಾವುದೇ ಅಕ್ರಮದಲ್ಲಿ ಒಳಗೊಂಡಿರುವುದಿಲ್ಲ. ಹಾಗೂ ನನ್ನ ಕಾರಿನ ನಂಬರ್ ಪ್ಲೇಟನ್ನು ಹೋಲುವ ನಕಲಿ ನಂಬರ್ ಪ್ಲೇಟನ್ನು ಅಳವಡಿಸಿ ಯಾರೋ ಈ ಕೃತ್ಯವನ್ನು ಎಸಗಿರಬೇಕೆಂದು ತಿಳಿಸಿ, ನನ್ನನ್ನು ಸದ್ರಿ ಮೊಕದ್ದಮೆಯಿಂದ ಕೈಬಿಡಬೇಕಾಗಿ ಕೋರಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರಿಸಿದ ಅಬಕಾರಿ ಉಪ ನಿರೀಕ್ಷಕರು(2), ಮಂಗಳೂರು ದಕ್ಷಿಣ ವಲಯ-2, ಮಂಗಳೂರು ಇವರು ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ, ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂ:ಇ-192-140, ದಿನಾಂಕ:07.06.2009ರ ಪ್ರತಿಯನ್ನು ದಿನಾಂಕ:20.06.2009ರ ವರದಿಯೊಂದಿಗೆ ಲಗತ್ತಿಸಿ ಪ್ರಾಧಿಕಾರಕ್ಕೆ ಕಳುಹಿಸಿಕೊಡುತ್ತಾ ಸದ್ರಿ ಜಪ್ತಾದ ಸಾರಾಯಿಯಲ್ಲಿ ಮದ್ಯಸಾರದ ಪ್ರಮಾಣ 22.0% ಇರುವುದಾಗಿ ಹಾಗೂ ಕ್ಷೀಣ ಶಕ್ತಿಯ ಪೇಯವೆಂದು ದೃಢೀಕರಿಸಿ ಪತ್ರ ನೀಡಿರುತ್ತಾರೆ ಎಂದು ತಿಳಿಸಿ, ಸದ್ರಿ ಸಾರಾಯಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಹಾಗೂ ವಾಹನದ ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರ್ "ಬಿ" ಎಕ್ಸ್‌ಟ್ರಾಕ್ಟ್ ವರದಿಗೆ ತಾಳೆ ಕಂಡು ಬಾರದೇ ಇರುವುದರಿಂದ ವಾಹನವನ್ನು ಕೂಡಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಆದೇಶಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ.

ಅದರಂತೆ ಪ್ರಾಧಿಕಾರದ ದಿನಾಂಕ:01.07.2009ರ ಆದೇಶದಲ್ಲಿ ವಾಹನವನ್ನು ಹೊರತು ಪಡಿಸಿ ಜಪ್ತಾದ 100 ಎಂಎಲ್.ನ 7000 ಸಾರಾಯಿ ಸ್ಯಾಚೇಟುಗಳನ್ನು ಸರ್ಕಾರಕ್ಕೆ ಮುಟ್ಟು ಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ನೀಡಿರುವ ವಾಹನದ 'ಬಿ' ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿಸಿದ ಇಂಜಿನ್ ಸಂಖ್ಯೆ ಮತ್ತು ಚಾಸಿಸ್ ಸಂಖ್ಯೆಗೂ ಜಪ್ತುಪಡಿಸಿದ ವಾಹನದ ಇಂಜಿನ್ ಸಂಖ್ಯೆ ಮತ್ತು ಚಾಸಿಸ್ ಸಂಖ್ಯೆಗೂ ತಾಳೆ ಕಂಡು ಬಾರದೇ ಇದ್ದು ಹಾಗೂ 'ಬಿ' ಎಕ್ಸ್ ಟ್ರಾಕ್ಟ್ ವರದಿಯಲ್ಲಿ ನಮೂದಿಸಿದ ವಾಹನದ ಮಾಲೀಕರಿಗೆ ನೀಡಲಾದ ಕಾರಣ ಕೇಳಿ ನೋಟೀಸಿಗೆ ಸದ್ರಿಯವರು ನೀಡಿದ ಲಿಖಿತ ಉತ್ತರದಲ್ಲಿ ಸದ್ರಿಯವರ ಒಡೆತನಕ್ಕೆ ಸೇರಿದ ಮಾರುತಿ ಆಲ್ಟೋ ಕಾರು ಸಂ:KA-19N-7269 ಅವರ ಸುಪರ್ದಿಯಲ್ಲಿಯೇ ಇರುವುದೆಂದು ತಿಳಿಸಿರುವುದರಿಂದ, ಅರೋಪಿಗಳು ಪ್ರಕರಣ ಸಂದರ್ಭದಲ್ಲಿ ಅಪರಾಧದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನಕಲಿ ನಂಬರ್ ಪ್ಲೇಟ್ ಅಳವಡಿಸಿ, ಅಕ್ರಮ ಎಸಗಿರುವುದು ಹಾಗೂ ಪ್ರಕರಣ ಸಂಭವಿಸಿ ಈಗಾಗಲೇ ಎರಡು ತಿಂಗಳುಗಳು ಕಳೆದಿದ್ದರೂ ಯಾರೊಬ್ಬರೂ ಒಡೆತನ ನಿರೂಪಿಸಿ ವಾಹನದ ಬಿಡುಗಡೆ ಬಗ್ಗೆ ಪ್ರಯತ್ನಿಸಿರುವುದು ಕಂಡು ಬರುವುದಿಲ್ಲ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ಮತ್ತು ವಾಹನ ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಈ ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:14.05.2009ರಂದು ಮಾರುತಿ ಆಲ್ಟೋ ಕಾರಿಗೆ ನಕಲಿ ನೊಂದಾಣಿ ಸಂಖ್ಯೆ KA-19N-7269 ನ್ನು ಅಳವಡಿಸಿ ಅಕ್ರಮವಾಗಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಆರೋಪಿಗಳು ಸಾರಾಯಿಯನ್ನು ಸಾಗಾಣಿಕೆ ಮಾಡುವುದಕ್ಕೆ ಬಳಸಿರುವುದನ್ನು ಪತ್ತೆ ಹಚ್ಚಿ, ಸದ್ರಿ ವಾಹನವನ್ನು ಮತ್ತು ಅಕ್ರಮ ಸೊತ್ತುಗಳನ್ನು ಸ್ಥಳ ಮಹಜರು ಮುಖೇನ ಸ್ವಾಧೀನಪಡಿಸಿದ್ದು ಹಾಗೂ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ

ವರದಿಯಂತೆ ಸಾರಾಯಿಯಾಗಿರುವುದು ದೃಢಪಟ್ಟಿದ್ದು ಹಾಗೂ ವಾಹನ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿದ 'ಬಿ' ಎಕ್ಸ್‌ಟ್ರಾಕ್ಟ್ ವರದಿ ಪ್ರಕಾರ ವಾಹನದ ನೊಂದಾಣಿ ಸಂಖ್ಯೆಯಂತೆ ತಿಳಿಸಿರುವ ವಾಹನದ ಇಂಜಿನ್ ಮತ್ತು ಚಾಸೀಸ್ ಸಂಖ್ಯೆ ಒಂದಕ್ಕೊಂದು ತಾಳೆ ಕಂಡು ಬಾರದೇ ಇದ್ದು, ಆರೋಪಿಯು ಉದ್ದೇಶಪೂರ್ವಕವಾಗಿ ವಾಹನಕ್ಕೆ ನಕಲಿ ನಂಬರ್ ಪ್ಲೇಟನ್ನು ಅಳವಡಿಸಿಕೊಂಡು ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ್ನ ತೆಗೆದುಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಭಿಸಿ ಅಭಿಯೋಗದ ಪರ ಪ್ರಕರಣ ದಾಖಲು ಮಾಡಿರುವ ಓರ್ವ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಯ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗದೇ ಇದ್ದುದರಿಂದ ಪ್ರತಿರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಗದ ಪರ ಸಲ್ಲಿಸಿರುವ ಸಾಕ್ಷಾಧ್ಯಾರಗಳಿಂದ ಈ ಕೆಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ .

1. ದಿನಾಂಕ:14.05.2009 ರಂದು ಸಂಖ್ಯೆ: KA-19N-7269 ಮಾರುತಿ ಆಲ್ಟೋ ಕಾರು ಇದನ್ನು ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡಲು ಬಳಸಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನದ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಸಾರಾಯಿ ಸ್ಯಾಚೆಟ್ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣತ್ಮಾಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಪ್ರಕರಣದ ಫಿರ್ಯಾದುದಾರ ಹಾಗೂ ತನಿಖಾಧಿಕಾರಿಗಳಾದ ಶ್ರೀ ಕೆ.ಕುಶಾಲಪ್ಪಗೌಡ, ಅಬಕಾರಿ ಉಪ ನಿರೀಕ್ಷಕರು(2), ಮಂಗಳೂರು ದಕ್ಷಿಣ ವಲಯ–2, ಮಂಗಳೂರು ರವರು ದಿನಾಂಕ:15.07.2009 ರಂದು ಅಭಿಯೋಗದ ಪರ ಪಿ.ಡಬ್ಲ್ಯೂ–1 ರವರಾಗಿ ಸಾಕ್ಷ್ಯ ನೀಡುತ್ತಾ ನಾನು ದಿನಾಂಕ:01.04.2008 ರಿಂದ ಅಬಕಾರಿ ನಿರೀಕ್ಷಕರ ಕಚೇರಿ, ಮಂಗಳೂರು ದಕ್ಷಿಣ ವಲಯ–2 ಅಬಕಾರಿ ಉಪ ನಿರೀಕ್ಷಕನಾಗಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತಿದ್ದೆ. ದಿನಾಂಕ:14.05.2009 ರಂದು ಸಾಯಂಕಾಲ ಸಿಬ್ಬಂದಿ ಮತ್ತು ಪಂಚರೊಂದಿಗೆ ಮಂಗಳೂರು ತಾಲೂಕು ಬೆಳ್ಮ ಗ್ರಾಮದ ನಾಟೇಕಲ್ ಸರ್ಕಲ್‌ನಲ್ಲಿ ನಿಂತು ಮಂಗಳೂರು ಕಡೆಯಿಂದ ಮಂಜನಾಡಿ ಮೂಲಕ ಕೇರಳಕ್ಕೆ ಹೋಗುವಂತಹ ವಾಹನಗಳನ್ನು ತಪಾಸಣೆ ಮಾಡುವ ಸಂದರ್ಭ ಸಂಜೆ 6–30 ಘಂಟೆ ಸಮಯಕ್ಕೆ ಮಂಗಳೂರು ಕಡೆಯಿಂದ ಒಂದು ಬಿಳಿ ಬಣ್ಣದ ಆಲ್ಟೋ ಕಾರು ಬರುವುದು ಕಾಣಿಸಿಕೊಂಡು ಸದರಿ ವಾಹನವನ್ನು ತಪಾಸಣೆ ಮಾಡುವ ಉದ್ದೇಶಕ್ಕಾಗಿ ನಿಲ್ಲಿಸಲು ಸೂಚನೆ ನೀಡಿದಾಗ ವಾಹನದಲ್ಲಿ ಚಾಲಕನೊಬ್ಬನೇ ಇದ್ದು, ಆತನು ವಾಹನವನ್ನು ನಿಲ್ಲಿಸದೇ ಮಂಜನಾಡಿ ಕಡೆಗೆ ಚಲಾಯಿಸಿಕೊಂಡು ಹೋದನು. ತಕ್ಷಣ ನಾವು ಸರ್ಕಾರಿ ವಾಹನದಲ್ಲಿ ಸದ್ರಿ ವಾಹನವನ್ನು ಬೆನ್ನಟ್ಟಿ ಸುಮಾರು 2 ಫರ್ಲಾಂಗ್ ದೂರದಲ್ಲಿ ಅದನ್ನು ನಿಲ್ಲಿಸಿ ನೋಡಲಾಗಿ ಅದರ ಎದುರು ಹಾಗೂ ಹಿಂಬದಿ ಭಾಗಕ್ಕೆ KA-19N-7269 ಎಂಬ ನಾಮಫಲಕವನ್ನು ಜೋಡಿಸಲಾಗಿದ್ದು, ವಾಹನವನ್ನು ಸುತ್ತುವರಿದು ಚಾಲಕನನ್ನು ವಿಚಾರಿಸಲಾಗಿ ಕಾರಿನಲ್ಲಿ ಶರಾಬು ಸ್ಯಾಚೆಟ್‌ಗಳು ಇರುವುದಾಗಿ ಹಾಗೂ ಸದ್ರಿ ಸಾರಾಯಿ ಸ್ಯಾಚೆಟ್‌ಗಳನ್ನು ಮೀಯಪದವಿನ ಪ್ರವೀಣ ಹಾಗೂ ಕುಂಜತ್ತೂರಿನ ಜಯರಾಮ ಎಂಬವರ ಪರವಾಗಿ ಮೀಯ ಪದವಿಗೆ ಸಾಗಿಸುತ್ತಿರುವುದಾಗಿಯೂ, ಸದ್ರಿ ಸಾರಾಯಿ ಸ್ಯಾಚೆಟ್‌ಗಳನ್ನು ಕುತ್ತಾರು ಪದವಿನ ರಾಜರಾಜೇಶ್ವರಿ ಭಜನಾ ಮಂದಿರದ ಹಿಂಬದಿಯ ಮೈದಾನದಲ್ಲಿ ಎಲಿಯಾರು ಪದವಿನ ಮೋಹನದಾಸ ಶೆಟ್ಟಿ ಹಾಗೂ ಪಂಡಿತ್ ಹೌಸಿನ ಬ್ರಿಜೇಶ್ ಎಂಬವರು ಕಾರಿಗೆ ಲೋಡ್ ಮಾಡಿರುವುದಾಗಿ ತಿಳಿಸಿದನು. ನಂತರ ಸದ್ರಿ ಚಾಲಕನ ವಿಳಾಸವನ್ನು ಕೇಳಲಾಗಿ ತನ್ನ ಹೆಸರು ನೌಷಾದ್,ಬಿನ್:ದಿ:ಮೈದು,ಪೆರ್ಮುದೆ ಮನೆ,ಪೈವಳಿಕೆ ಗ್ರಾಮ, ಕಾಸರಗೋಡು ಜಿಲ್ಲೆ,ಕೇರಳ ರಾಜ್ಯ.ಎಂದು ತಿಳಿಸಿದನು . ನಂತರ ಸದ್ರಿ ವಾಹನವನ್ನು ತಪಾಸಣೆ ಮಾಡಲು ಮಾನ್ಯ ನ್ಯಾಯಾಲಯ ದಿಂದ ವಾರೆಂಟನ್ನು ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಕ.ಅ ಕಾಯಿದೆ 1965 ರ ಕಲಂ 54 ರೀತ್ಯಾ ಸರ್ಚ್ ಮೆಮೊ ತಯಾರಿಸಿ, ಕಾರನ್ನು ಶೋಧಿಸಲಾಗಿ ಸದ್ರಿ ಕಾರಿನ ಚಾಸಿಸ್ ನಂ: MA3EYD81500326263B4 ಹಾಗೂ ಇಂಜಿನ್ ಸಂ:RL6C705151 ಎಂದು ತಿಳಿದು ಬಂದು ಕಾರಿನ ಒಳಬದಿ ಶೋಧಿಸಲಾಗಿ ಚಾಲಕನ ಹಿಂಬದಿಯ ಸೀಟನ್ನು ಬಿಡಿಸಿ ಅದರ ಮೇಲೆ 14 ಬಿಳಿ ಬಣ್ಣದ ನೈಲಾನ್ ಚೀಲಗಳ ಕಟ್ಟುಗಳು ಕಂಡು ಬಂದವು. ಸದರಿ ಎಲ್ಲಾ 14 ಚೀಲಗಳನ್ನು ಬಿಚ್ಚಿ ನೋಡಲಾಗಿ ಪ್ರತಿ ಚೀಲದಲ್ಲಿ 100 ಮಿ.ಲಿ ಶರಾಬು ಇರುವ ತೊಟ್ಟೆಯ ಮೇಲೆ ನಂ:ECE/14 D&A 2005-06 ಮೈಸುಗರ್ ಕಂಪೆನಿ ದಿ:06–9–2006 ಎಂದು ಕೆಂಪು ಅಕ್ಷರದಲ್ಲಿ ನಮೂದಿಸಿದ 100 ಮಿ.ಲಿಯ ತಲಾ 500 ಸ್ಯಾಚೆಟ್‌ಗಳಂತೆ 14 ಚೀಲಗಳಲ್ಲಿ ಒಟ್ಟು 7000 ಸ್ಯಾಚೆಟ್‌ಗಳು ಕಂಡು ಬಂದವು. ಸದ್ರಿ ಚೀಲಗಳಿಗೆ ಕ್ರ.ಸಂ.1 ರಿಂದ 14 ರ ತನಕ ನೀಡಿ ಸದ್ರಿ ಚೀಲಗಳಿಂದ ರಾಸಾಯನಿಕ ಪರೀಕ್ಷೆಗಾಗಿ 100 ಮಿ.ಲಿಯ ಪ್ರತಿ

ಚೀಲಗಳಿಂದ ತಲಾ 10 ಪ್ಯಾಕೆಟ್‌ಗಳಂತೆ ತೆಗೆದು, ಅವುಗಳಿಗೆ ಬಟ್ಟೆದಾರದಿಂದ ಸುತ್ತಿ, ಇಲಾಖಾ ಸೀಲು ಮಾಡಿ, ಮಾದರಿ ಮೊಹರನ್ನು ತಯಾರಿಸಿ, ಮಹಜರು ಹಾಗೂ ದಸ್ತಗಿರಿ ಮೆಮೊವನ್ನು ತಯಾರಿಸಿ ಸೊತ್ತುಗಳ ಸಮೇತ ಆರೋಪಿಯನ್ನು ದಸ್ತಗಿರಿ ಮಾಡಲಾಯಿತು. ಈ ಕಾರ್ಯಾಚರಣೆಯು ಸಂಜೆ 6-30 ರಿಂದ ರಾತ್ರಿ 8-00 ಗಂಟೆ ವರೆಗೆ ನಡೆದು, ಸದ್ರಿ ಮಹಜರನ್ನು ಈಗ ನೋಡಿ ನಿಶಾನೆ ಪಿ-1 ಎಂದು, ಸಾಕ್ಷಿದಾರರ ಸಹಿಯನ್ನು ನಿಶಾನೆ ಪಿ-1 ಎ ಎಂದು ಗುರುತಿಸಲಾಯಿತು. ನಂತರ ಕಚೇರಿಗೆ ಬಂದು, ಈ ಬಗ್ಗೆ ಒಂದು ಮೊಕದ್ದಮೆ ದಾಖಲಿಸಿಕೊಂಡು ದಾಖಲೆಗಳೊಂದಿಗೆ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಹಾಗೂ ದಾಖಲೆ ಪತ್ರಗಳ ಪ್ರತಿಯನ್ನು ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ ಜಿಲ್ಲೆ, ಮಂಗಳೂರು ಇವರಿಗೆ ಸಲ್ಲಿಸಲಾಗಿದೆ. ಪ್ರಥಮ ಮಾಹಿತಿ ವರದಿ ಸಂಖ್ಯೆ: 3/2009-10 ದಿನಾಂಕ:14.05.2009 ರಂತೆ ತಯಾರಿಸಲಾದ ಪ್ರಥಮ ಮಾಹಿತಿ ವರದಿಯನ್ನು ಈಗ ನೋಡಿ , ಅದನ್ನು ನಿಶಾನೆ ಪಿ-2 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ಜಪ್ತು ಮಾಡಿದ ಸೊತ್ತುಗಳಿಂದ ತೆಗೆದ ಮಾದರಿ ಸೀಸೆಗಳನ್ನು ದಿನಾಂಕ:19.05.2009 ರಂದು ಅಬಕಾರಿ ರಕ್ಷಕರಾದ ಶ್ರೀ ಚೆನಿಯಪ್ಪ ನಾಯ್ಕ್ ಇವರೊಂದಿಗೆ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರಿಗೆ ಕಳುಹಿಸಿ ಸದ್ರಿಯವರಿಂದ ದಿನಾಂಕ:12.06.2009 ರಂದು ವರದಿಯನ್ನು ಪಡೆದುಕೊಳ್ಳಲಾಗಿದೆ. ಸದ್ರಿ ವರದಿ ಪ್ರಕಾರ ಮಾದರಿ ಸ್ಯಾಚೆಟ್‌ಗಳಲ್ಲಿ ಶರಾಬಿನ ತೀಕ್ಷ್ಣತೆ ಶೇ.22 ಎಂದು ದೃಢೀಕರಿಸಲಾಗಿದ್ದು, ಸದ್ರಿ ವರದಿಯ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಅದನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ಈ ಮಧ್ಯೆ ಸದ್ರಿ ಜಪ್ತು ಮಾಡಿದ ಕಾರಿನ ಮಾಲೀಕರ ಬಗ್ಗೆ ತಿಳಿಯುವ ಉದ್ದೇಶಕ್ಕಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ. ಕ ಜಿಲ್ಲೆ,ಮಂಗಳೂರು ಇವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿ, ಅವರಿಂದ ಬಿ.ಎಕ್ಸ್ ಟ್ರಾಕ್ಟ್ ವರದಿಯನ್ನು ಪಡೆದುಕೊಳ್ಳಲಾಗಿದ್ದು, ಸದ್ರಿ ವರದಿಯ ಪ್ರಕಾರ ವಾಹನ ಸಂ:KA-19N-7269 ಆಗಿದ್ದು, ಡಾ:ಉದಯ್‌ಕುಮಾರ್, ಬಿನ್ ಆರ್.ಬಿ.ಯರಾಗಳ್ಳಿ, ಎಆರ್-14, ಕೆ.ಆರ್.ಇ.ಸಿ ಕ್ಯಾಂಪಸ್ ಶ್ರೀನಿವಾಸ ನಗರ ಅಂಚೆ,ಸುರತ್ಕಲ್, ಮಂಗಳೂರು ಎಂಬವರಿಗೆ ಸೇರಿದ್ದು, ವರದಿಯಲ್ಲಿ ನಮೂದಿಸಿದ ವಾಹನದ ಚಾಸಿಸ್ ಮತ್ತು ಇಂಜಿನ್ ನಂಬರಿಗೂ ಜಪ್ತು ಮಾಡಿದ ವಾಹನದಲ್ಲಿರುವ ಚಾಸಿಸ್ ಮತ್ತು ಇಂಜಿನ್ ನಂಬರಿಗೂ ತಾಳೆ ನೋಡಲಾಗಿ ಒಂದಕ್ಕೊಂದು ತಾಳೆ ಕಂಡು ಬಾರದೇ ಇರುವುದರಿಂದ ಆರೋಪಿಗಳು ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸುವ ಸಂದರ್ಭದಲ್ಲಿ ವಾಹನದ ಮಾಲೀಕರ ಸುಳಿವು ಸಿಗಬಾರದೆಂದು ಡಾ.ಉದಯಕುಮಾರ್ ಎಂಬವರಿಗೆ ಸೇರಿದ ಮಾರುತಿ ಕಂಪೆನಿಯ ಆಲ್ಟೋ ಕಾರಿನ ನೊಂದಣಿ ಸಂಖ್ಯೆಯನ್ನು ಹೋಲುವ ನಕಲಿ ನಂಬರ್ ಪ್ಲೇಟನ್ನು ಅಳವಡಿಸಿ, ಕಳ್ಳ ಸಾಗಾಣಿಕೆ ಮಾಡಿರುವುದು ತನಿಖೆಯಿಂದ ಕಂಡು ಬಂದಿರುತ್ತದೆ. ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇವರಿಂದ ಪಡೆಯಲಾದ ಬಿ.ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಅದನ್ನು ಈಗ ನೋಡಲಾಗಿ ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಸದ್ರಿ ಬಿಎಕ್ಸ್ ಟ್ರಾಕ್ಟ್ ವರದಿಯಲ್ಲಿ ನಮೂದಿತವಾದ ಶ್ರೀ ಉದಯ ಕುಮಾರ್ ಇವರಿಗೆ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳುವ ನೋಟೀಸನ್ನು ಖುದ್ದಾಗಿ ಜಾರಿ ಮಾಡಿ ಸದ್ರಿಯವರಿಂದ ಈ ಬಗ್ಗೆ ಒಂದು ಹೇಳಿಕೆಯನ್ನು ಪಡೆಯಲಾಗಿದ್ದು, ಸದ್ರಿ ಹೇಳಿಕೆಯಲ್ಲಿ KA 19N-7269 ನೊಂದಣಿ ಸಂಖ್ಯೆಯ ನೀಲಿ ಬಣ್ಣದ ಆಲ್ಟೋ ಕಾರು ನನ್ನದಾಗಿದ್ದು, ಅದು ನನ್ನ ಸ್ವಾಧೀನದಲ್ಲಿಯೇ ಈಗಲೂ ಇದೆ ಎಂದು ತಿಳಿಸಿ, ಲಿಖಿತ ಹೇಳಿಕೆ ನೀಡಿ ಅವರ ಸುಪರ್ದಿಯಲ್ಲಿರುವ ಕಾರನ್ನು ನನಗೆ ತೋರಿಸಿರುತ್ತಾರೆ. ಅದನ್ನು ನಾನು ಖುದ್ದಾಗಿ ವೀಕ್ಷಿಸಿರುತ್ತೇನೆ. ತದನಂತರ ಸದ್ರಿ ಜಪ್ತು ಮಾಡಿದ ಸೊತ್ತುಗಳನ್ನು ವಾಹನ ಸಮೇತ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ಇವರಿಗೆ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2 ಇವರ ಮುಖಾಂತರ ದಿನಾಂಕ:20.06.2009 ರಂದು ಶಿಫಾರಸ್ಸು ವರದಿಯನ್ನು ನೀಡಿರುತ್ತೇನೆ. ಸದ್ರಿ ವರದಿಯ ಮೂಲ ಪ್ರತಿಯನ್ನು ನಿಶಾನೆ ಪಿ-5 ಎಂದು, ಅದರ ಮೇಲಿನ ಸಹಿಯನ್ನು ನಿಶಾನೆ ಪಿ-5 ಎ ಎಂದು ವಿಚಾರಣೆ ವೇಳೆಯಲ್ಲಿ ಗುರುತಿಸಿ ವಾಹನದ ಮಾಲೀಕರ ಪರ ಯಾರೊಬ್ಬರೂ ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮುಖ್ಯ ವಿಚಾರಣೆ ಮುಕ್ತಾಯಗೊಳಿಸಲಾಗಿದೆ.

ಈ ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಹಾಗೂ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಅಕ್ರಮ ಸೊತ್ತುಗಳು ಸಾರಾಯಿ ಎಂದು ರಾಸಾಯನಿಕ ವಿಶ್ಲೇಷಕರು ನೀಡಿದ ವರದಿಯಿಂದ ತಿಳಿದು ಬಂದಿದ್ದು ಹಾಗೂ ಸದ್ರಿ ಸೊತ್ತುಗಳನ್ನು ಸಾಗಾಟ ಮಾಡಿದ ಬಗ್ಗೆ ಯಾವುದೇ ರಹದಾರಿ ಪತ್ರವಿಲ್ಲದೇ ಇರುವುದರಿಂದ ವಾಹನ ನೊಂದಣಿ ಸಂ:KA-19N-7269 ಮಾರುತಿ ಆಲ್ಟೋ ಕಾರು ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ

ಸದರಿ ವಾಹನವನ್ನು ವಶಪಡಿಸಿಕೊಂಡು ಸುಮಾರು 2 ತಿಂಗಳಿಗಿಂತಲೂ ಹೆಚ್ಚು ಸಮಯ ಕಳೆದರೂ ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿಗಳು ಅಥವಾ ವಾಹನದ ಆರ್.ಸಿ. ಮಾಲೀಕರು ವಾಹನಕ್ಕೆ ಸಂಬಂಧಿಸಿ ವಾಹನದ ಮಾಲೀಕತ್ವವನ್ನು ನಿರೂಪಿಸಿ ಮಧ್ಯಂತರ ಬಿಡುಗಡೆ ಕೋರಿ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ವಾಹನದ ಮಾಲಿಕತ್ವವನ್ನು ತಿಳಿದುಕೊಳ್ಳುವರೇ ಏಕೈಕ ಮಾರ್ಗವಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಂಬಂಧಿಸಿದ ಪ್ರಾದೇಶಿಕ

ಸಾರಿಗೆ ಅಧಿಕಾರಿಗಳಿಂದ ಪಡೆದು.ಪರಿಶೀಲಿಸಲಾಗಿ ಜಪ್ತುಪಡಿಸಿದ ವಾಹನದ ಚಾಸಿಸ್/ಇಂಜಿನ್ ನಂಬರ್ ಬಿ.ಎಕ್ಸ್ ಟ್ರಾಕ್ಟ್ ವರದಿಯೊಂದಿಗೆ ತಾಳೆ ಕಂಡು ಬಾರದೇ ಇರುವುದರಿಂದ ಪ್ರಕರಣ ಸಂದರ್ಭದಲ್ಲಿ ವಾಹನಕ್ಕೆ ನಕಲಿ ನಂಬರ್ ಪ್ಲೇಟ್ ಅಳವಡಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.ಆದಾಗ್ಯೂ 'ಬಿ' ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿಸಿದ ವಾಹನದ ಮಾಲೀಕರಿಗೆ ನೀಡಲಾದ ಕಾರಣ ಕೇಳಿ ನೋಟೀಸಿಗೆ ಸದ್ರಿ ಆರ್.ಸಿ ಮಾಲೀಕರು ತನ್ನ ಒಡೆತನದಲ್ಲಿರುವ ಮಾರುತಿ ಆಲ್ಟೋ ಕಾರು ಸಂ:KA-19N-7269 ತನ್ನ ಸುಪರ್ದಿಯಲ್ಲೇ ಇದ್ದು, ಯಾವುದೇ ಅಕ್ರಮಗಳಲ್ಲಿ ಜಪ್ತಾಗಿರುವುದಿಲ್ಲ ಎಂದು ತಿಳಿಸಿರುವುದರಿಂದ, ಪ್ರಕರಣದ ಆರೋಪಿತ ವ್ಯಕ್ತಿಗಳು ಅಪರಾಧದಿಂದ ನುಣುಚಿಕೊಳ್ಳುವ ಸಲುವಾಗಿ ಜಪ್ತಾದ ವಾಹನಕ್ಕೆ ಉದ್ದೇಶ ಪೂರ್ವಕವಾಗಿ ನಕಲಿ ನಂಬರ್ ಪ್ಲೇಟನ್ನು ಅಳವಡಿಸಿಕೊಂಡು ತನ್ನ ತಿಳುವಳಿಕೆಯಿಂದಲೇ ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಕಂಡು ಬರುತ್ತದೆ.

ಅಲ್ಲದೆ ವಾಹನ ಮತ್ತು ಜಪ್ತು ಪಡಿಸಲಾದ ಇತರ ಸೊತ್ತುಗಳನ್ನು ತನ್ನ ಸುಪರ್ದಿಗೆ ಪಡೆಯಲು ಮತ್ತು ತಕ್ಷೀರನ್ನು ನಡೆಸಲು ಯಾರೊಬ್ಬರೂ ಉತ್ಸುಕರಿಲ್ಲದಿರುವುದನ್ನು ಪ್ರಾಧಿಕಾರವು ಮನಗಂಡು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿದ ಮಾರುತಿ ಆಲ್ಟೋ ಕಾರು ಸಂಖ್ಯೆ: KA-19N-7269 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತ ಹಾಗೂ ಯೋಗ್ಯವೆಂದು ತೀರ್ಮಾನಿಸಿ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು(2), ಮಂಗಳೂರು ದಕ್ಷಿಣ ವಲಯ-2, ಮಂಗಳೂರು ಇವರ ತಕ್ಷೀರು ಸಂಖ್ಯೆ; 3/2009-10 ದಿನಾಂಕ:14.05.2009 ರಲ್ಲಿ ಜಪ್ತುಪಡಿಸಿದ ಚಾಸಿಸ್ ಸಂ:MA3EYD81500-326263B4 ಮತ್ತು ಇಂಜಿನ್ ಸಂ:RL6C705151 ಇರುವ ನಕಲಿ ನೊಂದಾಣಿ ಸಂಖ್ಯೆ ಉಪಯೋಗಿಸಲಾಗಿರುವ ವಾಹನ ಮಾರುತಿ ಆಲ್ಟೋ ಕಾರು ಸಂಖ್ಯೆ: KA-19N-7269 ನ್ನು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43ಸಿ ಯಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:17.07.2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹ್ಮಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-I : ಶ್ರೀ.ಕೆ.ಕುಶಾಲಪ್ಪ ಗೌಡ,
ಅಬಕಾರಿ ಉಪ ನಿರೀಕ್ಷಕರು (2), ಮಂಗಳೂರು ದಕ್ಷಿಣ ವಲಯ-2, ಮಂಗಳೂರು.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ-I	: ಮಹಜರು ಪತಿ
ನಿಶಾನೆ ಪಿ-Iಎ	: ಅದರ ಮೇಲಿನ ಸಹಿ
ನಿಶಾನೆ ಪಿ-2	: ಪ್ರಥಮ ವರ್ತಮಾನ ವರದಿ
ನಿಶಾನೆ ಪಿ-2ಎ	: ಅದರ ಮೇಲಿನ ಸಹಿ
ನಿಶಾನೆ ಪಿ-3	: ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ-4	: ಬಿ ಎಕ್ಸ್‌ಟ್ರಾಕ್ಟ್ ವರದಿ
ನಿಶಾನೆ ಪಿ-5	: ತನಿಖಾ ವರದಿ
ನಿಶಾನೆ ಪಿ-5ಎ	: ಅದರ ಮೇಲಿನ ಸಹಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:

ಅರ್ಜಿದಾರರ ಹೇಳಿಕೆ: - ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು: - ಯಾವುದು ಇಲ್ಲ-

ನೂರ್ ಮಹ್ಮಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.734

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ,
ಮಂಗಳೂರು ಇವರ ನ್ಯಾಯಾಲಯದಲ್ಲಿ
ನಂ:ಎಸ್‌ಡಿಕೆ/368/ಡಿಟಿಸಿಆರ್/2004-05, ದಿನಾಂಕ:29ನೇ ಜುಲೈ, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:
ಅಬಕಾರಿ ಉಪ ನಿರೀಕ್ಷಕರು(1)
ಮಂಗಳೂರು ಉಪ ವಿಭಾಗ
ಮಂಗಳೂರು.

ಆರೋಪಿಗಳು:
1) ಸಿರಿಲ್ ಮಸ್ಕರೇನಸ್, ಬಿನ್ ಇನಾಸ್ ಮಸ್ಕರೇನಸ್,
ಶಕ್ತಿನಗರ ಗ್ರಾಮ ಮತ್ತು ಅಂಚೆ, ಮಂಗಳೂರು.
2) ಜನಾರ್ಧನ ಸಪಲ್ಯ, ಬಿನ್ ತಾಡ ಸಪಲ್ಯ, ಬೊಂಡಂತಿಲ,
ಪಡು ಅಂಚೆ, ಮಂಗಳೂರು.

ವಾಹನದ ಮಾಲೀಕರು
ಶ್ರೀ ವಲೇರಿಯನ್ ಮಸ್ಕರೇನಸ್, ಬಿನ್ ಇಗ್ನೇಷಿಯಸ್
ಮಸ್ಕರೇನಸ್, ನಿಯರ್ ಕೆನರಾ ರಬ್ಬರ್ ವರ್ಕ್ಸ್, ಶಕ್ತಿನಗರ,
ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು ಮಂಗಳೂರು ಉಪ ವಿಭಾಗ ಇವರು ದಿನಾಂಕ:05.04.2005 ರಂದು ಬೆಳಿಗ್ಗೆ 11-30 ಗಂಟೆ ಸಮಯಕ್ಕೆ ಮಂಗಳೂರು ತಾಲೂಕು ನೀರುಮಾರ್ಗ ಎಂಬ ಜಂಕ್ಷನ್‌ನಲ್ಲಿ ರಸ್ತೆಗಸ್ತು ನಿಮಿತ್ತ ಸಾಗುತ್ತಿರುವಾಗ ಅಭಿಮುಖವಾಗಿ ಒಂದು ಆಟೋರಿಕ್ಷಾ ಒಂದು ಭಾರವಾದ ವಸ್ತುಗಳನ್ನು ಹೇರಿಕೊಂಡು ಬರುತ್ತಿರುವುದನ್ನು ಗಮನಿಸಿ ಅನುಮಾನಗೊಂಡು ಸದ್ರಿ ಆಟೋ ರಿಕ್ಷಾವನ್ನು ತಡೆದು ನಿಲ್ಲಿಸಿದಾಗ ಅದರ ನೊಂದಣಿ ಸಂಖ್ಯೆ:CTX-8329 ಆಗಿದ್ದು, ಅದರಲ್ಲಿ ಚಾಲಕ ಮತ್ತು ಇನ್ನೋರ್ವ ವ್ಯಕ್ತಿಯಿದ್ದು, ಸದ್ರಿ ಆಟೋ ರಿಕ್ಷಾವನ್ನು ಶೋಧನೆ ನಡೆಸಲು ತೀರ್ಮಾನಿಸಿ, ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆಯಲು ಕಾಲಾವಕಾಶವಿಲ್ಲದ ಕಾರಣ ಅಬಕಾರಿ ಕಾಯಿದೆ 1965 ರ ಕಲಂ 54 ರ ಪ್ರಕಾರ ಶೋಧನಾ ವಾರೆಂಟನ್ನು ತಯಾರಿಸಿ, ಸದ್ರಿ ಆಟೋ ರಿಕ್ಷಾವನ್ನು ಶೋಧಿಸಲಾಗಿ, 35 ಲೀಟರ್ ಗಾತ್ರದ ಬಿಳಿ ಬಣ್ಣದ 8 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 280.000 ಲೀಟರ್ ಶೇಂದಿಯನ್ನು ಯಾವುದೇ ರಹದಾರಿ ಇಲ್ಲದೇ ಸಾಗಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿ, ಇದು ಅಕ್ರಮ ಶೇಂದಿ ಸಾಗಾಟವೆಂಬುದಾಗಿ ಖಚಿತಪಡಿಸಿಕೊಂಡು,ಇದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965ರ ಕಲಂ 11, 12 ಮತ್ತು 14(2) ಹಾಗೂ ಅಬಕಾರಿ ಕಾಯಿದೆ (ಶೇಂದಿ ಉತಾರು ನಿಯಮ) 1991ರ ನಿಯಮ 22 ರ ಉಲ್ಲಂಘನೆ ಆಗಿದ್ದು, ಕಲಂ 34 ಮತ್ತು 38 (ಎ) ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ವಾಹನ ಮತ್ತು 280.000 ಲೀಟರು ಶೇಂದಿಯನ್ನು ಜಪ್ತುಮಾಡಿ, ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ, ವಾಹನದಲ್ಲಿದ್ದ ಆರೋಪಿಗಳಾದ (1) ಸಿರಿಲ್ ಮಸ್ಕರೇನಸ್,ಬಿನ್:ಇನಾಸ್ ಮಸ್ಕರೇನಸ್, ಶಕ್ತಿನಗರ ಗ್ರಾಮ ಮತ್ತು ಅಂಚೆ, ಮಂಗಳೂರು. (2) ಜನಾರ್ಧನ ಸಪಲ್ಯ, ಬಿನ್:ತಾಡ ಸಪಲ್ಯ, ಬೊಂಡಂತಿಲ, ಪಡು ಅಂಚೆ, ಮಂಗಳೂರು ಇವರುಗಳ ವಿರುದ್ದ ತಕ್ಷೀರು ಸಂಖ್ಯೆ:19/04-05, ದಿನಾಂಕ:05.04.2005 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸದ್ರಿ ಸೊತ್ತುಗಳನ್ನು ಅಂತಿಮ ವರದಿ ಸಲ್ಲಿಸುವ ತನಕ ಅವರ ಸ್ವಾಧೀನದಲ್ಲಿಟ್ಟುಕೊಳ್ಳಲು ಪ್ರಾಧಿಕಾರದಲ್ಲಿ ಅನುಮತಿ ಕೋರಿದ ಮೇರೆಗೆ ಪ್ರಾಧಿಕಾರದ ದಿನಾಂಕ:06.04.2005ರ ಆದೇಶದಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ.

ಸೊತ್ತುಗಳ ವಿವರ

1) ಲ್ಯಾಂಬ್ರೆಟ್ಟಾ ಆಟೋ ರಿಕ್ಷಾ ನೊಂದಣಿ ಸಂ:CTX-8329

2) 35 ಲೀ ಗಾತ್ರದ 8 ಬಿಳಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 280.000 ಲೀ ಶೇಂದಿ.

(ಸದ್ರಿ ಪ್ರತಿ ಕ್ಯಾನಿನಿಂದ ತಲಾ ಒಂದೊಂದರಂತೆ 375 ಎಂಎಲ್ ನ 8 ಬಾಟಲಿಗಳಲ್ಲಿ ಶೇಂದಿಯನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆಯಲಾಗಿದೆ)

ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ನೊಂದಣಿ ಸಂ: CTX-8329 ಇದರ ನೊಂದಾಣಿ ಮಾಲೀಕರೆಂದು ಹೇಳಿಕೊಂಡ ಶ್ರೀ ವಲೇರಿಯನ್ ಮಸ್ಕರೇನಸ್, ಬಿನ್ ಇಗ್ನೇಷಿಯಸ್ ಮಸ್ಕರೇನಸ್, ನಿಯರ್ ಕೆನರಾ ರಬ್ಬರ್ ವರ್ಕ್ಸ್, ಶಕ್ತಿನಗರ, ಮಂಗಳೂರು ಇವರು ದಿನಾಂಕ:15.04.2005 ರಂದು ಅಂದಿನ ಪ್ರಾಧಿಕಾರದಲ್ಲಿ ಅರ್ಜಿಯನ್ನು ಸಲ್ಲಿಸಿ, ತಾನು ಸದ್ರಿ ರಿಕ್ಷಾದಲ್ಲಿ ದುಡಿದು, ಜೀವನ ಸಾಗಿಸುತ್ತಿದ್ದು, ಸದ್ರಿ ಶೇಂದಿಯನ್ನು ಶೇಂದಿ ಸೊಸೈಟಿಯವರ ಬಾಡಿಗೆಯ ಮೇಲೆ ಸಾಗಿಸುತ್ತಿದ್ದು, ಅಪರಾಧ ಇತ್ಯರ್ಥವಾಗುವವರೆಗೆ ಆಟೋ ರಿಕ್ಷಾವನ್ನು ತನಗೆ ಮಧ್ಯಂತರ ಸುಪರ್ದಿಗೆ ನೀಡಬೇಕೆಂದು ಹಾಗೂ ವಾಹನದ ಭದ್ರತೆಯ ಬಗ್ಗೆ ಮೌಲ್ಯಕ್ಕೆ ಸಮನಾವಾದ ಬ್ಯಾಂಕ್ ಗ್ಯಾರೆಂಟಿಯನ್ನು ಒಪ್ಪಿಸಲು ಬದ್ದನಾಗಿರುವುದಾಗಿ ತಿಳಿಸಿರುತ್ತಾರೆ.

ಅರ್ಜಿದಾರರ ಸದ್ರಿ ಅರ್ಜಿಯನ್ನು ಪರಿಗಣಿಸಿ, ಅಂದಿನ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/368/ ಡಿಟಿಸಿಆರ್/04-05 ದಿನಾಂಕ:15.04.2005 ರ ಆದೇಶದಲ್ಲಿ ಸದ್ರಿ ಆಟೋ ರಿಕ್ಷಾವನ್ನು ಮಾಲೀಕರಾದ ಶ್ರೀ ವಲೇರಿಯನ್ ಮಸ್ಕರೇನಸ್ ಇವರ ಮಧ್ಯಂತರ ಸುಪರ್ದಿಗೆ ರೂ. 3,500/- ಮೊತ್ತದ ಬ್ಯಾಂಕ್ ಗ್ಯಾರೆಂಟಿಯನ್ನು ಪ್ರಾಧಿಕಾರಕ್ಕೆ ಒಪ್ಪಿಸುವ ಹಾಗೂ ಇತರೇ ಷರತ್ತುಗಳ ಮೇಲೆ ಮಧ್ಯಂತರ ಬಿಡುಗಡೆ ಆದೇಶ ನೀಡಲಾಗಿರುತ್ತದೆ. ಆದೇಶದ ಪ್ರಕಾರ ವಾಹನದ ಮಾಲೀಕರು ರೂ.3,500/- ಮೊತ್ತದ ಬ್ಯಾಂಕ್ ಗ್ಯಾರೆಂಟಿ ಸಂ:250001 ದಿನಾಂಕ:15.04.2004ರಂತೆ ವಿಜಯ ಬ್ಯಾಂಕ್ ,ಬೆಂದೂರು ಶಾಖೆಯಿಂದ ಬ್ಯಾಂಕ್ ಗ್ಯಾರೆಂಟಿಯನ್ನು ಪಡೆದುಕೊಂಡು ಪ್ರಾದಿಕಾರಕ್ಕೆ ಸಲ್ಲಿಸಿದ್ದು, ವಾಹನವನ್ನು ದಿನಾಂಕ:18.04.2005ರಂದು ವಾಹನದ ಮಾಲೀಕರ ಸುಪರ್ಧಿಗೆ ಮಧ್ಯಂತರ ಬಿಡುಗಡೆ ಮಾಡಲಾಗಿರುತ್ತದೆ.

ಪ್ರಕರಣದಲ್ಲಿ ಜಪ್ತಾದ ವಾಹನ ಆಟೋ ರಿಕ್ಷಾ ನೊಂದಣಿ ಸಂ: CTX-8329 ಇದರ ನೊಂದಾಣಿ ಮಾಲೀಕರಾದ ಶ್ರೀ ವಲೇರಿಯನ್ ಮಸ್ಕರೇನಸ್, ಬಿನ್ ಇಗ್ನೇಷಿಯಸ್ ಮಸ್ಕರೇನಸ್, ನಿಯರ್ ಕೆನರಾ ರಬ್ಬರ್ ವರ್ಕ್ಸ್, ಶಕ್ತಿನಗರ, ಮಂಗಳೂರು ಇವರಿಗೆ ದಿನಾಂಕ:20.04.2005ರಂದು ಪ್ರಾದಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ಕಾರಣ ಕೇಳುವ ನೋಟಿಸನ್ನು ನೊಂದಾಯಿತ ಅಂಚೆ ಮೂಲಕ ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟಿಸು ವಾಹನದ ಮಾಲೀಕರಿಗೆ ದಿನಾಂಕ:30.04.2005 ರಂದು ಜ್ಯಾರಿಯಾಗಿದ್ದು, ದಿನಾಂಕ:06.05.2005ರಂದು ವಾಹನದ ಮಾಲೀಕರು ಸದ್ರಿ ನೋಟಿಸಿಗೆ ಉತ್ತರಿಸುತ್ತಾ ಪ್ರಕರಣದಲ್ಲಿ ಜಪ್ತುಪಡಿಸಿಕೊಳ್ಳಲಾದ ಶೇಂದಿ ಸಾಗಾಟಕ್ಕೆ ಯಾವುದೇ ರಹದಾರಿ ಪತ್ರದ ಅವಶ್ಯಕತೆಯಿಲ್ಲವೆಂದು ತಿಳಿಸಿ, ಪ್ರಕರಣದಲ್ಲಿ ಹೊರಿಸಲಾದ ಅರೋಪವನ್ನು ಅಲ್ಲಗಳೆದು ವಾಹನದ ಮುಟ್ಟುಗೋಲು ಅದೇಶವನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

ಪ್ರಕರಣದಲ್ಲಿ ಜಪ್ತಾದ ಶೇಂದಿಯ ಮಾದರಿಗಳನ್ನು ಪ್ರಕರಣದ ತನಿಖಾಧಿಕಾರಿಗಳು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ಕರ್ನಾಟಕ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಂದ ಪಡೆದ ವಿಶ್ಲೇಷಣಾ ವರದಿ ಸಂ:137-8 ದಿನಾಂಕ:09.06.2005ರ ಪ್ರತಿಯನ್ನು ಪ್ರಾದಿಕಾರಕ್ಕೆ ಸಲ್ಲಿಸಿ, ಸದ್ರಿ ವರದಿಯಲ್ಲಿ ಶೇಂದಿಯ ಮಾದರಿಗಳಲ್ಲಿ ಮದ್ಯಸಾರದ ಅಂಶ 1.25% V/v ಇದ್ದು, ಮಾದರಿಗಳಲ್ಲಿ ಸತ್ತ ಇರುವೆಗಳು ಹಾಗೂ ಇನ್ನಿತರ ಕ್ರಿಮಿಕೀಟಗಳಲ್ಲಿದ್ದು ಕೆಟ್ಟ ವಾಸನೆಯಿಂದ ಕೂಡಿದ್ದು, ಇದು ಮಾನವನ ಸೇವನೆಗೆ ಯೋಗ್ಯವಾಗಿರುವುದಿಲ್ಲ ಎಂದು ದೃಢೀಕರಿಸಲ್ಪಟ್ಟಿರುವುದರಿಂದ, ಸದ್ರಿ ಶೇಂದಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ದಿನಾಂಕ:24.12.2005ರಂದು ಶಿಫಾರಸ್ಸು ವರದಿಯನ್ನು ಸಲ್ಲಿಸಿರುತ್ತಾರೆ. ಆ ಪ್ರಕಾರ ಪ್ರಕರಣದಲ್ಲಿ ಜಪ್ತಾದ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ, ಜಪ್ತಾದ 280.000 ಲೀ ಶೇಂದಿ (ಮಾದರಿಗಳನ್ನು ಹೊರತು ಪಡಿಸಿ)ಯನ್ನು ಪ್ರಾಧಿಕಾರದ ದಿನಾಂಕ:16.01.2006ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಮೇಲಿನ ವಿದ್ಯಾಮಾನಗಳನ್ನು ಅವಲೋಕಿಸಿ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ನಡೆಸುವರೇ ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ ಸರ್ಕಾರದ ಪರ 3 ಸಾಕ್ಷಿಧಾರರುಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಗಳನ್ನು ಹಾಗೂ ಪ್ರತಿರಕ್ಷಾ ಸಾಕ್ಷಿಯ ಹೇಳಿಕೆಯನ್ನು ಪಡೆಯಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1) ಮೊದಲನೇ ವಿವಾದಾಂಶ: ದಿನಾಂಕ:05.04.2005 ರಂದು ಆಟೋರಿಕ್ಷಾ ನೊಂದಣಿ ಸಂ:CTX-8329 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಶೇಂದಿಯನ್ನು ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಶೇಂದಿಯನ್ನು ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ ಕೃಷ್ಣ ನಾಯ್ಕ್, ಅ.ಉ.ನಿ, ಸುಳ್ಯ ಜಾರಿ ಮತ್ತು ತನಿಖೆರವರು ದಿನಾಂಕ:26.04.2007ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ. ರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ದಿನಾಂಕ:25.06.2005ರಿಂದ ನಾನು ಜಾರಿ ಮತ್ತು ತನಿಖೆ ಮಂಗಳೂರು ದಕ್ಷಿಣ ಅಬಕಾರಿ ಉಪ

ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ:28.05.2005ರಂದು ಈ ಪ್ರಕರಣದ ಕಡತವನ್ನು ಮಂಗಳೂರು ಉಪ ವಿಭಾಗದ ಅ.ಉ.ನಿ ರಿಂದ ಪಡೆದುಕೊಂಡಿರುತ್ತೇನೆ. ದಿನಾಂಕ:23.06.2005ರಂದು ಈ ಪ್ರಕರಣದ 8 ಮಾದರಿ ಸೀಸೆಗಳನ್ನು ಹಾಗೂ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ:24.12.2005ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸುವಂತೆ ಕೋರಿ ಒಂದು ವರದಿಯನ್ನು ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ದ.ಕ ಮಂಗಳೂರು ಇವರಿಗೆ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿದೆನು. ಅದನ್ನು ನಿಶಾನೆಪಿ-1 ಎಂದು ಗುರುತಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರ.ಮಾ.ವರದಿಯನ್ನು ನೋಡಿದೆನು. ಅದನ್ನು ನಿಶಾನೆಪಿ-2 ಎಂದು ಗುರುತಿಸಲಾಯಿತು. ಮಹಜರನ್ನು ಗುರುತಿಸಿದೆನು. ಅದನ್ನು ನಿಶಾನೆ ಪಿ-3 ಎಂದು ಗುರುತಿಸ ಲಾಯಿತು. ರಸಾಯನಿಕ ತಜ್ಞರ ವರದಿಯನ್ನು ನೋಡಿದೆನು ಅದನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ತಯಾರಿಸಿದ ಸರ್ಚ್‌ಲಿಸ್ಟ್ ನೋಡಿದೆನು. ಅದನ್ನು ನಿಶಾನೆ ಪಿ-6 ಎಂದು ಗುರುತಿಸಲಾಯಿತು. ಈ ಪ್ರಕರಣದ ತನಿಖೆ ಮುಕ್ತಾಯಗೊಂಡ ನಂತರ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಇಲ್ಲಿಗೆ ಮುಖ್ಯ ವಿಚಾರಣೆ ಕೊನೆಗೊಂಡಿರುತ್ತದೆ.

ಪಾಟೀ ಸವಾಲು: ವಾಹನದ ಮಾಲೀಕರಾಗಲೀ, ಮಾಲೀಕರ ಪರ ವಕೀಲರಾಗಲೀ ಯಾರೂ ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಅಭಿಯೋಗದ ಪರ ಸಾಕ್ಷಿದಾರರನ್ನು ರಕ್ಷಣಾ ಪರ ವಕೀಲರಾದ ಶ್ರೀ ಕೆ. ಶಿವರಾಮ ಆಳ್ವ ಇವರು ಪಾಟೀ ಸವಾಲು ನಡೆಸಲಾಗಿ ಸಾಕ್ಷಿದಾರರು ಪಾಟೀ ಸವಾಲಿಗೆ ಉತ್ತರಿಸುತ್ತಾ: ನಾನು ರಾಸಾಯನಿಕ ವಿಶ್ಲೇಷಕರಿಂದ ವಿಶ್ಲೇಷಣೆ ನಡೆಸಲಾದ ಸೀಲ್ ಮಾಡಿದ ಖಾಲಿ ಬಾಟಲಿಗಳನ್ನು ಹಿಂದಕ್ಕೆ ಪಡೆದಿರುತ್ತೇನೆ. ನಾನು ರಾಸಾಯನಿಕ ವಿಶ್ಲೇಷಕರ ವರದಿಯನ್ನು ಪರಿಶೀಲಿಸಿರುತ್ತೇನೆ. ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸುವ ಶೇಂದಿ ಮಾದರಿಯಲ್ಲಿ ಎಷ್ಟು ಪ್ರಮಾಣದ ಅಲ್ಕೋಹಾಲ್ ಇಥೆಲ್ ಮದ್ಯಸಾರ ಗುಣಮಟ್ಟ ಹೊಂದಿರಬೇಕಾಗಿ ನನಗೆ ತಿಳಿದಿರುವುದಿಲ್ಲ. ರಾಸಾಯನಿಕ ವಿಶ್ಲೇಷಣೆಗೆ ಕಳಿಸಿದಂತಹ ಶೇಂದಿ ಮಾದರಿಯು ಮಾನವ ಸೇವನೆಗೆ ಯೋಗ್ಯವಾಗಿರುವುದಿಲ್ಲವೆಂದು ನೀಡಿದ ವರದಿ ಸದ್ರಿ ಪ್ರಕರಣದಲ್ಲಿ ವಶಪಡಿಸಿಕೊಂಡಿರುವುದು ಶೇಂದಿಯೇ ಅಲ್ಲ ಎಂಬುದು ಸರಿಯಲ್ಲ, ವಶಪಡಿಸಿಕೊಂಡಿರುವ ಶೇಂದಿಯನ್ನು ನಾನು ಪರಿಶೀಲಿಸಿರುತ್ತೇನೆ. ಸದ್ರಿ ವಶಪಡಿಸಿರುವ ಶೇಂದಿಯನ್ನು ನಾಶಪಡಿಸಿದ ಸಮಯದಲ್ಲಿ ಅದರಲ್ಲಿ ಸತ್ತ ಇರುವೆಗಳು ಮತ್ತು ಇತರೆ ಕಶ್ಮಲಗಳು ಕ್ರಿಮಿಕೀಟಗಳಿಂದ ಕೂಡಿರುವುದಿಲ್ಲ, ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ವಾಹನದ ಮಾಲೀಕರ ಬಗ್ಗೆ ನಾನು ತನಿಖೆ ನಡೆಸಿರುವುದಿಲ್ಲ. ಈ ಪ್ರಕರಣದ ಇತರೆ ಆರೋಪಿಗಳನನ್ನು ತರಿಸಿ ಅವರಲ್ಲಿ ಯಾವುದೇ ತನಿಖೆ ಮಾಡಿರುವುದಿಲ್ಲ. ಈ ಪ್ರಕರಣದಲ್ಲಿ ಆರ್.ಸಿ ಮಾಲೀಕರು ದಾಖಲಾಗಿರುವುದೆಂದು ನಾನು ತಿಳಿಸಿರುತ್ತೇನೆ. ಸದ್ರಿ ವಾಹನದ ಆರ್.ಸಿ. ಮಾಲೀಕರ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಆಧರಿಸಿ ಈ ಪ್ರಕರಣದಲ್ಲಿ ಅವರು ಅರೋಪಿ ಎಂಬುದನ್ನು ಸೇರಿಸಿರುತ್ತೇನೆ. ಪ್ರಕರಣದ ದಾಖಲೆಗಳ ಆಧಾರದಂತೆ ವಾಹನದ ಮಾಲೀಕರು ಈ ಪ್ರಕರಣಕ್ಕೆ ಸಂಬಂಧಿಸಿ ಆರೋಪಿ ಆಗಿರುತ್ತಾರೆ ಎಂಬ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ಸ್ಪಷ್ಟಪಡಿಸಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿ ಯಾವುದೇ ತನಿಖೆ ನಡೆಸದೇ ಸುಳ್ಳು ಅರೋಪಣಾ ಪಟ್ಟಿ ಸಲ್ಲಿಸಿರುವುದು ಎಂದರೆ ಸರಿಯಲ್ಲ ಎಂದು ಸಾಕ್ಷಿದಾರರು ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಾ.ಸ-2:

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ ಕೃಷ್ಣಪ್ಪ ಎಂ, ಅಬಕಾರಿ ಉಪ ನಿರೀಕ್ಷಕರು, ಮೆ:ಎ.ಜೆ ಡಿಸ್ಟಿಲರಿ, ಬೈಕಂಪಾಡಿರವರು ದಿನಾಂಕ:14.06.2009ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ. ರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ಮೇ-2003 ರಿಂದ ಮೇ-2005 ರವರೆಗೆ ಮಂಗಳೂರು ಉಪ ವಿಭಾಗದಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ದಿನಾಂಕ:05.04.2005ರಂದು ಬೆಳಿಗ್ಗೆ 11-30ರ ಸಮಯಕ್ಕೆ ಮಂಗಳೂರು ನೀರುಮಾರ್ಗ ಎಂಬಲ್ಲಿ ನಾನು ಸಿಬ್ಬಂದಿಯೊಂದಿಗೆ ಗಸ್ತು ಕರ್ತವ್ಯಕ್ಕಾಗಿ ನಮ್ಮ ಇಲಾಖಾ ವಾಹನದಲ್ಲಿ ಹೋಗುತ್ತಿದ್ದೆವು. ನಾವು ಹೋಗುವಾಗ ನಮ್ಮ ಎದುರಿನಿಂದ ಒಂದು ಆಟೋರಿಕ್ಷಾದಲ್ಲಿ ಭಾರವಾದ ವಸ್ತುವನ್ನು ಹೊಂದಿ ಬರುವುದನ್ನು ನೋಡಿದೆವು. ನಾವು ಅನುಮಾನದಿಂದ ಸದ್ರಿ ಆಟೋರಿಕ್ಷಾವನ್ನು ತಡೆದು ನಿಲ್ಲಿಸಿದಾಗ ಅದರಲ್ಲಿ ಒಬ್ಬ ಚಾಲಕ ಹಾಗೂ ಇನ್ನೊಬ್ಬ ವ್ಯಕ್ತಿ ಇರುವುದು ಕಂಡು ಬಂತು. ಸದ್ರಿ ಆಟೋದಲ್ಲಿ ರಿಕ್ಷಾವನ್ನು ಪರಿಶೀಲಿಸುವ ಮುನ್ನ ಕಾನೂನಿನಂತೆ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆದುಕೊಳ್ಳಲು ಕಾಲಾವಕಾಶ ಇರಲಿಲ್ಲ. ಸ್ಥಳದಲ್ಲಿ ಕೂಡಲೇ ಒಂದು ಸರ್ಚ್ ಮೆಮೋ ತಯಾರಿಸಿ ವಾರೆಂಟ್ ಪಡೆಯದೇ ಇರುವುದಕ್ಕೆ ಕಾರಣಗಳನ್ನು ನಮೂದಿಸಿದೆವು ಸದ್ರಿ ಅಟೋ ರಿಕ್ಷಾದಲ್ಲಿದ್ದ ಕ್ಯಾನುಗಳಲ್ಲಿ ಒಟ್ಟು 8 ಕ್ಯಾ ನುಗಳನ್ನು ಪರಿಶೀಲಿಸಿ ನೋಡಲಾಗಿ ಅವುಗಳಲ್ಲಿ ಶೇಂದಿ ತುಂಬಿರುವುದು ಕಂಡು ಬಂತು. ಸದ್ರಿ ಶೇಂದಿ ತುಂಬಿದ ಕ್ಯಾನುಗಳನ್ನು ಆಟೋರಿಕ್ಷಾದಲ್ಲಿ ಸಾಗಾಟ ಮಾಡಲು ಯಾವುದೇ ಪರವಾನಿಗೆ ಚಾಲಕನ ಅಥವಾ ಇನ್ನೊಬ್ಬ ವ್ಯಕ್ತಿಯ ಬಳಿಯಲ್ಲಿ ಇರಲಿಲ್ಲ. ವಾಹನದ ಚಾಲಕನು ತಾನು ಬಾಡಿಗೆಗಾಗಿ ಸದ್ರಿ ಶೇಂದಿಯನ್ನು ಅಟೋದಲ್ಲಿ ಸಾಗಿಸುವುದಾಗಿ ತಿಳಿಸಿದನು. ಆಟೋದಲ್ಲಿದ್ದ 8 ಕ್ಯಾನುಗಳನ್ನು ರಿಕ್ಷಾದಿಂದ ಇಳಿಸಿ ಪರಿಶೀಲಿಸಿದೆವು. ಪ್ರತಿ ಕ್ಯಾನಿನಿಂದ 375 ಮಿಲಿ ಲೀಟರ್ ಗಾತ್ರದ ಸೀಸೆಯಲ್ಲಿ ಶೇಂದಿಯನ್ನು

ತೆಗೆದು ಒಟ್ಟು 8 ಮಾದರಿ ಸೀಸೆಗಳನ್ನು ತಯಾರಿಸಿ ಅವುಗಳ ಬಾಯಿಗೆ ಬಟ್ಟೆ ಕಟ್ಟಿ ನಮ್ಮ ಇಲಾಖಾ ಸೀಲನ್ನು ಮುದ್ರಿಸಿದೆವು. ಸ್ಥಳದಲ್ಲಿ ಮಾದರಿ ಸೀಲನ್ನು ತಯಾರಿಸಿದೆವು. ಸ್ಥಳದಲ್ಲಿ ಒಂದು ಮಹಜರನ್ನು ತಯಾರಿಸಿ, ಸ್ಥಳದಲ್ಲಿ ಅರೋಪಿತರನ್ನು ಹಾಗೂ ಸೊತ್ತುಗಳನ್ನು ವಶಕ್ಕೆ ಪಡೆದುಕೊಂಡು ನಮ್ಮ ಮಂಗಳೂರಿನ ಉಪ ವಿಭಾಗದ ಕಛೇರಿಗೆ ಬಂದೆವು. ಅಲ್ಲಿ ಒಂದು ಪ್ರ.ಮಾ.ವ ನ್ನು ತಯಾರಿಸಿ ಜೆ.ಎಂ.ಎಫ್. ಸಿ ನ್ಯಾಯಾಲಯಕ್ಕೂ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೂ ಸಲ್ಲಿಸಿರುತ್ತೇನೆ. ಅರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ದಿನಾಂಕ:18.04.2005ರಂದು ಈ ಪ್ರಕರಣದ ಕೋರಿಕೆ ಪತ್ರ ಮತ್ತು ಮಾದರಿ ಸೀಸೆಗಳನ್ನು ಶ್ರೀ.ಪ್ರೇಮಾನಂದ, ಅಬಕಾರಿ ರಕ್ಷಕ ಇವರ ಮುಖಾಂತರ ರಾಸಾಯನಿಕ ತಜ್ಞರು, ಮಂಗಳೂರು ಇವರ ಕಛೇರಿಗೆ ಕಳುಹಿಸಿದೆನು. ನಂತರ ದಿನಾಂಕ:28.05.2005ರಂದು ಈ ಪ್ರಕರಣದ ಕಡತವನ್ನು ಕೃಷ್ಣ ನಾಯಕ್ ಅಬಕಾರಿ ಉಪ ನಿರೀಕ್ಷಕರು ಇವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ. ನಿಶಾನೆ ಪಿ-6ರಲ್ಲಿ ರುವರ ಸಹಿಯು ನನ್ನದಾಗಿರುತ್ತದೆ. ಶೋಧನಾ ಪಟ್ಟಿ ನಿಶಾನೆ ಪಿ-5 ಇದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ನಿಶಾನೆ ಪಿ-3 ಸ್ಥಳ ಮಹಜರು ಇದ್ದು ಅದರಲ್ಲಿ ನನ್ನ ಸಹಿ ಇದೆ. ನಿಶಾನೆ ಪಿ-2 ಪ್ರಥಮ ಮಾಹಿತಿ ವರದಿ ಆಗಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಪ್ರಕರಣದಲ್ಲಿ ಅಬಕಾರಿ ಕಾಯ್ದೆ ಕಲಂ 43ಎ ಯಡಿಯಲ್ಲಿ ಒಂದು ವರದಿಯನ್ನು ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿದ್ದು ಅದನ್ನು ನಿಶಾನೆ ಪಿ-7 ಎಂದು ಗುರುತಿಸಿ ಪ್ರಾ.ಸಾ-2ರವರ ಸಾಕ್ಷಿ ವಿಚಾರಣೆಯನ್ನು ಕೊನೆ ಗೊಳಿಸಲಾಗಿರುತ್ತದೆ.

ಪ್ರಾ.ಸಾ-2 ರವರನ್ನು ರಕ್ಷಣಾ ಪರ ವಕೀಲರಾದ ಶ್ರೀ ಕೆ.ಎಸ್.ಆಳ್ವ ಇವರು ಪಾಟೀಸವಾಲು ನಡೆಸಿದ್ದು ಸಾಕ್ಷಿದಾರರು ಪಾಟೀ ಸವಾಲಿಗೆ ಉತ್ತರಿಸುತ್ತಾ ಪ್ರಕರಣದಲ್ಲಿ ಮೊದಲೇ ಖಚಿತ ವರ್ತಮಾನ ಬಂದಿರುವುದಿಲ್ಲ. ಆ ದಿನ ಕುಲಶೇಖರ ಜಂಕ್ಷನ್‌ನಿಂದ ಮೂಡಬಿದ್ರೆ ಹೋಗುವ ರಸ್ತೆಯಲ್ಲಿ ಹೋಗುತ್ತಿದ್ದೆವು. ಕುಲಶೇಖರ ಕಡೆಯಿಂದ ನೀರುಮಾರ್ಗ ಹೋಗುವಾಗ ನಾವು ರಸ್ತೆಯ ಎಡಬದಿಯಲ್ಲಿ ಹೋಗುತ್ತಿದೆವು. ನೀರುಮಾರ್ಗದ ಕಡೆಯಿಂದ ಕುಲಶೇಖರದ ಕಡೆಗೆ ಬರಬೇಕಾದರೆ ನಮ್ಮ ಬಲ ಬದಿಯಿಂದ ಬರಬೇಕಾಗುತ್ತದೆ. ಕುಲಶೇಖರ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತದೆ. ನಾವು ಪ್ರಕರಣದ ವಾಹನವನ್ನು ಶೋಧಿಸುವ ಮೊದಲು ಬೇರೆ ವಾಹನಗಳನ್ನು ಪರಿಶೀಲಿಸಿರುತ್ತೇವೆ. ತಕ್ಷೀರು ಸ್ಥಳವು ರಾಷ್ಟ್ರೀಯ ಹೆದ್ದಾರಿಯಾಗಿರುವುದಿಲ್ಲ. ನಮ್ಮನ್ನು ನೋಡಿದ ತಕ್ಷಣ ವಾಹನದಲ್ಲಿದ್ದವರು ಓಡಲು ಪ್ರಯತ್ನಿಸಿರುವುದಿಲ್ಲ, ವಾಹನವನ್ನು ಶೋದನೆ ಮಾಡುವ ಸಮಯ ವಾಹನದ ಹತ್ತಿರ ಜನರು ಸೇರಲಿಲ್ಲ. ಆ ದಿನ ಸಿಬ್ಬಂದಿ ಸೇರಿ ಒಟ್ಟು 4 ಜನ ಇದ್ದೆವು. ಪ್ರಕರಣದ ಸಂದರ್ಭದಲ್ಲಿ ಇದ್ದ ಇಲಾಖಾ ವಾಹನದ ನೊಂದಣಿ ಸಂಖ್ಯೆ ಮಹಜರಿನಲ್ಲಿ ನಮೂದಿಸಿಲ್ಲ. ಇಲಾಖಾ ವಾಹನದ ಚಾಲಕರ ಸಹಿಯನ್ನು ಮಹಜರಿನಲ್ಲಿ ಪಡೆದುಕೊಳ್ಳಲಿಲ್ಲ. ಮಹಜರು ಮಾಡುವಾಗ ಸ್ವತಂತ್ರ ಸಾಕ್ಷಿದಾರರು ಲಭ್ಯವಿಲ್ಲದೇ ಇರುವುದರಿಂದ ಅವರ ಸಹಿಯನ್ನು ಪಡೆದುಕೊಂಡಿಲ್ಲ. ತಕ್ಷೀರು ಸ್ಥಳವು ರಾಷ್ಟ್ರೀಯ ಹೆದ್ದಾರಿಯಿಂದ ಎಷ್ಟು ದೂರದಲ್ಲಿದೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಶೇಂದಿಯಲ್ಲಿ ಮದ್ಯಸಾರ ಶೇಕಡಾ ಎಷ್ಟು ಇರಬೇಕಾಗಿದೆ ಎಂದು ನನಗೆ ಗೊತ್ತಿಲ್ಲ. ವಾಸನೆ ಆಧಾರದ ಮೇಲೆ ಅದು ಶೇಂದಿ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಮಾದರಿ ಸೀಸೆಯನ್ನು ತಯಾರಿಸುವ ಸಂದರ್ಭದಲ್ಲಿ ಶೇಂದಿಯಲ್ಲಿ ಯಾವುದೇ ಕ್ರಿಮಿಗಳು ಇದ್ದವೋ, ಇಲ್ಲವೋ ಎಂಬುದನ್ನು ಗಮನಿಸಿಲ್ಲ. ಆ ದಿವಸ ಯಾವುದೇ ರೀತಿಯ ಮುದ್ದೆ ಮಾಲನ್ನು ವಶಪಡಿಸಿಕೊಂಡಿಲ್ಲ ಎಂಬುವುದು ಸರಿಯಲ್ಲ. ತಕ್ಷೀರು ಸ್ಥಳದಿಂದ ಮಂಗಳೂರು ಗ್ರಾಮಾಂತರ ಪ್ರದೇಶ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಕುಲಶೇಖರ ಜಂಕ್ಷನ್‌ನಿಂದ ನೀರುಮಾರ್ಗಕ್ಕೆ ಹೋಗುವ ರಸ್ತೆ ಎತ್ತರದಲ್ಲಿದೆ ಎನ್ನುವುದು ಸರಿ, ನಮ್ಮ ವಾಹನ ತಾಸಿಗೆ 40 ಕಿ.ಮಿ ವೇಗದಲ್ಲಿ ಸಂಚರಿಸುತ್ತಿತ್ತು. ಸದ್ರಿ ಆಟೋರಿಕ್ಷಾ ನಿಧಾನಕ್ಕೆ ಬರುತ್ತಿತ್ತು. ತಕ್ಷೀರು ಸ್ಥಳದ ಸಿಬ್ಬಂಧಿಯನ್ನು ಮಹಜರಿನಲ್ಲಿ ನಮೂದಿಸಿಲ್ಲವೆಂದರೆ ಸರಿ. ವಾಹನಕ್ಕೆ ಸಂಬಂಧಿಸಿದ ಆರ್.ಸಿ ಪುಸ್ತಕವನ್ನು ಪರಿಶೀಲಿಸಿದೆವು. ಸದ್ರಿ ಅಟೋ ಲ್ಯಾಂಬಿ ಕಂಪನಿಗೆ ಸಂಬಂಧಪಟ್ಟಿದ್ದು. ಸದ್ರಿ ವಿಷಯವನ್ನು ಮಹಜರಿನಲ್ಲಿ ನಮೂದಿಸಿಲ್ಲ. ವಾಹನದ ಚಾಲಕನು ತಾನು ಬಾಡಿಗೆಗಾಗಿ ಬಂದಿರುತ್ತೇನೆ ಎಂದು, ತಾನು ನಿರಪಾರಾಧಿ ಎಂದು ಹೇಳಿದ್ದಾನೆ. ನಾನು ಆ ದಿವಸ ತಕ್ಷೀರು ಸ್ಥಳಕ್ಕೆ ಹೋಗಲಿಲ್ಲ ಎಂದು ಹೇಳುವುದು ಸರಿಯಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋದದ್ದೇ ಇಲ್ಲ ಎಂದು ಹೇಳುವುದು ಸರಿಯಲ್ಲ, ತಕ್ಷೀರು ಸ್ಥಳಕ್ಕೆ ಹೋಗದೇ ಇರುವುದರಿಂದ ನಾನು ಯಾವುದೇ ಸ್ವತಂತ್ರ ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿಲ್ಲ ಎಂದು ಹೇಳುವುದು ಸರಿಯಲ್ಲ .ಇಲ್ಲಿಗೆ ಪಾಟೀ ಸವಾಲು ಕೊನೆಗೊಂಡಿರುತ್ತದೆ.

ಪ್ರಾ.ಸ-3:

ಪ್ರಾಸಿಕ್ಯೂಶನ್ ಪರ ಸಾಕ್ಷಿದಾರರಾದ ಶ್ರೀ ಪ್ರೇಮಾನಂದ, ಅಬಕಾರಿ ರಕ್ಷಕ ಇವರು ದಿನಾಂಕ:14.06.2009ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ ರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ ದಿನಾಂಕ:18.04.2005ರಂದು ಈ ಪ್ರಕರಣದ 8 ಮಾದರಿ ಸೀಸೆಗಳನ್ನು ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗ ಇವರಿಂದ ಕೋರಿಕೆ ಪತ್ರ ಜೊಂದಿಗೆ ಪಡೆದುಕೊಂಡು ಅದೇ ದಿನ ಮಂಗಳೂರಿನ ರಾಸಾಯನಿಕ ತಜ್ಞರ ಕಛೇರಿಗೆ ತಲುಪಿಸಿದ್ದೆನು. ದಿನಾಂಕ:23.06.2005 ರಂದು ಪರೀಕ್ಷಿಸಿದ ಮಾದರಿ ಸೀಸೆಗಳನ್ನು ತಜ್ಞರ ವರದಿ ಯೊಂದಿಗೆ ಪಡೆದುಕೊಂಡು ನಮ್ಮ ಕಛೇರಿಗೆ ತಲುಪಿಸಿರುತ್ತೇನೆ ಎಂದು ಮುಖ್ಯ ವಿಚಾರಣೆ ವೇಳೆಯಲ್ಲಿ ಸಾಕ್ಷಿ ನೀಡಿರುತ್ತಾರೆ.

ಪ್ರಾ.ಸಾ-3 ರಕ್ಷಣಾ ಪರ ವಕೀಲರಾದ ಶ್ರೀ ಕೆ.ಎಸ್.ಆಳ್ವ ಇವರು ಪಾಟೀಸವಾಲು ನಡೆಸಿದ್ದು, ಸಾಕ್ಷಿದಾರರು ಪಾಟೀ ಸವಾಲಿಗೆ ಉತ್ತರಿಸುತ್ತಾ ಮಾದರಿ ಸೀಸೆಗಳನ್ನು ಕೊಂಡುಹೋಗುವಾಗ ಅದರ ಮುಚ್ಚಳ ಬಟ್ಟೆಯಿಂದ ಸುತ್ತಿ ಸೀಲ್

ಮಾಡಲಾಗಿತ್ತು. ತಜ್ಞರು ಪರೀಕ್ಷಿಸಿದ ನಂತರ ಸದ್ರಿ ಸೀಸೆಗಳನ್ನು ತರುವಾಗ ಸೀಸೆಗಳಲ್ಲಿದ್ದ ಶೇಂದಿ ನನಗೆ ಕಾಣುತ್ತಿತ್ತು.ಅದರಲ್ಲಿ ಕ್ರಿಮಿಗಳು ಇರುವುದು ನನಗೆ ಕಂಡಿಲ್ಲ ,ವಾಸನೆಯು ಕೂಡಾ ಬರುತ್ತಿರಲಿಲ್ಲ. ನಾನು ಈ ತಕ್ಷೀರಿಗೆ ಸಂಬಂಧಪಟ್ಟ ಯಾವುದೇ ಮಾದರಿ ಸೀಸೆಗಳನ್ನು ತಜ್ಞರಲ್ಲಿಗೆ ಕೊಂಡೊಯ್ಯಲಿಲ್ಲ ಎನ್ನುವುದು ಸರಿಯಲ್ಲ ವೆಂದು ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ರಕ್ಷಣಾ ಸಾಕ್ಷಿ ವಿಚಾರಣೆ:

ಡಿಡಬ್ಲ್ಯೂ-1 ಪ್ರಕರಣದಲ್ಲಿ ಜಪ್ತಾದ ವಾಹನದ ಆರ್.ಸಿ. ಮಾಲೀಕರಾದ ಶ್ರೀ ವಲೇರಿಯನ್ ಮಸ್ಕರೇನಸ್ ಇವರು ದಿನಾಂಕ:25.02.2009ರಂದು ತಮ್ಮ ರಕ್ಷಣಾ ಸಾಕ್ಷಿಯನ್ನು ನೀಡುತ್ತಾ ನಾನು ಸಿ.ಟಿ.ಎಕ್ಸ್ –8329 ಲಾಮ್ರೆಟಾ ಆಟೋರಿಕ್ಷಾದ ಮಾಲಿಕನಾಗಿರುತ್ತೇನೆ. ಸದ್ರಿ ವಾಹನವನ್ನು ಜೀವನೋಪಯೋಗಕ್ಕಾಗಿ ತೆಗೆದು ಕೊಂಡಿರುತ್ತೇನೆ. ಸದ್ರಿ ಆಟೋರಿಕ್ಷಾವನ್ನು ನಾನೇ ಚಾಲನೆ ಮಾಡುತ್ತಿದ್ದೇನೆ ಅದಲ್ಲದೇ ನನಗೆ ಪೆಯಿಂಟ್ ಕೆಲಸ ಕೂಡಾ ಇದೆ. ದಿನಾಂಕ:05.04.2005 ರಂದು ಸದ್ರಿ ವಾಹನವನ್ನು ನನ್ನ ಮನೆಯ ಹತ್ತಿರದ ಸಿರಿಲ್ ಎಂಬವರಿಗೆ ಬಾಡಿಗೆಗೆ ಕೊಟ್ಟಿರುತ್ತೇನೆ.

ಸದ್ರಿ ಸಿರಿಲ್ ಎನ್ನುವ ವ್ಯಕ್ತಿಗೆ ವಾಹನವನ್ನು ಕೊಡುವಾಗ ಕಾನೂನುಬಾಹಿರವಾಗಿ ಯಾವುದೇ ವಸ್ತುವನ್ನು ಸಾಗಾಟ ಮಾಡಬಾರದಾಗಿ ತಿಳಿಸಿರುತ್ತೇನೆ. ಸದ್ರಿ ವ್ಯಕ್ತಿಯನ್ನು ನಾನು 20 ವರ್ಷದಿಂದ ತಿಳಿದಿರುತ್ತೇನೆ. ಸಿರಿಲ್ ಎಂಬವರ ಮನೆ ನಮ್ಮ ಮನೆಯಿಂದ 2 ಕಿ.ಮೀ ದೂರದಲ್ಲಿದೆ. ದಿನಾಂಕ:20.05.2005ರಂದು ಸದ್ರಿ ವಾಹನವನ್ನು ಸಂಜೆ ಮನೆಗೆ ತಂದು ನಿಲ್ಲಿಸದ ಕಾರಣ ಮರುದಿವಸ ಬೆಳಿಗ್ಗೆ ವಿಚಾರಿಸಿದಾಗ ವಾಹನವು ಬಿಜೈ ಅಬಕಾರಿ ಇಲಾಖೆಯಲ್ಲಿದೆ ಎಂದು ತಿಳಿಸಿದರು. ಸದ್ರಿ ವಾಹನದಲ್ಲಿ ಶೇಂದಿ ಸಾಗಾಟ ಮಾಡುತ್ತಿದ್ದರು ಎಂದು ಕೇಸು ಹಾಕಿದರು ಎಂದು ಸಿರಿಲ್‌ರವರು ನನಗೆ ತಿಳಿಸಿರುತ್ತಾರೆ. ಸದ್ರಿ ತಕ್ಷೀರಿನಲ್ಲಿ ಪ್ರತ್ಯಕ್ಷವಾಗಿ ಯಾಗಲೀ ಅಥವಾ ಪರೋಕ್ಷವಾಗಿ ಯಾಗಲೀ ನಾನು ಶಾಮೀಲಾಗಿರುವುದಿಲ್ಲ. ತಕ್ಷೀರಿಗೆ ಸಂಬಂಧಿಸಿದಂತೆ ನನಗೆ ಈ ತನಕ ನ್ಯಾಯಾಲಯದಿಂದ ಯಾವುದೇ ಸಮನ್ಸ್ ಬಂದಿರುವುದಿಲ್ಲ. ವಾಹನದ ವಿರುದ್ಧ ದಾಖಲಾದ ಮೊಕದ್ದಮೆಯನ್ನು ರದ್ದುಗೊಳಿಸಿ ವಾಹನವನ್ನು ನನಗೆ ಕೊಡಬೇಕಾಗಿ ಕೋರುತ್ತಾ ಮುಖ್ಯ ವಿಚಾರಣೆ ವೇಳೆ ಹೇಳಿಕೆ ನೀಡಿರುತ್ತಾರೆ.

ರಕ್ಷಣಾ ಸಾಕ್ಷಿದಾರರನ್ನು ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ನಡೆಸಲಾಗಿ ರಕ್ಷಣಾ ಸಾಕ್ಷಿದಾರರು ಸಾಕ್ಷಿ ನುಡಿಯುತ್ತಾ ಸಿರಿಲ್ ಮಸ್ಕರೇನಸ್ ನನ್ನ ಸಂಬಂಧಿಕರಲ್ಲ. ನನ್ನ ರಿಕ್ಷಾ ಚಾಲಕ ಸಿರಿಲ್ ಕಳೆದ 17 ವರ್ಷಗಳಿಂದ ಪ್ರತಿ ದಿವಸ ಬೆಳಿಗ್ಗೆ ರಿಕ್ಷಾವನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿ ಸಂಜೆ ತಂದು ಕೊಡುತ್ತಿದ್ದ. ದಿನಕ್ಕೆ ರೂ.50 ಬಾಡಿಗೆ ಕೊಡುತ್ತಿದ್ದ. ನಾನು ಸೆಂಟ್ರಿಂಗ್ ಕೆಲಸಕ್ಕೆ ಹೋಗುತ್ತೇನೆ. ನನಗೆ ಸೆಂಟ್ರಿಂಗ್ ಕೆಲಸದಿಂದ ದಿನಕ್ಕೆ ರೂ.250/– ಬರುತ್ತದೆ. ಈ ಘಟನೆಗಿಂತ ಮೊದಲು ನನ್ನ ಆಟೋರಿಕ್ಷಾದ ಮೇಲೆ ಯಾವುದೇ ಅಬಕಾರಿ ಪ್ರಕರಣ ದಾಖಲಾಗಿರುವುದಿಲ್ಲ. ಅಬಕಾರಿ ಇಲಾಖಾ ಅಧಿಕಾರಿಗಳಿಗೆ ನನ್ನ ಮೇಲೆ ಯಾವುದೇ ದ್ವೇಷ ಇರುವುದಿಲ್ಲ. ಅದೇ ರೀತಿ ಸಿರಿಲ್ ಮೇಲೆ ಸಹ ಇರುವುದಿಲ್ಲ. ನನ್ನ ಗಳಿಕೆ ನಮ್ಮ ಸಂಸಾರ ಸಾಗಿಸಲು ಸಾಕಾಗುವುದಿಲ್ಲ ಎಂದರೆ ಸರಿ, ಅದಕ್ಕೋಸ್ಕರ ನಾನು ಸಿರಿಲ್ ಮುಖಾಂತರ ಅಕ್ರಮ ಶೇಂದಿ ಸಾಗಾಟ ದಂದೆಗೆ ಇಳಿದಿದ್ದೆ ಎಂದರೆ ಸರಿಯಲ್ಲ, ನನಗೆ ನನ್ನ ಚಾಲಕ ಸಿರಿಲ್‌ರವರು ಶೇಂದಿ ಸಾಗಾಟ ಮಾಡುವುದು ನನಗೆ ಗೊತ್ತಿದ್ದರೂ, ನಾನು ಉದ್ದೇಶ ಪೂರ್ವಕವಾಗಿ ಅವನನ್ನು ನೇಮಿಸಿದ್ದೆ ಎಂದರೆ ಸರಿಯಲ್ಲ, ವಾಹನವನ್ನು ನನ್ನ ವಶಕ್ಕೆ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಸರ್ಕಾರಿ ಅಭಿಯೋಜಕರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:05.04.2005 ರಂದು ಆಟೋರಿಕ್ಷಾ ನೊಂದಣಿ ಸಂ:**CTX-8329** ಇದರಲ್ಲಿ ಅಕ್ರಮ ಶೇಂದಿಯನ್ನು ಸಾಗಾಟ ಮಾಡುತ್ತಿದ್ದುದನ್ನು ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗರವರು ಪತ್ತೆಹಚ್ಚಿ, ಪ್ರ.ಮಾ.ವ ಸಂ:19/2004–05ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು, ರಹದಾರಿ ರಹಿತ ಶೇಂದಿ ಸಾಗಾಣಿಕೆಗೆ ಬಳಸಲಾದ ಆಟೋರಿಕ್ಷಾ ಮತ್ತು ಶೇಂದಿಯನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿದ್ದು, ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 12, 14(2) ರ ಪ್ರಕಾರ ಅಪರಾಧ ಹಾಗೂ ಅಬಕಾರಿ ಕಾಯಿದೆ (ಶೇಂದಿ ಉತ್ತಾರು ನಿಯಮ 1991ರ ನಿಯಮ 22 ರ ಉಲ್ಲಂಘನೆ ಮತ್ತು ಕಲಂ 34 ಮತ್ತು 38(ಎ) ರ ಪ್ರಕಾರ ಶಿಕ್ಷಾರ್ಹ ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ಶೇಂದಿಯ ಮಾದರಿಗಳು ರಾಸಾಯನಿಕ ತಜ್ಞರ ವರದಿಯಂತೆ 1.25% ಮದ್ಯಸಾರದ ಅಂಶವಿರುವ ಕ್ರಿಮಿ ಕೀಟಗಳಿರುವ ಕೆಟ್ಟ ವಾಸನೆಯಿಂದ ಕೂಡಿದ ಮಾನವನ ಸೇವನೆಗೆ ಯೋಗ್ಯವಲ್ಲದ ವಸ್ತುವೆಂದು ದೃಢಪಟ್ಟಿರುವುದರಿಂದ, ಹಾಗೂ ವಾಹನದ ಮಾಲೀಕರು ತನ್ನ ನಿರುಪರಾಧಿತ್ವವನ್ನು ಸಾಬೀತುಪಡಿಸಲು ಪುರಾವೆಗಳನ್ನು ಒದಗಿಸಲು ವಿಫಲರಾಗಿರುವುದನ್ನು ಈ ಪ್ರಾಧಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ಒಂದನೇ ಅಂಶಕ್ಕೆ ಗುಣಾತ್ಮಕವಾಗಿ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ವಾಹನದ ಮುಟ್ಟುಗೋಲು ನಡವಳಿ ವಿಚಾರಣೆ ಸಂದರ್ಭದಲ್ಲಿ ಫಿರ್ಯಾದುದಾರರು ಹಾಗೂ ಇತರ ಅಭಿಯೋಗದ ಸಾಕ್ಷಿದಾರರ ಹೇಳಿಕೆಗಳನ್ನು ಸವಿಸ್ತರವಾಗಿ ಪರಿಶೀಲಿಸಿ ಹಾಗೂ ರಕ್ಷಣಾ ಪರ ಸಾಕ್ಷ್ಯ ನೀಡಿದ ವಾಹನದ ಮಾಲೀಕರು ತನ್ನ ಆಟೋರಿಕ್ಷಾ ವಾಹನವನ್ನು ಬಾಡಿಗೆಗೆ ಚಲಾಯಿಸುವರೇ ಇನ್ನೊಬ್ಬ ವ್ಯಕ್ತಿಯನ್ನು ಚಾಲಕನನ್ನಾಗಿ ನೇಮಿಸಿ, ಸಾರ್ವಜನಿಕ ಬಾಡಿಗೆಗೆ ನೀಡಿರುವುದಾಗಿ ಹಾಗೂ ಸದ್ರಿ ಅಪರಾಧಕ್ಕೂ, ತನಗೂ ಯಾವುದೇ ಸಂಬಂಧ ವಿಲ್ಲವೆಂದು ತನ್ನ ರಕ್ಷಣಾ ಸಾಕ್ಷಿಯಲ್ಲಿ ತಿಳಿಸಿರುವುದಾದರೂ, ತನ್ನ ವಾಹನಕ್ಕೆ ಚಾಲಕನನ್ನು ನೇಮಿಸುವ ಸಂದರ್ಭದಲ್ಲಿ ಯಾವುದೇ ದಾಖಲೆಗಳನ್ನು

ತಯಾರಿಸಿರುವುದಿಲ್ಲ ಹಾಗೂ ವಾಹನವನ್ನು ಯಾವುದೇ ಅಕ್ರಮ ಚಟುವಟಿಕೆಗಳಿಗೆ ಬಳಸಬಾರದೆಂಬ ಮುಂಜಾಗ್ರತಾ ಸೂಚನೆಗಳನ್ನು ನೀಡಿರುವ ಬಗ್ಗೆ ಯಾವುದೇ ದಾಖಲೆ ಪುರಾವೆಗಳನ್ನು ಒದಗಿಸಿರುವುದಿಲ್ಲ. ಹಾಗೂ ತನ್ನ ಹೇಳಿಕೆಗಳಲ್ಲಿ ಸತ್ಯಾಂಶವಿರುವುದನ್ನು ಸಾಬೀತುಪಡಿಸಲು ಪುರಾವೆಗಳನ್ನು ಒದಗಿಸಿರುವುದಿಲ್ಲ. ಇದರಿಂದ ವಾಹನದ ಮಾಲೀಕನು ಅಕ್ರಮವಾಗಿ ಶೇಂದಿಯನ್ನು ತನ್ನ ವಾಹನದಲ್ಲಿ ಉದ್ದೇಶಪೂರ್ವಕವಾಗಿ ಸಾಗಾಟ ಮಾಡಲು ಬಳಸಿಕೊಂಡು ಪ್ರಕರಣದಲ್ಲಿ ಸಿಲುಕಿಕೊಂಡ ನಂತರದಲ್ಲಿ ತನ್ನ ಅಪರಾಧವನ್ನು ಮರೆಮಾಚುವ ದೃಷ್ಟಿಯಿಂದ ರಕ್ಷಣಾ ಹೇಳಿಕೆಯನ್ನು ನೀಡಲು ಮುಂದಾಗಿರುವುದನ್ನು ಮನಗಂಡು ವಾಹನದಲ್ಲಿ ಅಕ್ರಮ ಶೇಂದಿ ಯನ್ನುಸಾಗಾಟ ಮಾಡಿರುವುದು ಸಾಬೀತಾಗಿರುವುದಾಗಿ ಅಭಿಪ್ರಾಯಪಡಲಾಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅಬಕಾರಿ ಉಪ ನಿರೀಕ್ಷಕರು ಮಂಗಳೂರು ಉಪ ವಿಭಾಗ, ಮಂಗಳೂರು ಇವರು ವಶಪಡಿಸಿಕೊಂಡ ವಾಹನ ಆಟೋರಿಕ್ಷಾ ನೊಂದಣಿ ಸಂ:CTX-8329ನ್ನು ವಶಪಡಿಸಿಕೊಂಡು ಸುಮಾರು 4 ವರ್ಷ 3 ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ವಾಹನದ ಮಾಲೀಕರು ಕಾನೂನುಬದ್ಧವಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತನ್ನ ನಿರಾಪರಾಧಿತ್ವವನ್ನು ಸಾಬೀತುಪಡಿಸಲು ವಿಫಲರಾಗಿರುವುದು ಹಾಗೂ ಈ ಪ್ರಾಧಿಕಾರದಲ್ಲಿ ನಡೆಸಲಾದ ಸಾಕ್ಷಿಗಳ ವಿಚಾರಣೆಯಿಂದ ವಾಹನದಲ್ಲಿ ಅಕ್ರಮ ಶೇಂದಿಯನ್ನು ಸಾಗಾಣಿಕೆ ಮಾಡಿರುವುದು ಪತ್ತೆಮಾಡಿ,ಪ್ರಕರಣವನ್ನು ದಾಖಲಿಸಿರುವ ಅಂಶ ನಿಜವಾಗಿ ಸಾಬೀತಾಗಿರುವುದರಿಂದ ಆಟೋರಿಕ್ಷಾ ನೊಂದಣಿ ಸಂ:CTX-8329ವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಳ್ಳುವುದು ಯೋಗ್ಯವೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉಪ ವಿಭಾಗ ಇವರ ಪ್ರ.ಮಾ.ವ ಸಂ: 19/2004–05, ದಿನಾಂಕ:05.04.2005ರಲ್ಲಿ ಅಕ್ರಮವಾಗಿ 280.000 ಲೀಟರು ಶೇಂದಿಯನ್ನು 8 ಕ್ಯಾನುಗಳಲ್ಲಿ ಇರಿಸಿ ಅಟೋ ರಿಕ್ಷಾ ಸಂ: CTX-8329ರಲ್ಲಿ ಸಾಗಾಣಿ ಮಾಡಿರುವುದರಿಂದ , ಬಳಸಿದ ಅಟೋ ರಿಕ್ಷಾ ನೊಂದಣಿ ಸಂ: CTX-8329 (ಚಾಸೀಸ್ ಸಂಖ್ಯೆ: 091339-175-LI ಮತ್ತು ಇಂಜಿನ್ ಸಂಖ್ಯೆ:175-LI 091339) ನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಎ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ. ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ಆಟೋರಿಕ್ಷಾವನ್ನು ಆರ್.ಸಿ.ಮಾಲಿಕ ಶ್ರೀ ವಲೇರಿಯನ್ ಮಸ್ಕರೇನಸ್, ಬಿನ್ ಇಗ್ನೇಷಿಯಸ್ ಮಸ್ಕರೇನಸ್, ನಿಯರ್ ಕೆನರಾ ರಬ್ಬರ್ ವರ್ಕ್ಸ್, ಶಕ್ತಿನಗರ, ಮಂಗಳೂರು ಇವರ ಸುಪರ್ಧಿಗೆ ಮಧ್ಯಂತರ ಬಿಡುಗಡೆಗೊಳಿಸಿ ಆದೇಶಿಸಿ ಹೊರಡಿಸಲಾಗಿರುವ ದಿನಾಂಕ:15.04.2005ರ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲಿಕರು ಸದ್ರಿ ಮಧ್ಯಂತರ ಬಿಡುಗಡೆ ನೆಲೆಯಲ್ಲಿ ತನ್ನ ಸುಪರ್ಧಿಗೆ ಪಡೆದು ಕೊಂಡಿರುವ ಆಟೋರಿಕ್ಷಾ ಸಂ: CTX-8329 ಇದನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗೆ .ಈ ಪ್ರಾಧಿಕಾರಕ್ಕೆ ಒಪ್ಪಿಸಲು ಆದೇಶಿಸಿದೆ. ತಪ್ಪಿದ್ದಲ್ಲಿ ಆರ್.ಸಿ. ಮಾಲೀಕರು ಈ ಪ್ರಾಧಿಕಾರಕ್ಕೆ ಒಪ್ಪಿಸಿರುವ ಭದ್ರತೆ ಪತ್ರ (B.G) ಸಂಖ್ಯೆ : 250001 ದಿನಾಂಕ:15.04.2005 ಇದನ್ನು ಇನ್ವೋಕ್ ಮಾಡಿ ಭದ್ರತೆ ಮೊತ್ತ ರೂ.3,500/– (ರೂ.ಮೂರು ಸಾವಿರದ ಐನೂರು)ನ್ನು ಸರ್ಕಾರಕ್ಕೆ ಪಡೆಯಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:29.07.2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹ್ಮಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ–I: ಶ್ರೀ ಕೃಷ್ಣ ನಾಯ್ಕ, ಅಬಕಾರಿ ಉಪ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ.

ಪ್ರಾ.ಸಾ–2 : ಶ್ರೀ ಕೃಷ್ಣಪ್ಪ ಎಂ., ಅಬಕಾರಿ ಉಪ ನಿರೀಕ್ಷಕರು, ಎ.ಜೆ.ಡಿಸ್ಟಿಲರಿ, ಬೈಕಂಪಾಡಿ, ಮಂಗಳೂರು.

ಪ್ರಾ.ಸಾ–3 : ಶ್ರೀ ಪ್ರೇಮಾನಂದ, ಅಬಕಾರಿ ರಕ್ಷಕ, ಅಬಕಾರಿ ಅಧೀಕ್ಷಕರ ಕಛೇರಿ, ಇಐಬಿ, ಉಡುಪಿ ಜಿಲ್ಲೆ.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ–I : ತನಿಖಾ ವರದಿ

ನಿಶಾನೆ ಪಿ-2 : ಪ್ರಥಮ ವರ್ತಮಾನ ವರದಿ
ನಿಶಾನೆ ಪಿ-3 : ಮಹಜರು
ನಿಶಾನೆ ಪಿ-4 : ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ-5 : ಸರ್ಚ್ ಲೀಸ್ಟ್
ನಿಶಾನೆ ಪಿ-6 : ಶೋಧನ ವಾರೆಂಟ್
ನಿಶಾನೆ ಪಿ-7 : ಅಬಕಾರಿ ಕಾಯಿದೆ ಕಲಂ 43ಎ ಯಡಿ ವರದಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:

ರಕ್ಷಣಾ ಸಾಕ್ಷಿದಾರರು: ಶ್ರೀ ವಲೆರಿಯನ್ ಮಸ್ಕರೇನಸ್, ಬಿನ್ ಇಗ್ನೇಷಿಯಸ್ ಮಸ್ಕರೇನಸ್, ಶಕ್ತಿನಗರ, ಪದವು ಮಂಗಳೂರು, ಮಂಗಳೂರು ತಾಲೂಕು.

ಅರ್ಜಿದಾರರ ಹೇಳಿಕೆ: – ಯಾವುದು ಇಲ್ಲ –

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು: – ಯಾವುದು ಇಲ್ಲ –

ನೂರ್ ಮಹ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.812

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು-1

ಸಂಖ್ಯೆ: ಆಸಾನಿ.271/ಆಡಳಿತ/(2)/2007-08, ದಿನಾಂಕ:24ನೇ ಆಗಸ್ಟ್, 2009

ವಿಷಯ: ಶ್ರೀ ಆರ್.ಬಿ. ಜತನ್, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಹುಬ್ಬಳ್ಳಿ (ಧಾರವಾಡ ಜಿಲ್ಲೆ) ಇವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಕುರಿತು.

ಉಲ್ಲೇಖ: 1) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಧಾರವಾಡ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಜಿಸಂಧಾ:4/ಆಡಳಿತ-1/ ವರ್ಗಾವಣೆ-09-10/807, ದಿನಾಂಕ:03.05.2009/05.06.2009 ರೊಂದಿಗೆ ಲಗತ್ತಿಸಲಾದ ತಹಸೀಲ್ದಾರ, ಹುಬ್ಬಳ್ಳಿ ತಾಲ್ಲೂಕು, ಹುಬ್ಬಳ್ಳಿ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಸಿಬ್ಬಂದಿ/ವಹಿ/7/09-10, ದಿನಾಂಕ:28.05.2009.

2) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ:11.06.2009.

3) ಅಮಾನತ್ತಿನಲ್ಲಿರುವ ಶ್ರೀ ಆರ್.ಬಿ. ಜತನ್, ಸಾಂಖ್ಯಿಕ ನಿರೀಕ್ಷಕರು, ಇವರ ಮನವಿ ದಿನಾಂಕ:27.07.2009.

4) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಕಾರಣ ಕೇಳುವ ಜ್ಞಾಪನದ ದಿನಾಂಕ:29.07.2009.

ಪ್ರಸ್ತಾವನೆ:

ತಹಸೀಲ್ದಾರರು ಹುಬ್ಬಳ್ಳಿ ತಾಲ್ಲೂಕು, ಇವರ ವರದಿಯನ್ನು ಆಧರಿಸಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಧಾರವಾಡ, ಇವರು ಸಲ್ಲಿಸಿದ್ದ ಉಲ್ಲೇಖ (1)ರಲ್ಲಿನ ಪ್ರಸ್ತಾವನೆ ಅನ್ವಯ, ಸಾಂಖ್ಯಿಕ ನಿರೀಕ್ಷಕರ ವೃಂದದ ಸಮೂಹ 'ಸಿ' ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯ ವರ್ತನೆ ಎಂದು ಪರಿಗಣಿಸಿ, ಅವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ಶ್ರೀ ಆರ್.ಬಿ. ಜತನ್, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಹುಬ್ಬಳ್ಳಿ, (ಧಾರವಾಡ ಜಿಲ್ಲೆ) ಇವರನ್ನು ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಅಮಾನತ್ತಿನಲ್ಲಿರುವ ಸದರಿ ಸಾಂಖ್ಯಿಕ ನಿರೀಕ್ಷಕರು, ಉಲ್ಲೇಖ (3) ರಲ್ಲಿನ ಅವರ ಮನವಿಯಲ್ಲಿ ಅವರನ್ನು ಕರ್ತವ್ಯಕ್ಕೆ ಮರು ಸ್ಥಾಪಿಸಿದಲ್ಲಿ ನಿಷ್ಠೆಯಿಂದ ಮತ್ತು ದಕ್ಷತೆಯಿಂದ ಕರ್ತವ್ಯ ನಿರ್ವಹಿಸುವುದಾಗಿ ಕೋರಿರುತ್ತಾರೆ. ಸದರಿ ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಉಲ್ಲೇಖ (4) ರಲ್ಲಿನ ಕಾರಣ ಕೇಳುವ ಜ್ಞಾಪನದೊಂದಿಗೆ ಆರೋಪ ಪಟ್ಟಿ ನೀಡಲಾಗಿದ್ದು, ಅವರ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ ಅವರ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸುವುದರ ಕುರಿತು ಪರಿಶೀಲಿಸುವುದನ್ನು ಕಾಯ್ದಿರಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಆಡಳಿತ/274/2009-10

ಶ್ರೀ ಆರ್.ಬಿ. ಜತನ್ ಅಮಾನತ್ತಿನಲ್ಲಿರುವ ಸಾಂಖ್ಯಿಕ ನಿರೀಕ್ಷಕರು, ಇವರನ್ನು ಅವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ, ಸರ್ಕಾರದ ಸೇವೆಗೆ ಪುನರ್ ಸ್ಥಾಪಿಸಿ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಧಾರವಾಡ, ಈ ಕಛೇರಿಯಲ್ಲಿ ಖಾಲಿ ಇರುವ ಸಾಂಖ್ಯಿಕ ನಿರೀಕ್ಷಕರ ಹುದ್ದೆಗೆ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕಾತಿ ಮಾಡಲಾಗಿದೆ.

ಹೆಚ್.ಇ. ರಾಜಶೇಖರಪ್ಪ
ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

ಪಿ.ಆರ್.836

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು-1

ಸಂಖ್ಯೆ: ಆಸಾಂನಿ.175/ಆಡಳಿತ-2/2007-08, ದಿನಾಂಕ:26ನೇ ಆಗಸ್ಟ್, 2009

ವಿಷಯ: ತಾಲ್ಲೂಕು ಕಚೇರಿ, ಹಾನಗಲ್ (ಹಾವೇರಿ ಜಿಲ್ಲೆ) ನಂತರ ಸೇವೆಯಿಂದ ಅಮಾನತ್ತುಗೊಂಡು ಸೇವೆಯಲ್ಲಿ ಪುನರ್‌ಸ್ಥಾಪಿತಗೊಂಡ ನಂತರ ತಾಲ್ಲೂಕು ಕಚೇರಿ, ನವಲಗುಂದ (ಧಾರವಾಡ ಜಿಲ್ಲೆ) ಇಲ್ಲಿ ನೇಮಕಾತಿಗೊಂಡ ನಂತರ ದೂರಿನ ಮೇಲೆ ತಾಲ್ಲೂಕು ಕಚೇರಿ, ಬೆಳ್ತಂಗಡಿ (ಮಂಗಳೂರು ಜಿಲ್ಲೆ) ಇಲ್ಲಿಗೆ ವರ್ಗಾವಣೆ ಹೊಂದಿದ ನಂತರ ಜಿಲ್ಲಾಧಿಕಾರಿಗಳು, ಹಾವೇರಿ ಇವರ ಕುರಿತು ಹಾಗೂ ಹಿಂದಿನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಗೂ ನಿರ್ದೇಶನಾಲಯದ ಅಧಿಕಾರಿಗಳ ಕುರಿತು ನಿಂದನಾರ್ಹವಾಗಿ ಸರ್ಕಾರಿ ನೌಕರನೊಬ್ಬನಿಗೆ ಸಲ್ಲದ ರೀತಿಯಲ್ಲಿ ಮಾಡಿದ ಟೀಕೆಗಾಗಿ / ಆರೋಪಗಳಿಗಾಗಿ ಮತ್ತೆ ಸರ್ಕಾರದ ಸೇವೆಯಿಂದ ಅಮಾನತ್ತುಗೊಂಡು ಸೇವೆಯಲ್ಲಿ ಪುನರ್ ಸ್ಥಾಪನೆಗೊಂಡು ಪ್ರಸ್ತುತ ತಾಲ್ಲೂಕು ಕಚೇರಿ, ಸಿಂಧನೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ **ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು** ಇವರ ವಿರುದ್ಧ ಕೈಗೊಂಡ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಅಂತಿಮ ದಂಡನೆ ವಿಧಿಸುವ ಕುರಿತು.

ಉಲ್ಲೇಖ:
1) ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ದಿನಾಂಕ:18.11.2006 ರಂದು ನೇರವಾಗಿ ಗೌರವಾನ್ವಿತ ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಲಾಗಿದ್ದ ಮೇಲ್ಮನವಿಗೆ ಸಂಬಂಧಿಸಿದಂತೆ ರಾಜ್ಯ ಪ್ರಧಾನ ಮಾಹಿತಿ ಆಯುಕ್ತರು ದಿನಾಂಕ:07.02.2007 ರಂದು ನೀಡಿದ ಆದೇಶ.
2) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ:05.04.2007.
3) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರು ದಿನಾಂಕ:12.5.2007 ರಂದು ಸಲ್ಲಿಸಿದ ಪೂರ್ವಭಾವಿ ವಿಚಾರಣಾ ವರದಿ.
4) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ: 11 ರ ಅಡಿಯಲ್ಲಿ ಸದರಿ ಆಪಾದಿತ ಸರ್ಕಾರಿ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರಿಗೆ ಹೊರಡಿಸಲಾದ "ಕಾರಣ ಕೇಳುವ ಜ್ಞಾಪನ".
5) ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ದಿನಾಂಕ:12.02.2008 ರಂದು ಸಲ್ಲಿಸಿದ ಲಿಖಿತ ಹೇಳಿಕೆ.
6) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ: 20.08.2008.
7) ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಅವರ ರಕ್ಷಣಾ ಸಹಾಯಕರಾಗಿದ್ದ ಶ್ರೀ ಚಲವಾದಿ ಇವರ ಮೂಲಕ ದಿನಾಂಕ:13.10.2008 ರಂದು ಸಲ್ಲಿಸಿದ ಮನವಿ.
8) ಈ ನಿರ್ದೇಶನಾಲಯದ ಆದೇಶದ ಸಂಖ್ಯೆ: ಆಡಳಿತ/390/2008-09, ದಿನಾಂಕ:17.10.2008.
9) ಶ್ರೀ ಫ.ಸಿ. ಗುಡ್ಡಾಕಾರ, ಬಿ.ಎ., ಎಲ್.ಎಲ್.ಬಿ (ವಿಶೇಷ), ನಿವೃತ್ತ ಜಿಲ್ಲಾ ನ್ಯಾಯಾಧೀಶರು ಮತ್ತು ವಿಚಾರಣಾಧಿಕಾರಿಗಳು, ಧಾರವಾಡ ಇವರು ದಿನಾಂಕ:03.11.2008 ರಂದು ಸಲ್ಲಿಸಿದ "ಇಲಾಖಾ ವಿಚಾರಣಾ ವರದಿ".
10) ಉಲ್ಲೇಖ (9) ರಲ್ಲಿನ ಇಲಾಖಾ ವಿಚಾರಣಾ ವರದಿಯೊಂದಿಗೆ ಆಪಾದಿತ ಸರ್ಕಾರಿ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರಿಗೆ ನೀಡಲಾದ ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ:06.01.2009 (2ನೇ ಕಾರಣ ಕೇಳುವ ಜ್ಞಾಪನ)
11) ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಹಾಗೂ ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿದ ವಿವರಣೆ ದಿನಾಂಕ:27.01.2009.

ಪ್ರಸ್ತಾವನೆ:

(1) **ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು, ಪ್ರಸ್ತುತ ತಾಲ್ಲೂಕು ಕಚೇರಿ, ಸಿಂಧನೂರು, (ರಾಯಚೂರು ಜಿಲ್ಲೆ) ಇಲ್ಲಿ ಅಮಾನತ್ತಿನಿಂದ ಸೇವೆಗೆ ಪುನರ್‌ಸ್ಥಾಪನೆಗೊಂಡು ಸೇವೆ ಸಲ್ಲಿಸುತ್ತಿರುವ ಇವರು ತಾಲ್ಲೂಕು ಕಚೇರಿ, ಹಾನಗಲ್** (ಹಾವೇರಿ ಜಿಲ್ಲೆ) ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರದ ಹಣದ ದುರುಪಯೋಗ, ಕರ್ತವ್ಯಲೋಪ ಇತ್ಯಾದಿ ಆಪಾದನೆಗಳಿಗೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳು, ಹಾವೇರಿ ಇವರ ಆದೇಶದ ಅನ್ವಯ ಅಮಾನತ್ತುಗೊಂಡಿದ್ದ ಅವಧಿಯಲ್ಲಿ **"ದಿನಾಂಕ 3.10.2006 ರಂದು ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ಮಾಹಿತಿ ಹಕ್ಕು ಅಧಿನಿಯಮಗಳ ಅಡಿಯಲ್ಲಿ ಅರ್ಜಿ ಸಲ್ಲಿಸಲು ಭೇಟಿ ನೀಡಿ, ಮಾಹಿತಿ ಕೋರಿದ ಅರ್ಜಿಯನ್ನು ಸಲ್ಲಿಸದೇ ಅರ್ಜಿಯ ಮೇಲೆ ಕಚೇರಿಯ ಮೊಹರನ್ನು ಅನಧಿಕೃತವಾಗಿ ದಾಖಲಿಸಿಕೊಂಡು"** ನಂತರ, ದಿನಾಂಕ 18.11.2006 ರಂದು ನೇರವಾಗಿ ಗೌರವಾನ್ವಿತ ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಲಾದ **ಸದರಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರ** ಮೇಲ್ಮನವಿ ಮತ್ತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರು ಕರ್ನಾಟಕ ಮಾಹಿತಿ ಆಯೋಗಕ್ಕೆ ನೇರವಾಗಿ ಸಲ್ಲಿಸಲಾದ ಪತ್ರದ ಸಂಖ್ಯೆ: ಜಿಸಂಹಾ/ಆಡಳಿತ/ಮಾಹ/06-07, ದಿನಾಂಕ 27.1.2007 ಇವುಗಳನ್ನು ಪರಿಶೀಲಿಸಿ, ದಿನಾಂಕ 7.2.2007 ರಂದು ವಿಚಾರಣೆ ಏರ್ಪಡಿಸಿ ನೀಡಲಾದ ಆದೇಶದಲ್ಲಿ ಇನ್ನಿತರ ಆದೇಶದೊಂದಿಗೆ **"Directorate of Economics and**

Statistics is also directed to inquire into the misplacing of the complainant's application filed under the Right to Information Act and to take action on proposal for disciplinary proceedings sent by the District Statistical Officer" ಎಂದು ಗೌರವಾನ್ವಿತ ರಾಜ್ಯ ಮಾಹಿತಿ ಆಯೋಗವು ಆದೇಶಿಸಿತ್ತು.

(2) ಮೇಲಿನ ಕಂಡಿಕೆಯಲ್ಲಿ ವಿವರಿಸಿದಂತೆ, ರಾಜ್ಯ ಮಾಹಿತಿ ಆಯೋಗದ ಆದೇಶದ ಅನ್ವಯ ಸದರಿ ಆರೋಪಿತ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ದಿನಾಂಕ:03.10.2006 ರಂದು ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ಸಲ್ಲಿಸಲಾಗಿತ್ತೆನ್ನಲಾದ ಅರ್ಜಿಯು ಕಳೆದು ಹೋಗಿರುವುದರ (about misplacing of complainant's application) ಕುರಿತು, ಪೂರ್ವಭಾವಿ ವಿಚಾರಣೆ ಕೈಗೊಂಡು ವರದಿ ಸಲ್ಲಿಸುವಂತೆ ಉಲ್ಲೇಖ (2) ರಲ್ಲಿನ ಆದೇಶದ ದಿನಾಂಕ:05.04.2007 ರಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರಿಗೆ ಸೂಚಿಸಲಾಗಿತ್ತು.

(3) ಮೇಲಿನ 2ನೇ ಕಂಡಿಕೆಯಲ್ಲಿ ತಿಳಿಸಲಾದ ಹಾಗೂ ಉಲ್ಲೇಖ (2) ರಲ್ಲಿನ ಆದೇಶದ ಅನ್ವಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರು ಉಲ್ಲೇಖ (3) ರಲ್ಲಿನ ದಿನಾಂಕ:12.05.2007 ರಂದು ಸಲ್ಲಿಸಿದ್ದ ಪೂರ್ವಭಾವಿ ವಿಚಾರಣಾ ವರದಿಯಲ್ಲಿ **"ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ದಿನಾಂಕ:03.10.2006 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ 'ಸಲ್ಲಿಸಲಾಗಿದೆ' ಎಂಬ ಅರ್ಜಿಗೆ ಕಚೇರಿಯ ಸೀಲನ್ನು ಅನಧಿಕೃತವಾಗಿ ಬಳಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ"** ಎಂದು ಅಭಿಪ್ರಾಯ ನೀಡಿದ್ದರಿಂದ, ಆರೋಪಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರ ವಿರುದ್ಧದ ಆರೋಪದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಸದರಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರಿಗೆ ಉಲ್ಲೇಖ (4) ರಲ್ಲಿನ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ: 11 ರ ಅನ್ವಯ ಹೊರಡಿಸಲಾದ ಕಾರಣ ಕೇಳುವ ಜ್ಞಾಪನದೊಂದಿಗೆ ಅವರ ವಿರುದ್ಧದ ದೋಷಾರೋಪಣಾ ಪಟ್ಟಿಯನ್ನು ಸಾಬೀತುಪಡಿಸುವ ವಿವರಣಾ ಪಟ್ಟಿಯನ್ನು ಅನುಬಂಧ-2 ರಲ್ಲಿ ಹಾಗೂ ದೋಷಾರೋಪಣಾ ಪಟ್ಟಿಯು ಯಾವ ದಸ್ತಾವೇಜು ಹಾಗೂ ಸಾಕ್ಷಿಗಳಿಂದ ಆಧರಿಸಲ್ಪಟ್ಟಿದೆಯೋ ಆ ಪಟ್ಟಿಗಳನ್ನು ಅನುಬಂಧ-3 ಮತ್ತು ಅನುಬಂಧ-4 ರಲ್ಲಿ ಒದಗಿಸಿ, ಅವರ ವಿವರಣೆಯನ್ನು 15 ದಿನಗಳ ಒಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

(4) ಸದರಿ ಆರೋಪಿತ ಸರ್ಕಾರಿ ನೌಕರನ ವಿರುದ್ಧ ಮೇಲೆ ತಿಳಿಸಲಾದ ಕಾರಣ ಕೇಳುವ ಜ್ಞಾಪನದ ಅನುಬಂಧ-1 ರಲ್ಲಿ ದೋಷಾರೋಪಣಾ ಪಟ್ಟಿಯನ್ನು ಈ ಕೆಳಗೆ ಪುನರುಚ್ಛರಿಸಲಾಗಿದೆ:

"ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು, ಪ್ರಸ್ತುತ ಬೆಳ್ತಂಗಡಿ ತಹಶೀಲ್ದಾರರ ಕಚೇರಿ ಆದ ನೀವು ಹಾವೇರಿ ಜಿಲ್ಲೆ, ಹಾನಗಲ್ ತಹಶೀಲ್ದಾರರ ಕಚೇರಿಯಿಂದ ಅಮಾನತ್ತಿನಲ್ಲಿದ್ದಾಗ ದಿನಾಂಕ:03.10.2006 ರಂದು ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಲು ಭೇಟಿ ನೀಡಿ, ಮಾಹಿತಿ ಕೋರಿದ ಅರ್ಜಿಯನ್ನು ಸಲ್ಲಿಸದೇ ಅರ್ಜಿಯ ಮೇಲೆ ಕಚೇರಿಯ ಮೊಹರನ್ನು ಅನಧಿಕೃತವಾಗಿ ದಾಖಲಿಸಿಕೊಂಡಿದ್ದೀರಿ. ನಂತರ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರು ನಿಮಗೆ ಮಾಹಿತಿ ನೀಡಿಲ್ಲವೆಂದು, ದಿನಾಂಕ:18.11.2006 ರಂದು ನೇರವಾಗಿ ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಲಾದ ನಿಮ್ಮ ದೂರು ಮತ್ತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರು ಕರ್ನಾಟಕ ಮಾಹಿತಿ ಆಯೋಗಕ್ಕೆ ನೇರವಾಗಿ ಸಲ್ಲಿಸಲಾದ ಪತ್ರದ ಸಂಖ್ಯೆ: ಜಿಸಂಹಾ/ಆಡಳಿತ/ಮಾಹ/06-07, ದಿನಾಂಕ:27.01.2007 ಇದನ್ನು ಪರಿಶೀಲಿಸಿ, ದಿನಾಂಕ 7.2.2007 ರಂದು ಮಾಹಿತಿ ಆಯೋಗದಲ್ಲಿ ವಿಚಾರಣೆ ನಿಗದಿಪಡಿಸಲಾಗಿತ್ತು.

ರಾಜ್ಯ ಪ್ರಧಾನ ಮಾಹಿತಿ ಆಯುಕ್ತರು ದಿನಾಂಕ:07.02.2007 ರಂದು ವಿಚಾರಣೆ ಏರ್ಪಡಿಸಿ ಇನ್ನಿತರ ಆದೇಶದೊಂದಿಗೆ "Directorate of Economics and Statistics is also directed to inquire into the misplacing of the complainant's application filed under the Right to Information Act and to take action on proposal for disciplinary proceedings sent by the District Statistical Officer" ಎಂದು ಆದೇಶಿಸಿದ್ದರಿಂದ, ಹಾಗೂ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರು ಪೂರ್ವಭಾವಿ ವಿಚಾರಣೆ ನಡೆಸಿ, ದಿನಾಂಕ:12.05.2007 ರಂದು ಸಲ್ಲಿಸಿದ ವರದಿಯಲ್ಲಿ "ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ದಿನಾಂಕ 3.10.2006 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಸಲಾಗಿದೆ ಎಂಬ ಅರ್ಜಿಗೆ ಕಚೇರಿಯ ಸೀಲನ್ನು ಅನಧಿಕೃತವಾಗಿ ಬಳಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ" ಎಂಬ ಅಭಿಪ್ರಾಯ ನೀಡಿದ್ದರಿಂದ, ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಿದೆ."

(5) ಸದರಿ ಆರೋಪಿತ ಸರ್ಕಾರಿ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಮೇಲಿನ ಕಂಡಿಕೆ (3) ಮತ್ತು (4) ರಲ್ಲಿ ತಿಳಿಸಲಾದ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಉಲ್ಲೇಖ (5) ರಲ್ಲಿನ ಅವರ ಲಿಖಿತ ಹೇಳಿಕೆ ದಿನಾಂಕ 12.2.2008 ರಲ್ಲಿ ಅವರ ಮೇಲಿನ ಆಪಾದನೆಗಳನ್ನು ಒಪ್ಪದೆ ಇರುವ ಅಥವಾ ಒಪ್ಪಿಕೊಂಡಿರುವ ಕುರಿತು, ಹಾಗೂ ಒಪ್ಪದೆ ಇದ್ದಲ್ಲಿ ಅದಕ್ಕೆ ಸಂಬಂಧಿಸಿದಂತೆ ಅವರನ್ನು ರಕ್ಷಿಸಿಕೊಳ್ಳಬೇಕಾದ ಅಥವಾ ಸಮರ್ಥಿಸಿಕೊಳ್ಳಬಹುದಾದ ಲಿಖಿತ ಹೇಳಿಕೆಯನ್ನು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸುವುದರ ಬದಲಾಗಿ **"ಮಾಹಿತಿ ಹಕ್ಕು ಅಧಿನಿಯಮ 2005 ಜಾರಿ ಆಗಿರುವುದು ಕೆಲವು ಅಧಿಕಾರಿಗಳಿಗೆ ನುಂಗಲಾಗದ ಬಿಸಿ ತುಪ್ಪದಂತಾಗಿದ್ದು, ಕೆಲವು ಅಧಿಕಾರಿ ವರ್ಗದಲ್ಲಿ ನಿರ್ದೇಶನಾಲಯದ ಅಧಿಕಾರಿಗಳು ಇರುವುದು ತುಂಬಾ ವಿಷಾಧನೀಯ" ವೆಂದೂ**, ನಂತರ ಅದೇ ಲಿಖಿತ ಹೇಳಿಕೆಯಲ್ಲಿ ಅವರ ವಿರುದ್ಧದ ಪೂರ್ವಭಾವಿ ವಿಚಾರಣೆಯಲ್ಲಿನ ಅಂಶಗಳನ್ನು ಟೀಕಿಸಿ "ಮೊಹರುಗಳ ದುರ್ಬಳಕೆ" ಎಂದು ತಿಳಿಸಿದ್ದು ಒಬ್ಬ ಕಚೇರಿಯ ಮುಖ್ಯಸ್ಥರು ಈ ಅಭಿಪ್ರಾಯಕ್ಕೆ ಬರುವುದು ಅವರ ಹುದ್ದೆಗೆ ಶೋಭೆ ತರುವಂತಹದಲ್ಲ. ಏಕೆಂದರೆ, ದಾವಣಗೆರೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳೆಂದು ಕಾರ್ಯ ನಿರ್ವಹಿಸುತ್ತಿರುವ ಅವರ ಕಚೇರಿಯ ಮೊಹರುಗಳು ಬೇಕಾಬಿಟ್ಟಿಯಾಗಿ ಇಡಲು ಸಾಧ್ಯವೆ? ಅಥವಾ ತಮ್ಮ ತನಿಖೆ ವೇಳೆಯಲ್ಲಿ ಗಮನಿಸಿದರೆ? ಅಥವಾ ವಾಸ್ತವವಾಗಿ ಮೊಹರುಗಳು ಬೇಕಾಬಿಟ್ಟಿಯಾಗಿ ಬಿದ್ದಿವೆಯೆ? ಎಂಬುದನ್ನು ತಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಹಾಗೂ ತನಿಖೆಗೆ ಬಂದ ಅಧಿಕಾರಿಗಳು ಒಬ್ಬ ಅಧಿಕಾರಿಯನ್ನು ರಕ್ಷಿಸುವ ಉದ್ದೇಶದಿಂದ ತಪ್ಪು ಅಭಿಪ್ರಾಯಕ್ಕೆ ಬಂದದ್ದು ಕಂಡುಬರುತ್ತದೆ ಎಂದು ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಪೂರ್ವಭಾವಿ ವಿಚಾರಣೆ ನಡೆಸಿದ ಅಧಿಕಾರಿಗಳ ವಿರುದ್ಧ ಅವರ ಲಿಖಿತ ಹೇಳಿಕೆಯಲ್ಲಿ ಆಪಾದನೆಗಳನ್ನು ಮಾಡಿದ್ದಾರೆಯೇ ಹೊರತು ಆತನ ಮೇಲಿನ ಆಪಾದನೆಗಳಿಗೆ / ಆರೋಪಗಳಿಗೆ ಸಂಬಂಧಿಸಿದಂತೆ ಯಾವುದೇ ಸಮಜಾಯಿಷಿ ಅಥವಾ ದಾಖಲಾತಿಗಳು ಅವರ ಲಿಖಿತ ಹೇಳಿಕೆಯಲ್ಲಿ ಇಲ್ಲದಿರುವುದರಿಂದ, ಹಾಗೂ ಅದನ್ನೆ ಇನ್ನಷ್ಟು ಸ್ಪಷ್ಟಪಡಿಸಬಹುದಾದಲ್ಲಿ ಸದರಿ ಆರೋಪಿತ ಸರ್ಕಾರಿ ನೌಕರನು ಆತನನ್ನು ರಕ್ಷಿಸಿಕೊಳ್ಳಬಹುದಾದ ಸಮಜಾಯಿಷಿ ಅಥವಾ ಅವರ ವಿರುದ್ಧದ ದೋಷಾರೋಪಣೆಯನ್ನು ಸಮರ್ಥಿಸಿಕೊಳ್ಳಬಹುದಾದ ದಾಖಲಾತಿಗಳನ್ನು ಒದಗಿಸುವುದರ ಬದಲಾಗಿ ಅವರ ಲಿಖಿತ ಹೇಳಿಕೆಯಲ್ಲಿ ಈ ನಿರ್ದೇಶನಾಲಯದ ಅಧಿಕಾರಿಗಳನ್ನು ಅವರ ಮೇಲೆ ಆಪಾದನೆ ಮಾಡಿದ ಸಮೂಹ 'ಎ' ಅಧಿಕಾರಗಳಾದ ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ವಿಚಾರಣೆ ಕೈಗೊಂಡ ಸಮೂಹ 'ಎ' ಅಧಿಕಾರಿಗಳಾದ ದಾವಣಗೆರೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ವಿರುದ್ಧ ಆಪಾದನೆ ಮಾಡಿ ಗಂಭೀರ ದುರ್ನಡತೆ ಎಸಗಿದ್ದರಿಂದಲೂ, ಹಾಗೂ ಸದರಿ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರ ವಿರುದ್ಧದ ದೋಷಾರೋಪಣೆಗೆ ಸಂಬಂಧಿಸಿದಂತೆ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಸದರಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ನಿರ್ಧರಿಸಲಾಯಿತು.

(6) ಸದರಿ ಆಪಾದಿತ ಸರ್ಕಾರಿ ನೌಕರನು ಆತನ ಲಿಖಿತ ಹೇಳಿಕೆಯಲ್ಲಿ ಆತನ ವಿರುದ್ಧದ ಆಪಾದನೆಗಳ ಕುರಿತು ಪೂರ್ವಭಾವಿ ವಿಚಾರಣೆ ಕೈಗೊಂಡ ಇಲಾಖೆಯ ಸಮೂಹ 'ಎ' ಅಧಿಕಾರಿಗಳಾದ ದಾವಣಗೆರೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ವಿರುದ್ಧ ತೀವ್ರವಾದ ಆಪಾದನೆ ಮಾಡಿದ್ದರಿಂದ ಇಲಾಖಾ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕಾತಿ ಮಾಡುವುದರ ಬದಲಾಗಿ ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ/3/ ಸೇಇವಿ/96, ದಿನಾಂಕ:24.04.1998 ರ ಅನ್ವಯ ಶ್ರೀ ಫ.ಸಿ. ಗುಡ್ಡಾಕಾರ, ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರು, ಧಾರವಾಡ ಇವರನ್ನು ಉಲ್ಲೇಖ (6) ರಲ್ಲಿನ ಈ ನಿರ್ದೇಶನಾಲಯದ ಆದೇಶದಲ್ಲಿ ಸದರಿ ಆರೋಪಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಹೊಂದಿಸಲಾದ ದೋಷಾರೋಪಣೆಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗಾಗಿ ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು.

(7) ಈ ನಡುವೆ ಮೇಲಿನ ಕಂಡಿಕೆ: 6 ರಲ್ಲಿ ವಿವರಿಸಿದಂತೆ, ಸದರಿ ಆರೋಪಿತ ಸರ್ಕಾರಿ ನೌಕರನ ವಿರುದ್ಧದ ದೋಷಾರೋಪಣೆಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗೆ ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರನ್ನು ನೇಮಕಾತಿ ಮಾಡಿದ್ದನ್ನು ತೀವ್ರವಾಗಿ ವಿರೋಧಿಸಿ ಹಾಗೂ ಸದರಿ ಆರೋಪಿತ ಸರ್ಕಾರಿ ನೌಕರನು ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರರು ಅವರಿಗೆ ಅನುಕೂಲವಾದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಧಾರವಾಡ ಇಲ್ಲಿ ವಿಚಾರಣೆ ಏರ್ಪಡಿಸಿದ್ದನ್ನು ತೀವ್ರವಾಗಿ ವಿರೋಧಿಸಿ ಸಲ್ಲಿಸಿದ್ದ ಉಲ್ಲೇಖ (7) ರಲ್ಲಿನ ಅವರ ಅರ್ಜಿಯ ದಿನಾಂಕ:13.10.2008 ನ್ನು ಪರಿಶೀಲಿಸಿ, "ಆಪಾದಿತ ಸರ್ಕಾರಿ ನೌಕರನು ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರ ವಿರುದ್ಧ ಅವರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಪ್ರಭಾವಕ್ಕೆ ಒಳಗಾಗುತ್ತಾರೆಂಬ ಆಪಾದನೆಗಳನ್ನು ಪರಿಶೀಲಿಸಿ ಗೌರವಾನ್ವಿತ ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರಾದ ವಿಚಾರಣಾ

ಅಧಿಕಾರಿಗಳನ್ನು ಹಾಗೂ ವಿಚಾರಣೆ ಸ್ಥಳವನ್ನು ಬದಲಾಯಿಸಲು ಅವಕಾಶವಿಲ್ಲವೆಂದೂ, ಹಾಗೂ ಸದರಿ ಆಪಾದಿತ ಸರ್ಕಾರಿ ನೌಕರನು ಕಚೇರಿ ಮುಖ್ಯಸ್ಥರ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳ ವಿರುದ್ಧ ನಿರಂತರವಾಗಿ ಆಪಾದನೆಗಳನ್ನು ಮಾಡುತ್ತಿರುವ ಪ್ರವೃತ್ತಿ ಹೊಂದಿದ್ದನ್ನು ಪರಿಗಣಿಸಿ, ಹಾಗೂ ಇದೇ ಆರೋಪಿತ ಸಿಬ್ಬಂದಿಯು ಹಾವೇರಿ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕಚೇರಿ ಮುಖ್ಯಸ್ಥರ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿದ ದೂರೊಂದಕ್ಕೆ ಸಂಬಂಧಿಸಿದಂತೆ ಸರ್ಕಾರದ ಸೂಚನೆ ಅನ್ವಯ ಜಿಲ್ಲಾಧಿಕಾರಿಗಳು, ಹಾವೇರಿ ಇವರು ಆಪಾದಿತ ಸರ್ಕಾರಿ ನೌಕರನ ವಿರುದ್ಧ ಸಲ್ಲಿಸಿದ್ದ ಪೂರ್ವಭಾವಿ ವಿಚಾರಣೆಗೆ ಸಂಬಂಧಿಸಿದಂತೆ ಸದರಿ ಆಪಾದಿತ ಸರ್ಕಾರಿ ನೌಕರನು ಆ ವಿಚಾರಣೆ ಪ್ರಕರಣದಲ್ಲಿ ಕೂಡ ಹಾವೇರಿ ಜಿಲ್ಲಾಧಿಕಾರಿಗಳ ವಿರುದ್ಧ ಪ್ರಭಾವಕ್ಕೆ ಒಳಗಾಗಿರುವ ಆಪಾದನೆ ಮಾಡಿದ್ದರಿಂದ, ಒಟ್ಟಾರೆ, ಸದರಿ ಆಪಾದಿತ ಸರ್ಕಾರಿ ನೌಕರನು ಸಮೂಹ "ಸಿ" ವೃಂದದ ಸಾಂಖ್ಯಿಕ ನಿರೀಕ್ಷಕರ ಹುದ್ದೆಯಲ್ಲಿದ್ದು, ಆತನಿಗೆ ವಹಿಸಲಾದ ಸರ್ಕಾರದ ಕರ್ತವ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸದೆ ಹಿರಿಯ ಅಧಿಕಾರಿಗಳ ವಿರುದ್ಧ ಆಪಾದನೆಗಳನ್ನು ಮಾಡುವ ಪ್ರವೃತ್ತಿಯನ್ನು ಮುಂದುವರೆಸಿದ್ದು ಪ್ರಸ್ತುತ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ನಿವೃತ್ತ ಜಿಲ್ಲಾ ಹಾಗೂ ಸೆಶೆನ್ಸ್ ನ್ಯಾಯಾಧೀಶರ ಮೇಲೆ ಅವರೂ ಪ್ರಭಾವಕ್ಕೆ ಒಳಗಾಗುತ್ತಾರೆಂಬ ಆಪಾದನೆಯನ್ನು ಪರಿಗಣಿಸುವುದು ಸೂಕ್ತವಲ್ಲವೆಂದು ಪರಿಗಣಿಸಿ, ಹಾಗೂ ಇಲಾಖಾ ವಿಚಾರಣೆಯ ದಾರಿಯನ್ನು ತಪ್ಪಿಸುವ ದುರುದ್ದೇಶದಿಂದ ಇಂತಹ ಅರ್ಜಿಯನ್ನು ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡುಬಂದಿದ್ದರಿಂದ, ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರಿಗೆ ವಹಿಸಲಾದ ಇಲಾಖಾ ವಿಚಾರಣೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಆ ಹಂತದಲ್ಲಿ ಅವರನ್ನು ಬದಲಾಯಿಸುವಂತೆ ಹಾಗೂ ವಿಚಾರಣಾ ಸ್ಥಳವನ್ನು ಬದಲಾಯಿಸುವಂತೆ ಸದರಿ ಆಪಾದಿತ ಸರ್ಕಾರಿ ನೌಕರನು ಸಲ್ಲಿಸಲಾಗಿದ್ದ ಕೋರಿಕೆಯನ್ನು ಈ ನಿರ್ದೇಶನಾಲಯದ ಉಲ್ಲೇಖ (8) ರಲ್ಲಿನ ಆದೇಶದ ದಿನಾಂಕ 17.10.2008 ರಲ್ಲಿ ತಿರಸ್ಕರಿಸಲಾಗಿತ್ತು. ಹಾಗೂ ಸದರಿ ಆಪಾದಿತ ಸರ್ಕಾರಿ ನೌಕರನು ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರ ವಿರುದ್ಧ ಅವರು "ಪ್ರಭಾವಕ್ಕೆ ಒಳಗಾಗುತ್ತಾರೆಂಬ" ಆಪಾದನೆ ಮಾಡಿರುವ ಕುರಿತು ಪ್ರತ್ಯೇಕವಾಗಿ ಸದರಿ ಸರ್ಕಾರಿ ನೌಕರನ ವಿರುದ್ಧ ಕ್ರಮ ಜರುಗಿಸುವುದನ್ನು ಪರಿಶೀಲಿಸಲಾಗುತ್ತಿದೆ.

ಉಲ್ಲೇಖ (9) ರಲ್ಲಿ ಸ್ವೀಕೃತಿಯಾದ ಸದರಿ ಆಪಾದಿತ ಸಾಂಖ್ಯಿಕ ನಿರೀಕ್ಷಕರ ವಿರುದ್ಧದ ಇಲಾಖಾ ವಿಚಾರಣಾ ವರದಿಯನ್ನು ಉಲ್ಲೇಖ (10) **ರ 2ನೇ ಕಾರಣ ಕೇಳುವ ಜ್ಞಾಪನದಲ್ಲಿ** ಸದರಿ ಆರೋಪಿತ ಸರ್ಕಾರಿ ನೌಕರನಿಗೆ ಜಾರಿ ಮಾಡಿ, ಆತನ ವಿವರಣೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಸದರಿ ಆರೋಪಿತ ಸರ್ಕಾರಿ ನೌಕರನು ಉಲ್ಲೇಖ (11) ರಲ್ಲಿ ಸಲ್ಲಿಸಿದ ಅವರ ವಿವರಣೆಯ ದಿನಾಂಕ:27.01.2009 ನ್ನು ಪರಿಶೀಲಿಸಲಾಗಿ, ಅವರ ಈ ಹೇಳಿಕೆಯಲ್ಲಿ ಈ ಪ್ರಕರಣದಲ್ಲಿನ ಸಹಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವ ಕುರಿತು ಮಾತ್ರ ನಮೂದಿಸಿದ್ದು, ಈ ಅಂಶವನ್ನು ನಿವೃತ್ತ ನ್ಯಾಯಾಧೀಶರ ಇಲಾಖಾ ವಿಚಾರಣೆ ವರದಿಯಲ್ಲಿ ಪ್ರಸ್ತಾಪಿಸಿ "ಭಾರತೀಯ ಸಾಕ್ಷಿ ಅಧಿನಿಯಮ ಕಲಂ: 45 ರಿಂದ 50 ರ ಮೇರೆಗೆ ನ್ಯಾಯಾಲಯವಾಗಲೀ ಅಥವಾ ವಿಚಾರಣಾಧಿಕಾರಿಗಳಾಗಲೀ ಅವುಗಳೇ ಮುಖ್ಯ ಆಧಾರವೆಂದು ಪರಿಗಣಿಸಲು ಆಗುವುದಿಲ್ಲವೆಂದು ದೋಷಾರೋಪಿತ ನೌಕರನು ಸುಳ್ಳು ಸಾಧಿಸುತ್ತಾರೆ ಎನ್ನುವುದಕ್ಕೆ ಸದರಿ ಸರ್ಕಾರಿ ನೌಕರನು ಸಲ್ಲಿಸಲಾಗಿದೆ ಎಂದು ವಾದಿಸುತ್ತಿರುವ **ದಾಖಲೆಯ ಮೇಲೆ ದಿನಾಂಕ:02.10.2006 ನ್ನು ಆ ದಿವಸ ಗಾಂಧಿಜಯಂತಿ ನಿಮಿತ್ತ ಸಾರ್ವಜನಿಕ** ರಜಾ **ಇದ್ದುದರಿಂದ ದಿನಾಂಕ:03.10.2006 ಎಂದು ತಿದ್ದಲಾಗಿದೆ ಎಂದು ಬರಿಗಣ್ಣಿಗೆ ಕಂಡುಬರುತ್ತಿದ್ದು**, ಈ ವಿಷಯಕ್ಕೆ ಸಂಬಂಧಿಸಿದಂತೆ ದೋಷಾರೋಪಿತ ನೌಕರನು ಮತ್ತು ಅವರ ಪರ ಹಾಜರಾಗಿದ್ದ "ರಕ್ಷಣಾ ಸಹಾಯಕರು" ಸಹ ಈ ಆರೋಪವನ್ನು ನಿರಾಕರಿಸಿಲ್ಲವಾದ್ದರಿಂದ, ಹಾಗೂ, ಸದರಿ ಆಪಾದಿತ ಸರ್ಕಾರಿ ನೌಕರನು 2ನೇ ಕಾರಣ ಕೇಳುವ ಜ್ಞಾಪನಕ್ಕೆ ಸಲ್ಲಿಸಿದ ಆತನ ವಿವರಣೆಯಲ್ಲಿ ಆತನ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ರಕ್ಷಿಸಿಕೊಳ್ಳಬಹುದಾದ ಯಾವುದೇ ಹೊಸ ಅಂಶಗಳು ಒಳಗೊಂಡಿಲ್ಲವಾದ್ದರಿಂದ ಆತನು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ತಿರಸ್ಕರಿಸಲಾಗಿದೆ.

(8) ನಿವೃತ್ತ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಸಲ್ಲಿಸಿದ ಉಲ್ಲೇಖ (9) ರಲ್ಲಿ ತಿಳಿಸಲಾದ ಇಲಾಖಾ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ ಸದರಿ ಆರೋಪಿತ ಸಿಬ್ಬಂದಿಗೆ ಸಮರ್ಥಿಸಿಕೊಳ್ಳಲು / ಪ್ರತಿವಾದಿಸಲು ಸಾಕಷ್ಟು ಕಾಲಾವಕಾಶ ನೀಡಿ, ನಿರ್ಧಿಷ್ಟವಾದ ಹಾಗೂ ನ್ಯಾಯಯುತವಾದ ರೀತಿಯಲ್ಲಿ ಇಲಾಖಾ ವಿಚಾರಣೆ ಕೈಗೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಒಟ್ಟಾರೆ, ಆರೋಪಿತ ಸರ್ಕಾರಿ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರ ಮೇಲೆ ಹೊರಿಸಲಾದ ದೋಷಾರೋಪಣೆಗಳು ಹಾಗೂ ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿರುವ ಹೇಳಿಕೆಗಳು ಮತ್ತು ವಿಚಾರಣಾ ಅಧಿಕಾರಿಗಳ ವರದಿಗಳು ಈ ಕೆಳಗಿನಂತೆ ಇರುತ್ತವೆ.

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ: 11 ಉಪನಿಯಮ: 23(1) ಮತ್ತು (2) ರಡಿ ವಿಚಾರಣಾ ವರದಿ

ಈ ಮೇಲೆ ನಮೂದಿಸಿದ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ, ದೋಷಾರೋಪಿತ ಸರಕಾರಿ ನೌಕರರಿಗೆ ವಿಚಾರಣಾ ನೋಟೀಸನ್ನು ಜಾರಿ ಮಾಡಲಿಕ್ಕಾಗಿ ಅವರು ಮೊದಲಿಗೆ ವೈಯಕ್ತಿಕವಾಗಿ ಹಾಜರಾದರು. ಆ ನಂತರ ಅವರ ಅರ್ಜಿಯ ಮೇರೆಗೆ ಒಬ್ಬ ಇಲಾಖಾ ರಕ್ಷಣಾ ಸಹಾಯಕರನ್ನು ನೇಮಿಸಲಾಯಿತು. ಕೆಲವೊಂದು ಮುದ್ದತ್ತುಗಳಿಗೆ ಅವರು ಹಾಜರಾಗಿ ಆ ನಂತರ ಅವರಿಗೆ ತೀವ್ರ ಸ್ವರೂಪದ ಕಾಯಿಲೆಯಿಂದಾಗಿ ಅವರ ವಿನಂತಿ ಮೇರೆಗೆ ಅವರನ್ನು ಪ್ರಕರಣದಿಂದ ನಿವೃತ್ತಿಗೊಳಿಸಿ, ತದನಂತರ ದೋಷಾರೋಪಿತ ಸರಕಾರಿ ನೌಕರರು ವೈಯಕ್ತಿಕವಾಗಿ ಹಾಜರಿದ್ದರು.

2) ದೋಷಾರೋಪಿತ ಸರಕಾರಿ ನೌಕರರಿಗೆ ಅವರು ಇಲಾಖೆ ವಿಚಾರಣೆಗೆ ಹಾಜರಾದ ದಿನವೇ ಅನುಬಂಧ-1 ಮತ್ತು 2 ರಲ್ಲಿ ನಮೂದಿಸಿದ ದೋಷಾರೋಪಣೆಗಳನ್ನು ಅವರ ಮೇಲೆ ರುಜುವಾತುಪಡಿಸಲು ಅನುಬಂಧ-3 ಮತ್ತು 4 ರಲ್ಲಿ ನಮೂದು ಮಾಡಿದ ದಾಖಲೆಗಳು ಮತ್ತು ಸಾಕ್ಷಿದಾರರ ಬಗ್ಗೆ ತಿಳಿಸಿ ಹೇಳಲಾಯಿತು. ಅವರಿಗೆ ಅನುಬಂಧ-3 ರಲ್ಲಿ ನಮೂದು ಮಾಡಿದ ದಾಖಲೆಗಳಾಗಲೀ ಅಥವಾ ಪ್ರಕರಣಕ್ಕೆ ಸಂಬಂಧಿಸಿದ ಬೇರೆ ಯಾವುದೇ ಅವಶ್ಯಕ ದಾಖಲೆಗಳ ಪೂರೈಕೆ ಬಗ್ಗೆ ಸಹ ತಿಳಿಹೇಳಲಾಯಿತು. ಆ ನಂತರ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ: 11 ಹಾಗೂ ಉಪನಿಯಮ: 3ರ ಅಡಿ, ಅನುಬಂಧ-1 ಮತ್ತು 2 ರಲ್ಲಿ ದೂರಿರುವ ಹಾಗೆ ದೋಷಾರೋಪಣೆಗಳನ್ನು ಓದಿ ತಿಳಿಹೇಳಲಾಯಿತು. ದೋಷಾರೋಪಿತ ಸರಕಾರಿ ನೌಕರರು ತಮ್ಮ ಮೇಲಿನ ದೋಷಾರೋಪಣೆಗಳನ್ನು ಸ್ಪಷ್ಟವಾಗಿ ಅಲ್ಲಗಳೆದು, ತಾವು ಯಾವುದೇ ತಪ್ಪುಗಳನ್ನು ಮಾಡಿಲ್ಲ ಹಾಗೂ ಅವುಗಳಿಂದ ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳುವುದಾಗಿ ತಿಳಿಸಿದರು. ಆದ್ದರಿಂದ ಈ ಇಲಾಖಾ ವಿಚಾರಣೆಯನ್ನು ಮುಂದುವರಿಸಲಾಯಿತು.

3) ಅನುಬಂಧ-1 ಮತ್ತು 2 ರಲ್ಲಿ ನಮೂದಿಸಿದ ಹಾಗೆ, ಶಿಸ್ತು ಪ್ರಾಧಿಕಾರದ ಪರವಾಗಿ ದೋಷಾರೋಪಿತ ನೌಕರರ ಮೇಲೆ ದೋಷಾರೋಪಣೆಗಳೇನೆಂದರೆ, ಅವರು ಸಾಂಖ್ಯಿಕ ನಿರೀಕ್ಷಕರು ಅಂತಾ ಸರಕಾರಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಬೆಳ್ತಂಗಡಿ ತಹಶೀಲ್ದಾರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವರು ಹಾವೇರಿ ಜಿಲ್ಲಾ ಹಾನಗಲ್ ತಹಶೀಲ್ದಾರ ಕಚೇರಿಯಿಂದ ಅಮಾನತ್ತಿನಲ್ಲಿದ್ದಾಗ, ದಿನಾಂಕ:03.10.2006 ರಂದು ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಲು ಭೇಟಿ ನೀಡಿ ಮಾಹಿತಿ ಕೋರಿದ ಅರ್ಜಿಯನ್ನು ಸಲ್ಲಿಸಲು ಅರ್ಜಿಯ ಮೇಲೆ ಕಚೇರಿಯ ಮೊಹರನ್ನು ಅನಧಿಕೃತವಾಗಿ ದಾಖಲಿಸಿಕೊಂಡು ನಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರು ತಮಗೆ ಮಾಹಿತಿ ನೀಡಿಲ್ಲವೆಂದು, ದಿನಾಂಕ:18.11.2006 ರಂದು ನೇರವಾಗಿ ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಲಾದ ಅವರ ದೂರು ಮತ್ತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರು ಕರ್ನಾಟಕ ಮಾಹಿತಿ ಆಯೋಗಕ್ಕೆ ನೇರವಾಗಿ ಸಲ್ಲಿಸಲಾದ ಪತ್ರದ ಸಂಖ್ಯೆ: ಜಿಸಂಹಾ/ಆಡಳಿತ/ಮಾಹ/06-07 ದಿನಾಂಕ:27.01.2007 ಇದನ್ನು ಪರಿಶೀಲಿಸಿ, ದಿನಾಂಕ:07.02.2007 ರಂದು ಮಾಹಿತಿ ಆಯೋಗದಲ್ಲಿ ವಿಚಾರಣೆ ನಿಗದಿಪಡಿಸಲಾಗಿತ್ತು. ಅದರಂತೆ ರಾಜ್ಯ ಪ್ರಧಾನ ಮಾಹಿತಿ ಆಯುಕ್ತ ದಿನಾಂಕ 7-2-2007 ರಂದು ವಿಚಾರಣೆ ಏರ್ಪಡಿಸಿ ಇನ್ನಿತರ ಆದೇಶಗಳೊಂದಿಗೆ "Directorate of Economics and Statistics is also directed to inquire into the misplacing of the complainant's application filed under the Right to Information Act and to take action on proposal for disciplinary proceedings sent by the District Statistical Officer" ಎಂದು ಆದೇಶಿಸಿದ್ದರಿಂದ, ಹಾಗೂ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರು ಪೂರ್ವಭಾವಿ ವಿಚಾರಣೆ ನಡೆಸಿ, ದಿನಾಂಕ: 12.05.2007 ರಂದು ಸಲ್ಲಿಸಿದ ವರದಿಯಲ್ಲಿ, "ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ದಿನಾಂಕ: 03.10.2006 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಸಲಾಗಿದೆ ಎಂಬ ಅರ್ಜಿಗೆ ಕಚೇರಿಯ ಮೊಹರನ್ನು ಅನಧಿಕೃತವಾಗಿ ಬಳಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ" ಎಂಬ ಅಭಿಪ್ರಾಯ ನೀಡಿದ್ದರಿಂದ, ಈ ಇಲಾಖಾ ವಿಚಾರಣೆಯನ್ನು ಅವರ ಮೇಲೆ ನಡೆಸಲಾಗಿದೆ. ಅದರಂತೆ ದೋಷಾರೋಪಿತ ಸರಕಾರಿ ನೌಕರರು ದಿನಾಂಕ:05.06.2006 ರಿಂದ 25.03.2007 ರ ವರೆಗಿನ ಅಮಾನತ್ತು ಅವಧಿಯಲ್ಲಿ ದಿನಾಂಕ:03.10.2006 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರ ಕಚೇರಿಗೆ ಭೇಟಿ ನೀಡಿ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಲು ಬಂದಿರುವುದಾಗಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರಿಗೆ ಮನದಟ್ಟು ಮಾಡಿಕೊಟ್ಟು ಅಂದು ಕಚೇರಿಯಲ್ಲಿ ಉಪಸ್ಥಿತರಿದ್ದ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯಾದ ಶ್ರೀ ಎನ್.ಎಸ್. ನಾಗಶೆಟ್ಟಿ

ಅವರಿಗೆ ಅಥವಾ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾದ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಸಿ.ಎಸ್. ಚಿಕ್ಕಮಠ ಇವರಿಗೆ ತಮ್ಮ ಉದ್ದೇಶಿತ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆದರೆ ಕಚೇರಿಯ ಸ್ವೀಕೃತಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಜಿ.ವಿ. ಸುಕ್ತೆ, ಇವರ ಅನುಪಸ್ಥಿತಿಯಲ್ಲಿ ಕಚೇರಿಯ ಮೊಹರನ್ನು ಅನಧಿಕೃತವಾಗಿ ಉದ್ದೇಶಿತ ಅರ್ಜಿಯ ಮೇಲೆ ದಾಖಲಿಸಿಕೊಂಡು ಶ್ರೀ ಜಿ.ವಿ. ಸುಕ್ತೆ ಇವರ ರುಜುವನ್ನು ಹೋಲುವಂತೆ ಸ್ವೀಕೃತಿಗಾಗಿ ನಕಲಿ ಸಹಿ ದಾಖಲಿಸಿಕೊಂಡಿರುವುದಾಗಿ ಹಾಗೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಸ್ವೀಕೃತಿಗೆ ಉಪಯೋಗಿಸುವ ದುಂಡನೆಯ ಮೊಹರಿನ ಬದಲಾಗಿ ರವಾನೆಗೆ ಉಪಯೋಗಿಸುವ ಮೊಹರನ್ನು ಅರ್ಜಿಯಲ್ಲಿ ದಾಖಲಿಸಿಕೊಂಡಿದ್ದಾರೆ. ಈ ಕುರಿತು ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಇವರು ಶ್ರೀ ಜಿ.ವಿ. ಸುಕ್ತೆ ಇವರಿಗೆ ಜಾರಿ ಮಾಡಿದ ಕಾರಣ ಕೇಳುವ ನೋಟೀಸು ಹಾಗೂ ಶ್ರೀ ಜಿ.ವಿ. ಸುಕ್ತೆ ಸಲ್ಲಿಸಿರುವ ಉತ್ತರಗಳನ್ನು ಗಮನಿಸಲಿಕ್ಕಾಗಿ ದೋಷಾರೋಪಿತ ಸರಕಾರಿ ನೌಕರರು ಕಚೇರಿಯ ಮೊಹರನ್ನು ಅನಧಿಕೃತವಾಗಿ ಉಪಯೋಗಿಸಿಕೊಂಡಿದ್ದು ಹಾಗೂ ನಕಲಿ ಅರ್ಜಿ ಸೃಷ್ಟಿ ಮಾಡಿದ್ದು ಸರಿ ಎಂದು ಕಂಡುಬರುತ್ತದೆ. ಇದಾದ ನಂತರ 45 ದಿನಗಳು ಗತಿಸಿದ ಮೇಲೆ ಅಂದರೆ ದಿನಾಂಕ:18.11.2006 ರಂದು ಮೂಲ ಅರ್ಜಿಯ ನೆರಳಚ್ಚು ಪ್ರತಿಯನ್ನು ಆಧಾರವಾಗಿಟ್ಟುಕೊಂಡು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರು ಮಾಹಿತಿ ಕೋರಲಾದ ದೋಷಾರೋಪಿತ ಸರಕಾರಿ ನೌಕರರ ಅರ್ಜಿಗೆ "ನಿಗದಿತ ಅವಧಿ ಮೀರಿದ್ದರೂ ಮಾಹಿತಿಯನ್ನು ನೀಡದೇ ಇರುವುದು ಹಾಗೂ ನಿರಾಕರಿಸಿದರೆಂದು" ನೇರವಾಗಿ ಕರ್ನಾಟಕ ಮಾಹಿತಿ ಹಕ್ಕು ಆಯುಕ್ತರಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿದರು. ಹಾಗೂ ಅವರ ಅರ್ಜಿಯ ಅನ್ವಯ ಕರ್ನಾಟಕ ಮಾಹಿತಿ ಆಯೋಗ ದಿನಾಂಕ:07.02.2007 ರಂದು ವಿಚಾರಣೆಯನ್ನು ನಡೆಸಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ದಿನಾಂಕ:25.01.2007 ರಂದು ಪತ್ರ ಸಂಖ್ಯೆ: ಜಿಸಂಹಾ/ಆಡಳಿತ/ ಮಾಹ/ಅ/2006-07/2026-28ರ ಮೂಲಕ ದೋಷಾರೋಪಿತ ಸರಕಾರಿ ನೌಕರರು ಹೇಳಿದ ಮಾಹಿತಿಯನ್ನು ಒದಗಿಸಿದ್ದನ್ನು ಒಪ್ಪಿಕೊಂಡು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಸಲ್ಲಿಸಿದ ಪತ್ರ ಸಂಖ್ಯೆ: ಜಿಸಂಹಾ/ಆಡಳಿತ/ ಮಾಹಅ/06-07/2042-44 ದಿನಾಂಕ:27.01.2007 ರನ್ವಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ದೋಷಾರೋಪಿತ ನೌಕರರ ಅರ್ಜಿಯು "ಮಿಸ್ಸಿಂಗ್", ಕಾಣೆಯಾದ ಕುರಿತು ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ಮಾಹಿತಿ ಆಯೋಗದ ಆದೇಶದ ದಿನಾಂಕ:07.02.2007 ರಂದು ಆದೇಶಿಸಲಾಗಿದೆ. ಅದರಂತೆ ನಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರು ಪೂರ್ವಭಾವಿ ವಿಚಾರಣೆ ಕೈಗೊಂಡು ದಿನಾಂಕ:12.05.2007 ರಂದು ಸಲ್ಲಿಸಿದ ಅರ್ಜಿಯಲ್ಲಿ, "ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ದಿನಾಂಕ:03.10.2006 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಹಾವೇರಿ ಇವರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಸಲಾಗಿದೆ ಎಂಬ ಅರ್ಜಿಗೆ ಕಚೇರಿಯ ಮೊಹರನ್ನು ಅನಧಿಕೃತವಾಗಿ ಬಳಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ", ಎಂದು ಅಭಿಪ್ರಾಯ ನೀಡಿದ್ದರಿಂದ, ಅಮಾನತ್ತಿನಲ್ಲಿದ್ದ ಅವಧಿಯಲ್ಲಿ ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರ ಕಚೇರಿಯಲ್ಲಿ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮವನ್ನು ದುರ್ಬಳಕೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಆದ್ದರಿಂದ ದೋಷಾರೋಪಿತ ಸರಕಾರಿ ನೌಕರರು ಕರ್ನಾಟಕ ನಾಗರಿಕ ಸೇವಾ (ನಡತೆ) 1966 ರ ನಿಯಮ 3 ಹಾಗೂ 27ನ್ನು ಉಲ್ಲಂಘನೆ ಮಾಡಿ ಗಂಭೀರ ಸ್ವರೂಪದ ದುರ್ನಡತೆಯಿಂದ ನಡೆದುಕೊಂಡು ನಿಯಮಾವಳಿಗಳ ಪ್ರಕಾರ ದಂಡನಾರ್ಹವಾದ ದೋಷಾರೋಪಣೆ ಮಾಡಿದ್ದಾರೆಂದು ಆರೋಪಣೆ ಮಾಡಲಾಗಿದೆ.

4) ಈ ಮೇಲೆ ನಿರೀಕ್ಷಿಸಿರುವ ಹಾಗೆ, ಈ ಮೇಲಿನ ದೋಷಾರೋಪಣೆಗಳನ್ನು ದೋಷಾರೋಪಿತ ಸರಕಾರಿ ನೌಕರರು ಸಂಪೂರ್ಣವಾಗಿ ಅಲ್ಲಗಳೆದು, ಈ ವಿಚಾರಣೆಯಲ್ಲಿ ಸಲ್ಲಿಸಿದ ದಿನಾಂಕ:10.09.2008 ರ ತಮ್ಮ ಲಿಖಿತ ಸಂರಕ್ಷಣಾ ಹೇಳಿಕೆಯಲ್ಲಿ ದಿನಾಂಕ:05.06.2006 ರಿಂದ ತಾವು ಅಮಾನತ್ತಿನಲ್ಲಿ ಇದ್ದ ಕಾರಣ ಬೇಗನೆ ಮರುನೇಮಕಾತಿ ಪಡೆಯಲು ಹಾಗೂ ಮೇಲಾಧಿಕಾರಿಗಳಿಗೆ ತನ್ನ ಯಾವ ತಪ್ಪೂ ಇಲ್ಲವೆಂದು ಸಮರ್ಥಿಸಲು ಕೆಲವು ಮಾಹಿತಿಗಳು ಅವಶ್ಯವಿದ್ದ ಕಾರಣ ಅವುಗಳನ್ನು ಪಡೆಯಲು ಆರ್.ಟಿ.ಐ. ನಿಯಮ 2006 ರ ಅಡಿಯಲ್ಲಿ ದಿನಾಂಕ 03.10.2006ರಂದು ಡಿ.ಎಸ್.ಓ. ಹಾವೇರಿ ಇವರ ಕಚೇರಿಗೆ ಭೇಟಿ ನೀಡಿ, ಅಂದು ಕಾರ್ಯನಿರ್ವಹಿಸುತ್ತಿದ್ದ "ಆವಕ-ಜಾವಕ" ವಿಭಾಗದ ವಿಷಯ ನಿರ್ವಾಹಕ ಶ್ರೀ ಜಿ.ವಿ. ಸುಕ್ತೆ ಇವರಲ್ಲಿ ಮನವಿ ಸಲ್ಲಿಸಿ ಸ್ವೀಕೃತಿ ಬಗ್ಗೆ ಮೊಹರಿನೊಂದಿಗೆ ಸಹಿ ಪಡೆದಿರುತ್ತೇನೆ. ರವಾನೆ ಸಹಾಯಕ ಮೊಹರನ್ನು ಶ್ರೀ ಜಿ.ವಿ. ಸುಕ್ತೆ ಇವರೇ ಹಾಕಿ ಕೊಟ್ಟಿದ್ದು ಇರುತ್ತದೆ. ಆದರೆ ಫೋರ್ಜರಿ ಸಹಿ, ಮೊಹರುಗಳ ದುರ್ಬಳಕೆ, ಗಂಭೀರ ದುರ್ನಡತೆಯೆಂಬ ಪದಗಳ ಬಳಕೆಯೊಂದಿಗೆ ಆಪಾದಿಸುತ್ತಿರುವುದರಿಂದ ಅತೀವ ಮಾನಸಿಕ ಹಿಂಸೆ, ತೇಜೋವಧೆ, ಅಪಮಾನವಾಗುತ್ತಿದೆ. ತಾವು ಅಮಾನತ್ತಿನಲ್ಲಿ ಇದ್ದಾಗ ಮನೆ ವಿಳಾಸಕ್ಕೆ "ಡಿ.ಎಸ್.ಓ", ಹಾವೇರಿ ಇವರಿಂದ ಕೆಲವು ಟಪಾಲುಗಳು ಅಂಚೆ ಮೂಲಕ ಬಂದಿದ್ದು, ಶ್ರೀ ಜಿ.ವಿ. ಸುಕ್ತೆ ವಿಷಯ ನಿರ್ವಾಹಕರಿಂದ ರವಾನಿಸಲ್ಪಟ್ಟು ಅದಕ್ಕೆ ಸಂಬಂಧಿಸಿದ ಲಕೋಟೆಗಳ ಜೆರಾಕ್ಸ್ ಪ್ರತಿಗಳನ್ನು

ಹೇಳಿಕೆಯೊಂದಿಗೆ ತಮ್ಮ ಅವಗಾಹನೆಗೆ ಸಲ್ಲಿಸಿರುತ್ತೇನೆ. ಈ ಮೂರು ಲಕೋಟೆಗಳು 12:06ರ ತಿಂಗಳಲ್ಲಿ ರವಾನೆಯಾಗಿದ್ದು ರವಾನೆ ಸಹಾಯಕರ ಸಹಿ ಹಾಗೂ ತಾವು ಸ್ವೀಕೃತ ಪಡೆದ ಮನವಿ ಮೇಲಿನ ಸಹಿಗಳನ್ನು ತಾವುಗಳು ಪರಾಮರ್ಶಿಸಿ, ಫೋರ್ಜರಿ ಸಹಿ ಮೊಹರುಗಳ ದುರ್ಬಳಕೆ, ಗಂಭೀರ ದುರ್ನಡತೆ ಎಂಬ ಆಪಾದನೆಗಳಿಂದ ತಮ್ಮನ್ನು ಮುಕ್ತಗೊಳಿಸಲು ವಿನಂತಿಸಿಕೊಂಡಿದ್ದಾರೆ.

5) ಕಾರಣ, ಶಿಸ್ತು ಪ್ರಾಧಿಕಾರದ ಪರವಾಗಿ ದೋಷಾರೋಪಿತ ಸರಕಾರಿ ನೌಕರರ ಮೇಲೆ ಇಲಾಖೆ ವತಿಯಿಂದ ದೋಷಾರೋಪಣೆಗಳನ್ನು ಸಿದ್ಧ ಮಾಡಲು ಮಂಡನಾಧಿಕಾರಿಗಳು ಒಟ್ಟಿಗೆ ಐದು ಜನ ಸಾಕ್ಷಿದಾರರು, ಅಂದರೆ ಪಿಡಬ್ಲೂ-1 ರಿಂದ 5 ಇವರ ವಿಚಾರಣಾ ಹೇಳಿಕೆಯ ಜೊತೆಯಲ್ಲಿ ನಿಶಾನೆ ಪಿ-1 ರಿಂದ 8ರ ವರೆಗಿನ ದಾಖಲೆಗಳನ್ನು ಗುರುತಿಸಿಕೊಂಡು ತಮ್ಮ ಬದಿಯನ್ನು ಕೊನೆಗೊಳಿಸಿಕೊಂಡಿದ್ದಾರೆ. ನಂತರ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ-11 ಹಾಗೂ ಉಪನಿಯಮ 18ರ ಅಡಿ, ದೋಷಾರೋಪಿತ ಸರಕಾರಿ ನೌಕರರನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ದೋಷಾರೋಪಿತ ಸರಕಾರಿ ನೌಕರರು ತಮ್ಮ ಪರವಾಗಿ ಯಾವುದೇ ಸಾಕ್ಷಿ ವಿಚಾರಣೆಯನ್ನು ಮಾಡಿಕೊಂಡು ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಆದರೆ ಶಿಸ್ತು ಪ್ರಾಧಿಕಾರಗಳ ಪರ ವಿಚಾರಣೆಯಾದ ಸಾಕ್ಷಿದಾರರ ಪಾಟೀ ಸವಾಲಿನಲ್ಲಿ ನಿಶಾನೆ ಡಿ-1 ರಿಂದ 6ರ ವರೆಗಿನ ದಾಖಲೆಗಳನ್ನು ಗುರುತಿಸಿಕೊಂಡು ತಮ್ಮ ಬದಿಯನ್ನು ಕೊನೆಗೊಳಿಸಿಕೊಂಡಿದ್ದಾರೆ. ಇದಾದ ನಂತರ ಇಬ್ಬದಿಯವರು ತಮ್ಮ ತಮ್ಮ ಲಿಖಿತ ವಾದ-ಪ್ರತಿವಾದ ಪತ್ರಗಳನ್ನು ಸಲ್ಲಿಸಿದ್ದಾರೆ.

6) ಕಾರಣ, ಈ ಮೇಲಿನ ದೋಷಾರೋಪಣೆಗಳು, ಸಂರಕ್ಷಣಾ ಹೇಳಿಕೆ ಹಾಗೂ ಸಾಕ್ಷಿ ಪುರಾವೆಗಳನ್ನು ಪರಿಶೀಲಿಸಿ ನಾನು ಈ ವಿಚಾರಣೆಯಲ್ಲಿ ತೀರ್ಮಾನಿಸಲು ಉದ್ಭವವಾಗುವ ಅಂಶ ಏನೆಂದರೆ:

ಅಂಶ

ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ದೋಷಾರೋಪಿತ ಸರಕಾರಿ ನೌಕರರ ಮೇಲೆ ಮಾಡಲಾದ ದೋಷಾರೋಪಣೆಗಳನ್ನು ಈ ವಿಚಾರಣೆಯ ಪ್ರಕರಣದಲ್ಲಿ ನಿಸ್ಸಂದೇಹವಾಗಿ ರುಜುವಾತು ಪಡಿಸಿದ್ದಾರೆಯೆ?

ಈ ಮೇಲಿನ ಅಂಶವನ್ನು ನಾನು ಸಕಾರಾತ್ಮಕವಾದ ಈ ಕೆಳಕಂಡ ಕಾರಣಗಳ ಸಲುವಾಗಿ ಉತ್ತರಿಸುತ್ತೇನೆ.

ಕಾರಣಗಳು

7) ಈ ಇಲಾಖಾ ವಿಚಾರಣಾ ಪ್ರಕರಣದಲ್ಲಿ ನಾವು ಅತೀ ಮುಖ್ಯವಾಗಿ ಗಮನದಲ್ಲಿಡುವ ಸಂಗತಿಗಳು ಏನೆಂದರೆ, ಅನುಬಂಧ-1 ಮತ್ತು 2 ರಲ್ಲಿ ನಮೂದ ಮಾಡಿರುವ ದೋಷಾರೋಪಣೆಗಳನ್ನು ದೋಷಾರೋಪಿತ ಸರಕಾರಿ ನೌಕರರ ಮೇಲೆ ರುಜುವಾತು ಪಡಿಸಲು ಅನುಬಂಧ-3 ರಲ್ಲಿ ನಮೂದಿಸಿದ ದಾಖಲೆಗಳು ಹಾಗೂ ಅನುಬಂಧ-4 ರಲ್ಲಿ ನಮೂದಿಸಿದ ಸಾಕ್ಷಿದಾರರು ಅತೀ ಮುಖ್ಯವಾಗಿರುತ್ತದೆ. ಅದರಂತೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು ಹಾಗೂ ನೈಸರ್ಗಿಕ ನಿಯಮಗಳ ಪಾಲನೆಯೂ ಅತೀ ಅವಶ್ಯವಾಗಿರುತ್ತದೆ. ಅದರಂತೆ ದಂಡ ಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ದಂಡ ಸಂಹಿತೆ ಇವುಗಳ ನಿಯಮಗಳು ಹಾಗೂ ಸಾಕ್ಷಿ ಅಧಿನಿಯಮಗಳ ಮೇರೆಗೆ ಯಾವುದೇ ಒಬ್ಬ ದೋಷಾರೋಪಿತ ನೌಕರನು ಪ್ರಾರಂಭದಲ್ಲಿಯೇ ದೋಷಿಯೆಂದು ತೀರ್ಮಾನಕ್ಕೆ ಬರಲು ಆಗುವುದಿಲ್ಲ. ಕಾರಣ ಒಂದು ನೂರು ಜನ ಅಪರಾಧಿಗಳು ಶಿಕ್ಷೆಯಿಂದ ಪಾರಾಗಬಹುದು. ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆ ಮಾಡಲು ಬರುವುದಿಲ್ಲ ಅನ್ನುವ ತತ್ವವನ್ನು ಇಲಾಖಾ ಪ್ರಕರಣಗಳಿಗೂ ಅನ್ವಯವಾಗುತ್ತವೆ ಎನ್ನುವುದನ್ನು ಬಹಳ ಹಿಂದೆಯೇ ಮಾನ್ಯ ವರಿಷ್ಠ ನ್ಯಾಯಾಲಯವು ತೀರ್ಮಾನಿಸಿದೆ. ಇದಕ್ಕೆ ಉದಾಹರಣೆ ಅಂದರೆ ಭಾರತೀಯ ಒಕ್ಕೂಟ ವಿರುದ್ಧ ಹೆಚ್.ಸಿ. ಗೋಯಲ್, ಎ.ಐ.ಆರ್.1964 ಪುಟ 364, ಇದರಲ್ಲಿ ನಾವು ಈ ಮೇಲಿನ ಅಂಶವನ್ನು ಪರಾಮರ್ಶಿಸಬಹುದು. ಈ ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಇಲಾಖಾ ಪ್ರಕರಣದ ವಿಚಾರಣೆಯನ್ನು ವಿಶ್ಲೇಷಣೆ ಮಾಡೋಣ.

8) ದೋಷಾರೋಪಿತ ಸರಕಾರಿ ನೌಕರರು ಗಡುತರ ಮತ್ತು ಗಂಭೀರ ಸ್ವರೂಪದ ಅಪರಾಧಗಳನ್ನು ಮಾಡಿದ್ದಕ್ಕೆ ಮೊದಲನೆಯದಾಗಿ ಅವರು ದಿನಾಂಕ:03.10.2006 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಹಾವೇರಿ ಇವರಲ್ಲಿ ತಾವು ನಿಶ್ಚಿತವಾಗಿ ಮತ್ತು ಖಡಾಖಂಡಿತವಾಗಿ ಸಂಬಂಧಪಟ್ಟ ವಿಷಯ ನಿರ್ವಾಹಕರ ಮುಂದೆ ಸಲ್ಲಿಸಿ ಅವರ ಸಹಿ ಮತ್ತು ಮೊಹರನ್ನು ಪಡೆದಿರುವುದಾಗಿ ಪ್ರತಿಪಾದಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಇಲಾಖೆಯವರು ಅವರು ಅಂತಹ ಅರ್ಜಿಯನ್ನು ಆ ದಿವಸ ಯಾವ ಕಾಲಕ್ಕೂ ಸಲ್ಲಿಸಿಲ್ಲ. ಆದರೆ ಅಪರಾಧಿ ಮನೋಭಾವನೆಯಿಂದ ಸುಳ್ಳು ದಸ್ತಾವೇಜು ಮತ್ತು ಖೊಟ್ಟಿ ರುಜುಗಳನ್ನು ತಾವೇ ಸೃಷ್ಟಿಸಿ, ಇಡೀ ಇಲಾಖೆಗೆ ಮೋಸ ಮಾಡುವ ಮನೋವೃತ್ತಿಯವರೆಂದು ದೂರುತ್ತಾರೆ. ಈ ದೂರುಗಳನ್ನು ಸುಸ್ಪಷ್ಟವಾಗಿ ರುಜುವಾತು ಪಡಿಸಲು ಪಿಡಬ್ಲೂ-1 ರಿಂದ 5ನೇ ರವರ ಇಲಾಖೆಗೆ ಸಂಬಂದಪಟ್ಟ ಜವಾಬ್ದಾರಿಯುಳ್ಳ ಸಾಕ್ಷಿದಾರರ ಹೇಳಿಕೆಗಳ ಜೊತೆಯಲ್ಲಿ ನಿಶಾನೆ ಪಿ-1 ರಿಂದ 8ರ ವರೆಗಿನ ದಾಖಲೆಗಳನ್ನು ಆದ'ರಿಸುತ್ತಾರೆ. ಪಿಡಬ್ಲೂ-1 ಶ್ರೀ ಬಸನಗೌಡ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು,

ದಾವಣಗೆರೆ ಇವರು ಶಿಸ್ತು ಪ್ರಾಧಿಕಾರದಿಂದ ಆದೇಶ ಪಡೆದು ದಿನಾಂಕ:11.05.2007 ರಂದು ತಮ್ಮ ಪೂರ್ವಭಾವಿ ವಿಚಾರಣೆ ನಡೆಸಿ ಪಿಡಬ್ಲೂ-2 ರಿಂದ 5 ರವರಗೆ ನಿಶಾನೆ ಪಿ-6 ರಿಂದ 8ರ ವರೆಗಿನ ಹೇಳಿಕೆಗಳನ್ನು ಪಡೆದುಕೊಂಡು ನಿಶಾನೆ ಪಿ-1ರ ವರದಿಯನ್ನು ಇಲಾಖಾ ಮುಖ್ಯಸ್ಥರಿಗೆ ದಿನಾಂಕ:12.05.2007ರಂದು ಸಲ್ಲಿಸಿದ್ದಾರೆ. ಅವರ ವರದಿ ಮತ್ತು ಈ ವಿಚಾರಣೆಯಲ್ಲಿ ಅವರು ಹೇಳಿಕೆ ನೀಡಿದ್ದು ಏನೆಂದರೆ ತಮ್ಮ ಪೂರ್ವಭಾವಿ ವಿಚಾರಣೆ ತಮ್ಮ ಪ್ರಾಥಮಿಕ ವರದಿ ಮತ್ತು ಸಾಕ್ಷಿದಾರರ ಹೇಳಿಕೆಗಳು ಹಾಗೂ ಅವಶ್ಯವಿದ್ದ ಪಿ-2 ಮತ್ತು 3 ರ ದಾಖಲೆಗಳು, ಹಾಜರಾತಿ ಪುಸ್ತಕದ ಮೇಲಿನ ಪಿಡಬ್ಲೂ-4 ಶ್ರೀ ಜಿ.ವಿ. ಸುಕ್ತೆ, ವಿಷಯ ನಿರ್ವಾಹಕರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಹಾವೇರಿ ಇವರ ಮಾದರಿಯ ಚಿಕ್ಕ ಮತ್ತು ದೊಡ್ಡ ಸಾಮಾನ್ಯವಾದ ಸಹಿಗಳು, ಕಚೇರಿಯ ಆವಕ ಮತ್ತು ಜಾವಕಕ್ಕೆ ಸಂಬಂಧಪಟ್ಟ ಕಚೇರಿಯ ಮೊಹರುಗಳು, ರವಾನೆಗೆ ಸಂಬಂಧಪಟ್ಟಂತೆ ಉದ್ದನೆಯ ಮೊಹರು ಮತ್ತು ಸ್ವೀಕೃತಿಗಾಗಿ ದುಂಡನೆಯ ಮೊಹರನ್ನು ಬಳಸಲಾಗುತ್ತಿದೆ ಅನ್ನುವುದು ಎಲ್ಲರೂ ಒಪ್ಪಿಕೊಳ್ಳುವ ಸಂಗತಿಯಾಗಿದೆ. ಇದಕ್ಕೆ ಯಾರದೂ ಭಿನ್ನಭಿಪ್ರಾಯ ಇರುವುದಿಲ್ಲ. ಈ ದಾಖಲೆಯನ್ನು ನಿಶಾನೆ ಪಿ-2 ರಂದು ಈ ಪ್ರಕರಣದಲ್ಲಿ ಗುರುತಿಸಲಾಗಿದೆ. ನಿಶಾನೆ ಪಿ-2 ಕ್ಕೆ ದೋಷಾರೋಪಿತ ನೌಕರರ ಆಕ್ಷೇಪಣೆ ಎಂದರೆ ನಿಶಾನೆ ನಂ.ಪಿ-2ರ ದಾಖಲೆಯನ್ನು ಪಿಡಬ್ಲೂ-1 ಬಸನಗೌಡ ಇವರು ತಮ್ಮ ಸಮಕ್ಷಮ ಎಂದು ದೃಢೀಕರಿಸಿರುವುದಿಲ್ಲ. ಆದ್ದರಿಂದ ಈ ದಾಖಲೆಯನ್ನು ನಾವು ಈ ವಿಚಾರಣೆಯಲ್ಲಿ ಅಧಿಕೃತವಾಗಿ ಒಪ್ಪಲಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಪಿಡಬ್ಲ್ಯೂ-1 ಬಸನಗೌಡರ ಇವರು ಬಹಳ ಚೆನ್ನಾಗಿ ಎಲ್ಲಾರು ಒಪ್ಪುವಂತೆ ಅದನ್ನು ನನ್ನ ಸ್ವಮತ ಹಸ್ತಾಕ್ಷರದಲ್ಲಿ ಬರೆದಿದ್ದು ಸಂಬಂಧಪಟ್ಟ ಮೊಹರುಗಳು ಮತ್ತು ಪಿಡಬ್ಲೂ-4 ಸುಕ್ತೆ ಇವರ ಅದರ ಮೇಲಿನ ಸಹಿಗಳನ್ನು ನಾನೇ ನನ್ನ ಸಮಕ್ಷಮ ಪಡೆದುಕೊಂಡಿದ್ದುದು ಇದೆಯೆಂದು ಹೇಳಿದ್ದಾರೆ. ಇನ್ನು ಮುಂದೆ ದೋಷಾರೋಪಿತ ನೌಕರರ ಅತೀ ದೊಡ್ಡ ಕಷ್ಟವೇನೆಂದರೆ, ತಾನು ಹಾಜರುಪಡಿಸಿದ ನಿಶಾನೆ ನಂ.ಡಿ-1ರ ದಾಖಲೆ ಮತ್ತು ಇಲಾಖೆಯವರು ಹಾಜರುಪಡಿಸಿದ ನಿಶಾನೆ ನಂ.ಪಿ-3ರ ದಾಖಲೆಗಳು ಒಂದೇ ಇದ್ದು ಪಿಡಬ್ಲೂ-4 ಮತ್ತು 5 ಇವರು ನಿಶಾನೆ ನಂ.ಡಿ-2ರ ದಾಖಲೆಯನ್ನು ಒಪ್ಪಿಕೊಂಡಿದ್ದು ಅದರಂತೆ ನಿಶಾನೆ ನಂ.ಡಿ-4 ರಿಂದ 6ನೇ ದವುಗಳ ಅಂಚೆ ಲಕೋಟೆಗಳು ಇಲಾಖೆಗೆ ಸಂಬಂಧಿಸಿದ್ದು ಅವುಗಳ ಮೇಲಿನ ರುಜುಗಳನ್ನು ಶ್ರೀ ಸುಕ್ತೆ ಇವರು ಒಪ್ಪಿಕೊಂಡಿದ್ದು ಆ ರುಜುಗಳು ಮತ್ತು ಜಗಳದಲ್ಲಿರುವ ನಿಶಾನೆ ನಂ.ಡಿ-1 ಮತ್ತು ಪಿ-3ರ ಮೇಲಿನ ಸುಕ್ತೆ ಇವರ ರುಜುಗಳು ಒಂದಕ್ಕೊಂದು ಹೋಲಿಕೆಯಾಗುತ್ತಿದ್ದು ಅವುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯ, ಮಡಿವಾಳ, ಬೆಂಗಳೂರು ಇವರ ಪರೀವೀಕ್ಷಣೆಗೆ ಕಳುಹಿಸಿ ಅವರ ಅಭಿಪ್ರಾಯವನ್ನು ಪಡೆದುಕೊಂಡು ಮುಂದಿನ ಕ್ರಮ ಜರುಗಿಸುವುದು ಅವಶ್ಯಕವಾಗಿತ್ತು. ಇಲ್ಲದಿದ್ದರೆ ತಮಗೆ ತುಂಬಾ ಅನ್ಯಾಯ ಮತ್ತು ಭರಿಸಲಾರದ ನಷ್ಟವುಂಟಾಗುವುದು ಎಂದು ಪ್ರತಿಪಾದಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇಂತಹ ಕ್ರಮ ಜರುಗಿಸುವುದು ಅವಶ್ಯವಿದ್ದ ಪಕ್ಷದಲ್ಲಿ ಇದನ್ನು ಈ ಮುಂಚೆಯೇ ಅಂದರೆ ದಿನಾಂಕ: 11.05.2007 ರ ಪೂರ್ವದಲ್ಲಿ ಶಿಸ್ತು ಪ್ರಾಧಿಕಾರಕ್ಕೆ ವಿನಂತಿಸಿಕೊಂಡು ಇಂಥಹ ಕ್ರಮ ಜರುಗಿಸಿಕೊಳ್ಳಬೇಕಾಗಿತ್ತು. ಆದರೆ ವಿನಾ: ಕಾರಣ ಕಾಲ ವಿಳಂಬನೆ ಮಾಡಿ ನಿಗದಿತ ಅವಧಿಯಲ್ಲಿ ವಿಚಾರಣೆ ವರದಿಯನ್ನು ಸಲ್ಲಿಸಲು ತಡೆಹಿಡಿಯುವ ಅವರ ವ್ಯರ್ಥ ಪ್ರಯತ್ನಗಳಲ್ಲೂ ಇದೂ ಒಂದಾಗಿದೆಯೆಂದು ನನಗೆ ಕಂಡುಬರುತ್ತದೆ. ಇದಲ್ಲದೇ ಭಾರತೀಯ ಸಾಕ್ಷಿ ಅಧಿನಿಯಮ ಕಲಂ 45 ರಿಂದ 50 ಮೇರೆಗೆ ನ್ಯಾಯಾಲಯವಾಗಲೀ ಅಥವಾ ವಿಚಾರಣಾಧಿಕಾರಿಗಳಾಗಲೀ ಅವುಗಳೇ ಮುಖ್ಯ ಆಧಾರವೆಂದು ಪರಿಗಣಿಸಲು ಆಗುವುದಿಲ್ಲ. ಇಂಥಹ ತಜ್ಞರ ಅಭಿಪ್ರಾಯಗಳನ್ನು ಸಂದರ್ಭಕ್ಕೆ ತಕ್ಕಂತೆ ಇತರ ದಾಖಲೆಗಳನ್ನು ಪರಿಶೀಲಿಸಿ ಯೋಗ್ಯ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದರಲ್ಲಿ ನಾವು ಬರಿಗಣ್ಣಿನಿಂದ ವಿವಾದಿತ ಮತ್ತು ಒಪ್ಪಿಕೊಂಡಿರುವ ದಾಖಲೆಗಳು ಹಾಗೂ ಶ್ರೀ ಸುಕ್ತೆ ಇವರ ಸಾಕ್ಷಿ ಹೇಳಿಕೆ ಸಹಿಗಳನ್ನು ವಿವಾದಿತ ನಿಶಾನೆ ಡಿ-1 ಮತ್ತು ಪಿ-3 ನ್ನು ಕೂಲಂಕುಷವಾಗಿ ಪರಿಶೀಲಿಸಲಿಕ್ಕಾಗಿ ಅನೇಕ ವ್ಯತ್ಯಾಸಗಳು ಕಂಡುಬರುವುದು ವಿಧಿತವಾಗುತ್ತದೆ. ಇದಕ್ಕಿಂತಲೂ ಮಿಗಿಲಾಗಿ ದೋಷಾರೋಪಿತ ನೌಕರರು ಸುಳ್ಳು ಸಾಧಿಸುತ್ತಿದ್ದಾರೆ ಅನ್ನುವುದಕ್ಕೆ ನಿಶಾನೆ ಡಿ-1 ರ ಮೇಲಿನ ದಿನಾಂಕ:02.10.2006 ನ್ನು ಆ ದಿವಸ ಗಾಂಧಿಜಯಂತಿ ನಿಮಿತ್ತ ಸಾರ್ವಜನಿಕ ರಜೆ ಇದ್ದುದನ್ನು ದಿನಾಂಕ:03.10.2006 ಎಂದು ತಿದ್ದಲಾಗಿದೆ ಅನ್ನುವುದೂ ಸಹ ಬರಿಗಣ್ಣಿಗೆ ಕಂಡುಬರುತ್ತಿದ್ದು ಅದನ್ನೂ ಸಹ ಪಿಡಬ್ಲೂ-1 ಬಸನಗೌಡ ಹಾಗೂ ಪಿಡಬ್ಲೂ-4 ಸುಕ್ತೆ ಅವರು ಸರಿಯಾಗಿ ಹೇಳಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ದೋಷಾರೋಪಿತ ನೌಕರರು ಮತ್ತು ಅವರ ಪರ ಹಾಜರಾಗಿದ್ದ ಇಲಾಖಾ ರಕ್ಷಣಾ ಸಹಾಯಕರು ಸಹ ಕಣ್ಣುಮುಚ್ಚಿ ಕುಳಿತಿದ್ದಾರೆ. ಕಾರಣ ಇಷ್ಟೆ ಅದನ್ನು ಅವರು ಒಪ್ಪಿಕೊಳ್ಳದೆ ಬೇರೆ ದಾರಿ ಇರುವುದಿಲ್ಲ. ಹೀಗಾಗಿ ದೋಷಾರೋಪಿತ ಪರ ರಕ್ಷಣಾ ಹೇಳಿಕೆ ಅಥವಾ ಅವರ ಪ್ರತಿಪಾದನೆಯಲ್ಲಿ ಯಾವುದೇ ಹುರುಳು ಇರುವುದಿಲ್ಲ.

9) ಇನ್ನುಳಿದ ಸಾಕ್ಷಿದಾರರೆಂದರೆ ಪಿಡಬ್ಲೂ-2 ಶ್ರೀ ಚಂದ್ರಶೇಖರ ಚಿಕ್ಕಮಠ ಆಗಿನ ಸಹಾಯಕ ನಿರ್ದೇಶಕರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಹಾವೇರಿ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ:03.10.2006 ರಂದು ಅಪರಾಹ್ನ 1-30 ಅಥವಾ 2.00 ಗಂಟೆಗೆ ಪಿಡಬ್ಲೂ-5 ಶ್ರೀ ನೀಲಕಂಠ ಎಸ್. ನಾಗಶೆಟ್ಟಿ, ಜಿಲ್ಲಾ ಸಂಖ್ಯಾ

ಸಂಗ್ರಹಣಾಧಿಕಾರಿಗಳು, ಹಾವೇರಿ ಇವರ ಕಚೇರಿಯ ಕೊಠಡಿಯಲ್ಲಿದ್ದಾಗ ದೋಷಾರೋಪಿತ ನೌಕರರು ಹಾಜರಾಗಿ ತಾವು ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಒಂದು ಮಾಹಿತಿ ಕೋರಿ ಅರ್ಜಿ ಸಲ್ಲಿಸಲು ಬಂದಿದ್ದೇನೆ ಎಂದು ಹೇಳಿದ್ದಕ್ಕೆ ಪಿಡಬ್ಲೂ-5 ಶ್ರೀ ನೀಲಕಂಠ ಎಸ್. ನಾಗಶೆಟ್ಟಿ ಇವರು ತಾವು ಕಚೇರಿಯ ಮೇಲಧಿಕಾರಿಯಾಗಿದ್ದು ನೀವು ಅಮಾನತ್ತುರಲ್ಲಿ ಇದ್ದುದರಿಂದ ನಿಮ್ಮ ಕೇಂದ್ರಸ್ಥಾನವನ್ನು ಬಿಡಲು ನನ್ನ ಪೂರ್ವಾನುಮತಿ ಪಡೆಯುವುದು ಅವಶ್ಯವಿತ್ತು. ಮತ್ತು ಒಂದು ವೇಳೆ ನೀವು ನಿಮ್ಮ ಅರ್ಜಿಯನ್ನು ನಿವಾಸದ ವಿಳಾಸ ಅಥವಾ ಆ ವೇಳೆಗೆ ಸೇವೆಯಲ್ಲಿದ್ದ ಹಾನಗಲ್ ತಹಶೀಲ್ದಾರರ ಮುಖಾಂತರ ಕಳುಹಿಸಿದ್ದರೆ ಪರಿಶೀಲನೆ ಮಾಡಲು ಅನುಕೂಲವಾಗುತ್ತಿತ್ತು ಅಂಥ ಹೇಳಿದ್ದಕ್ಕೆ ಅವರು ಏನೇ ಆದರೂ ನಾನು ಇವತ್ತಿನ ದಿವಸ ಬಂದಿದ್ದು ಅರ್ಜಿ ಸಲ್ಲಿಸಿಯೇ ಹೋಗುತ್ತೇನೆಂದು ಹೊರಗೆ ಹೋದರೆಂದು ಹೇಳುತ್ತಾರೆ. ಇವರ ಪಾಟೀ ಸವಾಲಿನಲ್ಲಿ ದೋಷಾರೋಪಿತ ನೌಕರರು ತಾವು ಆ ದಿವಸ ಹಾವೇರಿ ಕಚೇರಿಗೆ ಹೋದದ್ದು ನಿಜ ಆದರೆ ಕೊಠಡಿಯಲ್ಲಿ ಹೋಗಿಲ್ಲ ಅನ್ನುವುದನ್ನು ಸಾಕ್ಷಿದಾರರು ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ. ಇವರ ಹೇಳಿಕೆಯನ್ನು ಪುಷ್ಟೀಕರಿಸಲು ಪಿಡಬ್ಲೂ-3 ಶ್ರೀ ತೇಲ್ಕರ ಹಾಗೂ ಪಿಡಬ್ಲೂ-5 ಶ್ರೀ ನೀಲಕಂಠ ಎಸ್. ನಾಗಶೆಟ್ಟಿ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಇವರು ಅನುಮೋದಿಸಿದ್ದಾರೆ. ಆದ್ದರಿಂದ ಇವರ ಹೇಳಿಕೆಗಳಿಗೆ ಬೆಲೆಯಿದ್ದು ದೋಷಾರೋಪಿತ ನೌಕರನು ಸಂರಕ್ಷಣೆಯಲ್ಲಿ ಸುಳ್ಳು ಪ್ರತಿಪಾದನೆಯನ್ನು ಮಾಡುವುದು ಬಿಟ್ಟರೆ ಬೇರೆ ಹುರುಳಿಲ್ಲ ಅನ್ನುವುದು ಕಂಡುಬರುತ್ತದೆ.

10) ದಿನಾಂಕ:03.10.2006 ರಂದು ದೋಷಾರೋಪಿತ ನೌಕರರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಹಾವೇರಿ ಇವರ ಕಚೇರಿಗೆ ಹಾಜರಾದಾಗ್ಯೂ, ಯಾವುದೇ ಮಾಹಿತಿ ಕೋರಿ ಅರ್ಜಿ ಸಲ್ಲಿಸದೇ ತಾವೇ ಕೃತಕವಾಗಿ ಮತ್ತು ಖೊಟ್ಟಿಯಾಗಿ ಸೃಷ್ಟಿಸಿದ ಅರ್ಜಿ ಮತ್ತು ಅದರ ಮೇಲೆ ಗಡಿಬಿಡಿಯಲ್ಲಿ ಸ್ವೀಕೃತಿ ದುಂಡನೆಯ ಮೊಹರದ ಬದಲಾಗಿ ರವಾನೆಯ ಉದ್ದನೆಯ ಮೊಹರನ್ನು ಹಾಕಿಕೊಂಡಿರುವುದು ಸಹ ಮೇಲ್ನೋಟಕ್ಕೆ ಕಂಡುಬರುತ್ತಿದೆ. ಒಂದು ವೇಳೆ ನಿಜವಾಗಿ ಪಿಡಬ್ಲೂ-4 ಶ್ರೀ ಸುಕ್ತೆ ವಿಷಯ ನಿರ್ವಾಹಕರೇ ಇಂಥಹ ಅರ್ಜಿಯನ್ನು ಸ್ವೀಕರಿಸಿದ್ದಾಗಿದ್ದರೆ ಅವರು ಉದ್ದನೆಯ ರವಾನೆಯ ಮೊಹರು ಹೊರತಾಗಿ ನ್ಯಾಯವಾಗಿ ದುಂಡನೆಯ ಸ್ವೀಕೃತಿ ಮೊಹರನ್ನೇ ಹಾಕುತ್ತಿದ್ದರು. ಅದಕ್ಕೆ ಕಾನೂನಿನಲ್ಲಿ ಹೇಳಿಕೆ ಇರುವುದೇನೆಂದರೆ, ಸಾಮಾನ್ಯವಾಗಿ ಎಲ್ಲಾ ಅಪರಾಧಿಗಳು ಅಪರಾಧದ ಒಂದಿಲ್ಲ ಒಂದು ಸುಳುವುಗಳನ್ನು ಮತ್ತು ಕುರುಹುಗಳನ್ನು ಬಿಟ್ಟುಹೋಗುತ್ತಾರೆ. ಆದ್ದರಿಂದಲೇ ಇಂಥಹ ಅಪರಾಧಿಗಳನ್ನು ಕಂಡುಹಿಡಿಯಲು ಕಾನೂನಿನ ಕೈಗಳು ಸಾಕಷ್ಟು ಬಲವಾಗಿವೆ ಮತ್ತು ಉದ್ದವಾಗಿವೆ. ಪಿಡಬ್ಲೂ-3 ಪ್ರಥಮ ದರ್ಜೆ ಗುಮಾಸ್ತ ಹಾಗೂ ಪಿಡಬ್ಲೂ-4 ವಿಷಯ ನಿರ್ವಾಹಕ ಮತ್ತು ಪಿಡಬ್ಲೂ-5 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ನಿಸ್ಸಂದೇಹವಾಗಿ ದೋಷಾರೋಪಿತ ನೌಕರರಿಂದ ದಿನಾಂಕ:03.10.2006 ರಂದು ಯಾವುದೇ ಅಧಿಕೃತ ದಾಖಲೆ ತಮ್ಮ ಕಚೇರಿಗೆ ಬಂದಿರುವುದಿಲ್ಲವೆಂದು ಹೇಳುತ್ತಾರೆ. ಅಂಥಹ ಇವರ ಹೇಳಿಕೆಗಳಲ್ಲಿ ಸತ್ಯಾಂಶವಿರುವುದು ಬೆಳಕಿಗೆ ಬರುತ್ತದೆ. ಅದರಂತೆ ನಿಶಾನೆ ನಂ.ಪಿ-4 ರ ದಿನಾಂಕ 14/18-11-2006 ರ ದಾಖಲೆಯನ್ನು ಪಿಡಬ್ಲೂ-5 ಇವರು ಹಾಗೂ ದೋಷಾರೋಪಿತ ನೌಕರರು ಒಪ್ಪಿಕೊಂಡಿದ್ದಾರೆ. ಇದರ ಮೇಲಿನ ದಿನಾಂಕ 14 ಇದನ್ನು ಪುನ: ತಿದ್ದುಪಡಿ ಮಾಡಿ 18 ರ ಹಾಗೆ ತೋರಿಸುವುದು ದೋಷಾರೋಪಿತ ನೌಕರರ ಹವ್ಯಾಸಬಲ ಮತ್ತು ಅಭ್ಯಾಸಬಲವೆಂದು ವ್ಯಕ್ತವಾಗುತ್ತದೆ. ಈ ಎಲ್ಲಾ ಕಾರಣಗಳ ಸಲುವಾಗಿ ಅವರ ಸಂರಕ್ಷಣಾ ಹೇಳಿಕೆ, ಸಾಕ್ಷಿದಾರರ ಪಾಟೀ ಸವಾಲು ಮತ್ತು ಅವರು ಸಲ್ಲಿಸಿರುವ ಲಿಖಿತ ಪ್ರತಿವಾದ ಪತ್ರದಲ್ಲಿ ಯಾವುದೇ ಅರ್ಥವಿಲ್ಲ ಎನ್ನುವುದು ಕಂಡುಬರುತ್ತದೆ.

11) ದೋಷಾರೋಪಿತ ಸರಕಾರಿ ನೌಕರರ ಲಿಖಿತ ಸಂರಕ್ಷಣಾ ಹೇಳಿಕೆ, ಸಾಕ್ಷಿದಾರರ ಪಾಟೀ ಸವಾಲುಗಳು ಮತ್ತು ಲಿಖಿತ ಪ್ರತಿವಾದ ಪತ್ರ ಇವುಗಳನ್ನು ಗಣನೆಗೆ ತೆಗೆದುಕೊಂಡಾಗ ನಮಗೆ ಕಂಡುಬರುವುದೇನೆಂದರೆ, ದೋಷಾರೋಪಿತ ನೌಕರರು ತಮ್ಮ ಮೇಲಧಿಕಾರಿಗಳ ಮೇಲೆ ಯಾವುದೇ ಅರ್ಥವಿಲ್ಲದ ಆರೋಪಣೆಗಳನ್ನು ಮಾಡುವುದು ಹಾಗೂ ಅವರಿಗೆ ಅಸಹನೀಯ ಮನೋವೇದನೆ ಮತ್ತು ಆಧಾರರಹಿತ ಊಹಾಪೋಹಗಳ ಮೇರೆಗೆ ಕಣ್ಮುಚ್ಚಿಕೊಂಡು ವಿನಾ:ಕಾರಣ ಕಚೇರಿಯ ಶಾಂತಿ ಮತ್ತು ನೆಮ್ಮದಿಯನ್ನು ಕದಡಿ ಅಪ್ರಮಾಣಿಕವಾಗಿ ನಡೆದುಕೊಂಡು ಅಪರಾಧಿಕ ಮನೋಭಾವನೆ ಉಳ್ಳವರು ಎನ್ನುವುದು ಸಹ ಕಂಡುಬರುತ್ತದೆ. ಈ ಸಂಗತಿಯನ್ನು ಪುಷ್ಟೀಕರಿಸಲು ಮಂಡನಾಧಿಕಾರಿಗಳು ತಮ್ಮ ಲಿಖಿತವಾದ ಪತ್ರದ ಜೊತೆಯಲ್ಲಿ ಇಂಥಹದೇ ಕಚೇರಿಯ ಸಾರ್ವಜನಿಕ ಹಣವನ್ನು ದುರ್ಬಳಕೆ ಮಾಡಿಕೊಂಡು ಇಲಾಖಾ ವಿಚಾರಣೆಗೆ ಗುರಿಯಾಗಿ ಶಿಕ್ಷೆಯನ್ನು ಸಹ ಅನುಭವಿಸುತ್ತಿರುವುದು ಕಂಡುಬಂದಿದೆ. ಒಂದು ವೇಳೆ ದೋಷಾರೋಪಿತ ನೌಕರರು ನ್ಯಾಯವಂತರು ಮತ್ತು ಸರಕಾರೀ ಸೇವೆಯೇ ಜನಾರ್ಧನ ಸೇವೆಯೆಂದು ಕಾರ್ಯನಿರ್ವಹಿಸುವವರಾಗಿದ್ದರೆ ಇಂಥಹ ಆಜ್ಞೆಯನ್ನು ಮೇಲ್ಮನವಿ ಮೂಲಕ ಕಾನೂನು ಕ್ರಮ ಜರುಗಿಸಬಹುದಿತ್ತು. ಅದಕ್ಕೆ ಅವರು ಏಕೆ ತಟಸ್ಥ ಧೋರಣೆಯನ್ನು ತಳೆದಿದ್ದಾರೆ ಅನ್ನುವುದಕ್ಕೆ ಯಾವುದೇ ವಿವರಣೆ ಅವರಿಂದ ಬಂದಿರುವುದಿಲ್ಲ. ಅವರಿಗೆ ನಿಯಮಾವಳಿಗಳು ಮತ್ತು ನೈಸರ್ಗಿಕ ನಿಯಮಗಳ ಪಾಲನೆ ಮೇರೆಗೆ ವಿಚಾರಣಾಧಿಕಾರಿಗಳು ಒಪ್ಪಿಕೊಳ್ಳುವಂಥಹ ತಮ್ಮ ಬಾಯಿ ಮಾತಿನ ಹೇಳಿಕೆಯನ್ನು ಅಥವಾ ಅಧಿಕೃತ ಒಪ್ಪಬಹುದಾದಂಥಹ ದಾಖಲೆಗಳನ್ನು ಪೂರೈಸಲು ವಿಫಲವಾಗಿದ್ದಾರೆ, ಆದರೆ ಸಫಲರಾಗಿರುವುದಿಲ್ಲ.

12) ಕಾರಣ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಹಾಜರುಪಡಿಸಿದ ಸಾಕ್ಷಿ ಪುರಾವೆಗಳನ್ನು ಪರಿಶೀಲನೆ ಮಾಡಿ ದೋಷಾರೋಪಿತ ನೌಕರನ ಲಿಖಿತ ಸಂರಕ್ಷಣಾ ಹೇಳಿಕೆ, ಸಾಕ್ಷಿದಾರರ ಪಾಟೀ ಸವಾಲು ಮತ್ತು ಅವರ ಲಿಖಿತ ಪ್ರತಿವಾದ ಪತ್ರ ಇವುಗಳನ್ನು ಒಂದಕ್ಕೊಂದು ಹೋಲಿಸಿ "ನ್ಯಾಯದಾನದ ತಕ್ಕಡಿಯಲ್ಲಿ ತೂಗಿದಾಗ ಮಂಡನಾಧಿಕಾರಿಗಳು ಹಾಜರುಪಡಿಸಿದ ಸಾಕ್ಷಿ ಪುರಾವೆಗಳಲ್ಲಿ ಸತ್ಯದ ನೆರಳಿದೆ ಮತ್ತು ನ್ಯಾಯದಾನದ ತಕ್ಕಡಿ ಅವರ ಪರವಾಗಿ ತೂಗುತ್ತದೆ". ಆದ್ದರಿಂದ ದೋಷಾರೋಪಿತ ಸರಕಾರಿ ನೌಕರನ ಯಾವುದೇ ಹೇಳಿಕೆಯಲ್ಲಿ ಯಾವುದೇ ಸತ್ಯಾಂಶಗಳು ಕಂಡುಬರುವುದಿಲ್ಲ. ಮಂಡನಾಧಿಕಾರಿಗಳು ಹಾಗೂ ಶಿಸ್ತು ಪ್ರಾಧಿಕಾರಿಗಳು ದೋಷಾರೋಪಿತ ಸರಕಾರಿ ನೌಕರರು ಸಲ್ಲಿಸಿದ ದಿನಾಂಕ:13.10.2008 ರ ಆಧಾರವಿಲ್ಲದ, ಅರ್ಥವಿಲ್ಲದ, ಊಹಾಪೋಹಗಳ ಮೇಲೆ ಆಧಾರಿತ ಸುಳ್ಳು ದೂರುಗಳನ್ನು ಮಾಡುತ್ತಾ ಸತ್ಯಕ್ಕೆ ದೂರವಾಗಿದ್ದು ಅದೂ ಸಹ ಒಂದು ಸರ್ಕಾರಿ ನೌಕರರಿಗೆ ಸಲ್ಲದ ದುರ್ನಡತೆಯಾಗಿದ್ದು ಅದನ್ನು ಶಿಸ್ತು ಪ್ರಾಧಿಕಾರಿಗಳು ಒಳ್ಳೆಯ ಒಪ್ಪಬಹುದಾದ ಸಕಾರಣಗಳೊಂದಿಗೆ ದಿನಾಂಕ:17.10.2008 ರಂದು ತಿರಸ್ಕಾರ ಮಾಡಿದ್ದಾರೆ. ಇದೇ ಸಂಗತಿಯನ್ನು ಆಧಾರವಿಟ್ಟುಕೊಂಡು ದೋಷಾರೋಪಿತರ ಕ.ನಾ.ಸೇ.(ವ.ನಿ.ಮೇ) 1957ರ ನಿಯಮ: 11 ಮತ್ತು ಉಪನಿಯಮ: 18ರ ಅಡಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆ ನಂ.34 ಇದನ್ನು ಪ್ರಶ್ನಿಸಿದಾಗ **ತಮ್ಮ ಮಾನಸಿಕ ಸಂಶಯದ ಹೊರತಾಗಿ ಬೇರೆ ಯಾವುದೇ ಸಾಕ್ಷಿ ಪುರಾವೆಗಳು** ಇರುವುದಿಲ್ಲವೆಂದು ಉತ್ತರಿಸಿರುವುದನ್ನು ನೋಡಿದರೆ ಅವರ ಅಸಂಬದ್ಧ ದೂರುಗಳಲ್ಲಿ ಯಾವುದೇ ಹುರುಳು ಇರುವುದಿಲ್ಲ ಮತ್ತು ನನ್ನ ಅಭಿಪ್ರಾಯದಲ್ಲಿ ಇದೊಂದು ನಿಷ್ಪಕ್ಷಪಾತವಾದ ವಿಚಾರಣೆ ಇದ್ದು ಸತ್ಯವನ್ನು ಶೋಧನೆ ಮಾಡುವುದೇ ಈ ವಿಚಾರಣೆಯ ಮೂಲ ಗುರಿ ಮತ್ತು ಆದ್ಯ ಕರ್ತವ್ಯವಾಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ ನಿಯಮಗಳ ಪ್ರಕಾರ ಹೊರಗಿನಿಂದ ಬರುವ ಸರಕಾರಿ ನೌಕರರಾದ ಪಿಡಬ್ಲ್ಯೂ-1 ಮತ್ತು 4 ಇವರಿಗೆ ಮಾತ್ರ ನಿಯಮಗಳ ಪ್ರಕಾರ ಒಂದು ವೇಳೆ ದೋಷಾರೋಪಿತ ನೌಕರರ ತಪ್ಪಿನಿಂದಲೇ ಅವರಿಗೆ ಪಾಟೀ ಸವಾಲು ಮಾಡಲು ಅನುಕೂಲ ಮಾಡಿಕೊಡಬೇಕಾದರೆ ದಿನನಿತ್ಯದಭತ್ಯೆ ಮತ್ತು ಪ್ರವಾಸಭತ್ಯೆಯನ್ನು ಅವರೇ ಭರಿಸಬೇಕಾಗುತ್ತದೆ ಅನ್ನುವ ನಿಯಮವಿದೆ. ಇದು ಅಸಂಬದ್ಧ ತಾನೇಕೆ ಭರಿಸಬೇಕು ಎಂದು ಹೇಳುವ ಪ್ರಶ್ನೆಗಳಿಗೆ ಅರ್ಥವೇ ಇರುವುದಿಲ್ಲ. ದುರ್ದೈವದಿಂದ ಇಲ್ಲಿಯವರೆಗೂ ಅವರ ದಿನಭತ್ಯೆ ಮತ್ತು ಪ್ರವಾಸಭತ್ಯೆಯನ್ನು ಕೊಟ್ಟಿರುವುದಿಲ್ಲ. ಕಾರಣ ಎಂದರೆ ಅವರು ತಿಂಗಳ ಸಂಬಳವನ್ನು ಇಲ್ಲಿಯವರೆಗೆ ಪಡೆದಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ದೋಷಾರೋಪಿತ ನೌಕರರು ತಮಗೆ ಇಲಾಖಾ ಸಹಾಯಕರು ಬೇಕೆಂದು ಕೇಳಿಕೊಂಡಾಗ ಅವರಿಗೆ ಸಲ್ಲಿಸಬೇಕಾದ ಸಂಭಾವನೆ ಬಗ್ಗೆ ವಿಚಾರಿಸಿದಾಗ ದೋಷಾರೋಪಿತ ನೌಕರರು ತಮ್ಮ ಆರ್ಥಿಕ ಸ್ಥಿತಿ ಚೆನ್ನಾಗಿದ್ದು ಅದನ್ನು ತಾವು ನೋಡಿಕೊಳ್ಳುವುದಾಗಿ ಹೇಳುತ್ತಾರೆ. ಆದರೆ ಸರಕಾರಿ ನೌಕರರ ಭತ್ಯೆಯನ್ನು ಕೊಡಲು ಕೇಳಿದಾಗ ಕುಂಟುನೆಪ ಹೇಳಿ ನುಣುಚಿಕೊಳ್ಳಲು ಪ್ರಯತ್ನಿಸುತ್ತಾರೆ. ಅದರಂತೆ, ಪಿಡಬ್ಲ್ಯೂ-5 ಶ್ರೀ ನೀಲಕಂಠ ನಾಗಶೆಟ್ಟಿ ಇವರಿಗೆ ಈ ಇಲಾಖೆಯ ವಿಚಾರಣೆಯ ಸೂತ್ರಧಾರಿ ಮತ್ತು ಅವರ ಕಚೇರಿಯಲ್ಲಿ ವಿಚಾರಣೆ ನಡೆಸುವುದು ಸರಿಯಲ್ಲ ಎಂದು ಹೇಳುವುದು ಅಸತ್ಯವಾಗಿದ್ದು ಸತ್ಯದಿಂದ ದೂರವಾಗಿದೆ. ನಾನು ಒಬ್ಬ ನಿವೃತ್ತ ಜಿಲ್ಲಾ ನ್ಯಾಯಾಧೀಶನೆಂದು ನಿಯಮಗಳಡಿಯಲ್ಲಿ ಅವರಿಗೆ ಸಲ್ಲಬೇಕಾದ ಎಲ್ಲ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದು ಅವುಗಳನ್ನು ಒಪ್ಪಿಕೊಂಡು ದಿನನಿತ್ಯದ ನಡವಳಿಕೆಗಳಿಗೆ ಸಹಿ ಮಾಡಿರುವುದು ಸತ್ಯಸಂಗತಿ. ಹೀಗಾಗಿ ನನ್ನ ಅಭಿಪ್ರಾಯದಲ್ಲಿ ದೋಷಾರೋಪಿತ ಸರಕಾರಿ ನೌಕರರ ಅಸಹಕಾರ, ಅಸಂಬದ್ಧ ಪ್ರಶ್ನೆಗಳು ಅವರೇ ತಲೆಯಲ್ಲಿ ತುಂಬಿಕೊಂಡಿರುವ ದುಷ್ಟ ವಿಚಾರಗಳು ಇಂತಹ ದುಸ್ಸಾಹಸಕ್ಕೆ ಪ್ರಯತ್ನಿಸಿರುವ ಕಹಿ ಸಂಗತಿಗಳಾಗಿವೆ. ಅವರ ತಪ್ಪಿನಿಂದಲೇ ಸುಮಾರು ಒಂದು ವಾರದವರೆಗೆ ವರದಿಯನ್ನು ಅವಧಿಯೊಳಗೆ ಸಲ್ಲಿಸಲು ಅನಾನುಕೂಲತೆ ಆಗಿದ್ದಕ್ಕೆ ನಾನು ವಿಷಧಿಸುವ ಪ್ರಸಂಗ ಉಂಟಾಗಿದೆ. ಏನೇ ಆದರೂ ಇಲಾಖಾ ಮುಖ್ಯಸ್ಥರು ವರದಿ ಬಂದನಂತರ ಬೇರೆ ನಿಯಮಗಳ ಪ್ರಕಾರ ಕ್ರಮವನ್ನು ಜರುಗಿಸುವ ವಿಚಾರವು ಸ್ವಾಗತಾರ್ಹವಾಗಿದೆ. ಅದು ಇಲಾಖೆ ಮತ್ತು ಸರಕಾರಿ ನೌಕರರಿಗೆ ಸಂಬಂಧಪಟ್ಟ ವಿಷಯವಾಗಿದೆ.

13) ಕಾರಣ ಈ ಇಲಾಖಾ ವಿಚಾರಣೆ ಪ್ರಕರಣದಲ್ಲಿ ವಿಧಿತವಾಗಿರುವ ಸಾಕ್ಷಿ ಪುರಾವೆಗಳು ನಿಚ್ಚಳವಾಗಿ ಮತ್ತು ನಿಸ್ಸಂದೇಹವಾಗಿ ದೋಷಾರೋಪಿತ ಸರಕಾರಿ ನೌಕರರು ಒಬ್ಬ ದೋಷಪೂರಿತ ನೌಕರನಾಗಿದ್ದು, ಸರಕಾರಿ ನೌಕರರಿಗೆ ಸಲ್ಲದವರಾಗಿ ಸೇವೆ ಸಲ್ಲಿಸುತ್ತಿದ್ದು ಅವರ ಗಂಭೀರ ಸ್ವರೂಪದ ಅಪರಾಧಿ ಮನೋಭಾವನೆ ನಿರ್ಲಕ್ಷ ಹಾಗೂ ನಿಷ್ಕಾಳಜಿತನ ಮತ್ತು ದುರ್ನಡತೆಗಳುಳ್ಳವರು ಎನ್ನುವುದನ್ನು ತೋರುಬೆರಳು ಮಾಡಿ ತೋರಿಸಿದ್ದಾಗಿದೆ ಮತ್ತು ಅವುಗಳನ್ನು ರುಜುವಾತುಪಡಿಸಲು ಮಂಡನಾಧಿಕಾರಿಗಳೂ ಸಹ ಶಕ್ಯರಾಗಿದ್ದಾರೆ. ಹೀಗೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ: 3 ತ್ತು 2(2ಎ) ರ ಸ್ಪಷ್ಟ ಉಲ್ಲಂಘನೆಯಾಗಿದೆ. ದೋಷಾರೋಪಿತ ಸರಕಾರಿ ನೌಕರರು ದಿನಾಂಕ:03.10.2006 ರ ಅರ್ಜಿಯ ಮೇಲೆ ದಿನಾಂಕ:18.11.2006 ರಂದು ಕರ್ನಾಟಕ ಮಾಹಿತಿ ಆಯೋಗಕ್ಕೆ ನೇರವಾಗಿ, ಅವಶ್ಯವಿದ್ದ ಮೇಲಧಿಕಾರಿಗಳಿಗೆ ಇಲಾಖೆ ವತಿಯಿಂದ ಮನವಿ ಅಥವಾ ಮೇಲ್ಮನವಿ ಸಲ್ಲಿಸದೇ ನೇರವಾಗಿ ಮಾಹಿತಿ ಆಯೋಗಕ್ಕೆ ಮೇಲ್ಮನವಿ ಮಾಡಿಕೊಂಡು ತಪ್ಪು ಮಾಡಿದ್ದಾರೆ. ಈ ಸಂಗತಿಯನ್ನು ಅವರು ಈ ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದಾರೆ. ಅದಕ್ಕೆ ಅವರಿಂದ ಯಾವುದೇ ಸ್ಪಷ್ಟವಾದ ವಿವರಣೆಯೇ ಬಂದಿಲ್ಲ.

ಹೀಗಾಗಿ ಈ ದೋಷಾರೋಪಣೆಯೂ ಸಹ ಅವರ ಮೇಲೆ ರುಜುವಾತಾಗಿದೆ. ಅದೂ ಅಲ್ಲದೇ ಮಾನ್ಯ ಮುಖ್ಯ ಆಯುಕ್ತರು, ಮಾಹಿತಿ ಹಕ್ಕು ಆಯೋಗ, ಬೆಂಗಳೂರು ಇವರೂ ಸಹಿತ ತಮ್ಮ ಆದೇಶದಲ್ಲಿ ದೋಷಾರೋಪಿತ ಸರಕಾರಿ ನೌಕರರ ಮೇಲೆ ಇಲಾಖೆಯ ವತಿಯಿಂದ ಶಿಸ್ತು ಕ್ರಮ ಜರುಗಿಸಬೇಕು ಅನ್ನುವುದರಲ್ಲಿ ಯಾವುದೇ ಸಂದೇಹವು ಕಂಡುಬರುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಶಿಸ್ತು ಪ್ರಾಧಿಕಾರಿಯವರು ದೋಷಾರೋಪಿತ ಸರಕಾರಿ ನೌಕರರ ಮೇಲೆ ಅನುಬಂಧ–1 ಮತ್ತು 2 ರಲ್ಲಿ ನಮೂದಿಸಿದ ದೋಷಾರೋಪಣೆಗಳು ಸುಸ್ಪಷ್ಟವಾಗಿ ಮತ್ತು ನಿಸ್ಸಂದೇಹವಾಗಿ ರುಜುವಾತು ಆಗಿವೆ ಎಂಬ ಅಭಿಪ್ರಾಯ ಮತ್ತು ತೀರ್ಮಾನಕ್ಕೆ ಬಂದು ಈ ಮೇಲಿನ ಅಂಶವನ್ನು ನಾನು ಸಕಾರಾತ್ಮಕವಾಗಿ ಉತ್ತರಿಸುತ್ತಾ ಈ ಕೆಳಕಂಡ ಸೂಕ್ತ ಆದೇಶವನ್ನು ಮಾಡುತ್ತೇನೆ.

ಆದೇಶ

ಇದರಲ್ಲಿ ಶಿಸ್ತು ಪ್ರಾಧಿಕಾರಿಗಳವರ ಅನುಬಂಧ–1 ಮತ್ತು 2 ರಲ್ಲಿ ನಮೂದಿಸಿದ ಎಲ್ಲ ದೋಷಾರೋಪಣೆಗಳು, ದೋಷಾರೋಪಿತ ಸರಕಾರಿ ನೌಕರರ ಮೇಲೆ ರುಜುವಾತು ಆಗಿದ್ದು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಾವಳಿಗಳ ಪ್ರಕಾರ ಮುಂದಿನ ಯೋಗ್ಯ ಮತ್ತು ಸರಿಕಂಡ ಕ್ರಮ ಕೈಗೊಳ್ಳಬೇಕೆಂದು ವರದಿಯನ್ನು ಸಲ್ಲಿಸಲಾಗಿದೆ.

(ಈ ಮೇಲಿನ ವರದಿಯನ್ನು ನಾನೇ ಸಮಕ್ಷಮ ಈ ಇಲಾಖೆಯ ಅಧೀಕ್ಷಕರು ಹಾಗೂ ಬೆರಳಚ್ಚುಗಾರರಾದ ಶ್ರೀ ಗಂಗಾಧರ ಎಮ್ಮಿಗನೂರ ಇವರಿಗೆ ಕನ್ನಡ ಬೆರಳಚ್ಚುಯಂತ್ರ ಮೇಲೆ ಬೆರಳಚ್ಚುಪಡಿಸಿ ಓದಿನೋಡಿ ತಿದ್ದುಪಡಿ ಮಾಡಿ ವರದಿ ಸಲ್ಲಿಸಲಾಗಿದೆಯೆಂದು ಈ ಮೂಲಕ ದೃಢೀಕರಿಸಲಾಗಿದೆ)

ಧಾರವಾಡ, ಸಹಿ/–

ದಿನಾಂಕ:03.11.2008 (ಫ.ನಿ. ಗುಡ್ಡಾಕಾರ)

ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ
ಸರಕಾರಿ ವಿಚಾರಣಾಧಿಕಾರಿಗಳು.

ಅಂತಿಮವಾಗಿ, ಸದರಿ ಆಪಾದಿತ ಸರ್ಕಾರಿ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, (ಹಿಂದಿನ ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಚೇರಿ, ಹಾನಗಲ್) ಅಮಾನತ್ತಿನಲ್ಲಿದ್ದ ಸದರಿ ಅವರು ಸೇವೆಗೆ ಪುನರ್‌ಸ್ಥಾಪನೆಗೊಂಡು ಪ್ರಸ್ತುತ ತಾಲ್ಲೂಕು ಕಚೇರಿ, ಸಿಂಧನೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಇವರ ವಿರುದ್ಧದ ಇಲಾಖಾ ವಿಚಾರಣಾ ವರದಿಯನ್ನು ಸಂಪೂರ್ಣವಾಗಿ ಪರಿಶೀಲಿಸಲಾಗಿ, ಅವರ ವಿರುದ್ಧದ ಆರೋಪಗಳು ರುಜುವಾತಾಗಿರುತ್ತವೆ.

ಒಟ್ಟಾರೆ, ಈ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಸದರಿ ಸರ್ಕಾರಿ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಸರ್ಕಾರಿ ನೌಕರರೊಬ್ಬನಿಗೆ ಸಲ್ಲದ ರೀತಿಯಲ್ಲಿ ವರ್ತಿಸಿದ್ದು, ಅವರ ಗಂಭೀರ ಸ್ವರೂಪದ ಅಪರಾಧಿ ಮನೋಭಾವನೆ, ನಿರ್ಲಕ್ಷತನ ಹಾಗೂ ನಿಷ್ಕಾಳಜಿ ಧೋರಣೆ ಮತ್ತು ಹಾಗೂ ಆತನ ಮೇಲಧಿಕಾರಿಗಳ ವಿರುದ್ಧ ನಿರಂತರವಾಗಿ ಸಮರವನ್ನು ಸಾರುವಂತಹ ಅತ್ಯಂತ ದುರ್ನಡತೆಗಳುಳ್ಳವರು ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತದೆಯಾದ್ದರಿಂದ ಆತನು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ: 2 ಮತ್ತು 3 ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುತ್ತಾರೆ.

ಆದ್ದರಿಂದ, ಸದರಿ ಆರೋಪಿತ ಸರ್ಕಾರಿ ನೌಕರನಾದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು ಇವರ ಮೇಲಿನ ಆಪಾದನೆಗಳ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿ, ಹಾಗೂ ಅವರ ಮೇಲಿನ ಆಪಾದನೆಗಳು ನಿಸ್ಸಂದೇಹವಾಗಿ ರುಜುವಾತಾಗಿದ್ದರಿಂದ, ಅವರಿಗೆ ಈ ಕೆಳಗೆ ತಿಳಿಸಲಾದ ದಂಡನೆ ವಿಧಿಸುವುದು ಸೂಕ್ತವೆಂದು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕಚೇರಿ ಆದೇಶ ಸಂಖ್ಯೆ: ಆಡಳಿತ/260/2009–10

ಪ್ರಸ್ತಾವನೆಯಲ್ಲಿ ವಿವರಿಸಲಾದ ಎಲ್ಲಾ ಅಂಶಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಶ್ರೀ ಹೆಚ್.ಇ. ರಾಜಶೇಖರಪ್ಪ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರವಾಗಿರುವ ನಾನು, ಈ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಆರೋಪಿತ ಸರ್ಕಾರಿ ನೌಕರನಾದ ಹಾಗೂ ಈ ನಿರ್ದೇಶನಾಲಯದ ಸಾಂಖ್ಯಿಕ ನಿರೀಕ್ಷಕರ ವೃಂದಕ್ಕೆ ಸೇರಿದ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು, ಅಮಾನತ್ತಿಲ್ಲಿದ್ದ ಸದರಿಯವರು ಸೇವೆಗೆ ಪುನರ್ ಸ್ಥಾಪನೆಗೊಂಡು ಪ್ರಸ್ತುತ ತಾಲ್ಲೂಕು ಕಚೇರಿ,ಸಿಂಧನೂರು (ರಾಯಚೂರು ಜಿಲ್ಲೆ) ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರ ವಿರುದ್ಧ ಹೊರಿಸಲಾದ ದೋಷಾರೋಪಣೆಗೆ ಸಂಬಂಧಿಸಿದ ಇಲಾಖಾ ವಿಚಾರಣಾ ವರದಿಯನ್ನು ಪರಿಶೀಲಿಸಿದ್ದೇನೆ. ಸದರಿ ಸರ್ಕಾರಿ ನೌಕರನ ಮೇಲೆ ಹೊರಿಸಿದ ಆರೋಪಗಳು ಸಂಪೂರ್ಣವಾಗಿ ರುಜುವಾತಾಗಿದ್ದನ್ನು ಪರಿಗಣಿಸಿ, ಆತನಿಗೆ ಈ ಕೆಳಗೆ ತಿಳಿಸಲಾದ ದಂಡನೆ ವಿಧಿಸಲಾಗಿದೆ:

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ: 8(vi) ರ ಅನ್ವಯ ಶ್ರೀ ಆರ್.ಎಂ. ಕುಲಕರ್ಣಿ, ಈ ನಿರ್ದೇಶನಾಲಯದ ಸಾಂಖ್ಯಿಕ ನಿರೀಕ್ಷಕರು, (ಪ್ರಸ್ತುತ ತಾಲ್ಲೂಕು ಕಚೇರಿ,

18. ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಯ ಅನುಗುಣವಾಗಿ ನಿರ್ವಹಿಸಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ/ಮೌಖಿಕ ಆದೇಶಗಳಿಗನುಗುಣವಾಗಿ ಇರತಕ್ಕದ್ದು. ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

19. ಕಾಮಗಾರಿಯನ್ನು ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ಪೂರ್ಣಗೊಳಿಸತಕ್ಕದ್ದು. ಗುತ್ತಿಗೆ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಅತಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಮಂಜೂರಾದ ದರಗಳಲ್ಲಿ ಶೇ.5 ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೊಂದಿರುತ್ತಾರೆ. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ನೀಡಿದ ನಿರ್ದೇಶನದಂತೆ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇಎಂಡಿ ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20. ಟೆಂಡರ್‌ನ್ನು ಕಂಪನಿಯ ವತಿಯಿಂದ/ ಸಂಘ ಸಂಸ್ಥೆಗಳು ಕೊಡುವ ಸಂದರ್ಭದಲ್ಲಿ

ಅ) ಕಂಪನಿಯು/ಸಂಘ ಸಂಸ್ಥೆಗಳು ನೊಂದಾಯಿತ ಸಂಸ್ಥೆಗಳಾಗಿಬೇಕು.

ಆ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡಿರಬೇಕು. ಇಂತಹ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

21. ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಛಿಸಿದಲ್ಲಿ ಇಎಂಡಿ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು. ಹಾಗೂ ಸಂಘಗಳ ನೊಂದಾವಣೆ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೊಂದಾವಣೆಯಾಗಿರಬೇಕು.

22. ಯಶಸ್ವಿ ಟೆಂಡರ್‌ದಾರರು ಕರಾರುನಾಮೆಗೆ ಸಹಿ ಮಾಡುವಾಗ ಮಂಜೂರಾದ ಟೆಂಡರ್ ದರದನ್ವಯ ಪ್ರತಿ ಘಟಕವಾರು ಶೇ.5ರಂತೆ Performance Security Deposit ನ್ನು ಡಿ.ಡಿ. ರೂಪದಲ್ಲಿ ಈ ಕೆಳಸಹಿದಾರರ ಹೆಸರಿನಲ್ಲಿ ನೀಡತಕ್ಕದ್ದು.

23. ಯಶಸ್ವಿ ಟೆಂಡರ್‌ದಾರರು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ Performance Security Deposit (PSD) ಹಣವನ್ನು ಕಾಮಗಾರಿ ತೃಪ್ತಿಕರವಾಗಿ ಪೂರೈಸಿದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ ಮತ್ತು ಕಾಮಗಾರಿಯ ಮುಕ್ತಾಯ ವರದಿ ನೀಡಿದ ನಂತರ ಸದರಿ PSD ಮೊತ್ತವನ್ನು ಹಿಂದಿರುಗಿಸಲು ಕ್ರಮಕೈಗೊಳ್ಳಲಾಗುವುದು.

24. ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಗೆ ಸಹಿ ಮಾಡುವ ಪೂರ್ವದಲ್ಲಿಯೇ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ ಅಥವಾ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಅಥವಾ ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಇಎಂಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ಅವರ ಹೆಸರಿಗೆ ಮಂಜೂರಾದ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರ್‌ಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯ ವತಿಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ಕಲಂ 109 ಮತ್ತು 119 ರಂತೆ ಭೂಕಂದಾಯ ಬಾಕಿಯಂತೆ ವಸೂಲು ಮಾಡಲು ಕ್ರಮ ಜರುಗಿಸಲಾಗುವುದು.

25. ಕೆಲಸ ಪೂರ್ಣಗೊಂಡ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ಲೋಪದೋಷ ಕಂಡು ಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಲೋಪ-ದೋಷಗಳನ್ನು ಸರಿಪಡಿಸಬೇಕು. ನಂತರ PSD ಮೊತ್ತವನ್ನು ಹಿಂತಿರುಗಿಸಲು ಕ್ರಮಕೈಗೊಳ್ಳಲಾಗುವುದು. ತಪ್ಪಿದಲ್ಲಿ PSD ಮೊತ್ತದಲ್ಲಿ ಸದರಿ ವೆಚ್ಚವನ್ನು ಭರಿಸಲು ಕ್ರಮಕೈಗೊಳ್ಳಲಾಗುವುದು.

26. ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ/ಇನ್ನಿತರೆ ಹಾನಿಗಳು ಸಂಭವಿಸಿದಲ್ಲಿ ಅದಕ್ಕೆ ವೈಯಕ್ತಿಕವಾಗಿ ಗುತ್ತಿಗೆದಾರರೇ ಜವಾಬ್ದಾರರಾಗಿದ್ದು ಇದಕ್ಕೆ ಸಂಬಂಧಿಸಿದ ನಷ್ಟ ಪರಿಹಾರವನ್ನು ವೈಯಕ್ತಿಕವಾಗಿ ಸಂಬಂಧಿಸಿದ ಗುತ್ತಿಗೆದಾರರೇ ಭರಿಸಬೇಕಾಗುತ್ತದೆ.

27. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯವುದೇ ಕೆಲಸವನ್ನು ಟೆಂಡರ್‌ದಾರರು ಪ್ರಾರಂಭಿಸಬಾರದು.

28. ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೋಂದಾಣಿಯಾಗಿದ್ದಲ್ಲಿ ಅದನ್ನು ಮಾನ್ಯ ಮಾಡಲಾಗುವುದಿಲ್ಲ.

29. ಸರ್ಕಾರದಿಂದ ಆಗಿಂದಾಗ್ಗೆ ಬರುವ ಆದೇಶಗಳನ್ವಯ ಕಾಲಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ಸಾಮಾಜಿಕ ಅರಣ್ಯ ವಿಭಾಗದವರು ವಿಧಿಸುವ ಷರತ್ತುಗಳ ಬದಲಾವಣೆಗೆ ಗುತ್ತಿಗೆದಾರರು ಬದ್ದರಾಗಿರಬೇಕು.

30. ಟೆಂಡರ್ ಫಾರಂಗಳನ್ನು ಬೇರೆಯವರ ಹೆಸರಿಗೆ ಪರಬಾರೆ ಮಾಡುವಂತಿಲ್ಲ. ಈ ಕಛೇರಿಯಿಂದ ನೀಡಲಾದ ಅಧಿಕೃತ ಟೆಂಡರ್ ಫಾರಂಗಳನ್ನು ಹೊರತು ಪಡಿಸಿ ಬೇರಾವ ಮುದ್ರಿತ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ.

31. ಟೆಂಡರ್‌ನಲ್ಲಿ ನಮೂದಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಕೆಲಸದ ಸ್ಥಳ, ಪರಿಮಾಣಗಳು ಬದಲಾವಣೆಗಳಿಗೆ ಒಳಪಟ್ಟಿರುತ್ತದೆ. ಇದಕ್ಕೆ ಕಾಮಗಾರಿಗಳ ತತ್ಸಂಬಂಧಿತ ವ್ಯತ್ಯಾಸದ ಪರಿಮಾಣಕ್ಕೆ ಪ್ರತ್ಯೇಕ ಟೆಂಡರು ಕರೆಯಲಾಗುವುದಿಲ್ಲ. ಆದರೆ ಅದೇ ದರದಲ್ಲಿ ವ್ಯತ್ಯಾಸದ ಪರಿಮಾಣದ ಕೆಲಸಗಳನ್ನು ಕೈಗೊಳ್ಳಲು ಬದ್ದರಾಗಿರಬೇಕಾಗುತ್ತದೆ.

32. ಸಕ್ರಮ ಪ್ರಾಧಿಕಾರದ ನಿರ್ಧಾರದ ಮೇರೆಗೆ ಯಾವುದೇ ಕಾಮಗಾರಿ ತೆಗೆದು ಹಾಕುವ, ಹೊಸದಾಗಿ ಸೇರ್ಪಡೆ ಮಾಡುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಚಿಕ್ಕಬಳ್ಳಾಪುರ ಇವರ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

33. ಕಾಮಗಾರಿಗಳಿಗೆ ನಿರ್ದಿಷ್ಟಪಡಿಸಿದ ಮೊತ್ತವು ನೆಡುತೋಪು ಕಾವಲು ಕೆಲಸ ಮೊತ್ತವನ್ನು ಒಳಗೊಂಡಿದ್ದು ಕಾಮಗಾರಿ ನಿರ್ವಹಣೆ ಬಾಬ್ತು ಬಿಲ್ಲು ಪಾವತಿಸುವಾಗ ಪಾವತಿಯಲ್ಲಿ ಕಾವಲು ಮೊತ್ತವನ್ನು ಕಳೆದು ಪಾವತಿಸಲಾಗುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಚಿಕ್ಕಬಳ್ಳಾಪುರ.

ಪಿ.ಆರ್. 729

V -F12-B/B

ಕರ್ನಾಟಕ ಲೋಕ ಸೇವಾ ಆಯೋಗ "ಉದ್ಯೋಗ ಸೌಧ" ಬೆಂಗಳೂರು – 560 001

ತಿದ್ದುಪಡಿ ಅಧಿಸೂಚನೆ

ಸಂಖ್ಯೆ: ಆರ್(1) 4362/2009–10/ಪಿಎಸ್‌ಸಿ, ದಿನಾಂಕ: 9ನೇ ಸೆಪ್ಟೆಂಬರ್ 2009

ದಿನಾಂಕ: 5.6.2008ರ ಕರ್ನಾಟಕ ರಾಜ್ಯಪತ್ರದ ಭಾಗ–5 ರಲ್ಲಿ ಪ್ರಕಟವಾದ ಆಯೋಗದ ಅಧಿಸೂಚನೆ ಸಂಖ್ಯೆ ಪಿಎಸ್‌ಸಿ 1 ಆರ್‌ಟಿಬಿ 1/2008 ದಿನಾಂಕ: 02.06.2008 ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 167 ಗ್ರಂಥಪಾಲಕರ ಹಾಗೂ 191 ದೈಹಿಕ ಶಿಕ್ಷಣ ಬೋಧಕರ ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006 ಹಾಗೂ ತಿದ್ದುಪಡಿ ನಿಯಮಗಳು 2007 ಮತ್ತು 2008 ರಡಿಯಲ್ಲಿ ನೇಮಕಾತಿ ಮಾಡಲು ಅಧಿಸೂಚಿಸಲಾಗಿದ್ದು, ಸದರಿ ಹುದ್ದೆಗಳಿಗೆ ಕೃಪಾಂಕಗಳನ್ನು ನೀಡಲಾಗುವುದೆಂದು ಅಧಿಸೂಚಿಸಲಾಗಿತ್ತು. ಆದರೆ ಸರ್ಕಾರವು ದಿನಾಂಕ: 13.08.2009ರ ಪತ್ರದಲ್ಲಿ ಈ ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಂತೆ ನೇಮಕಾತಿ ಮಾಡಲು ಪ್ರಸ್ತಾಪಿಸಿರುವುದರಿಂದ ಕೃಪಾಂಕ ನೀಡಲು ಅವಕಾಶವಿರುವುದಿಲ್ಲ ಎಂದು ಸ್ಪಷ್ಟೀಕರಿಸಿರುವುದರಿಂದ ಈ ಕೆಳಕಂಡ ತಿದ್ದುಪಡಿಯನ್ನು ಹೊರಡಿಸಲಾಗಿದೆ.

ಆಯೋಗದ ಅಧಿಸೂಚನೆ ಸಂಖ್ಯೆ ಪಿಎಸ್‌ಸಿ 1 ಆರ್‌ಟಿಬಿ 1/2008 ದಿನಾಂಕ: 02.06.2008 ರ ಅನುಸೂಚಿಯ ಪುಟ ಸಂಖ್ಯೆ 946 ರಲ್ಲಿನ ಹುದ್ದೆಗಳ ಅನುಕ್ರಮ ಸಂಖ್ಯೆ 770–936 ರಲ್ಲಿ 167 ಗ್ರಂಥಪಾಲಕರ ಹುದ್ದೆಗಳ ಮತ್ತು ಪುಟ ಸಂಖ್ಯೆ 947 ರಲ್ಲಿನ ಹುದ್ದೆಗಳ ಅನುಕ್ರಮ ಸಂಖ್ಯೆ 937–1127 ರಲ್ಲಿ 191 ದೈಹಿಕ ಶಿಕ್ಷಣ ಬೋಧಕರ ಹುದ್ದೆಗಳ ವಿದ್ಯಾರ್ಹತೆಯಡಿ ಪ್ರಕಟಿಸಲಾಗಿರುವ ಕೃಪಾಂಕಗಳನ್ನು ನೀಡಲಾಗುವುದಿಲ್ಲ.

ವಿ.ಬಿ. ಪಾಟೀಲ್

ಪಿ.ಆರ್. 730 ಕಾರ್ಯದರ್ಶಿ,

ಕರ್ನಾಟಕ ಲೋಕ ಸೇವಾ ಆಯೋಗ

ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವೃತ್ತ, ಮೈಸೂರು ರವರ ಕಛೇರಿಯ ಅಧಿಸೂಚನೆ ಪತ್ರ ಸಂಖ್ಯೆ– ಎ2/ಸಿಬ್ಬಂದಿ/ಆನೆಕವಾಡಿ/ವಿವ–17/2008–09 ದಿನಾಂಕ : 01–08–2009 ರ ಪ್ರಕಾರ ಆನೆ ಕವಾಡಿ ನೇರ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿ

ಕ್ರ ಸಂ.	ಹೆಸರು	ವಿಭಾಗ	100 ಅಂಕಗಳಿಗೆ ಪಡೆದಿರುವ ಅಂಕ	ಮೀಸಲಾತಿ	ಷರಾ
1	ಜೆ.ಕೆ. ಮಧು ಬಿನ್ ಕೂರ	ವನ್ಯಜೀವಿ ಹುಣಸೂರು	88.67	ಸಾಮಾನ್ಯ ಅಭ್ಯರ್ಥಿ	ವನ್ಯಜೀವಿ ಹುಣಸೂರು ವಿಭಾಗದಲ್ಲಿ ಇರುವ 13 ಹುದ್ದೆಗಳ ಪೈಕಿ 4 ಪರಿಶಿಷ್ಟ ಜಾತಿಯಲ್ಲಿ ಯಾರು ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇರುವುದರಿಂದ, ಭರ್ತಿಯಾಗದೇ 4 ಹುದ್ದೆಗಳು ಖಾಲಿ ಇರುತ್ತದೆ. ಉಳಿದಂತೆ, ಪ್ರವರ್ಗ–1, II(ಎ), II(ಬಿ) III (ಎ) ನಲ್ಲಿ ಮೀಸಲಾತಿಯ 9 ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇರುವುದರಿಂದ ಸರ್ಕಾರಿ ಆದೇಶ ಸಂಖ್ಯೆ.ಸಿಆಸುಇ/08/ಸೆಹಿಮ–95, ಬೆಂಗಳೂರು 20–06–1995 ರ ಪ್ರಕಾರ ಪ್ರವರ್ಗದ 9 ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪ್ರವರ್ಗಗಳಿಂದ ಭರ್ತಿಯಾಗದೇ ಇರುವ ಒಟ್ಟು 13 ಹುದ್ದೆಗಳನ್ನು ಮುಂದಿನ ನೇರ ನೇಮಕಾತಿಯಲ್ಲಿ ಸರಿದೂಗಿಸಿಕೊಳ್ಳಲಾಗುವುದು.
2	ಜೆ.ಕೆ. ಮೋಟಪ್ಪ ಬಿನ್ ಜೆ.ಕೆ.ನಾಗೇಶ	ವನ್ಯಜೀವಿ ಹುಣಸೂರು	87.67	ಸಾಮಾನ್ಯ ಅಭ್ಯರ್ಥಿ	
3	ಜೆ.ಆರ್. ರಾಜು ಬಿನ್ ರಾಮ	ವನ್ಯಜೀವಿ ಹುಣಸೂರು	85.67	ಸಾಮಾನ್ಯ ಅಭ್ಯರ್ಥಿ	
4	ಜೆ.ಕೆ. ರಾಮ ಬಿನ್ ಲೇಟ್ ಕರಿಯ	ವನ್ಯಜೀವಿ ಹುಣಸೂರು	82.67	ಸಾಮಾನ್ಯ ಅಭ್ಯರ್ಥಿ	
5	ಜೆ.ಕೆ. ಚಂದ್ರ ಬಿನ್ ಸಣ್ಣಯ್ಯ	ವನ್ಯಜೀವಿ ಹುಣಸೂರು	80.33	ಸಾಮಾನ್ಯ ಅಭ್ಯರ್ಥಿ	
6	ಗುಂಡು ಬಿನ್ ಕರಿಯ	ವನ್ಯಜೀವಿ ಹುಣಸೂರು	78.33	ಸಾಮಾನ್ಯ ಅಭ್ಯರ್ಥಿ	
7	ಮಂಜು ಬಿನ್ ಸೋಮಯ್ಯ	ವನ್ಯಜೀವಿ ಹುಣಸೂರು	76.33	ಸಾಮಾನ್ಯ ಅಭ್ಯರ್ಥಿ	
8	ದಾಸಪ್ಪ ಬಿನ್ ಬಸವರಾಜು	ವನ್ಯಜೀವಿ ಹುಣಸೂರು	76.00	ಸಾಮಾನ್ಯ ಅಭ್ಯರ್ಥಿ	
9	ರಾಮು ಬಿನ್ ಸಿಂಗಪ್ಪ	ವನ್ಯಜೀವಿ ಹುಣಸೂರು	75.67	ಸಾಮಾನ್ಯ ಅಭ್ಯರ್ಥಿ	

ಅರಣ್ಯ ಸಂರಕ್ಷಣಾಧಿಕಾರಿ

ಪಿ.ಆರ್. 731 ಹಾಗೂ ಆನೆಕವಾಡಿಗಳ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರಿ.

ಮೈಸೂರು ವೃತ್ತ, ಮೈಸೂರು

HORTICULTURE DEPARTMENT

Directorate of Horticulture, Lalbagh, Bangalore

TENDER NOTIFICATION

Tender Notification No. DH/Addl DH/FRU/AHO-2/50/2008-09, Date: 28th August 2009

FOR CONDUCTING SYSTEMATIC SURVEY ON PRESENT STATUS OF MANGO ORCHARDS AND POST HARVEST ASPECTS OF MANGO IN KARNATAKA STATE UNDER THE PROJECT FOR ESTABLISHMENT OF MANGO DEVELOPMENT CENTRES IN KOLAR AND CHIKKABALLAPUR DISTRICTS, UNDER RASHTRIYA KRISHI VIKAS YOJANA (RKVY)

(Two Cover System)

The Department of Horticulture invites sealed tenders in the prescribed format as per the provisions of the KTPP Act 1999 and Rules 2000, from reputed, technically competent and experienced Firms / Group of individuals for taking up systematic survey of mango orchards and Post Harvest aspects of Mango in Karnataka state under the project on **"Establishment of Mango Development Centres in Kolar and Chikkaballapur districts"** under RKVY.

The scope of the task, qualification, requirement of consultant, documents to be produced, terms and conditions and other details are given in the tender document (Request For Proposals (RFP) document) which can be obtained from the Office of the Additional Director of Horticulture (Fruits), Directorate of Horticulture, Lalbagh, Bangalore-04, from **10-9-2009 to 26-9-2009** between **10.30 am and 5.00 pm**. The cost of the RFP document is **Rs.1000/- + 12.5% tax (Rs.1125/-) (Rupees One Thousand One Hundred and Twenty Five Only)** payable in cash.

The bids should be submitted in two separate forms, viz. **Technical Bid** and **Financial Bid,** along with an EMD of **Rs.25,000/-** (Rupees Twenty Five Thousand only) by way of crossed Demand Draft, drawn in favour of Director of Horticulture, Lalbagh, Bangalore and should be submitted to the Additional Director of Horticulture (Fruits), Directorate of Horticulture, Lalbagh, Bangalore-4, on / before **29-9-2009 (by 5.00 pm). The technical bid** will be opened on **30-9-2009 at 11.00 am** in the **Mini Meeting Hall, Directorate of Horticulture, Lalbagh, Bangalore**, in the presence of Tenderers / their authorized representatives. **The financial bid will be opened on 1-10-2009 at 11.00 am** at the above venue. Any additional information / queries on the project / documents may be obtained from the office of the Additional Director of Horticulture (Fruits), Lalbagh, Bangalore (Phone: 080 - 26572324).

Director of Horticulture, Lalbagh, Bangalore.

ತೋಟಗಾರಿಕೆ ಇಲಾಖೆ

ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು–4

ಟೆಂಡರ್ ಪ್ರಕಟಣೆ

(ದ್ವಿ ಲಕೋಟೆಗಳಲ್ಲಿ)

ಸಂಖ್ಯೆ:ತೋಇ/ತೋಅನಿ/ಹಣ್ಣು/ಸತೋಅ–2/50/2008–09, ದಿನಾಂಕ: 28ನೇ ಆಗಸ್ಟ್ 2009

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಯ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾವು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ ಕಾರ್ಯಕ್ರಮದಡಿ ಕರ್ನಾಟಕ ರಾಜ್ಯದಲ್ಲಿ ಮಾವಿನ ತೋಟಗಳ ಸ್ಥಿತಿಗತಿಗಳು ಮತ್ತು ಕೊಯ್ಲೋತ್ತರ ನಿರ್ವಹಣೆಗೆ ಸಂಬಂಧಿಸಿದಂತೆ ಸಮೀಕ್ಷೆಯನ್ನು ಕೈಗೊಳ್ಳಲು ಅರ್ಹ ಸಂಸ್ಥೆಗಳಿಂದ

ಟೆಂಡರ್ ಆಹ್ವಾನ

ತೋಟಗಾರಿಕೆ ಇಲಾಖೆಯು, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾವು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ Project ಅಡಿ ಕರ್ನಾಟಕ ರಾಜ್ಯದಲ್ಲಿ ಮಾವು ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಮಾವಿನ ತೋಟಗಳ ಸ್ಥಿತಿಗತಿ ಮತ್ತು ಕೊಯ್ಲೋತ್ತರ ನಿರ್ವಹಣೆಗೆ ಸಂಬಂಧಿಸಿದ ಸಮೀಕ್ಷೆಯನ್ನು ಎರಡು ಮಾವಿನ ಋತುಗಳಲ್ಲಿ ಕೈಗೊಳ್ಳಲು, ಪರಿಣಿತ, ತಾಂತ್ರಿಕ ಅರ್ಹತೆಯುಳ್ಳ ಮತ್ತು ಅನುಭವವುಳ್ಳ ಸಂಸ್ಥೆ / ವ್ಯಕ್ತಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಟೆಂಡರ್‌ನ್ನು ಮೊಹರಾದ ಲಕೋಟೆಗಳಲ್ಲಿ ಆಹ್ವಾನಿಸಿದೆ.

ವಿವರಗಳುಳ್ಳ ಟೆಂಡರ್ ಡಾಕ್ಯುಮೆಂಟ್ (Request For Proposal (RFP) Document) ಅನ್ನು ರೂ.1000 + ಶೇ.12.5 ರಷ್ಟು ತೆರಿಗೆಯನ್ನು (ರೂ.1125/)– **[ಒಂದು ಸಾವಿರದ ಒಂದುನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ]** ಗಳನ್ನು ನಗದು ರೂಪದಲ್ಲಿ ಪಾವತಿಸಿ, ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ಲಾಲ್‌ಬಾಗ್, ಬೆಂಗಳೂರು–4, ರವರ ಕಛೇರಿಯಿಂದ ರಜಾ ದಿನಗಳನ್ನು ಹೊರತುಪಡಿಸಿ, ದಿನಾಂಕ:10–9–2009 ರಿಂದ 26–9–2009 ರವರೆಗೆ (**ಬೆಳಿಗ್ಗೆ 10.30 ರಿಂದ ಸಂಜೆ 5.00 ಗಂಟೆಯವರೆಗೆ**) ಪಡೆಯಬಹುದಾಗಿರುತ್ತದೆ. ಸಂಪೂರ್ಣವಾಗಿ ಭರ್ತಿ ಮಾಡಿದ ಟೆಂಡರ್ ನಮೂನೆಗಳನ್ನು (**ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್**) ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ಲಾಲ್‌ಬಾಗ್, ಬೆಂಗಳೂರು–4 ರವರಿಗೆ ದಿನಾಂಕ:**29–9–2009** (ಸಂಜೆ **5.00** ಗಂಟೆ) ರೊಳಗೆ ಸಲ್ಲಿಸುವುದು.

ಇ.ಎಂ.ಡಿ.	:	ರೂ.25,000/– ಗಳನ್ನು ತೋಟಗಾರಿಕೆ ನಿರ್ದೇಶಕರು, ರವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸುವುದು.
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	30–09–2009 ಬೆಳಿಗ್ಗೆ 11.00 ಗಂಟೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	:	01–10–2009 ಬೆಳಿಗ್ಗೆ 11.00 ಗಂಟೆ
ಸ್ಥಳ	:	ಕಿರು ಸಭಾಂಗಣ, ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು – 4

ಹೆಚ್ಚಿನ ವಿವರಗಳನ್ನು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ಲಾಲ್‌ಬಾಗ್, ಬೆಂಗಳೂರು (ದೂರವಾಣಿ:**080–26572324**) ರವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು.

HORTICULTURE DEPARTMENT

Directorate of Horticulture, Lalbagh, Bangalore-560 004

TENDER NOTIFICATION

No. DH/ADDL.DH/FRUITS/AHO-2/50/2008-09, Date: 28th August 2009

For Conducting Systematic Survey on Present Status of Mango Orchards and Post Harvest Aspects of Mango in Karnataka State under the RKVY project on Establishment of Mango Development Centres in Kolar and Chikkaballapur Districts,

(Two Cover System)

The Department of Horticulture invites sealed tenders as per the provisions of KTPP Act 1999 and Rules 2000 in the prescribed format from reputed, technically competent and experienced Firms / Group of individuals for taking up systematic survey of mango orchards and Post-harvest aspects of Mango in the major mango growing areas of Karnataka state, in two mango seasons, under the RKVY project on **"Establishment of Mango Development Centres in Kolar and Chikkaballapur districts".**

The detailed tender document (Request for Proposals (RFP) document) can be obtained from the office of the Additional Director of Horticulture (Fruits), Lalbagh, Bangalore-04, from **10-09-2009 to 26-9-2009 between 10.30 am and 5.00 pm. on working days, at a cost of Rs.1000/- + 12.5% tax (Rs.1125/-) (Rupees One Thousand One Hundred and Twenty Five Only) payable in cash.** The bids should be submitted in two separate forms, viz. **Technical Bid** and **Financial Bid,** to the Additional Director of Horticulture (Fruits), Lalbagh, Bangalore.

Last date for submission of bids	:	**29-9-2009 (by 5.00 pm).**
EMD	:	**Demand Draft for Rs.25,000/-** (Rupees Twenty Five Thousand only) in favour of Director of Horticulture, Lalbagh, Bangalore
Opening of technical bid	:	**30-9-2009 at 11.00 am**
Opening of financial bid	:	**01-10-2009 at 11.00 am**
Venue	:	**Mini Meeting Hall, Directorate of Horticulture, Lalbagh, Bangalore.**

Any additional information may be obtained from the office of the Additional Director of Horticulture (Fruits), Lalbagh, Bangalore. (Phone: 080 - 26572324)

Director of Horticulture, Lalbagh, Bangalore.

HORTICULTURE DEPARTMENT
DIRECTORATE OF HORTICULTURE LALBAGH, BANGALORE-560 004
TENDER NOTIFICATION
No. DH/ADDL.DH/FRUITS/AHO-2/50/2008-09, DATE: 28th August 2009
FOR CONDUCTING SYSTEMATIC SURVEY ON PRESENT STATUS OF MANGO ORCHARDS AND POST HARVEST ASPECTS OF MANGO IN KARNATAKA STATE UNDER THE PROJECT ESTABLISHMENT OF MANGO DEVELOPMENT CENTRES IN KOLAR AND CHIKKABALLAPUR DISTRICTS, UNDER RASHTRIYA KRISHI VIKAS YOJANA (RKVY)
(Two Cover System)

The Department of Horticulture invites sealed tenders as per the provisions of KTPP Act 1999 and Rules 2000 in the prescribed format from reputed, technically competent and experienced Firms / Group of individuals for taking up systematic survey of mango orchards and Post-harvest aspects of Mango in Karnataka state under the project on **"Establishment of Mango Development Centres in Kolar and Chikkaballapur districts" under RKVY.**

ABOUT THE PROJECT:

The project is aimed at the integrated development of Mango industry in the major mango growing tracts of Karnataka, with focus on improving the production and productivity, post harvest management, marketing and export of mangoes. The consultant will act as the authorized resource person / agency in planning and taking up of detailed surveys on various technical aspects related to cultivation and post harvest aspects / marketing of mango with appropriate scientific methodology. After the completion of the task, the consultant will submit a detailed report on the issues contained in the task as per the Terms of Reference. The survey period will be 2 mango seasons (2009 & 2010) and in the major mango growing areas of the Karnataka state (about 20 districts).

OTHER DETAILS:

The scope of the task, qualification, requirement of consultant, documents to be produced, terms and conditions and other details are given in the tender document (Request for Proposals (RFP) documents) which can be obtained from the office of the Additional Director of Horticulture, (Fruits), Directorate of Horticulture, Lalbagh, Bangalore-04. **The cost of the RFP document is Rs.1000/- + 12.5% tax (Rs.1125/-) (Rupees One Thousand One Hundred and Twenty Five Only) payable in cash.**

ABOUT THE BIDDING

The RFP document may be obtained from the Office of the Additional Director of Horticulture (Fruits), Lalbagh, Bangalore-4 from **10-09-2009 to 26-9-2009 between 10.30 am and 5.00 pm.**

The bids should be submitted in two separate forms, viz. **Technical Bid** and **Financial Bid,** along with an EMD of **Rs.25,000/-** (Rupees Twenty Five Thousand only) by way of crossed Demand Draft, drawn in favour of Director of Horticulture, Lalbagh, Bangalore.

The **duly filled Tender forms** should be submitted to the Additional Director of Horticulture (Fruits), Directorate of Horticulture, Lalbagh, Bangalore-4. The last date for submission of duly filled Technical and Financial bids is **29-9-2009 (by 5.00 pm).** The details regarding submission of the Technical and Financial bids are given in the RFP document. **The technical bid** will be opened on **30-9-2009 at 11.00 am** in the **Mini Meeting Hall, Directorate of Horticulture, Lalbagh, Bangalore**, in the presence of Tenderers / their authorized representatives. **The financial bid** will be opened on **01-10-2009 at 11.00 am** at the above venue. Any additional information / queries on the project / documents may be obtained from the office of the Additional Director of Horticulture (Fruits), Lalbagh, Bangalore. (Phone: 080 - 26572324)

Director of Horticulture, Lalbagh, Bangalore

ತೋಟಗಾರಿಕೆ ಇಲಾಖೆ

ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು-4

ಟೆಂಡರ್ ಪ್ರಕಟಣೆ

(ದ್ವಿ ಲಕೋಟೆಗಳಲ್ಲಿ)

ಸಂಖ್ಯೆ:ತೋಇ/ತೋಅನಿ/ಹಣ್ಣು/ಸತೋಅ-2/50/2008-09, ದಿನಾಂಕ: 28ನೇ ಆಗಸ್ಟ್ 2009

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಯಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾವು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ ಕಾರ್ಯಕ್ರಮದಡಿ ಕರ್ನಾಟಕ ರಾಜ್ಯದಲ್ಲಿ ಮಾವಿನ ತೋಟಗಳ ಸ್ಥಿತಿಗತಿಗಳು ಮತ್ತು ಕೊಯ್ಲೋತ್ತರ ನಿರ್ವಹಣೆಗೆ ಸಂಬಂಧಿಸಿದಂತೆ ಸಮೀಕ್ಷೆಯನ್ನು ಕೈಗೊಳ್ಳಲು ಅರ್ಹ ಸಂಸ್ಥೆಗಳಿಂದ

ಟೆಂಡರ್ ಆಹ್ವಾನ

ತೋಟಗಾರಿಕೆ ಇಲಾಖೆಯು, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾವು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ Project ಅಡಿ ಕರ್ನಾಟಕ ರಾಜ್ಯದಲ್ಲಿ ಮಾವಿನ ತೋಟಗಳ ಸ್ಥಿತಿಗತಿ ಮತ್ತು ಕೊಯ್ಲೋತ್ತರ ನಿರ್ವಹಣೆಗೆ ಸಂಬಂಧಿಸಿದ ಸಮೀಕ್ಷೆಯನ್ನು ಕೈಗೊಳ್ಳಲು, ಪರಿಣಿತ, ತಾಂತ್ರಿಕ ಅರ್ಹತೆಯುಳ್ಳ ಮತ್ತು ಅನುಭವವುಳ್ಳ ಸಂಸ್ಥೆ / ವ್ಯಕ್ತಿಗಳನ್ನು ಆಹ್ವಾನಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 (KTPP Act 1999 and Rules 2000) ರನ್ವಯ ಟೆಂಡರ್‌ನ್ನು ಮೊಹರಾದ ಲಕೋಟೆಗಳಲ್ಲಿ ಆಹ್ವಾನಿಸಿದೆ.

ಯೋಜನೆಯ ವಿವರ :

ಈ ಯೋಜನೆಯ ಮುಖ್ಯ ಉದ್ದೇಶವು ಕರ್ನಾಟಕ ರಾಜ್ಯದ ಮಾವು ಬೆಳೆಯುವ ಪ್ರದೇಶಗಳಲ್ಲಿ ಮಾವು ಉತ್ಪಾದನೆ, ಉತ್ಪಾದಕತೆ, ಕೊಯ್ಲೋತ್ತರ ನಿರ್ವಹಣೆ, ಮಾರುಕಟ್ಟೆ ಮುಂತಾದ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ವಿವರವಾದ ಸಮೀಕ್ಷಾ ಕಾರ್ಯವನ್ನು ಯೋಜಿಸಿ, ಕಾರ್ಯ ಕೈಗೊಳ್ಳಲು, ಆಸಕ್ತ ಸಂಸ್ಥೆಯು ಅಧಿಕೃತ ಮತ್ತು ಸಂಪನ್ಮೂಲ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಬೇಕಿರುತ್ತದೆ. ಈ ಕಾರ್ಯವನ್ನು ಪೂರ್ಣಗೊಳಿಸಿದ ನಂತರ, ವಿವರವಾದ ವರದಿಯನ್ನು ನಿಬಂಧನೆಗಳಲ್ಲಿ (Terms of References) ತಿಳಿಸಿದಂತಹ ವಿಷಯಗಳ ಮೇಲೆ ಸಲ್ಲಿಸಬೇಕಿರುತ್ತದೆ. ಸಮೀಕ್ಷಾ ಕಾರ್ಯದ ಅವಧಿಯು 2 ಮಾವಿನ ಋತುಗಳು (2009 ಮತ್ತು 2010) ಹಾಗೂ ಸಮೀಕ್ಷಾ ವ್ಯಾಪ್ತಿಯು ಕರ್ನಾಟಕ ರಾಜ್ಯದಲ್ಲಿ ಮಾವು ಬೆಳೆಯುವ ಎಲ್ಲಾ ಪ್ರಮುಖ ಪ್ರದೇಶಗಳಾಗಿರುತ್ತದೆ (ಸುಮಾರು 20 ಜಿಲ್ಲೆಗಳು).

ಇತರೆ ವಿವರಗಳು :

ಸಲಹೆಗಾರರ ಕಾರ್ಯವ್ಯಾಪ್ತಿ, ಅರ್ಹತೆ, ಸಲಹೆಗಾರರ ಅಗತ್ಯತೆಗಳು, ಸಲ್ಲಿಸಬೇಕಾಗಿರುವ ದಾಖಲಾತಿಗಳು, ನಿಬಂಧನೆ ಮತ್ತು ಷರತ್ತುಗಳು ಹಾಗೂ ಇತರೆ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ (Request For Proposal (RFP) Document) ನೀಡಲಾಗಿರುತ್ತದೆ. RFP ಡಾಕ್ಯುಮೆಂಟ್‌ನ ದರ ರೂ.1000 + ಶೇ.12.5 ರಷ್ಟು ತೆರಿಗೆಯನ್ನು (ರೂ.1125/)- [ಒಂದು ಸಾವಿರದ ಒಂದುನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ] ನಗದು ರೂಪದಲ್ಲಿ ಪಾವತಿಸಿ, ಟೆಂಡರ್ ಡಾಕ್ಯುಮೆಂಟ್‌ನ್ನು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು-4, ರವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಹರಾಜು (Bidding) ವಿವರ:

RFP ದಾಖಲಾತಿಗಳನ್ನು ದಿನಾಂಕ:10-9-2009 ರಿಂದ 26-9-2009 ರವರೆಗೆ **ಬೆಳಿಗ್ಗೆ 10.30 ರಿಂದ ಸಂಜೆ 5.00 ಗಂಟೆಯ** ಅವಧಿಯೊಳಗೆ, ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ಲಾಲ್‌ಬಾಗ್, ಬೆಂಗಳೂರು ರವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಬಿಡ್‌ಗಳನ್ನು ಎರಡು ಪ್ರತ್ಯೇಕ ನಮೂನೆಗಳಲ್ಲಿ ಅಂದರೆ **ತಾಂತ್ರಿಕ ಬಿಡ್** ಮತ್ತು **ಆರ್ಥಿಕ ಬಿಡ್‌ಗಳನ್ನು** ಸಲ್ಲಿಸುವುದು. **ರೂ.25,000/- (ರೂ.ಇಪ್ಪತ್ತೈದು ಸಾವಿರ ಮಾತ್ರ)** ಮೊತ್ತದ EMD ಯನ್ನು, **ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು**, ರವರ ಹೆಸರಿನಲ್ಲಿ ಕ್ರಾಸ್ ಮಾಡಿದ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ತಾಂತ್ರಿಕ ಬಿಡ್ ಇರುವ ಮೊಹರಾದ ಲಕೋಟೆಯಲ್ಲಿ ಸಲ್ಲಿಸುವುದು.

ಸಂಪೂರ್ಣವಾಗಿ ಭರ್ತಿ ಮಾಡಿದ ಟೆಂಡರ್ ನಮೂನೆಗಳನ್ನು (**ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್**) ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು-4 ರವರಿಗೆ ದಿನಾಂಕ:**29-9-2009** (ಸಂಜೆ **5.00** ಗಂಟೆ) ರೊಳಗೆ ಸಲ್ಲಿಸುವುದು.

ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಬಗ್ಗೆ ವಿವರಗಳನ್ನು RFP ಡಾಕ್ಯುಮೆಂಟ್‌ನಲ್ಲಿ ನೀಡಲಾಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ದಿನಾಂಕ:**30-9-2009** ರಂದು ಬೆಳಿಗ್ಗೆ **11.00** ಗಂಟೆಗೆ ಲಾಲ್‌ಬಾಗ್‌ನಲ್ಲಿರುವ ತೋಟಗಾರಿಕೆ ನಿರ್ದೇಶನಾಲಯದ ಕಿರು ಸಭಾಂಗಣದಲ್ಲಿ ಟೆಂಡರುದಾರರು / ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು.

ಆರ್ಥಿಕ ಬಿಡ್ ಅನ್ನು ದಿ:**01-10-2009** ರಂದು ಬೆಳಿಗ್ಗೆ **11.00** ಗಂಟೆಗೆ ಮೇಲ್ಕಂಡ ಸ್ಥಳದಲ್ಲೇ ತೆರೆಯಲಾಗುವುದು. ಈ ಯೋಜನೆ / ದಾಖಲಾತಿಗಳ ಕುರಿತು ಹೆಚ್ಚಿನ ವಿವರಗಳನ್ನು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ಲಾಲ್‌ಬಾಗ್, ಬೆಂಗಳೂರು (ದೂರವಾಣಿ:**080-26572324**) ರವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಪಿ.ಆರ್. 734

ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು

HORTICULTURE DEPARTMENT

Directorate of Horticulture, Lalbagh, Bangalore.

TENDER NOTIFICATION

(2-Cover system)

Tender Notification No.DH/ADH/LTC/AHO/5/2009-10, Date: 27th August 2009

NOTICE FOR INVITING TENDER FOR CONSTRUCTION WORKS FOR UPGRADATION OF HORTICULTURE TRAINING CENTRE AT LALBAGH, BANGALORE UNDER RKVY-2008-09.

The Director of Horticulture invites tenders from the registered PWD Class – 1 contractors/reputed firms/agencies in building construction, for construction works for **UPGRADATION OF HORTICULTURE TRAINING CENTRE AT LALBAGH, BANGALORE.** The civil works include construction of lecture hall, seminar hall, computer room, library, staff room, kitchen and dining block, hostel block, staff quarters etc. The approximate value of works is **Rs. 285.00** lakhs. The period of completion of the work will be 9 months from the date of issue of work order.

Eligibility Criteria / Qualification for participation in Tender Process.

Any reputed and financially sound individual firm / agency, having suitable technical, financial and managerial capabilities satisfying the following conditions are eligible to apply.

1) Should have minimum Annual Financial turnover of **Rs.5.70** Crores for the last two years.
2) Should have Completed Single work of Worth **Rs.3.00** Crores during last five years.
3) Should have Class-1 registration with PWD Building Department.

The tender documents containing the terms and conditions, scope and nature of work, technical and quality specifications and other details can be obtained from the office of the **Joint Director of Horticulture (Drip Irrigation) Lalbagh, Bangalore-04.** Tender documents will be issued against the requisition from the interested firms, from **12.10.2009 to 24.10.2009**, on working days from 10.00 am to 5.00 pm, on payment of non- transferable/ non- refundable fee of **Rs.5000/- + 12.5% tax (Total Rs.5,625.00)** by way of Demand Draft (DD), purchased from any nationalized bank, drawn in favour of **Director of Horticulture, Lalbagh, Bangalore,** payable at Bangalore.

Completed item-wise **Technical and Financial bids** in separate sealed covers addressed to the Director of Horticulture, Lalbagh, Bangalore-04, with **EMD for Rs.5.70 lakhs** in the form of Demand Draft drawn in favour of **Director of Horticulture, Lalbagh Bangalore,** purchased from any Nationalized Bank, payable at Bangalore, may be submitted latest by **02.11.2009,** before 4.00 pm. to the **Joint Director of Horticulture, (Drip Irrigation) Lalbagh, Bangalore -560 004.** **The DD for EMD amount should be enclosed with the Technical bid**. The technical bids will be opened on **03.11.2009** at **11.00** a.m. in the Mini-Meeting Hall, Directorate of Horticulture, Lalbagh, Bangalore – 560 004, in the presence of tender committee members & bidders / their authorized representatives. The qualified financial bids will be opened at 11.00 a.m. on **07.11.2009 in the above mentioned venue.** The undersigned reserves the right to reject any/ all tenders without assigning any reason.

Director of Horticulture, Lalbagh, Bangalore

ತೋಟಗಾರಿಕೆ ಇಲಾಖೆ

ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು-4

ಟೆಂಡರ್ ಪ್ರಕಟಣೆ

(ದ್ವಿ ಲಕೋಟೆಗಳಲ್ಲಿ)

ಸಂಖ್ಯೆ:ತೋಇ/ಸತೋನಿ/ಲಾತಕೇ/ಸತೋಅ/5/2009-10, ದಿನಾಂಕ: 27ನೇ ಆಗಸ್ಟ್ 2009

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಯಡಿ Upgradation of Training centre at Lalbagh, Bangalore- ಪ್ರಾಜೆಕ್ಟ್ ಅಡಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಆಹ್ವಾನ

ತೋಟಗಾರಿಕೆ ಇಲಾಖೆಯು, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಲಾಲ್‌ಬಾಗ್ ತರಬೇತಿ ಕೇಂದ್ರದ ಉನ್ನತೀಕರಣದ ಸಂಬಂಧ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಂಗೀಕೃತ PWD Class - I ಗುತ್ತಿಗೆದಾರರಿಂದ/ ಪರಿಣಿತ ಹಾಗೂ ಅರ್ಹ ಸಂಸ್ಥೆಗಳಿಂದ / Builder / Construction Agency ಗಳಿಂದ ಟೆಂಡರ್‌ನ್ನು ಆಹ್ವಾನಿಸಿದೆ. ಸದರಿ

ಸಿವಿಲ್ ಕಾಮಗಾರಿಗಳು ಲೆಕ್ಚರ್ ಹಾಲ್, ಸೆಮಿನಾರ್ ಹಾಲ್, ಗಣಕ ಯಂತ್ರ ಕೊಠಡಿ, ಗ್ರಂಥಾಲಯ, ಸ್ಟಾಫ್ ರೂಮ್, ಕಿಚನ್ ಮತ್ತು ಡೈನಿಂಗ್ ಬ್ಲಾಕ್, ವಿದ್ಯಾರ್ಥಿ ನಿಲಯ, ಸಿಬ್ಬಂದಿ ಕ್ವಾರ್ಟರ್ಸ್ ಮುಂತಾದವುಗಳ ನಿರ್ಮಾಣಗಳನ್ನು ಒಳಗೊಂಡಿದೆ. ಸದರಿ ಕೇಂದ್ರದ ಸಿವಿಲ್ ಕಾಮಗಾರಿಗಳ ನಿರ್ಮಾಣದ ಅಂದಾಜು ಮೊತ್ತವು **ರೂ.285.00** ಲಕ್ಷಗಳಷ್ಟಿದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯು ಕಾರ್ಯಾದೇಶ ನೀಡಿದ ದಿನಾಂಕದಿಂದ 9 ತಿಂಗಳುಗಳಾಗಿರುತ್ತದೆ.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹತೆಗಳು

ಈ ಕೆಳಕಂಡ ಷರತ್ತುಗಳನ್ನು ಪೂರೈಸುವಂತಹ ಸೂಕ್ತ ತಾಂತ್ರಿಕ, ಆರ್ಥಿಕ ಮತ್ತು ನಿರ್ವಹಣಾ ಸಾಮರ್ಥ್ಯತೆಗಳನ್ನುಳ್ಳ ಹಾಗೂ ಆರ್ಥಿಕವಾಗಿ ಸದೃಢವಾಗಿರುವ ಯಾವುದೇ ಪರಿಣಿತ ಸಂಸ್ಥೆ / ಏಜೆನ್ಸಿಗಳು ಮೇಲ್ಕಂಡ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹವಾಗಿರುತ್ತವೆ.

1. ಕಳೆದ 2 ವರ್ಷಗಳಲ್ಲಿ ಸಂಸ್ಥೆಯ ವಾರ್ಷಿಕ ಆರ್ಥಿಕ ವ್ಯವಹಾರವು ಕನಿಷ್ಠ ರೂ.5.70 ಕೋಟಿಗಳಷ್ಟಿರಬೇಕು.
2. ಕಳೆದ 5 ವರ್ಷಗಳಲ್ಲಿ ರೂ.3.00 ಕೋಟಿ ಮೌಲ್ಯದ ಕನಿಷ್ಠ ಒಂದು ಕೆಲಸವನ್ನಾದರೂ ಪೂರ್ಣಗೊಳಿಸಿರಬೇಕು.
3. ಲೋಕೋಪಯೋಗಿ ಇಲಾಖೆಯಲ್ಲಿ ವರ್ಗ – 1 (Class-1) ಗುತ್ತಿಗೆ ದಾರರಾಗಿ ನೋಂದಣಿ ಹೊಂದಿರಬೇಕು.

ಕಾರ್ಯ ವಿಧಾನ ಮತ್ತು ಕಾರ್ಯವ್ಯಾಪ್ತಿಯ ವಿವರ, ನಿಬಂಧನೆ ಮತ್ತು ಷರತ್ತುಗಳು, ತಾಂತ್ರಿಕ ಮತ್ತು ಗುಣಮಟ್ಟದ ವೈಶಿಷ್ಟತೆಗಳು ಮತ್ತಿತರೆ ವಿವರಗಳನ್ನೊಳಗೊಂಡ ಟೆಂಡರ್ ಡಾಕ್ಯುಮೆಂಟ್‌ನ್ನು ತೋಟಗಾರಿಕೆ ಜಂಟಿ ನಿರ್ದೇಶಕರು (ಹನಿ ನೀರಾವರಿ), ಲಾಲ್‌ಬಾಗ್, ಬೆಂಗಳೂರು, ರವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಆಸಕ್ತ ಸಂಸ್ಥೆಗಳ ಕೋರಿಕೆ ಮೇರೆಗೆ **ದಿನಾಂಕ:12–10–2009 ರಿಂದ 24–10–2009 ರವರೆಗೆ** ಕಛೇರಿ ಕೆಲಸದ ವೇಳೆ ಬೆಳಿಗ್ಗೆ **10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ** ವಿತರಿಸಲಾಗುವುದು. ಟೆಂಡರ್ ಡಾಕ್ಯುಮೆಂಟ್‌ಗೆ ಶುಲ್ಕ **ರೂ.5,000/– + 12.5% ತೆರಿಗೆ (ಒಟ್ಟು ರೂ.5,625/–)** ಗಳನ್ನು **ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು,** ರವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಖರೀದಿಸಿದ ಡಿಮ್ಯಾಂಡ್ ಡ್ರಾಫ್ಟ್‌ನ ರೂಪದಲ್ಲಿ ಪಾವತಿಸಿ, ಡಾಕ್ಯುಮೆಂಟ್‌ನ್ನು ಪಡೆಯಬಹುದಾಗಿರುತ್ತದೆ. ಈ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ /ವರ್ಗಾಯಿಸಲಾಗುವುದಿಲ್ಲ.

ಸಂಪೂರ್ಣವಾಗಿ ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಮೊಹರಾದ ಲಕೋಟೆಗಳಲ್ಲಿ ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು–04, ರವರಿಗೆ ವಿಳಾಸಿಸಿ, **ದಿನಾಂಕ: 02–11–2009** ರಂದು **ಸಂಜೆ 4.00 ಗಂಟೆಯೊಳಗೆ** ತೋಟಗಾರಿಕೆ ಜಂಟಿ ನಿರ್ದೇಶಕರು (ಹನಿ ನೀರಾವರಿ), ಲಾಲ್‌ಬಾಗ್, ಬೆಂಗಳೂರು, ರವರಿಗೆ ಸಲ್ಲಿಸುವುದು. **EMD ಮೊತ್ತ ರೂ.5.70 ಲಕ್ಷಗಳಿಗೆ (ಐದು ಲಕ್ಷದ ಎಪ್ಪತ್ತು ಸಾವಿರ ರೂಪಾಯಿಗಳು ಮಾತ್ರ), ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು, ರವರ ಹೆಸರಿನಲ್ಲಿ** ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಖರೀದಿಸಿದ ಡಿಮ್ಯಾಂಡ್ ಡ್ರಾಫ್ಟ್‌ನ್ನು ತಾಂತ್ರಿಕ ಬಿಡ್‌ನೊಂದಿಗೆ ಲಗತ್ತಿಸಬೇಕು. ತಾಂತ್ರಿಕ ಬಿಡ್‌ಗಳನ್ನು **ದಿನಾಂಕ:03–11–2009** ರಂದು **ಬೆಳಿಗ್ಗೆ 11.00** ಗಂಟೆಗೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ತೋಟಗಾರಿಕೆ ನಿರ್ದೇಶನಾಲಯದ **ಕಿರು ಸಭಾಂಗಣದಲ್ಲಿ,** ಟೆಂಡರ್ ಸಮಿತಿ ಸದಸ್ಯರು ಹಾಗೂ ಟೆಂಡರ್‌ದಾರರು / ಅವರ ಅಂಗೀಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಅರ್ಹಗೊಂಡ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 07–11–2009** ರಂದು **ಬೆಳಿಗ್ಗೆ 11.00 ಗಂಟೆಗೆ** ಮೇಲ್ಕಂಡ ಸ್ಥಳದಲ್ಲೇ ತೆರೆಯಲಾಗುವುದು. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಈ ಕೆಳಸಹಿದಾರರು ಹೊಂದಿರುತ್ತಾರೆ.

ಪಿ.ಆರ್. 737 ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು

FORM - IV

(See Rule 12)

NOTICE

It is hereby notified that the undersigned has changed his/her name from **NAGARAJ S/o AJJAPPA HARIJAN** to **NAGARAJ S/o AJJAPPA KENCHANNANAVAR**

P.D. 147 **NAGARAJ S/o AJJAPPA HARIJAN**

FORM - I

(See Rule 9)

DIRECTORATE OF HEALH AND FAMILY WELFARE SERVICES, BANGALORE

NOTIFICATION

Shri **MAREPPA BALAPPA MADAR** Working as FIRST DIVISION ASSISTANT in the HEALTH AND FAMILY WELFARE SERVICES Department at Office of DISTRICT PROJECT MANAGEMENT OFFICER, DISTRICT PROJECT MANAGEMENT UNIT, BIJAPUR is permitted to change his name to **MAREPPA BALAPPA BIRALADINNI**

Director of Health & Family Welfare Services, Karnataka, Bangalore.

P.D. 148

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಮಯಾವಧಿ ವಿಸ್ತರಣೆ

ಲೋ.ಇ:ಮಂ.ವಿ:ಟಿ.ಎನ್.ಡಿ(26):2009–10:ಎಇ–1, ಮಂಗಳೂರು, ದಿನಾಂಕ: 5ನೇ ಸೆಪ್ಟೆಂಬರ್ 2009

ದಿನಾಂಕ: 22.8.2009ರ 'ಉದಯವಾಣಿ' ಮತ್ತು 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್ ನೋಟಿಫಿಕೇಶನ್ ನಂ:ಲೋ.ಇ:ಮಂ.ವಿ:ಟಿ.ಎನ್.ಡಿ(26):2009–10:ಎಇ1: ದಿನಾಂಕ:20.8.2009ರ ಪ್ರಕಟಣೆಯಲ್ಲಿ ಸೂಚಿಸಿದ ಕಾಮಗಾರಿಗೆ ಟೆಂಡರ್‌ನ ಸಮಯಾವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ:

ಕಾಮಗಾರಿ ಹೆಸರು : ಠೇವಣಿ ಕೊಡುಗೆ 12ನೇ ಹಣಕಾಸು ಯೋಜನೆ (KSWAN Grants)

ಸುಳ್ಯ ತಾಲ್ಲೂಕು ಸುಳ್ಯದಲ್ಲಿ ತಹಶೀಲ್ದಾರರ ಕಛೇರಿಯಲ್ಲಿ ಗವರ್ನಮೆಂಟ್ ಬಿಸಿನೆಸ್ ಸೆಂಟರ್ ಮತ್ತು ಐಟಿ ಸರ್ವರ್ ರೂಮ್ ಕಟ್ಟಡ ನಿರ್ಮಾಣ. ಅಂದಾಜು ಮೊತ್ತ ರೂ.6.57 ಲಕ್ಷ ಇ.ಎಂ.ಡಿ. ಠೇವಣಿ ರೂ.16,500.00 (2ನೇ ಕರೆ)

1. ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 17.09.2009 (ಕಛೇರಿ ವೇಳೆಯಲ್ಲಿ)
2. ಖಾಲಿ ಟೆಂಡರು ಫಾರಂಗಳನ್ನು ನೀಡುವ ದಿನಾಂಕ: 19.09.2009 ರಿಂದ 22.09.2009 ರವರೆಗೆ (ಕಛೇರಿ ವೇಳೆಯಲ್ಲಿ)
3. ಭರ್ತಿ ಮಾಡಿದ ಟೆಂಡರು ಸ್ವೀಕರಿಸುವ ಅಂತಿಮ ದಿನಾಂಕ: 23.9.2009ರ ಸಂಜೆ 4.00 ಗಂಟೆಯವರೆಗೆ

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ. ಹಾಗೂ http//www.kpwd.gov.in ಇಲಾಖಾ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್,
ಪಿ.ಆರ್. 738 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಮಂಗಳೂರು ವಿಭಾಗ, ಮಂಗಳೂರು.

ಶಿಕ್ಷಣ ಇಲಾಖೆ

ರಾಜ್ಯ ಟೆಂಡರ್ ಬುಲೆಟಿನ್

ಸಂಖ್ಯೆ: ಇಡಿ 47 ಎಸ್‌ಟಿಬಿ 2009, ದಿನಾಂಕ: 22ನೇ ಆಗಸ್ಟ್ 2009

ಉಪ ನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯ ಅಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಇವರು 2008–09ನೇ ಸಾಲಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡಲು ಕರ್ನಾಟಕ ರಾಜ್ಯ ಮತ್ತು ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ವಿವರಗಳನ್ನು ರಾಜ್ಯ ಟೆಂಡರ್ ಬುಲೆಟಿನ್ ಆಗಿ ಸೆಪ್ಟೆಂಬರ್–2009ರ 4ನೇ ವಾರದಲ್ಲಿ ಪ್ರಕಟಿಸಲಾಗಿದೆ. ಟೆಂಡರ್ ವಿವರಗಳನ್ನು ಭಾಗ–1ರಲ್ಲಿ ಇದರೊಂದಿಗೆ ಲಗತ್ತಿಸಲಾಗಿದೆ.

ಬಿ.ಎಸ್. ಜಾಪಾಲಿ
ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ ಮತ್ತು
ಸರ್ಕಾರದ ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ

EDUCATION DEPARTMENT

State Tender Bulletin

No. ED 47 STB 2009, Dated: 22nd August 2009

Deputy Director and District Planning Co-ordinating Officer, Sarva Shikshana Abhiyana Department of Public Instructions, Chikmagluru District, has invited Tender for supply of furniture's for Higher Primary School during the year 2008-09 from registered civil KPWD and CPWD Class-I contractors. This Tender is published as part of the State Tender Bulletin for the 4th week of September-2009. The details of the tender are enclosed and marked as PART-1.

B.S. JAPALI
State Tender Bulletin Officer &
Deputy Secretary-1 to Government, Education Department.

V-F13-(0)

ಸರ್ವ ಶಿಕ್ಷಣ ಅಭಿಯಾನ – ಚಿಕ್ಕಮಗಳೂರು

ರಾಜ್ಯ ಟೆಂಡರ್ ಬುಲೆಟಿನ್

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ರ ನಿಯಮ 2000 ರನ್ವಯ ಪ್ರಕಟಿಸಲಾಗಿದೆ.

ಭಾಗ – ಎ

ಒಂದು ಟೆಂಡರ್ ಪ್ರಕಟಣೆಯನ್ನು ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಸೇರಿಸಿ ಸಾರ್ವಜನಿಕ ಸಂಗ್ರಹಣೆ ಸಂಸ್ಥೆ/ಮುದ್ರಣ ಏಜೆನ್ಸಿದಾರರ ಅವಗಾಹನೆಗೆ ಪ್ರಕಟಿಸಲಾಗಿದೆ.

ಸಂಚಿಕೆ

ದಿನಾಂಕ

ಚಿಕ್ಕಮಗಳೂರು ಜಿಲ್ಲೆ

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ವಿವರ	ಟೆಂಡರ್ ಇಟ್ಟಿರುವ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ಲಕ್ಷಗಳಲ್ಲಿ)	ಟೆಂಡರ್ ಪುಸ್ತಕದ ಬೆಲೆ	ಕೆಲಸ ಪೂರ್ಣಗೊಳಿಸಿ ಪೀಠೋಪಕರಣಗಳನ್ನು ಶಾಲೆಗಳಿಗೆ ಸರಬರಾಜು ಮಾಡಬೇಕಾದ ದಿನಗಳು	ಟೆಂಡರ್ ಅರ್ಜಿ ವಿತರಣೆ ಪ್ರಾರಂಭದ ದಿನಾಂಕ ಹಾಗೂ ಮುಕ್ತಾಯದ ದಿನಂಕ	ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಟೆಂಡರ್ ಸ್ವೀಕರಿಸುವ ಅಧಿಕಾರ
1	ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಾದ ಪೀಠೋಪಕರಣಗಳನ್ನು ಸರಬರಾಜು ಮಾಡುವ ಬಗ್ಗೆ (ಪೀಠೋಪಕರಣಗಳ ಸ್ಪೆಸಿಫಿಕೇಷನ್‌ಗಳ ವಿವರಗಳಿಗೆ ಟೆಂಡರ್ ಫಾರಂನಲ್ಲಿ ತಿಳಿಸಲಾಗುವುದು	206.00	3.09	5000	30 ದಿನಗಳು	ಪ್ರಾರಂಭದ ದಿನಾಂಕ : 10.08.2009 ರಿಂದ ಮುಕ್ತಾಯದ ದಿನಾಂಕ: 12.10.2009 ರ 12.00 ಗಂಟೆ	12.10.2009ರ ಮಧ್ಯಾಹ್ನ 2.00 ಗಂಟೆ	12.10.2009 ಮಧ್ಯಾಹ್ನ 3.30 ಗಂಟೆ	ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು

ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸ.ಶಿ.ಅ. ಸಾ.ಶಿ.ಇ. ಚಿಕ್ಕಮಗಳೂರು.

SARVA SHIKSHANA ABHIYANA – CHIKMAGALURU

State Tender Bulletin

KARNATAKA TRANSPARENCY IN PUBLIC PROCUREMENT ACT 1999 AND RULES 2000 (Rules 17b)

Requested to Publish in state level bulletin. This is for the notice to authorised agencies of Manufacturer / suppliers

PART – A

Issue No.

Date:

District : Chikmagaluru

Sl. No.	Name of the work	Tender Amount (In Lakhs)	EMD (In Lakhs)	Tender Application Price (In Rs.)	Duration supply of furniture to schools	Issuing and Closing date of Tender document	Last date for receiving the tender document	Date of opening the tender document	Tender receiving authority.
1	Supply of Furnitures to Primary schools in Chikmagaluru District	206.00	3.09	5000.00	30Days (From the date of issue of work order)	10.08.2009 to 12.10.2009 @ 12.00 Noon	12.10.2009 @ 2.00 P.M.	12.10.2009 @ 3.30 PM	DDPI (A) and DPC SSA Chikmagaluru

P.R. 727

District Project Co-Ordinator, S.S.A. Chikmagaluru.

ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ರಾಜ್ಯ ವಲಯ), ಶಿವಮೊಗ್ಗ

ಟೆಂಡರ್ ಹರಾಜು ಪ್ರಕಟಣೆ

ಸಂಖ್ಯೆ:ಹಿಸತೋನಿ:ರಾವ:ಶಿ:ತಾಸ:619/A/2009–10, ದಿನಾಂಕ: 2ನೇ ಸೆಪ್ಟೆಂಬರ್ 2009

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ ಗಾಂಧಿಪಾರ್ಕ್, ಶಿವಮೊಗ್ಗ ರವರ ಅಧೀನದಲ್ಲಿ ಬರುವ ಜಿಲ್ಲೆಯ ವಿವಿಧ ತೋಟಗಾರಿಕೆ ಕ್ಷೇತ್ರಗಳ ಅಡಿಕೆ ಫಸಲುಗಳನ್ನು ಟೆಂಡರ್ ಹರಾಜು ಮೂಲಕ ವಿಲೇವಾರಿ ಮಾಡಲು ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಿದೆ.

ಕ್ರ. ಸಂ.	ತೋಟಗಾರಿಕೆ ಕ್ಷೇತ್ರದ ಹೆಸರು	ಫಸಲಿನ		ಟೆಂಡರ್ ಫಾರಂ ಪಡೆಯುವ ಕೊನೆಯ ದಿನಾಂಕ ಮತ್ತು ವೇಳೆ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ	ಟೆಂಡರ್ ತೆರೆಯುವ ದಿನಾಂಕ/ ವೇಳೆ	ಟೆಂಡರ್ ತೆರೆಯುವ ಸ್ಥಳ	ಇಎಂಡಿ ಮೊತ್ತ	ಇ.ಎಂ.ಡಿ. ಪೂರ್ಣ ಹಾಗೂ ಟೆಂಡರ್ ಮೊತ್ತಕ್ಕೆ ಶೇ. 50 ಡಿ.ಡಿ. ತೆಗೆಯುವ ವಿಳಾಸ
		ಹೆಸರು	ಅವಧಿ						
1	ತುಂಗಾ ತೋಟಗಾರಿಕೆ ಕ್ಷೇತ್ರ (ರಾವ), ಶಿವಮೊಗ್ಗ	ಅಡಿಕೆ	1.7.09 ರಿಂದ 31.1.10	5.10.09 5.00 PM	6.10.09 11.30 PM	6.10.09 12.00 PM	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯವಲಯ) ಶಿವಮೊಗ್ಗ	1000/–	ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಸಂಸ್ಥೆ (KSHDA), ಬೆಂಗಳೂರು
2	ಬಿ.ಆರ್.ಪಿ. ತೋಟಗಾರಿಕೆ ಕ್ಷೇತ್ರ (ರಾವ), ಭದ್ರಾವತಿ ತಾ:	ಅಡಿಕೆ	1.7.09 ರಿಂದ 31.1.10	6.10.09 5.00 PM	7.10.09 11.30 PM	7.10.09 12.00 PM	ಬಿ.ಆರ್.ಪಿ. ತೋಟಗಾರಿಕೆ ಕ್ಷೇತ್ರ (ರಾಜ್ಯವಲಯ) ಭದ್ರಾವತಿ	1000/–	ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಸಂಸ್ಥೆ (KSHDA), ಬೆಂಗಳೂರು
3	ಕುರುವಳ್ಳಿ ತೋಟಗಾರಿಕೆ ಕ್ಷೇತ್ರ (ರಾವ), ತೀರ್ಥಹಳ್ಳಿ	ಅಡಿಕೆ	1.7.09 ರಿಂದ 31.1.10	7.10.09 5.00 PM	8.10.09 12.00 PM	8.10.09 1.00 PM	ಕುರುವಳ್ಳಿ ತೋಟಗಾರಿಕೆ ಕ್ಷೇತ್ರ (ರಾವ), ತೀರ್ಥಹಳ್ಳಿ	10000/–	ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಸಂಸ್ಥೆ (KSHDA), ಬೆಂಗಳೂರು

ಟೆಂಡರ್‌ನಲ್ಲಿ ಭಾಗವಹಿಸಲು ಪಾಲಿಸಬೇಕಾದ ನಿಯಮ (ಷರತ್ತು)ಗಳು:

1. ಫಸಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಷ್ಟವುಳ್ಳವರು ಕಛೇರಿ ವೇಳೆಯಲ್ಲಿ ನಿಗದಿತ ಟೆಂಡರ್ ಫಾರಂನ್ನು ರೂ. 25/–(ರೂ.ಇಪ್ಪತ್ತೈದು) ಗಳನ್ನು ಪಾವತಿ ಮಾಡಿ ಪಡೆಯಬಹುದಾಗಿದೆ. ನಿಗದಿತ ಟೆಂಡರ್ ಫಾರಂನಲ್ಲಿ ಮಾತ್ರ ಟೆಂಡರ್ ಸಲ್ಲಿಸಬೇಕು.
2. ಟೆಂಡರ್‌ನಲ್ಲಿ ಭಾಗವಹಿಸುವವರು ಟೆಂಡರ್ ಫಾರಂನ್ನು ಭರ್ತಿ ಮಾಡಿ ಇ.ಎಂ.ಡಿ. ಪೂರ್ಣ ಮೊತ್ತ ಮತ್ತು ಟೆಂಡರ್ ಮೊತ್ತದ ಶೇ.50 ರಷ್ಟು ಹಣವನ್ನು K.S.H.D.A., ಬೆಂಗಳೂರು ಹೆಸರಿನಲ್ಲಿ ಪ್ರತ್ಯೇಕ ಕ್ರಾಸ್ ಡಿ.ಡಿ. ಯೊಂದಿಗೆ ಸೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸಬೇಕು.

3. ಟೆಂಡರ್ ಫಾರಂನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ), ಶಿವಮೊಗ್ಗ ಅಥವಾ ಸಹಾಯಕ ತೋಟಗಾರಿಕೆ ಅಧಿಕಾರಿ (ರಾಜ್ಯವಲಯ) ಕುರುವಳ್ಳಿ ತೀರ್ಥಹಳ್ಳಿ ರವರ ಕಛೇರಿಯಲ್ಲಿ ಪಡೆಯಬಹುದು.
4. ಬಹಿರಂಗ ಹರಾಜಿಗೆ ಅವಕಾಶವಿರುವುದಿಲ್ಲ.
5. ತುಂಗಾ ಬಿ.ಆರ್.ಪಿ. ಹಾಗೂ ಕುರುವಳ್ಳಿ ತೋಟಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ಇ.ಎಂ.ಡಿ. ಹಾಗೂ ಶೇ.50ರ ಡಿ.ಡಿ. ಯನ್ನು K.S.H.D.A. ಬೆಂಗಳೂರು, ರವರ ಹೆಸರಿಗೆ ತೆಗೆಯಬೇಕು.
6. ಟೆಂಡರ್ ಫಾರಂನಲ್ಲಿ ಪೂರ್ಣ ಹೆಸರು, ವಿಳಾಸ, ಟೆಂಡರ್ ಮೊತ್ತ (ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ಪ್ರತ್ಯೇಕವಾಗಿ) ಇತ್ಯಾದಿಗಳನ್ನು ಸಂಪೂರ್ಣವಾಗಿ ದಾಖಲಿಸಿ ಸಹಿ ಮಾಡಿರಬೇಕು. ಅಪೂರ್ಣ ಹಾಗೂ ಲೋಪದೋಷಿತ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
7. ಯಶಸ್ವಿ ಟೆಂಡರ್‌ದಾರರು ಇಲಾಖೆಯ ನಿಯಮಗಳನ್ನೊಳಗೊಂಡ ಕರಾರು ಪತ್ರವನ್ನು ಸಹಿ ಹಾಕಿ ಕರಾರು ಮಾಡಿಕೊಳ್ಳಬೇಕು ಮತ್ತು ಅದಕ್ಕೆ ಬದ್ಧರಾಗಿರಬೇಕು.
8. ಮೇಲಾಧಿಕಾರಿಗಳಿಂದ ಅನುಮೋದನೆ ಬಂದ ನಂತರ 10 ದಿನದೊಳಗಾಗಿ ಉಳಿದ ಶೇ.50 ರ ಮೊತ್ತವನ್ನು ಕ್ರಾಸ್ ಡಿ.ಡಿ. ಮೂಲಕ ಪಾವತಿಸಬೇಕು.
9. ಫಸಲು ಕಾವಲು ಕಟ್ಟಳೆಗಳನ್ನು ಸಫಲ ಟೆಂಡರ್‌ದಾರರೆ ನೋಡಿಕೊಳ್ಳತಕ್ಕದ್ದು. ಟೆಂಡರ್‌ದಾರರು ಶೇಕಡ 5 ರಷ್ಟು ಫಸಲನ್ನು ಸ್ಥಳೀಯ ಜನರಿಗೆ ಮಾರಾಟ ಮಾಡಬೇಕು. ಕೆಲಸದ ದಿನಗಳಲ್ಲಿ ಮಾತ್ರ ಕೊಯ್ಲು ಮಾಡಬೇಕು ಮತ್ತು ಕೊಯ್ಲು ದಾಖಲಾತಿಗಳನ್ನು ಇಡಬೇಕು.
10. ಫಸಲನ್ನು ಕಟಾವು ಮಾಡಿಕೊಳ್ಳುವ ಅವಧಿ ಜನವರಿ 31, 2010 (31–1–2010) ಕ್ಕೆ ಸೀಮಿತಗೊಳಿಸಬೇಕು, ಹಾಗೂ ಬಲಿತ ಕಾಯಿಗಳನ್ನು ಮಾತ್ರ ಕೊಯಿಲು ಮಾಡಲು ಅವಕಾಶವಿರುತ್ತದೆ.
11. ಫಸಲು ಯಾವುದೇ ಪ್ರಕೃತಿ ವಿಕೋಪಕ್ಕೆ ಹಾನಿಯಾದರೆ ಇಲಾಖೆಯು ಜವಾಬ್ದಾರಿಯಲ್ಲ, ಹಾಗೂ ಯಾವುದೇ ಪರಿಸ್ಥಿತಿಯಲ್ಲಿ ಹಣ ಹಿಂತಿರುಗಿಸಲಾಗುವುದಿಲ್ಲ.
12. ಫಸಲು ವೀಕ್ಷಿಸಲು ಇಷ್ಟವುಳ್ಳವರು ಕಛೇರಿಯ ವೇಳೆಯಲ್ಲಿ ಸಂಬಂಧಿಸಿದ ಕ್ಷೇತ್ರ ಅಧಿಕಾರಿಗಳನ್ನು ಕಂಡು ಮಾಹಿತಿ ಪಡೆಯಬಹುದು.
13. ಯಶಸ್ವಿ ಟೆಂಡರ್‌ದಾರರು ಇಲಾಖೆಯ ಎಲ್ಲಾ ನಿಬಂಧನೆಗಳಿಗೆ ಬದ್ದರಾಗಿರಬೇಕು, ಒಂದು ವೇಳೆ ಯಾವುದೇ ನಿಯಮ ಉಲ್ಲಂಘಿಸಿದರೆ ಠೇವಣಿ ಹಣ ಮತ್ತು ಶೇ.50 ರ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
14. ಫಸಲಿಗೆ ಯೋಗ್ಯ ಬೆಲೆ ಬಾರದಿದ್ದಲ್ಲಿ ಕಟಾವಿಗೆ ಅನುಮತಿ ನೀಡುವುದು/ತಿರಸ್ಕರಿಸುವುದು ಇಲಾಖೆಯ ಸಕ್ಷಮ ಪ್ರಾಧಿಕಾರಕ್ಕೆ ಸೇರಿರುತ್ತದೆ.
15. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚೆವುಳ್ಳವರು ಇಲಾಖಾ ಕಛೇರಿಗಳಿಗೆ ಭೇಟಿ ಮಾಡಿ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿ ಅಧಿಕಾರಿಗಳನ್ನು ಭೇಟಿಯಾಗುವುದು.
16. ಯಶಸ್ವಿ ಟೆಂಡರ್‌ದಾರರು ಮತ್ತೊಬ್ಬರಿಗೆ ಸಬ್ ಲೀಸ್ (ವಿಲೇವಾರಿ) ಮಾಡಬಾರದು. ಹಾಗೊಂದು ವೇಳೆ ಅನಧಿಕೃತ ವ್ಯವಹಾರಗಳು ಕಂಡು ಬಂದರೆ ಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ನಿಯಮಾವಳಿ ಪ್ರಕಾರ ಕ್ರಮ ಜರುಗಿಸಿ ಮತ್ತೊಬ್ಬ ಟೆಂಡರ್‌ದಾರರಿಗೆ ಅನಧಿಕೃತವಾಗಿ ವಿಲೇವಾರಿ ಮಾಡಲಾಗುವುದು.
17. ಟೆಂಡರ್ ಪ್ರಕ್ರಿಯೆಯಲ್ಲಿ ಬದಲಾಗುವ ನಿಯಮಗಳಿಗೆ ಬದ್ಧರಾಗಿರಬೇಕು. ಈ ಬಗ್ಗೆ ಯಾವುದೇ ವಿವಾದಗಳು ಉದ್ಭವವಾದಲ್ಲಿ ಅಂತಹ ಎಲ್ಲಾ ವಿವಾದಗಳನ್ನು ಇತ್ಯರ್ಥಗೊಳಿಸುವ ಅಧಿಕಾರ ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆ ನಿರ್ದೇಶಕರವರಲ್ಲಿ ವಿಹಿತವಾಗಿರುತ್ತದೆ. ಇವರೇ ಅಂತಿಮ ತೀರ್ಪುಗಾರರು ಆಗಿರುತ್ತಾರೆ.

ಪಿ.ಆರ್. 735

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ಶಿವಮೊಗ್ಗ

ನಿರ್ದೇಶಕರ ಕಛೇರಿ, ನ್ಯಾಯ ವಿಜ್ಞಾನ ಪ್ರಯೋಗಾಲಯಗಳು,
(ಪೊಲೀಸ್ ಇಲಾಖೆ) ಕರ್ನಾಟಕ ರಾಜ್ಯ, ಮಡಿವಾಳ, ಬೆಂಗಳೂರು–560068

ಟೆಂಡರ್ ಪ್ರಕಟಣೆ

ಸಂ. ಸಂಗ್ರಹ.68/ನ್ಯಾವಿಪ್ರ/2008–09, ಬೆಂಗಳೂರು, ದಿನಾಂಕ: 26ನೇ ಆಗಸ್ಟ್ 2009

ಪೊಲೀಸ್ ಇಲಾಖೆಯ ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರಿಗೆ ಅಗತ್ಯವಿರುವ ಈ ಕೆಳಗಿನ ಉಪಕರಣಗಳನ್ನು ಸರಬರಾಜು ಮಾಡಲು ಮೊಹರು ಮಾಡಿರುವ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

Sl. No.	Name of the equipment	Quantity
1.	Microwave Digesion System	01 No.
2.	Automated TLC Sprayer	04 Nos.
3.	Fourier Transform Infra Red Spectrometer (FTIR)	01 No.
4.	Automated Spectrofluorometer	01 No.

ಸೂಚನೆ: ತಯಾರಿಕಾ ಘಟಕ / ರೆಪ್ಯೂಟೆಡ್ ಏಜೆಂಟ್ ಮತ್ತು ರೆಪ್ಯೂಟೆಡ್ ಕಂಪನಿಗಳಿಗೆ ಆದ್ಯತೆ ನೀಡಲಾಗುವುದು.

ಟೆಂಡರ್ ಅರ್ಜಿಗಳನ್ನು ಹಾಗೂ ಪ್ರತಿಯೊಂದು ಉಪಕರಣದ ನಿರ್ದಿಷ್ಟತೆ / ವಿಶಿಷ್ಟತೆಯ ಮೂಲಕ (specifications) ದಿನಾಂಕ: 01.09.2009 ರಿಂದ 25.09.2009 ರವರೆಗೆ ಕೆಲಸಗಳ ದಿನದಂದು ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯೊಳಗೆ ಈ ಕಛೇರಿಯಲ್ಲಿ ಪಡೆಯಬಹುದು. ಪ್ರತಿ ಟೆಂಡರ್ ಅರ್ಜಿ ನಮೂನೆಯ ಬೆಲೆ ರೂ. 200.00 + 25.00 (ತೆರಿಗೆ) = ರೂ. 225.00ಗಳನ್ನು ನಗದು ಅಥವಾ ಡಿ.ಡಿ. ಮೂಲಕ ಮಾತ್ರ ಪಾವತಿಸಬಹುದಾಗಿದೆ (ಮನಿಯಾರ್ಡರ್‌ನಲ್ಲಿ ಪಾವತಿಸಿದರೆ ತಿರಸ್ಕರಿಸಲಾಗುವುದು). ಟೆಂಡರ್ ಅರ್ಜಿಯನ್ನು ಅಂಚೆಯ ಮೂಲಕ ಪಡೆಯಲು ಇಚ್ಛಿಸುವವರು ರೂ. 100.00 + 13.00 (ತೆರಿಗೆ) = ರೂ. 113.00 ಗಳಿಗೆ ಹೆಚ್ಚುವರಿ ಡಿ.ಡಿ.ಯನ್ನು ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಮಡಿವಾಳ, ಬೆಂಗಳೂರು ರವರ ಹೆಸರಿನಲ್ಲಿ ಪಡೆದು ಕಳುಹಿಸಲು ಕೋರಲಾಗಿದೆ. ಭರ್ತಿ ಮಾಡಿದ ದ್ವಿಪ್ರತಿ ಟೆಂಡರ್ ಅರ್ಜಿ ನಮೂನೆಗಳನ್ನು ಹಾಗೂ ಶೇಕಡ 2ರಷ್ಟು ಇ.ಎಂ.ಡಿ.ಯ (ಒಟ್ಟು ಮೌಲ್ಯಕ್ಕೆ) ಮುಂಗಡ ಠೇವಣಿಯನ್ನು ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ರವರ ಹೆಸರಿನಲ್ಲಿ ಪಡೆದ ಡಿ.ಡಿ. / ಬ್ಯಾಂಕ್ ಗ್ಯಾರಂಟಿ ಹಾಗೂ ಮಾದರಿಯ ಬ್ರೋಚರ್ಸ್, ಕ್ಯಾಟ್ಲಾಗ್ಸ್ ವಿತ್ ಟೆಕ್ನಿಕಲ್ ಸ್ಪೆಸಿಫಿಕೇಷನ್, ಮತ್ತು ಇತರೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕಛೇರಿಯ ಡಾ: ಬಿ.ಎಂ. ಮೋಹನ್, ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಮಡಿವಾಳ, ಬೆಂಗಳೂರು–68 ರವರಿಗೆ ಹೆಸರಿಸಿ ದಿನಾಂಕ: 30.09.2009ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಈ ದಿನಾಂಕದ ನಂತರ ಬಂದಂತಹ ಟೆಂಡರ್‌ಗಳನ್ನು ಅಂಗೀಕರಿಸಲಾಗುವುದಿಲ್ಲ. ಲಕೋಟೆಯ ತುದಿಯಲ್ಲಿ "ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಬೇಕಾಗಿರುವ ಉಪಕರಣಗಳನ್ನು ಸರಬರಾಜು ಮಾಡುವ ಬಗ್ಗೆ ಅರ್ಜಿ" ಎಂದು ನಮೂದಿಸಿರಬೇಕು ಹಾಗೂ ಲಕೋಟೆಯು ಸರಬರಾಜು ಮಾಡಲು ಬಯಸುವ ಸಂಸ್ಥೆಯ ವಿಳಾಸವನ್ನು ಒಳಗೊಂಡಿರಬೇಕು.

ಸ್ವೀಕರಿಸಿದ ಟೆಂಡರ್‌ಗಳನ್ನು ದಿನಾಂಕ: 01.10.2009 ರಂದು ಬೆಳಿಗ್ಗೆ 11.00 ಗಂಟೆಗೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಅಪರಾಧ ಮತ್ತು ತಾಂತ್ರಿಕ ಸೇವೆಗಳು, ಪೊಲೀಸ್ ಪ್ರಧಾನ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–01 ಇಲ್ಲಿ ತೆರೆಯಲಾಗುವುದು. ಇಚ್ಛೆಯುಳ್ಳ ಟೆಂಡರ್‌ದಾರರು ಟೆಂಡರ್‌ಗಳನ್ನು ತೆರೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು.

ಇ.ಎಂ.ಡಿ.ಯನ್ನು ಡಿಮ್ಯಾಂಡ್ ಡ್ರಾಫ್ಟ್ / ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸದಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಟೆಂಡರ್‌ದಾರರು ಅಂಚೆ ಮೂಲಕ / ಕೊರಿಯರ್ ಮೂಲಕ ಕಳುಹಿಸುವ ಟೆಂಡರ್ ಅರ್ಜಿ ಮತ್ತು ದಾಖಲಾತಿಗಳು ತಡವಾಗಿ ತಲುಪಿದಲ್ಲಿ / ನಾಶವಾದಲ್ಲಿ ಇಲಾಖೆಯು ಜವಾಬ್ದಾರಿಯಲ್ಲ. ಇಲಾಖೆಯು ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ಸಾರಾಸಗಟಾಗಿ / ಭಾಗಶಃ ಒಪ್ಪಿಕೊಳ್ಳುವ, ಹೆಚ್ಚು ಅಥವಾ ಕಡಿಮೆ ಮಾಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.

ನಿರ್ದೇಶಕರು,
ನ್ಯಾಯ ವಿಜ್ಞಾನ ಪ್ರಯೋಗಾಲಯಗಳು, ಬೆಂಗಳೂರು.

OFFICE OF THE DIRECTOR, FORENSIC SCIENCE LABORATORIES, (POLICE DEPARTMENT)
Karnataka State, Madivala, Bangalore-68

TENDER NOTICE

No. STS.68/FSL/2008-09, Bangalore, Dated: 26th August 2009

Sealed tender are invited for the purchase of following equipments for Forensic Science Laboratory, Bangalore.

Sl. No.	Name of the equipment	Quantity
1.	Microwave Digesion System	01 No.
2.	Automated TLC Sprayer	04 Nos.
3.	Fourier Transform Infra Red Spectrometer (FTIR)	01 No.
4.	Automated Spectrofluorometer	01 No.

Note: Preference will be given to manufacturing unit / reputed agent / and reputed brands available in the market.

Tender forms containing detailed terms and conditions and specifications for each of the items mentioned above can be obtained from this office between 10.00 AM to 4.00PM on any working days from 01.09.2009 to 25.09.2009. The cost of each tender form is Rs. 200.00 + 25.00 (tax) = Rs. 225.00 (rupee two hundred and twenty five) which is non-refundable. Tender documents requested by mail will be dispatched by registered / speed post on payment of an extra amount of Rs. 100.00 + 13.00 (tax) = Rs. 113.00. Tender should be submitted in duplicate and in sealed envelope duly subscribing on the top as "Tender for the supply of equipments for FSL".

Envelope should contain duly filled tender application along with D.D. drawn in favour of the Director, Forensic Science Laboratory, Bangalore / Bank Guarantee towards EMD (the EMD should be equivalent to 2% of value of the total, rate quoted by the tenderers) Financial, Technical and Service capability, Sale Tax, Income tax details, turnover details, Brochures, Catalogues with technical specifications.

The envelope should be addressed to Dr. B.M. Mohan, Director, Forensic Science Laboratories, Bangalore and submit before 4.00 PM on 30.09.2009. Tender applications received after due date will not be considered. The received envelops containing tenders will be opened in the office of the Addl. Director General of Police, (Crime & Technical Services), Nrupathunga Road, Police Hqrs., Bangalore-01 at 11.00 Am on 01.10.2009. Interested persons can participate in the proceedings of opening of tenders.

The tenders received without Earnest Money Deposit (EMD) in the form of Demand Draft / Bank Guarantee shall run the risk of rejection. The Department will not be responsible for any delay, loss, damage or non receipt of request / tender documents / tender sent by posts / courier etc., Department's right to accept / reject / split any or all tenders without assigning any reasons is reserved.

Director,

P.R. 716 Forensic Science Laboratory, Bangalore.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಅಲ್ಪಾವಧಿ ಟೆಂಡರ್ ಪ್ರಕಟಣೆ

ನಂ:ಕಾಇಂ:ಲೋವಿ:ಚಿ:ರಸ್ತೆಗಳು:06:2009-10, ದಿನಾಂಕ:31ನೇ ಆಗಸ್ಟ್ 2009

1) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1537
2) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1377
3) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1553
4) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1554
5) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1555
6) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1370
7) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1371
8) ಇ-ಟೆಂಡರ್ ಉಲ್ಲೇಖ:- KPWD/2009-10/WORK _ INDENT 1369

ಇ-ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯಪಾಲರ ಪರವಾಗಿ, 1ನೇ ದರ್ಜೆ ಗುತ್ತಿಗೆದಾರರಿಗೆ ಇ-ಟೆಂಡರ್ ಮುಖಾಂತರ ಟೆಂಡರ್‌ನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿ ವಿವರಗಳು ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟಿರುವ ಹಣ ರೂ. ಗಳಲ್ಲಿ	ಮುಂಗಡ ಠೇವಣಿ ಹಣ ರೂ. ಗಳಲ್ಲಿ
1	ಚಿತ್ರದುರ್ಗ ತಾಲ್ಲೂಕು ಎನ್.ಹೆಚ್–4 ರಿಂದ ಹುಲ್ಲೂರು ಮಾರ್ಗವಾಗಿ ವಡ್ಡರಸಿದ್ದವ್ವನಹಳ್ಳಿ, ಹಿರೇಗುಂಟನೂರು ಕಿ.ಮೀ. 0.00 ರಿಂದ 17.00 ರವರೆಗೆ ಅಭಿವೃದ್ಧಿ (ಆಯ್ದಭಾಗಗಳಲ್ಲಿ)	5155151–60	103200–00
2	ಹಿರಿಯೂರು ತಾಲ್ಲೂಕು ತರೀಕೆರೆ–ಹೊಸದುರ್ಗ–ವಿ.ವಿ.ಪುರ–ಹಿರಿಯೂರು–ಧರ್ಮಪುರ ರಸ್ತೆ. (ರಾಜ್ಯ ಹೆದ್ದಾರಿ–24)ರ ಕಿ.ಮೀ. 114.00 ರಿಂದ 131.00 ವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಆಗಲೀಕರಣ ಅಭಿವೃದ್ಧಿ ಮತ್ತು ಡಾಂಬರೀಕರಣ	9426822–00	188536–00
3	ಹೊಸದುರ್ಗ ತಾಲ್ಲೂಕು ಅಮೃತಾಪುರ–ಮಾಡದಕೆರೆ ರಸ್ತೆ ಕಿ.ಮೀ. 22.00 ರಿಂದ 28.00 ರವರೆಗೆ ಆಯ್ದಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ	9016104–58	180325–00
4	ಹೊಸದುರ್ಗ ತಾಲ್ಲೂಕು ಶಿವಗಂಗ–ಜಾನಕಲ್–ಹೊಸದುರ್ಗ ರಸ್ತೆ ಕಿ.ಮೀ. 20.00 ರಿಂದ 24.65 ವರೆಗೆ ಆಯ್ದಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ	9263937–93	185280–00
5	ಹೊಸದುರ್ಗ ತಾಲ್ಲೂಕು ಹಾಗಲಕೆರೆ–ಮತ್ತೋಡು–ಚಿಕ್ಕಬ್ಯಾಲದಕೆರೆ ರಸ್ತೆ ಕಿ.ಮೀ. 14.20 ರಿಂದ 21.00 ವರೆಗೆ ಆಯ್ದಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ	7600002–75	152000–00
6	ಮೊಳಕಾಲ್ಮೂರು ತಾಲ್ಲೂಕಿನ ಮಲ್ಪೆ–ಮೊಳಕಾಲ್ಮೂರು ರಾಜ್ಯ ಹೆದ್ದಾರಿ 65ರ ಕಿ.ಮೀ. 320.00 ರಿಂದ 340.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಗಲಪಡಿಸುವುದು.	6485839–91	129717–00
7	ಮೊಳಕಾಲ್ಮೂರು ತಾಲ್ಲುಕು ಬಳ್ಳಾರಿ ಜಿಲ್ಲಾಗಡಿಯಿಂದ ಆಂಧ್ರ ಗಡಿಯವರೆಗಿನ ರಸ್ತೆ (ಮಾರ್ಗ ಚಿಕ್ಕೋಬನಹಳ್ಳಿ, ತುಮಕೂರ್ಲಹಳ್ಳಿ, ಕೋನಸಾಗರ, ಉಡೇವು) ಕಿ.ಮೀ. 0.00 ರಿಂದ 11.40 ರವರೆಗೆ ರಸ್ತೆ ಅಭಿವೃದ್ಧಿ	5120267–19	102406–00
8	ಮೊಳಕಾಲ್ಮೂರು ತಾಲ್ಲೂಕು ಅಶೋಕ ಶಿಲಾಶಾಸನ ರಸ್ತೆ ಕಿ.ಮೀ. 0.00 ರಿಂದ 8.40 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ	5320073–96	106402–00

ಅರ್ಹ ಗುತ್ತಿಗೆದಾರರು ವೆಬ್ ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು.

ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ	:	10.09.2009 ಸಮಯ: 17.30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ	:	15.09.2009 ಸಮಯ: 16.00
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	:	19.09.2009 ಸಮಯ: 10.30
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	:	22.09.2009 ಸಮಯ: 10.30

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 08022485867 ರಿಂದ ಮಾಹಿತಿ ಪಡೆಯಬಹುದು.

ಕಾರ್ಯಪಾಲಕ ಅಭಿಯಂತರರು

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಚಿತ್ರದುರ್ಗ

PUBLIC WORKS, PORTS AND INLAND WATER TRANSPORT DEPARTMENT

Short term Tender Notification

No. EE:PWD:CTA:ROADS:06:2009-10, Dated: 31st August 2009

1) E-Tender Ref:- KPWD/2009-10/WORK _ INDENT 1537
2) E-Tender Ref:- KPWD/2009-10/WORK _ INDENT 1377
3) E-Tender Ref:- KPWD/2009-10/WORK _ INDENT 1553
4) E-Tender Ref:- KPWD/2009-10/WORK _ INDENT 1554
5) E-Tender Ref:- KPWD/2009-10/WORK _ INDENT 1555

6) E-Tender Ref:- KPWD/2009-10/WORK _ INDENT 1370
7) E-Tender Ref:- KPWD/2009-10/WORK _ INDENT 1371
8) E-Tender Ref:- KPWD/2009-10/WORK _ INDENT 1369

E-Tender Notification (Two cover system)

Tenders are invited on behalf of Governor of Karnataka from Class-I Contractors for the following works through e-Procurement.

Sl. No.	Name of Work	Amount put to Tender in Rs.	E.M.D. in Rs.
1	Improvements to road from NH-4 to Hullur via vaddarasiddavvanahally, Hireguntanur from 0.00 to 17.00 km in selected reaches in Chitradurga Taluk	5155151-00	103200-00
2	Improvements, Widening and Asphalting to road from Tarikere-Hosadurga-V.V.Pura-Hiriyur-Dharampura road (SH-24) from 114.00 to 131.00 km in selected reaches in Hiriyur Taluk	9426822-00	188536-00
3	Improvements and Asphalting to Amruthapura-Madadakere road from 22.00 to 28.00 km in selected reaches in Hosadurga Taluk	9016104-58	180325-00
4	Improvements and Asphalting to Shivaganga-Janakal-Hosadurga road from 20.00 to 24.65 km in selected reaches in Hosadurga Taluk	9263937-93	185280-00
5	Improvements and Asphalting to Hagalakere-Mathodu-Chikkabyaladakere road from 14.20 to 21.00 km in selected reaches in Hosadurga Taluk	7600002-75	152000-00
6	Widening of Malpe-Molakalmuru (SH-65) from 320.00 to 340.00 km in selected reaches in Molakalmur Taluk	6485839-91	129717-00
7	Improvements to road from Bellary district border to AP border via Chikkobanahally, Tumkurlahally, Konasagara, Udevu from 0.00 to 11.40 km in Molakalmuru Taluk	5120267-19	102406-00
8	Improvements to Ashoka Inscription road from 0.00 to 8.40 km in selected reaches in Molakalmur Taluk.	5320073-96	106402-00

Eligible Contractors may participate in tender through website www.eproc.Karnataka.gov.in/eportal/index.seam

Last Date & Time for Tender Queries/Clarifications	:	10.09.2009 Time: 17.30
Last Date & time for receipt of tenders	:	15.09.2009 Time: 16.00
Date & time for Opening of Technical Bid	:	19.09.2009 Time: 10.30
Date & time for Opening of Financial Bid	:	22.09.2009 Time: 10.30

For further details can be obtained from this office and H.P. Company helpline No. 08022485867

Executive Engineer,
Public Works, Ports and Inland
Water Transport Department, Division, Chitradurga

P.R. 726

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, ಕಬ್ಬನ್ ಉದ್ಯಾನವನ, ಬೆಂಗಳೂರು

ಟೆಂಡರ್ ಪ್ರಕಟಣೆ

ಸಂಖ್ಯೆ:ತೋಉನಿ/ಕಉ/ಸುಕಉಪ್ರ/01/2009-10, ದಿನಾಂಕ: 31ನೇ ಆಗಸ್ಟ್ 2009

ಕಬ್ಬನ್ ಉದ್ಯಾನವನದ ನರ್ಸರಿ ವಿಭಾಗದ ನೆರಳು ಉದ್ಯಾನವನದಲ್ಲಿರುವ ಕಲ್ಲು ಬಂಡೆಯ ಸುತ್ತಲೂ ಅಲಂಕಾರಿಕ ಕೊಳವನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಭೂದೃಶ್ಯ ವಿಭಾಗ ಲಾಲ್‌ಬಾಗ್, ಬೆಂಗಳೂರು ರವರ ಅಂದಾಜು ಪಟ್ಟಿ ರೀತಿ ನಿರ್ಮಾಣ ಮಾಡಬೇಕಾಗಿರುತ್ತದೆ. ಈ ಬಗ್ಗೆ ಅಧಿಕೃತ ಸಂಸ್ಥೆ/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಚ್ಚಿಸುವವರು ಟೆಂಡರ್ ಫಾರಂಗಳನ್ನು ದಿನಾಂಕ:05-10-2009 ರಿಂದ 07-10-2009ರ ಸಂಜೆ 5.00 ಗಂಟೆವರೆಗೆ ಈ ಕಛೇರಿಯಿಂದ ಪಡೆಯಬಹುದು. ಹಾಗೂ ದಿನಾಂಕ:08-10-2009 ರಂದು ಬೆಳಿಗ್ಗೆ 11.00 ಗಂಟೆಯೊಳಗೆ ಟೆಂಡರ್‌ಗಳನ್ನು ಸಲ್ಲಿಸಬೇಕು ಹಾಗೂ ಅಂದೇ ಮದ್ಯಾಹ್ನ 12.00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳ ಸಹಿದಾರರ ಕಛೇರಿಯಲ್ಲಿ ಪಡೆಯಬಹುದು.

ಹಾಲಿ ನೆರಳು ಉದ್ಯಾನವನದಲ್ಲಿ ಇರುವ ಕಲ್ಲು ಬಂಡೆಗಳ ಸುತ್ತಲೂ ಅಲಂಕಾರಿಕ ಕೊಳವನ್ನು ನಿರ್ಮಾಣ ಮಾಡುವ ಕಾಮಗಾರಿ ವಿವರಗಳು.

Sl.No.	Descriptions	Quantity
1	Earthwork excavation for foundation of buildings, culverts, water supply, sanitary lines and electrical conduits either in pits or in trenches 1.5m and above in width, in Hard soil not exceeding 1.5 m. in depth including dressing the bottom and sides of pits and trenches, stacking the excavated soil clear from edges of excavation with lead upto 50 m. after breaking of clods complete as per specification.	131.62
2	Providing and laying granite or basalt or trap jelly concrete using 40mm and down size jelly for foundation and in 15 cms. Thick layers and well compacted including curing etc., complete Cement concrete .	20.95
3	Providing and laying granite or basalt or trap jelly cement concrete using 20mm and down size jelly including mixing, laying, tamping, curing and smooth finishing for exposed faces and with necessary centering and form work etc., complete for SILLS, COPING, BOND SLAB and for any other such works Cement Concrete.	17.55
4	Providing and constructing granite or trap or basalt size stone masonry stones hammer dressed in courses not less than 20 cms high with bond stones 2 M apart in each course including curing etc., complete as per specification in Cement mortar.	26.32
5	Providing and constructing granite / trap / basalt size stone masonry in basement with cement mortar 1:6, edges of stones chistle dressed in courses not less than 15 cms high, bond stones at two m. apart in each course including cost of materials, labour, curing complete as per specifications.	

ಷರತ್ತು ಮತ್ತು ನಿಬಂಧನೆಗಳು:-

1. ಭದ್ರತಾ ಠೇವಣಿ ರೂ. 5,000/- ಬ್ಯಾಂಕ್ ಡಿಮಾಂಡ್ ಡ್ರಾಫ್ಟನ್ನು ಸದಸ್ಯ ಕಾರ್ಯದರ್ಶಿಗಳು, "**ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನ** ", ಲಾಲ್‌ಬಾಗ್, ಬೆಂಗಳೂರು ಇವರ ಹೆಸರಿನಲ್ಲಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಸಲ್ಲಿಸಬೇಕು.
2. ನಿಗದಿಯಾದ ಸಮಯದೊಳಗೆ ನಿಮ್ಮ ಟೆಂಡರ್‌ಗಳನ್ನು ಈ ಕಛೇರಿಗೆ ತಲುಪಿಸಬೇಕು. ಅವಧಿ ಮೀರಿದ ನಂತರ ಬಂದ ಟೆಂಡರ್‌ಗಳನ್ನು ಅಂಗೀಕರಿಸಲಾಗುವುದಿಲ್ಲ.
3. ನಿಗದಿತ ಸಮಯದೊಳಗೆ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳ /ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು ಭೂದೃಶ್ಯ ವಿಭಾಗ, ಲಾಲ್‌ಬಾಗ್, ಬೆಂಗಳೂರು ರವರ ಆದೇಶ ಅನುಸಾರ ಕೆಲಸ ನಿರ್ವಹಿಸಬೇಕು.

4. ಟೆಂಡರ್‌ಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರ ತೋಟಗಾರಿಕೆ ನಿರ್ದೇಶಕರು ಲಾಲ್‌ಬಾಗ್, ಬೆಂಗಳೂರು ರವರು ಪಡೆದಿರುತ್ತಾರೆ.
5. ನಿಯಮಾನುಸಾರ ಬಿಲ್ಲಿನ ಮೂಲದಲ್ಲಿ ಅನ್ವಯವಾಗುವ ತೆರಿಗೆಗಳನ್ನು ಕಟಾಯಿಸಲಾಗುವುದು.
